H Gundert
Sept 1839
from J. W. Calvert

HOSAGANNADA NUDI GANNADI:

A

GRAMMAR

OF

THE MODERN CANARESE LANGUAGE

BY

KRISHNAMACHARYA

OF

SRIRANGAPATTANAM

PLEADER IN THE COURT OF SUDDER ADAWLUT AT MADRAS.

MADRAS:—*Printed at the Asylum Press, Mount Road; by* G. CALDER *and published by* E. MARSDEN.

1838.

ಶ್ರೀ.

ಚೆನ್ನಪಟ್ಟಣದಲ್ಲಿರುವ ಸದರ ದಾಲತ್ತುಕೋರ್ಟಿನಲ್ಲಿ

ಪ್ಲೀಡರಾಗಿರುವಂಥಾ

ಶ್ರೀರಂಗಪಟ್ಟಣದ

ಕೃಷ್ಣಮಾಚಾರ್ಯರು

ಮಾಡಿದಂಥಾ

ಹೊಸಗನ್ನಡನುಡಿಗನ್ನಡಿ

ಯೆಂಬ

ಹೊಸಗನ್ನಡವ್ಯಾಕರಣವು.

ಇದು ಚೆನ್ನಪಟ್ಟಣದಲ್ಲಿ ಮೌಂಟುರೋಡ್ಡಿನಲ್ಲಿರುವ ಮೇಲಸ್ಸೈಲಮೆಂಬ

ಅಚ್ಚಾಫೀಸಿನಲ್ಲಿ ಶಾಲಿವಾಹನಶಕಾಬ್ದ ೧೭೬೦ನೇ ವಿಳಂಬಿಸಂವತ್ಸರದಲ್ಲಿ

ಏಳುಂಬೂರು ಅರುಣಾಚಲದಿಂದ ಅಚ್ಚುಹಾಕಿಸಿ ಪ್ರಸಿದ್ಧಿಮಾಡಲ್ಪಟ್ಟಿತು.

ಶ್ರೀ

ಶ್ರೀರಮಣನ ಪದಕಮಲವ - ಸಿರದಿಂ ಸಾಷ್ಟಾಂಗಮೆರಗಿ ಕೃಷ್ಣಾಚಾರ್ಯಂ
ಶ್ರೀರಂಗಪುರನಿಕೇತಂ - ಬರೆದ ಮಹಾಸಗನ್ನಡ ಮುದಿಗನ್ನಡಿಯೊಲವಿಂ.
ಹಾಸಗನ್ನಡ ಸುಡಿಗನ್ನಡದಿ - ಎಸೆವ ಪ್ರಶ್ನೋತ್ತರಾವಳಿರಚಿತವಾಕ್ಯಂ
ದಶಸಂಖ್ಯಪ್ರಕರಣಗಳಿ - ಮೆಸೆಗುಂ ವ್ಯಾಕರಣಮೊಲಿಯೆ ವಿಬುಧರುಮೆಲ್ಲಂ.

ಈ ಭೂಮಂಡಲದೊಳಗಿರುವ ಭಾಷೆಗಳೊಳಗೆ ಸಂಸ್ಕೃತಭಾಷೆಯು ಆದಿಭಾಷೆಯು ಅದ್ಹೇಕೆಂದರೆ - ಸಂಸ್ಕೃತವು ಪೂರ್ಣಭಾಷೆಯಾದ್ದರಿಂದಲೂ - ಅದರಲ್ಲಿರುವ ಸಮಸ್ತಪದಗಳಿಗೂ ಅವಯವಾರ್ಥವಿರುವದ್ದರಿಂದಲೂ - ಅದರಲ್ಲಿರುವ ಪದಗಳೊಳಗೆ ಬಹುಪದಗಳು - ಇತರಭಾಷೆಗಳಲ್ಲೆಲ್ಲಾ ಬಂದಿರುವದ್ದರಿಂದಲೂ - ಆ ಭಾಷೆಗಳೆಲ್ಲಾ ಪದಗಳಿಗೂ ಅವಯವಾರ್ಥವಿಲ್ಲದ್ದರಿಂದಲೂ - ಸಂಸ್ಕೃತವಾದಿಭಾಷೆಯಾಯಿತು - ಆ ಸಂಸ್ಕೃತಭಾಷೆಯು ಪೂರ್ವಕಾಲದಲ್ಲಿ ವಿಂಧ್ಯಪರ್ವತಕ್ಕೂ ಹಿಮವತ್ಪರ್ವತಕ್ಕೂ ಮಧ್ಯವಾದ ಆರ್ಯಾವರ್ತವೆಂಬ ದೇಶದ ಸಕಲವಾದ ಜನರೂ ಮಾತನಾಡುತ್ತಿದ್ದರು - ಬರಬರ ಅದು ಕೆಟ್ಟು ಕಾನೋಜಿ ಮೊದಲಾದ ಭಾಷೆಗಳಾಗಿ ಆ ದೇಶಗಳಲ್ಲವರಿಂದ ವ್ಯವಹಾರನಡೆದು ಬರುತ್ತದೆ - ವಿಂಧ್ಯಪರ್ವತಕ್ಕೆ ದಕ್ಷಿಣದಲ್ಲಿ ಕನ್ಯಾಕುಮರಿಯವರಿಗೂ ದ್ರವಿಡದೇಶವು - ಅದರಲ್ಲಿ ಪಾಂಡ್ಯ - ಚೋಳ - ತೊಂಡೀರವೆಂಬೀ ಮೂರು ದೇಶಗಳು ಮಾತ್ರ ಶುದ್ಧದ್ರಮಿಡವಾಗಿನಿಂತವು - ಅವರಲ್ಲಿಯೂ ಅಗಸ್ತ್ಯಸೂತ್ರ ತೊಲುಕಾಪ್ಯ ಮೊದಲಾದ ವ್ಯಾಕರಣಗ್ರಂಥಗಳು ಹುಟ್ಟಿದ ಕಾಲಕ್ಕಿಂತಲೀಗದು ಕೆಟ್ಟು ಸಂಸ್ಕೃತಕ್ಕೆ ಕಾನೋಜಿ ಮುಂತಾದ್ದರ ಹಾಂಗೆ ಬಹಳ ಭೇದವನ್ನು ಹೊಂದಿಯದೆ - ಆ ದ್ರಮಿಡದೇಶಗಳಿಗೂ ವಿಂಧ್ಯಪರ್ವತಕ್ಕೂ ಮಧ್ಯದಲ್ಲಿ ದ್ರಮಿಡವೂ - ಸಂಸ್ಕೃತವೂ ಸ್ವಭಾವದಿಂದಲೂ ವಿಕಾರವನ್ನೈದಿಯೂ ಸೇರಿ ಕೇರಳ ತೌಳವ ಕರ್ಣಾಟ ಕಾಂಧ್ರಗಳೆಂಬ ನಾಲ್ಕುಭಾಷೆಗಳಾದವು - ಇವು ದ್ರಮಿಡಭಾಷೆಗಳಾದ್ದರಿಂದಲೇ ಈ ಭಾಷೆಗಳು ದ್ರಮಿಡವೂ ಸೇರಿ ಪಂಚದ್ರಾವಿಡವೆಂಬ ಪ್ರಸಿದ್ಧಿಯನ್ನು ಹೊಂದಿದವು - ದ್ರಮಿಡದಲ್ಲವಯವಾರ್ಥವುಳ್ಳ ಪದಗಳು ಈ ನಾಲ್ಕುಭಾಷೆಯಲ್ಲೂ ಅವಯವಾರ್ಥವಿಲ್ಲದೆ ಬಂದಿರುವದ್ದರಿಂದ ಈ ನಾಲ್ಕಕ್ಕೂ ಅದು ಮೂಲಭಾಷೆಯಾಯಿತು - ಆದರೆ - ಕೇರಳದಲ್ಲಿ ಸಂಸ್ಕೃತ ದ್ರಮಿಡಗಳೆರಡೂ ತಮ್ಮ ವಿಭಕ್ತಿಪ್ರತ್ಯಯ ತೋಪಿಸದೆಯೂ ಬಂದು ಸೇರುತ್ತವೆ - ಕಡಮೆ ಭಾಷೆಗಳಲ್ಲಿ ವಿಭಕ್ತಿ ತೋಪಿಸಿಯೇ ಬಂದು ಸೇರುತ್ತವೆ ಮತ್ತು ಕೇರಳ ತೌಳವಗಳಿಗೆ ಪ್ರಾಚೀನ ವ್ಯಾಕರಣವಿರುವದಾಗಿ ಇದುವರಿಗೂ ಕೇಳಲಿಲ್ಲ ಆದ್ದರಿಂದ ಅದರಲ್ಲಿ ವ್ಯಾಕರಣಶಿಕ್ಷಿತ ಶಬ್ದಗಳೆಂತಲೂ ಅಲ್ಲವೆಂತಲೂ ಭೇದವಿಲ್ಲವು

ಮತ್ತು ಈ ಭಾಷೆಗಳಲ್ಲಿ ವಿಸ್ತಾರವಾಗಿ ಕಾವ್ಯಗಳು ಕಾಣಬರಲಿಲ್ಲ - ಆಂಧ್ರಕ್ಕೆ ನನ್ನಯಭಟ್ಟೀಯ ಅಪ್ಪಕವೀಯ ಆಂಧ್ರಕೌಮುದಿ ಮೊದಲಾದ ವ್ಯಾಕರಣಗಳೂ ಛಂದಸ್ಸೂ ಅಲಂಕಾರ ಮೊದಲಾದ ಲಕ್ಷಣಗ್ರಂಥಗಳೂ ಅನೇಕ ಕಾವ್ಯಗಳೂ ಅವೆ - ಈ ಮೇರೆಗೇ ಕನ್ನಡಕ್ಕೂ ವ್ಯಾಕರಣ ಛಂದಸ್ಸು ಅಲಂಕಾರ ಮೊದಲಾದ ಲಕ್ಷಣಗ್ರಂಥಗಳೂ ವಿಸ್ತಾರವಾದ ಕಾವ್ಯಗಳೂ ಅವೆ ಆದ್ದರಿಂದ ಕೇರಳ ತೌಳವವೆರಡಕ್ಕಿಂತಲೂ - ಕನ್ನಡ - ತೆಲುಗುಗಳೆರಡೂ ಹೆಚ್ಚಾದವು - ಅವುಗಳೊಳಗೆ ಕನ್ನಡ ಭಾಷೆಯೇ ಶ್ರೇಷ್ಠವು - ಏತರಿಂದೆಂದರೆ - ಹ್ಯಾಂಗೆ ವಿಶಿಷ್ಟಾದ್ವೈತಿಗಳು ದ್ರಮಿಡಭಾಷೆಯನ್ನು ಪೂಜ್ಯವಾದ ಭಾಷೆಯೆಂದಿಟ್ಟುಕೊಂಡ ಕೊಊಮ್ಮೇಶಿಗೆ ದ್ವೈತಿಗಳಾದ ಮಾಧ್ವರು - ಕನ್ನಡವನ್ನುಳಿದ ಕಡಮೆ ಭಾಷೆಗಳೆಲ್ಲಾ ಅಶುದ್ಧಭಾಷೆಯೆಂತಲೂ ಅವನ್ನು ಸ್ನಾನ ಜಪಾದಿಕಾಲಗಳಲ್ಲಿ ಹೇಳಬಾರದೆಂತಲೂ - ಸಂಸ್ಕೃತ ಬಾರದ ಪಕ್ಷದಲ್ಲಿ ಕನ್ನಡ ಭಾಷೆಯನ್ನು ಹೇಳಬಹುದೆಂತಲೂ - ಆದ್ದರಿಂದ ಕನ್ನಡ ಭಾಷೆ ಬಹಳ ಶ್ರೇಷ್ಠವೆಂತಲೂ - ಸಮ್ಮತಿಸಿದಾರೆ - ಮತ್ತು ಲಿಂಗಧಾರಿಗಳಾದ ಕರ್ನಾಟಕ ದೇಶದ ಶೂದ್ರರು ಬಸವಪುರಾಣ ಮೊದಲಾದ್ದನ್ನು ಕನ್ನಡದಲ್ಲಿಟ್ಟುಕೊಂಡು ಈ ಭಾಷೆಯಲ್ಲಿ ಬಹಳ ಗೌರವ ಮಾಡುತ್ತಾರೆ - ಮತ್ತು ಜೈನರು ಈ ಕನ್ನಡದಲ್ಲಿ ತಮ್ಮ ಮತ ಗ್ರಂಥಗಳನ್ನು ಮಾಡಿಟ್ಟುಕೊಂಡು ಈ ಭಾಷೆಗೆ ಬಹಳ ಮರ್ಯಾದೆಯನ್ನು ಮಾಡುತ್ತಾರೆ - ಆದ್ದರಿಂದ ಈ ಮೇರೆಗೆ ಪಂಚದ್ರಾವಿಡಗಳಲ್ಲಿ - ದ್ರಮಿಡವನ್ನುಳಿದ ಕಡಮೆ ಭಾಷೆಗಳಿಗಾಗಲಿ - ಕಾನೋಜಿ ಮೊದಲಾದ ಭಾಷೆಗಳಿಗಾಗಲಿ - ಯಾವ ಮತಸ್ಥರಾದರೂ - ಕನ್ನಡಕ್ಕೆ ಮಾಡುವಷ್ಟು ಮರ್ಯಾದೆಯ ಮಾಡುವದಿಲ್ಲವಾದ್ದರಿಂದ - ಕನ್ನಡವು ಅಪ್ರತಿಶಸ್ತವಾದ ಭಾಷೆಯೆಂದು ಹೇಳಲ್ಪಡುತ್ತದೆ - ಈ ಕನ್ನಡ ದೇಶದಲ್ಲಿ ಪೂರ್ವದಲ್ಲಿ ವ್ಯವಹರಿಸಲ್ಪಡುತ್ತಿದ್ದಂಥಾ ಹಳಗನ್ನಡವನ್ನು ಅನುಸರಿಸಿ ಶಬ್ದಾನುಶಾಸನವೆಂತಲೂ - ಶಬ್ದಮಣಿದರ್ಪಣವೆಂತಲೂ - ಎರಡು ವ್ಯಾಕರಣಗ್ರಂಥಗಳೂ ಅವುಗಳಿಗೆ ವ್ಯಾಖ್ಯಾನಗಳೂ - ಹುಟ್ಟಿಯವೆ - ಅವರಲ್ಲಿ - ಶಬ್ದಾನುಶಾಸನವೆಂಬುವದು ಸೂತ್ರರೂಪವಾಗಿ - ಸಂಸ್ಕೃತ ಭಾಷಾಬದ್ಧವಾದ ಪಾಣಿನೀಯವಾದ ಸಂಸ್ಕೃತ ವ್ಯಾಕರಣಸೂತ್ರದಷ್ಟು ಗಂಭೀರವಾಗಿರುವದ್ದರಿಂದಲೂ - ಅದರ ವ್ಯಾಖ್ಯಾನವು - ಸಂಸ್ಕೃತವಾಗಿ ಕೌಮುದಿಯಂತಾದ ಈ ವ್ಯಾಕರಣಗ್ರಂಥದ ಹಾಂಗಿರುವದ್ದರಿಂದಲೂ - ಸಂಸ್ಕೃತ ಭಾಷೆಯಲ್ಲಿ ವ್ಯುತ್ಪತ್ತಿಯಿಲ್ಲದವರಿಗೆ ಅರ್ಥವಾಗುವದಿಲ್ಲವು - ಶಬ್ದಮಣಿದರ್ಪಣವು - ಕನ್ನಡ ಭಾಷೆಯಲ್ಲಿ ಮಾಡಲ್ಪಟ್ಟಿದ್ದಾಗ್ಯೂ ಕಂದಪದ್ಯರೂಪವಾಗಿರುವದ್ದರಿಂದ ವ್ಯಾಖ್ಯಾನಸಾಪೇಕ್ಷವಾಗಿಛೆ

ಈ ವ್ಯಾಖ್ಯಾನವೂ - ಅದಕ್ಕತಿಕ್ಲಿಷ್ಟವಿಪುಲವಲ್ಲದ್ದರಿಂದ ಬಾಲಬೋಧೆಯಾಗುವದಿಲ್ಲವು - ಮತ್ತು - ಶಬ್ದಾನುಶಾಸನ ಶಬ್ದಮಣಿದರ್ಪಣವೆಂಬೆರಡು ಗ್ರಂಥಗಳೂ ಈಗ ದೇಶದಲ್ಲಿ ವ್ಯವಹರಿಸಲ್ಪಡದಂಥಾದ್ದಾಗಿ ಯಾ ಗ್ರಂಥಗಳಲ್ಲಿ ಮಾತ್ರವೇ ಪ್ರಯೋಗಿಸಲ್ಪಡುವ - ಹಳಗನ್ನಡ ಭಾಷೆಯನ್ನರಿಯುವ ಮಾತ್ರವೆ - ಉಪಯೋಗವಾಗುತ್ತವೆಯೇ ಹೊರ್ತು ಈಗಣ ಕನ್ನಡ ದೇಶದಲ್ಲಿ ವ್ಯವಹರಿಸಲ್ಪಡುವ ಹೊಸಗನ್ನಡ ಭಾಷೆಯನ್ನರಿಯು ಬಹಳವಾಗುಪಯೋಗಿಸುವದಿಲ್ಲ - ಈ ಹೊಸಗನ್ನಡವನ್ನರಿಯು - ಪೂರ್ವದಲ್ಲಿ - ಜಾರ್ಜ ಮಕ್ಕೆರಲು ದೊರೆಯವರು ಗ್ರಾಮರೆಂಬೊಂದು ವ್ಯಾಕರಣಪುಸ್ತಕವ ಮಾಡಿದರು - ಆದರೆ ಅದರಲ್ಲಿ ಸೂತ್ರಗಳನ್ನಿಂಗ್ಲೀಷು ಭಾಷೆಯಿಂದ ಹೇಳಿರುವದ್ದರಿಂದ ಅದು ಬಾರದವರು ಓದಲಿಕ್ಕದಶಕ್ಯವಾಗಿ ಹೋಯಿತು.

ಸಮಸ್ತವಾದ ದೇಶಭಾಷೆಗಳಲ್ಲಾ - ಇದುವರಿಗೂ ಉಂಟಾಗಿರುವ ವ್ಯಾಕರಣಗಳಲ್ಲಿ - ಸಂಸ್ಕೃತಶಬ್ದಗಳು ದೇಶಭಾಷೆಯಲ್ಲಿ ಬರುತ್ತದೆಯೆಂದು ಮಾತ್ರ ಹೇಳಿಯದೆಯೇ ಹೊರ್ತು ಅವಶ್ಯವಾಗಿ ತಿಳಿಯಬೇಕಾದ ಸಂಸ್ಕೃತದ ಕೆಲವು ವಿಷಯಗಳನ್ನು ಹೇಳಲಿಲ್ಲ - ಅವೇನೆಂದರೆ - ಸಂಸ್ಕೃತಶಬ್ದಗಳನ್ನು ದೇಶಭಾಷೆಯಲ್ಲಿ ಪ್ರಯೋಗಿಸುವಾಗ - ಆ ಪದಗಳಿಗರ್ಥವನ್ನು ಅಮರ ಮೊದಲಾದ ನಿಘಂಟುಗಳಿಂದ ತಿಳಿದುಕೊಂಡಾಗ್ಗ್ಯೂ - ಆ ನಿಘಂಟುಗಳಲ್ಲಿ ಭಿನ್ನಪದವಾಗಿರುವದ್ದರಿಂದ ಆ ಪದಗಳಿಗೆ ಸಮಾಸವ ಮಾಡಿ ಆ ಭಾಷೆಯಲ್ಲಿ ಪ್ರಯೋಗಿಸುವಾಗ ಆ ಪದಗಳಿಗೆ ಮಾಡಬೇಕಾದ ಸಂಧಿ ಮಾಡುವ ಕ್ರಮವೂ - ಅನೇಕ ಲಿಂಗವಾದ ಸಂಸ್ಕೃತಶಬ್ದ ನಿಘಂಟುವಿನಲ್ಲಿ ಪುನ್ನಪುಂಸಕಾನ್ಯತರ ಲಿಂಗವಾದ್ದರಿಂದ ಸ್ತ್ರೀಲಿಂಗ ದ್ಯೋತಕ ಪ್ರತ್ಯಯವಿಂಥಾವು ಬರುತ್ತದೆಯೆಂದು ತಿಳಿದುಕೊಳ್ಳಬೇಕಾದ್ದೂ - ದೇಶಭಾಷೆಯಲ್ಲಿ ಬರುವದಿಲ್ಲವೆಂದು ಹೇಳಲ್ಪಟ್ಟಿರುವ - ಅವ್ಯಯ ಮೊದಲಾದವು ಇಂಥಾವೆಂಬುವದೂ - ಇವುಗಳೂ - ಸಂಸ್ಕೃತ ಕೃತ್ತದ್ಧಿತ ಸಮಾಸಗಳೂ - ಅವಶ್ಯವಾಗಿ ತಿಳಿಯಬೇಕು - ಅವು ತಿಳಿಯದೆ ಕನ್ನಡದಲ್ಲಾಗಲಿ - ಇತರ ಭಾಷೆಗಳಲ್ಲಾಗಲಿ - ವಿಶಿಷ್ಟ ಪದಗಳಿಗೆ ಅರ್ಥವಾಗಲಾರದು - ಅಂಥಾ ಪದಗಳ ಪ್ರಯೋಗಿಸಲಿಕ್ಕೂ ಆಗದು - ಆದ್ದರಿಂದವುಗಳಲ್ಲಿ ಅತ್ಯಾವಶ್ಯಕವಾದ ಸಂಧಿ ಸ್ತ್ರೀಪ್ರತ್ಯಯಾವ್ಯಯಗಳು ಮಾತ್ರ ಈ ಗ್ರಂಥದಲ್ಲಿ ಉಪಯುಕ್ತವಾದ ಮಟ್ಟಿಗೂ ಬರೆಯಲ್ಪಟ್ಟಿತು - ಕೃತ್ತದ್ಧಿತ ಸಮಾಸಗಳನ್ನು ಗ್ರಂಥವಿಸ್ತರಭೀತಿಯದಿಂದಿಲ್ಲಿ ಬರೆಯಲಿಲ್ಲ - ಅವೆಲ್ಲಾ ವಿಸ್ತಾರವಾಗಿ ಹಳಗನ್ನಡ ವ್ಯಾಕರಣದಲ್ಲಿ ಹೇಳಲ್ಪಡುವದು.

ಈ ಗ್ರಂಥದಲ್ಲಿ ಶಬ್ದಾಖ್ಯಾತ ಪ್ರಕರಣಗಳು ಹೊರ್ತು - ಕಡಮೆ ಪ್ರಕರಣಗಳೆಲ್ಲಾ ಹಳಗನ್ನಡಕ್ಕೂ ಉಪಯೋಗಿಸುತ್ತದೆ - ಕಡಮೆ ಪ್ರಕರಣಗಳಲ್ಲಿ ಇನ್ನು ಕೆಲವು ವಿಷಯಗಳೂ - ಶಬ್ದಾಖ್ಯಾತ ಪ್ರಕರಣಗಳು ವಿಶೇಷವಾಗಿ ಹಳಗನ್ನಡ ವ್ಯಾಕರಣದಲ್ಲಿ ಹೇಳಲ್ಪಡುತ್ತದೆ.

ಮತ್ತು ಈ ಭಾಷೆಗಳಲ್ಲಿ ಇದುವರಿಗೂ ಹುಟ್ಟಿರುವ ವ್ಯಾಕರಣ ವಿಷಯವಾದ ಸಮಸ್ತ ಗ್ರಂಥಗಳಲ್ಲೂ ಸಂಸ್ಕೃತ ತತ್ಸಮ ತದ್ಭವಗಳು ಮಾತ್ರ ಹೇಳಲ್ಪಟ್ಟಿದೆಯೇ ಹೊರ್ತು ದ್ರಮಿಡ ತತ್ಸಮ ತದ್ಭವಗಳಿಗೆ ಸೂತ್ರಗಳು ಹೇಳಲ್ಪಡಲಿಲ್ಲವು - ಪ್ರಯೋಗ ಪ್ರಕರಣದಲ್ಲಿ ಶಾಬ್ದಬೋಧ ಕ್ರಮವೂ ಹೇಳಲ್ಪಡಲಿಲ್ಲ - ಅವೆಲ್ಲಾ ಈ ಗ್ರಂಥದಲ್ಲಿ ಹೇಳಲ್ಪಟ್ಟಿವೆ - ಇನ್ನು ವ್ಯಾಕರಣದಲ್ಲಿ ಹೇಳಬೇಕಾದ ಸಕಲ ಶಬ್ದಗಳಿಗೂ - ಉತ್ಪತ್ತಿ ಕ್ರಮವು - ಇದುವರಿಗೂ ಹುಟ್ಟಿರುವ ವ್ಯಾಕರಣಗಳಲ್ಲಿಯೂ - ನಿಘಂಟುಗಳಲ್ಲಿಯೂ - ಈ ದೇಶಭಾಷೆಗಳಿಗೆ ಹೇಳಿರಲಿಲ್ಲವು - ಸಂಸ್ಕೃತ ಭಾಷೆಗೆ ಮಾತ್ರ ವ್ಯಾಕರಣದಲ್ಲಿಯೂ ನಿಘಂಟುಗಳ ವ್ಯಾಖ್ಯಾನಗಳಲ್ಲಿಯೂ ಹೇಳದೆ ಅದನ್ನು ಗ್ರಂಥ ವಿಸ್ತರವಾಗುತ್ತದೆಯೆಂದು ಈ ಗ್ರಂಥದಲ್ಲಿಯೂ ಹೇಳಲಿಲ್ಲ - ಅವು ಶಬ್ದಮಂಜರಿ ಧಾತುಮಂಜರಿಯೆಂಬ ಗ್ರಂಥಗಳಲ್ಲಿ ಹೇಳಲ್ಪಡುವದು.

ಕನ್ನಡ ದೇಶದಲ್ಲಿಯೂ - ಅಚ್ಚಗನ್ನಡ ಮೈಸೂರು ಪ್ರಾಂತ್ಯದ್ದೇ ಹೊರ್ತು ಕಡಮೆಯೆಲ್ಲಾ ಅಚ್ಚಗನ್ನಡವಲ್ಲವು - ಚೆಂಗಳೂರು ಬಳ್ಳಾರಿ ಮೊದಲಾದ ಸೀಮೆಯೂ ತೆಲುಗು ರಾಜ್ಯದ ಸಮೀಪದಲ್ಲಿರುವದ್ದರಿಂದ ಅಲ್ಲಿಯ ಕನ್ನಡವು ತೆಲುಗು ಕಲೆತುಹೋಯಿತು - ಕೊಯಮತ್ತೂರು ಸೀಮೆಯು ತಿಗಳ ರಾಜ್ಯದ ಸಮೀಪದಲ್ಲಿರುವದ್ದರಿಂದಲ್ಲಿ ತಿಗಳು ಕಲೆತುಹೋಯಿತು. ಮಂಗಳೂರು ಜಿಲ್ಲಾ ಕನ್ನಡವು ಕೊಂಕಣ ಮಲಯಾಳ ತುಳು ಭಾಷೆಗಳು ಕಲೆತುಹೋಯಿತು - ಮತ್ತು ಆ ದೇಶಗಳಲ್ಲಿ ಪ್ರಬಲವಾದ ಕರ್ಣಾಟಕ ಸಂಸ್ಥಾನವಿಲ್ಲದ್ದರಿಂದ ವಿದ್ವಾಂಸರುಗಳೂ ದುರ್ಲಕ್ಷವಾಗಿಹೋಯಿತು - ಆದ್ದರಿಂದ ಆ ದೇಶಗಳಲ್ಲಿ ಪರಿಶುದ್ಧವಾದ ಕನ್ನಡವಿಲ್ಲದೇಹೋಯಿತು ಮೈಸೂರು ಬಹಳ ಕಾಲದಿಂದ ಕರ್ಣಾಟಕ ಸಂಸ್ಥಾನವಾಗಿ ಕರ್ಣಾಟಕ ಪ್ರಭುಗಳು ದಾತೃತನವ ಮಾಡುತ್ತಿದ್ದದ್ದರಿಂದಲ್ಲಿ ಬಹಳ ವಿದ್ವಾಂಸರು ಸೇರಿದ್ದರು - ಆ ಪ್ರಭುಗಳು ಹಣಗಳ ಕೊಟ್ಟು ಬಹಳ ಗ್ರಂಥಗಳ ಮಾಡಿಸ್ತರು - ಅದು ವಿದ್ವತ್ಪ್ರಚುರವಾದ ರಾಜ್ಯವಾದ್ದರಿಂದಲೂ ಕನ್ನಡಕ್ಕೆ ಮಧ್ಯದೇಶವಾದ್ದರಿಂದಲೂ - ಆ ರಾಜ್ಯದ ಕನ್ನಡವೆ - ಅಚ್ಚಗನ್ನಡವು - ಅದನ್ನು ಅನುಸರಿಸಿದ್ದೇ ಹೊಸಗನ್ನಡವು - ಆ ಹೊಸಗನ್ನಡವನ್ನು ಅನುಸರಿಸಿದ್ದು ಈ ಹೊಸಗನ್ನಡ

ಹಳಗನ್ನಡಿಯೆಂಬ ವ್ಯಾಕರಣವು - ಹೊಸಗನ್ನಡ ಹಳಗನ್ನಡಿಯೆಂದರೆ ಹೊಸಗನ್ನಡ ಶಬ್ದಕ್ಕೆ ಕನ್ನಡಿಯೆಂದರ್ಥವು - ಹ್ಯಾಂಗೆ ಮುಖದ ಸ್ವರೂಪವು ಕನ್ನಡಿಯಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆಯೋ ಹಾಂಗೆ ಕನ್ನಡ ಶಬ್ದಗಳೆಲ್ಲಾ ಈ ಗ್ರಂಥವನ್ನೋದಿದರೆ ಸ್ಪಷ್ಟವಾಗಿ ತಿಳಿಯುತ್ತದೆ.

ಮತ್ತು - ಕೆಲವು ಯಕ್ಷಗಾನಗಳು ಪದಗಳು ಕೀರ್ತನೆಗಳು ಮುಂತಾದವು ಹೊಸಗನ್ನಡ ಪದಗಳಿಂದ ಸಹ ಮಾಡಲ್ಪಟ್ಟಿರುವದರಿಂದ ಈ ವ್ಯಾಕರಣವು - ಕೆಲವು ಗ್ರಂಥಗಳಿಗೆ ಕೂಡಾ ಉಪಯೋಗಿಸುತ್ತದೆ.

ಸಮಸ್ತವಾದ ಭಾಷೆಗಳೂ ಅನಾದಿಯಾದ ಲೋಕವ್ಯವಹಾರ ಸಿದ್ಧವೇ ಹೊರತು - ಅವುಗಳು ವ್ಯಾಕರಣದಿಂದ ಹುಟ್ಟುವದಿಲ್ಲವು - ಹಾದರೆ ವ್ಯಾಕರಣದಲ್ಲಿ ಪದಗಳಿಗೆ ಲೋಪಾಗಮಾದೇಶಗಳೂ ಪ್ರತ್ಯಯಗಳೂ ವಿಧಿಸಿರುವದರಿಂದ ಹುಟ್ಟುವದಾಗಿ ತೋರುವದಕ್ಕೆ ತಾತ್ಪರ್ಯವೇನೆಂದರೆ - ಯಾವ ಮೇರೆಗೆ ಸೂರ್ಯನ ಗತಿಗೆ - ಗಡಿಯಾರದ ಮುಳ್ಳು ನಡೆಯುವದು ಸೂಚಕವೋ - ಯಾವ ಮೇರೆಗೆ - ಮನುಷ್ಯರ ಪುಣ್ಯಪಾಪರೂಪಕರ್ಮಾಧೀನವಾದ ಶುಭಾಶುಭ ಫಲಗಳಿಗೆ ಸೂಚಕವಾದ ಜನನ ಕಾಲದ ನವಗ್ರಹ ಸ್ಥಿತಿಯನ್ನರಿದು - ಸೂರ್ಯನಿಂಥಾ ಫಲವನ್ನು ಕೊಡುತ್ತಾನೆ ಶನಿ ಇಂಥಾ ಫಲವ ಕೊಡಿಸುತ್ತಾನೆಯೆಂದು ಜ್ಯೋತಿಷ ಶಾಸ್ತ್ರದಲ್ಲಿ ವ್ಯವಹಾರವದೆಯೋ - ಯಾವ ಮೇರೆಗೆ ವನಮೃಗಗಳನರಿಯದ ನಾಗರಿಕನಿಗೆ ಅವುಗಳ ಬರೆದು ತೋರಿಸುವ - ಕೆಲವು ಗೀಟುಗಳ ಬರೆದರೆ ಇಂಥಾ ಮೃಗವು - ಕೆಲವ ರೇಗೆ ದರೆ ಇಂಥಾ ಮೃಗವೆಂದು ವ್ಯವಹರಿಸಲ್ಪಡುತ್ತದೆಯೋ - ಈ ಮೇರೆಗೆ - ವ್ಯಾಕರಣವು ಆಯಾ ಭಾಷೆಗಳಲ್ಲಿರುವ ಸಮಸ್ತ ಪದಗಳ ಸ್ವರೂಪವನ್ನು ಅವರಲ್ಲಿ ಅನಾದಿಯಾದ ಶಿಷ್ಟಪ್ರಯೋಗಗಳನ್ನು ಅವುಗಳಿಗನಾದಿಸಿದ್ಧವಾದ ಅರ್ಥವಿಶೇಷಗಳನ್ನು ಸುಲಭವಾಗಿ ತಿಳಿದುಕೊಳ್ಳಲಿಕ್ಕೆ ಹೇಳುವ ಮಾರ್ಗವಾದ್ದರಿಂದ - ಈ ವ್ಯಾಕರಣದಲ್ಲಿ ಬರುತ್ತದೆ ಹೋಗುತ್ತದೆಯೆಂಬ ವ್ಯವಹಾರವು - ಅಂಥಾ ವ್ಯವಹಾರವಾದ್ದರಿಂದ - ವ್ಯಾಕರಣದ ಶಬ್ದಗಳು ಹುಟ್ಟಿದ್ದಾಗಿ ನೆನೆಯಕೂಡದು - ಹಾದ್ದರಿಂದಲೆ - ಪ್ರಯೋಗಶರಣಾ ವೈಯಾಕರಣಾಃ ಎಂಬ ಶಿಷ್ಟವ್ಯವಹಾರವುಂಟಾಗಿದೆ.

ಇದು ಹೊರತು ಒಂದು ಶಬ್ದವು ಚನ್ನಾಗಿ ತಿಳಿದು ಚನ್ನಾಗಿ ಪ್ರಯೋಗಿಸಲ್ಪಟ್ಟರೆ - ಸ್ವರ್ಗಲೋಕದಲ್ಲಿ ಅಭೀಷ್ಟ ಫಲವನ್ನು ಕೊಡುತ್ತದೆಯೆಂದು ಶಾಸ್ತ್ರ ಹೇಳುವದರಿಂದ - ಹಾಂಗೆ ಪ್ರಯೋಗಿಸುವದು ವ್ಯಾಕರಣವನ್ನೋದಿದವರಿಗೆ ಸಾಧ್ಯವಾದ್ದರಿಂದ ವ್ಯಾಕರಣ ಓದಬೇಕು - ಕೆಲವರು ಮೇಲೆ ಹೇಳಿದ ಫಲಪ್ರದತ್ವವು ಸಂಸ್ಕೃತ ಭಾಷೆಗೆ ಹೊರತು - ಅದಕ್ಕೆ ಅಪಭ್ರಂಶವಾದ ದೇಶ

ಭಾಷೆಗಳಿಗೆಹೇಳಕೂಡದೆಂತಲೂ - ಅಪಭ್ರಂಶವನ್ನುಚ್ಚರಿಸವೇಕೂಡದೆಂದು ಶ್ರುತಿಸ್ಮೃತಿಗಳಲ್ಲಿಹೇಳಿದೆಯೆಂತಲೂ - ಅಂಥಾಶಬ್ದಗಳ ಕವಿಗಳಿಂದ ಕೇಳಸಹಬಾರದೆಂತಲೂ ಹೇಳುತ್ತಾರೆ - ಅದು ನ್ಯಾಯವಲ್ಲ - ಏಕೆಂದರೆ - ಸಂಸ್ಕೃತಭಾಷೆಗೆ ಪ್ರಾಶಸ್ತ್ಯಬರಲಿಕ್ಕೆ ಮೂಲವು ಆರ್ಯಾವರ್ತದೇಶದಲ್ಲಿ ಪೂರ್ವಕಾಲದಲ್ಲಿದ್ದ ಶಿಷ್ಟಪರಿಗ್ರಹವು - ಹಾಗೆಯೇ ಈಗ ಆಯಾ ದೇಶದಲ್ಲಿರುವ ಭಾಷೆಗಳೂ ಅಲ್ಲಲ್ಲಿಯ ಶಿಷ್ಟಪರಿಗ್ರಹವಾಗಿರುವದ್ದರಿಂದ - ಇದು ಸಂಸ್ಕೃತದ ಹಾಗೆ ಶ್ಲಾಘ್ಯವೇ ಹೊರ್ತು ಬೇರಲ್ಲ - ಇಲ್ಲದಿದ್ದರೆ - ಈ ಭಾಷೆಗಳಲ್ಲಿ ವ್ಯಾಕರಣಗಳು ಹುಟ್ಟಲಿಕ್ಕೆ ಕಾರಣವೇನು - ಆದ್ದರಿಂದ ಯಾವಭಾಷೆ ಶಿಷ್ಟಪರಿಗೃಹೀತವೋ ಆಭಾಷೆಯುಪಾದೇಯವೆಂತಲೂ - ಅದನ್ನು ಶಿಷ್ಟವ್ಯವಹಾರಾನುಸಾರವಾಗಿಯೇ ಹೇಳಬೇಕೆಂತಲೂ - ಅದನ್ನುತಿಳಿದುಹೇಳಿದರೆ ಪುಣ್ಯವುಂಟೆಂತಲೂ - ಶಾಸ್ತ್ರತಾತ್ಪರ್ಯವಾಗುವದ್ದರಿಂದ ಈ ದೇಶಭಾಷೆಗಳನ್ನು ಆಮೇರೆಗೆ ತಿಳಿದು ಪ್ರಯೋಗಿಸಿದರೆ ಪುಣ್ಯಕ್ಕೆ ಸಂದೇಹವಿಲ್ಲ.

ಮತ್ತ್ಯಾವಭಾಷೆಯಾದರೇನು - ದೇವರ ವಿಷಯವಾಗಿದ್ದರೇನೇ ಅದುಪಾದೇಯವೆಂತಲೂ - ಅಲ್ಲದಿದ್ದರೆ ಸಂಸ್ಕೃತಸಹಾ ಅನುಪಾದೇಯವೆಂತಲೂ - ಶಾಸ್ತ್ರದಲ್ಲಿಹೇಳಿಯದೆಯಾದ್ದರಿಂದ ಈ ಭಾಷೆಗಳ ಹೇಳಕೂಡದೆಂಬುವದು ಯೆಷ್ಟುಮಾತ್ರವೂ ನ್ಯಾಯವಲ್ಲ - ಮತ್ತು ಪಾಮರರಿಂದ ಗ್ರಹಿಸಲಿಕ್ಕೆ ಶಕ್ಯವಲ್ಲದ ಸಂಸ್ಕೃತಭಾಷೆಯನ್ನೇ ಹೇಳಬೇಕೆಂತಲೂ - ಇತರ ಭಾಷೆಗಳ ಹೇಳಕೂಡದೆಂತಲೂ - ಶಾಸ್ತ್ರಕ್ಕೆ ತಾತ್ಪರ್ಯವಾಗಿದ್ದರೆ - ಅದುಬಾರದವರು ಮೂಗರಹಾಗೆ ಸಂಜ್ಞೆಯ ಮಾಡಬೇಕಾದೀತು.

ಅಪಭ್ರಂಶವನ್ನುಚ್ಚರಿಸಬಾರದೆಂಬುವದಕ್ಕೂ - ಅಪಶಬ್ದಶ್ರವಣಕ್ಕೆ ಪ್ರಾಯಶ್ಚಿತ್ತವಿಧಾನಕ್ಕೂ - ವಿಷಯವೇನೆಂದರೆ - ಶಿಷ್ಟವ್ಯವಹಾರದಲ್ಲೂ - ತದನುಸಾರಿಯಾದ ವ್ಯಾಕರಣದಲ್ಲೂ - ಇಲ್ಲದ ಸಂಸ್ಕೃತಾಪಭ್ರಂಶಗಳೂ - ಶಿಷ್ಟವ್ಯವಹಾರಕ್ಕೂ - ಆಯಾವ್ಯಾಕರಣಗಳಿಗೂ ವಿರೋಧವಾದ ದೇಶಭಾಷಾಪಭ್ರಂಶಗಳೂ - ವಿಮತಸ್ಥರ ಭಾಷೆಗಳೂ - ಉಚ್ಚರಿಸಬಾರದೆಂಬುವದಕ್ಕೂ - ಕೇಳಬಾರದೆಂಬುವದಕ್ಕೂ - ವಿಷಯವು.

ಆದ್ದರಿಂದ ಶಿಷ್ಟಪರಿಗೃಹೀತವಾದ ದೇಶಭಾಷೆಗಳು ವಿಶಿಷ್ಟವೂ - ಉಚ್ಚರಿಸಲಿಕ್ಕೂ - ಕೇಳಲಿಕ್ಕೂ - ಯೋಗ್ಯವಾದ್ದರಿಂದ ಅವುಗಳನ್ನು ಸಹಾ ಶಿಷ್ಟಪ್ರಯೋಗವನ್ನು ಅನುಸರಿಸಿಯೇ ಸುಶಬ್ದಾಪಶಬ್ದವಿಭಾಗವ ಮಾಡಿ ಅಪಶಬ್ದವ ಬಿಟ್ಟು - ಸುಶಬ್ದವನ್ನು ತಿಳಿದು ಪ್ರಯೋಗವ ಮಾಡಿದರೆ - ಇಹದಲ್ಲಿ ಸುಲಭವಾಗಿ ಭಾಷಾಪರಿಜ್ಞಾನವೂ - ತತ್ಪ್ರಯುಕ್ತವಾದ ಖ್ಯಾತಿಲಾಭ ಪೂಜೆಗ

ವೂ - ಪರದಲ್ಲಿ ಶಾಸ್ತ್ರೋಕ್ತವಾದ ಫಲವೂ - ದೊರಕುವದಾದ್ದರಿಂದ ಶಿಷ್ಟಪರಿಗೃಹೀತವಾದ ಸಕಲ ಭಾಷೆಗಳಲ್ಲೂ - ಸುಶಬ್ದಾಪಶಬ್ದವಿಭಾಗವನ್ನು ತಿಳಿಯಲಿಕ್ಕುಪಯೋಗವಾದಾಯಾ ಭಾಷಾವ್ಯಾಕರಣಗಳನ್ನು ಕಲಿಯುವದು ಆವಶ್ಯಕವೆಂದು ನಾನು ನೆನೆಸಿ - ಅಚ್ಚಗನ್ನಡದೇಶದಲ್ಲಿರುವ ಈಗಿನ ಹಿರಿಯವರು ಮಾತನಾಡುವ ಹೊಸಗನ್ನಡವನ್ನು ಅನುಸರಿಸಿ ಹೊಸಗನ್ನಡನುಡಿಗನ್ನಡಿಯೆಂಬ ವ್ಯಾಕರಣವ ಮಾಡಿದೆನು - ಇದನ್ನು ಕಲಿತವರಿಗೂ - ಮೇಲೆ ಹೇಳಿದ ಐಹಿಕಾಮುಷ್ಮಿಕ ಫಲವನ್ನು ದೇವರು ದಯಮಾಡಬೇಕೆಂದು ನಾನು ದೇವರನ್ನು ಸದಾ ಪ್ರಾರ್ಥಿಸುತ್ತಾಯಿದ್ದೇನೆ.

ಈ ವ್ಯಾಕರಣವನ್ನು - ತತ್ಕಾಲದಲ್ಲಿ ಚನ್ನಪಟ್ಟಣದಲ್ಲಿ ಸದರದಾಲತು ಕೋರ್ಟಿನಲ್ಲಿ ವಕೀಲಾಗಿಯೂ - ಪಂಡಿತೋದ್ಯೋಗಕ್ಕೆ ಯೋಗ್ಯತಾಪತ್ರಿಕೆಯನ್ನು ಪಡೆದವನಾಗಿಯೂ - ಇರುವಂಥಾ ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯನೆಂಬುವನಿಂದ ಮಾಡಲ್ಪಟ್ಟಿತು - ಆದರೆ - ನಾನು ಕಾಲೇಜಿನಲ್ಲಿ ಪಂಡಿತ ವಿದ್ಯಾರ್ಥಿಯುದ್ಯೋಗದಲ್ಲಿರುವಾಗ - ಕಾಲೇಜು ಬೋರ್ಡಿನ ಸೆಕ್ರೆಟೇರಿಯಾಗಿದ್ದ - ಕೇಪ್ಟನ್ - ಹಾರ್ಕನೆಸು ದೊರೆಯವರು ಇಂಗ್ಲೀಷೂ - ಸಂಸ್ಕೃತವೂ - ತಿಳಿಯದ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವ ಹಾಗೆ ಕನ್ನಡದಲ್ಲಿ ಪ್ರಶ್ನೋತ್ತರ ರೂಪವಾಗೊಂದು ವ್ಯಾಕರಣವ ಮಾಡ ಹೇಳಿದ್ದರಿಂದ ಈ ಗ್ರಂಥವನ್ನು ನಾನು ಮಾಡಿದೆನು - ಅವರು ತ್ವರೆಯಾಗಿ ತಮ್ಮ ಸ್ವದೇಶಕ್ಕೆ ಹೊರಟು ಹೋದದ್ದರಿಂದಲೂ - ಅದು ಮೊದಲು - ಕನ್ನಡ ಭಾಷೆಯಲ್ಲಭಿಮಾನವುಳ್ಳ ದೊರೆಗಳು ಯಾರೂ ತೋಕ್ಕದ್ದರಿಂದಲೂ - ಇದು ಪ್ರಸಿದ್ಧಿಯನ್ನು ಹೊಂದದೇ ಇತ್ತು:

ಈಗ - ಸೀವಿಲುದ್ಯೋಗಸ್ಥರಾದ - ಮಹಾರಾಜಶ್ರೀ - ಜರ್ - ವಾಕರು ದೊರೆಯವರು ಸಂಸ್ಕೃತ - ಕರ್ಣಾಟಕ - ದ್ರಾವಿಡ - ಹಿಂದುಸ್ಥಾನಿ ಮೊದಲಾದ ಯಾ ದೇಶಭಾಷೆಗಳಲ್ಲೆಲ್ಲಾ ಅತಿಶ್ರಮಪಟ್ಟವರಾಗಿಯೂ - ಪರೋಪಕಾರಾರ್ಥವಾಗಿ ಈ ಭಾಷೆಗಳಲ್ಲಿ ಸ್ವಹಿತಾಯಾದಿಂದಲೂ - ಅರ್ಥವ್ಯಯದಿಂದಲೂ . ಅನೇಕೋಪಯುಕ್ತಗ್ರಂಥಗಳನ್ನು ಮಾಡಿಯೂ ಮಾಡಿಸಿಯೂ - ಮತ್ತು ಈ ಭಾಷೆಗಳಲ್ಲಿ ಉಪಯುಕ್ತವಾದ ಗ್ರಂಥಗಳನ್ನು ಹುಡುಕುವರಾಗಿಯೂ - ಇರುವದ್ದರಿಂದ - ಅವರು ಈ ಗ್ರಂಥದ ಕೈಬರಹದ ಪುಸ್ತಕವನ್ನು ಸಮಗ್ರವಾಗೋದಿ ಇದರಲ್ಲಿ ಜನಗಳಿಗಿರುವ ಪ್ರಯೋಜನವನ್ನು ನೋಡಿ ಇದನ್ನು ಪರೋಪಕಾರಾರ್ಥವಾಗಿ ನನಗೆ ದ್ರವ್ಯವ್ಯಯವಿಲ್ಲದೆ ಅಚ್ಚು ಹಾಕಿಸಿ ಪ್ರಸಿದ್ಧಿಮಾಡಿಸುತ್ತೇವೆಂದು ಹೇಳಿದ್ದರಿಂದಲೂ ಕದಮೇ ಭಾಷೆಗಳ ಹಾಂಗೆ ಅಭಿಮಾನಿಯುಳ್ಳವರಾದ್ದರಿಂದಲೂ - ಈ ಗ್ರಂಥವನ್ನು

ಅವರ ಹೆಸರಿಗೆ ಅಂಕಿತವ ಕೊಟ್ಟು - ಗ್ರಂಥವನ್ನು ಸಹಾ ಅವರಿಗೆ ಕೊಟ್ಟುಬಿಟ್ಟೆನು.

ಸಮಸ್ತರಾದ ಕರ್ಣಾಟಕ ಭಾಷಾಪಂಡಿತರನ್ನು ನಾನು ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನೆಂದರೆ - ನಾಮ ಕನ್ನಡಕ್ಕೆ ಪ್ರಾಚೀನವಾದ ಶಬ್ದಾನುಶಾಸನ ಶಬ್ದಮಣಿದರ್ಪಣಗಳೆಂಬ ವ್ಯಾಕರಣಗಳನ್ನು - ಅವುಗಳ ವ್ಯಾಖ್ಯಾನಗಳನ್ನು - ಸಂಸ್ಕೃತ ಪ್ರಾಕೃತ ದ್ರಮಿಡಾಂಧ್ರ ಭಾಷಾ ವ್ಯಾಕರಣಗಳನ್ನು - ಇನ್ನು ವ್ಯಾಕರಣವಿಲ್ಲದ ಮಲಯಾಳ ಮುಂತಾದ ಭಾಷೆಗಳ ಸಂಪ್ರದಾಯಗಳನ್ನು ಯಿ ಭಾಷೆಗಳಲ್ಲಿರುವ ಕಾವ್ಯಗಳನ್ನು ನೋಡಿ ಅತಿಜಾಗ್ರತೆಯೊಂದಿಗೆ - ಈ ಗ್ರಂಥವ ಮಾಡಿದ್ದಾಗ್ಯೂ - ಮತ್ತೊಬ್ಬರ ಸಹಾಯವಿಲ್ಲದೆ - ಒಬ್ಬನೇ ಮಾಡಿದ್ದರಿಂದಲೂ - ಇದು ಹಾಸ ಕೃತಿಯಾದ್ದರಿಂದಲೂ - ಅಜ್ಞಾನಾನ್ಯಥಾಜ್ಞಾನ ವಿಪರೀತ ಜ್ಞಾನಗಳು ಮನುಷ್ಯಮಾತ್ರ ಸಾಧಾರಣವಾದ್ದರಿಂದಲೂ - ನಾನು ಸರ್ವಜ್ಞನಲ್ಲವಾದ್ದರಿಂದಲೂ - ಈ ಗ್ರಂಥದಲ್ಲಿ ಪುನರುಕ್ತಿ ದುರುಕ್ತ್ಯನುಕ್ತಿಗಳೂ - ಅಕ್ಷರ ತಪ್ಪುಗಳೂ ಅಪಶಬ್ದಗಳೂ ಇದ್ದಾವು.

ಸ್ವಯೋಗಮಹಿಮೆಯಿಂದ ಸಾಕ್ಷಾತ್ಕೃತವಾದ ಸಮಸ್ತಪದ ಪದಾರ್ಥಜ್ಞಾನವುಳ್ಳ ಪಾಣಿನಿಯೆಂಬ ಮಹರ್ಷಿಯು ಸಂಸ್ಕೃತಕ್ಕೆ ಮಾಡಿದ ವ್ಯಾಕರಣಸೂತ್ರಗಳಲ್ಲಿ ಪುನರುಕ್ತಿ ದುರುಕ್ತ್ಯನುಕ್ತಿಗಳು ಸಂಭವಿಸೆ ಅದನ್ನು ಹೋಗಲಾಡಿಸಲಿಕ್ಕೆ ಅಂಥಾ ಜ್ಞಾನವುಳ್ಳ ಕಾತ್ಯಾಯನನೆಂಬ ಮಹರ್ಷಿಯು - ವಾರ್ತಿಕವೆಂಬ ಗ್ರಂಥವ ಮಾಡಿದರು - ಅದರಲ್ಲಿಯೂ - [illegible] ಪುನರುಕ್ತಿ ದುರುಕ್ತ್ಯನುಕ್ತಿಗಳು ಸಂಭವಿಸೆ ಸಾಕ್ಷಾತ್ ಶ್ರೀಮನ್ನಾರಾಯಣಾಂಶವಾದ ಪತಂಜಲಿಯು - ಅದನ್ನು ತಿದ್ದಿ ಮಹಾಭಾಷ್ಯವನ್ನು ಮಾಡಿದರು.

ಆದ್ದರಿಂದ ಮಹರ್ಷಿ ಪ್ರಣೀತವಾದ ಗ್ರಂಥಗಳಲ್ಲಿಯೇ ಈ ಮೇರೆಗಿರುವಾಗ ಅಲ್ಪಜ್ಞನಾಗಿಯೂ - ಪ್ರಾಕೃತ ಮನುಷ್ಯನಾಗಿಯೂ - ಇರುವ ನಾನು ಮಾಡಿದ ಗ್ರಂಥದಲ್ಲಿ - ಅಂಥಾ ದೋಷಗಳು ಬಾರದೆ ಇರುವದೆ - ಈ ಗ್ರಂಥವನ್ನು ನನಗಿಂತಲೂ ಅಲ್ಪಜ್ಞರಾದವರು ಮಾತ್ಸರ್ಯದಿಂದಲೂ - ಸ್ವಪಾಂಡಿತ್ಯ ಪ್ರಕಾಶನಾರ್ಥವಾಗಿಯೂ - ದೂಷಿಸಿದರೆ - ಅವರಿಗೆ ನಾನು ಹೆದರುವದಿಲ್ಲ - ಅಭಿಜ್ಞರಾಗಿಯೂ - ವಿವೇಕಿಗಳಾಗಿಯೂ - ಇರುವವರು ಗುಣವನ್ನು ಪ್ರಕಟನೇ ಮಾಡಿ ದೋಷವನ್ನು ಹೊರಗೆ ಹಾಕದೆ - ಇರುವ ಸ್ವಭಾವವುಳ್ಳವರಾದ್ದರಿಂದ ನಾನು ನಿರ್ಭಯವಾಗಿ ಗ್ರಂಥವ ಮಾಡಿದೆನು - ಮತ್ತು ಈ ಗ್ರಂಥವು ಅರ್ಥಾಪೇಕ್ಷೆಯಿಂದಾಗಲಿ ಪ್ರತಿಷ್ಠಾರ್ಥವಾಗಿಯಾಗಲಿ ಮಾಡಿದ್ದಲ್ಲ - ಲೋಕೋಪಕಾರಾರ್ಥವಾಗಿ ನನಗೆ ದೇವರು ಬುದ್ಧಿಯ ಕೊಟ್ಟ ಮಟ್ಟಿಗೂ ಬರೆದಿದ್ದೇನೆ - ಇದರಲ್ಲಿ ಮನುಷ್ಯಮಾತ್ರ ಸಾಧಾರಣವಾದ ಭ್ರಮ ಪ್ರಮಾದ ವಿಪ್ರಲಿಪ್ಸಾ ಕರಣಾ

ಪಾಠವಗಳಿಂದ ಸಂಭವಿಸಿರುವ ಪುನರುಕ್ತಿದುರುಕ್ತ್ಯಸ್ತ್ರಕಿಗಳನ್ನು ಕ್ಷಮಿಸಿ ಗುಣಗ್ರಹಣಾವ ಮಾಡಿಸ್ವಬಾಲಕ ಶುಕಶಾರಿಕಾದಿವಾಕ್ಯಗಳ ಹಾಂಗಾದರೂ - ನೆನೆದು ನನ್ನಲ್ಲಿ ದಯೆಯಿಟ್ಟು ನಿರ್ಮಾತ್ಸರ್ಯದಿಂದೆಲ್ಲರೂ ಸಂತೋಷದಾಂದಿಗೆ - ಈ ಗ್ರಂಥವನ್ನು ಪರಿಗ್ರಹಿಸ ಬೇಕೆಂದು ಪ್ರಾರ್ಥಿಸುತ್ತೇನೆ.

ಹಾಸಗನ್ನಡ ನುಡಿಗನ್ನಡಿಯ ಸೂಚಿ:

ನಾಲ್ಕನೆಯ ಆಖ್ಯಾತ ಪ್ರಕರಣದಲ್ಲಿ ಧಾತುಗಳ ಮೇಲೆ ಆಖ್ಯಾತ ಪ್ರತ್ಯಯ ಬರುವಾಗ ಬರುವ ಕಾರ್ಯಗಳ ಸ್ವರೂಪ ಹೇಳಿರುವ ಕೆಲವು ಸಾಧಾರಣವಿಧಿಗೊಳಗಾಗದ ಧಾತುಗಳಿಗೆ ವಿಶೇಷವಿಧಿಗಳು ಹೇಳಿರುವ ಸ್ಥಳ.

ಪಕ್ಷ ಪ್ರಶ್ನೆ.

ತಿನು .. ೧೭ - ೪೫
ತೀರು...... ೧೨ - ೪೦
ತೇ .... ೧೧ - ೭೨
ತಾಡು .. ೧೩ - ೨೬
ತೊ.... ೧೧ - ೭೨
ನಗು .... ೧೯ - ೨೪
ನಡು .. ೧೩ - ೨೬
ನಿಲ್ಲು .. ೧೪ - ೪೧
ನುಸಿ...... ಮೇ - ೪೪
ನೂಲು .... ೧೨ - ೪೯
ನೇಯು - ೧೧ - ೭೩
ನ್ಯೇಲು .... ೧೨ - ೪೯
ನೊ.... ೧೬ - ೭೯
ನೊಸು .. ೧೨ - ೪೯
ಪಡವಿಡು ೧೩ - ೨೬
ಪಡು .... ಮೇ - ಮೇ
ಪಾಡಮಡು - ಮೇ - ಮೇ
ಬಯು } ೨೨ - ೭೩
ಬಯ್ಯು }
ಬರು .. ೧೭ - ೪೮
ಬಲು .... ೧೪ - ೪೩

ಪಕ್ಷ ಪ್ರಶ್ನೆ.

ಬಲ್ಲ .. ೧೧ - ೭೪
ಬಸಿ...... ೧೪ - ೪೪
ಬಹುದು - ೧೫ - ೭೭
ಬಾ .... ೧೬ - ೭೯
ಬಾರದು - ೨೫ - ೭೭
ಬಾಳಿದು - ೧೩ - ೨೬
ಬಿಗ...... ೧೯ - ೨೪
ಬಿಡು .... ೧೩ - ೨೬
ಬಿರಿ ...... ೧೪ - ೪೪
ಬಿಸಾಡು - ೧೩ - ೨೧
ಬಿಸುಡು - ೧೩ - ೨೧
ಬೀ .... ೧೬ - ೭೯
ಬೀಳು .. ೧೨ - ೨೮
ಬೆವರು .. ೧೪ - ೪೩
ಬೆಸೆ ...... ೧೪ - ೪೪
ಬೇ .... ೧೬ - ೭೯
ಬೇಕು - ೧೫ - ೭೭
ಬೇಡ .. ೧೫ - ೭೭
ಬೇರ್ಪಡು ೧೩ - ೪೬
ಬೇಸರು .. ೧೨ - ೪೦
ಮಡಲು ೧೪ - ೪೩

ಪಕ್ಷ ಪ್ರಶ್ನೆ.

ಮಡು .. ೧೩ - ೨೬
ಮಶಿ .... ೧೪ - ೪೨
ಮಲಿ .... ೧೪ - ೪೨
ಮಸೆ .... ೧೪ - ೪೪
ಮಾ .. ೧೧ - ೭೨
ಮಿಗು .... ೧೯ - ೨೪
ಮಿದಿ ...... ೧೨ - ೪೦
ಮಿಳಿರು .. ೧೨ - ೪೩
ಮೀ .... ೧೬ - ೭೯
ಮುನಿ...... ೧೪ - ೪೪
ಮೂಗು } ೧೩ - ೨೬
ವಡು .. }
ಮುಂಬಡು - ೧೩ - ೨೬
ಮೆಲ್ಲು .. ೧೨ - ೨೮
ಮೇ.... ೧೧ - ೭೨
ಮೊಳೆ .... ೧೪ - ೪೨
ಸಲ್ಲು .... ೧೪ - ೪೬
ಸಾ .... ೧೬ - ೭೯
ಸಾಕು - ೧೮ - ೭೬
ಸಾಲದು - ೧೮ - ೭೬
ಸಾಲು .... ೧೨ - ೪೯

ಪಕ್ಷ ಪ್ರಶ್ನೆ.

ಸ್ಯೇನು .... ಮೇ.... ಮೇ
ಸುಡು .. ೧೩ - ೨೩
ಸುಯು - ೬೬ - ೭೩
ಸೋಲು .... ೧೨ - ೪೯
ಹದಿ .... ೧೪ - ೪೭
ಹಸಿ .... ೧೪ - ೪೪
ಹಿಸಿ .... ಮೇ .... ಮೇ
ಹುಸಿ .... ಮೇ .... ಮೇ
ಹಿರು .... ೧೨ - ೪೦
ಹೇಲು .... ಮೇ - ೪೯
ಹಾಗು .. ೧೯ - ೨೪
ಹಾದಿ .. ೭೪ - ೪೭
ಹಾಯು } ೧೨ - ೭೩
ಹಾಯ್ಯು }
ಹಾರದು ೧೩ - ೨೧
ಹಾರು .. ೧೨ - ೪೦
ಹಾಸೆ .. ೧೪ - ೪೪
ಹೊಗು - ೧೩ - ೨೭
ಹೊಲು .. ೧೨ - ೪೯
ಹೊಡು ೧೮ - ೭೬

ಸಂಕೇತವಿವರಣವು.

ಪುಏ - ಪುಲ್ಲಿಂಗೈಕವಚನವು.

ಸ್ತ್ರೀಏ - ಸ್ತ್ರೀಲಿಂಗೈಕವಚನವು.

ದ್ವಿಬ - ಸ್ತ್ರೀಲಿಂಗಪುಲ್ಲಿಂಗಗಳೆರಡಕ್ಕೂಬಹುವಚನವು.

ನಏ - ನಪುಂಸಕಲಿಂಗೈಕವಚನವು.

ನಬ - ನಪುಂಸಕಲಿಂಗಬಹುವಚನವು.

ತಪ್ಪುತಿದ್ದುವದು.

ಶಬ್ದಪ್ರಕರಣದ-೪೭-ನೇಸೂತ್ರದಲ್ಲಿಹೇಳಿದವಿಧವನ್ನುತಿದ್ದಿಸ್ಪಷ್ಟವಾಗಿ-ಕೃತ್ಪ್ರಕರಣದ-೫-೬-ಸೂತ್ರಗಳಲ್ಲಿಬೇರೇಕ್ರಮವುಹೇಳಿದೆ.

೨೦೮-ನೇಪಕ್ಕೆಯಲ್ಲಿರುವ-೮೧-ನೇಪ್ರಶ್ನೆಗೆ-ಕಡೇಪಕ್ಷೆಯುತ್ತರವು.

ಶ್ರೀ

ಹೊಸಗನ್ನಡ ನುಡಿಗನ್ನಡಿ.

ಸಂಜ್ಞಾಪ್ರಕರಣ.

ಪ್ರಶ್ನೆ.	ಉತ್ತರವು.
೧-ಕನ್ನಡ ಮಾತೆಷ್ಟು ವಿಧವಾಗಿರುವದು.	ಹೊಸಗನ್ನಡವೆಂತಲೂ-ಹಳೆಗನ್ನಡವೆಂತಲೂ-ಎರಡುವಿಧವಾಗಿರುವದು.
೨-ಹೊಸಗನ್ನಡವು ಯಾವದು.	ಕರ್ನಾಟಕದೇಶದಲ್ಲೀಗ ಹಿರಿಯವರು ಮಾತನಾಡಿಕ್ಕೊಳ್ಳುವ ಮಾತು.
೩-ಹಳೆಗನ್ನಡವು ಯಾವದು.	ಗ್ರಂಥಗಳಲ್ಲಿ ಮಾತ್ರವೇ ಪ್ರಯೋಗಿಸಲ್ಪಡುವ ಮಾತು.
೪-ಇವೆರಡರಲ್ಲಿ ಮುಂದೇ ತಿಳಿಯಬೇಕಾದ ಮಾತು ಯಾವದು.	ದೇಶದಲ್ಲಿ ಮಾತನಾಡುವ ಮಾತಿಗೆ ಲಕ್ಷಣ ತಿಳಿಯದೇ ಗ್ರಂಥದ ಮಾತಿಗೆ ಲಕ್ಷಣ ತಿಳಿದು ಪ್ರಯೋಜನವಿಲ್ಲವಾದ್ದರಿಂದ ನಡಿವಡಿಕೆಯ ಮಾತಾದ ಹೊಸಗನ್ನಡದ ಲಕ್ಷಣವೇ ಮುಂದೇ ತಿಳಿಯಬೇಕು.
೫-ಈ ಹೊಸಗನ್ನಡದ ವ್ಯಾಕರಣವೆಷ್ಟು ಪ್ರಕರಣವು.	ಹತ್ತು ಪ್ರಕರಣವು.
೬-ಅವುಗಳ ಹೆಸರೇನು.	ಸಂಜ್ಞಾಪ್ರಕರಣ-೧-ಸಂಧಿಪ್ರಕರಣ-೨-ಶಬ್ದಪ್ರಕರಣ-೩-ಆಖ್ಯಾತಪ್ರಕರಣ-೪-ಕೃತ್ಪ್ರಕರಣ-೫-ತದ್ಧಿತಪ್ರಕರಣ-೬-ತತ್ಸಮಪ್ರಕರಣ-೭-ತದ್ಭವಪ್ರಕರಣ-೮-ಸಮಾಸಪ್ರಕರಣ-೯-ಪ್ರಯೋಗಪ್ರಕರಣ-೧೦-ಯೀ ಮೇರೆಗೆ ಹತ್ತು ಪ್ರಕರಣಗಳು.

ಪ್ರಶ್ನೆ	ಉತ್ತರವು.
೭-ಸಂಜ್ಞಾಪ್ರಕರಣದಲ್ಲೇನು ಹೇಳಲ್ಪಡುತ್ತದೆ.	ವರ್ಣಗಳ ಸ್ವರೂಪಗಳೂ-ಅವುಗಳ ಭೇದಗಳೂ-ಮತ್ತೂ ಎಲ್ಲಾ ಪ್ರಕರಣಕ್ಕೂ ಬೇಕಾದ ಕೆಲವು ಸಂಜ್ಞೆಗಳೂ-ಹೇಳಲ್ಪಡುತ್ತವೆ.
೮-ವರ್ಣವೆಂದರೇನು.	ಅರ್ಥಾಭಿವ್ಯಂಜಕ ಶಬ್ದಕ್ಕೆ ಸಮವಾಯಿಕಾರಣವಾದ ಬಾಯಲ್ಲಿ ಹುಟ್ಟುವ ಶಬ್ದಗಳು.
೯-ವರ್ಣಗಳೆಷ್ಟು.	ಅವುಗಳೈವತ್ತಾರು.
೧೦-ಅವುಗಳು ಯಾವವು.	ಅ ಆ ಇ ಈ ಉ ಊ ಋ ೠ ಌ ೡ ಎ ಏ ಐ ಒ ಓ ಔ ಅಂ ಅಃ ಕ ಖ ಗ ಘ ಙ-ಚ ಛ ಜ ಝ ಞ-ಟ ಠ ಡ ಢ ಣ-ತ ಥ ದ ಧ ನ-ಪ ಫ ಬ ಭ ಮ-ಯ ರ ಲ ವ ಶ ಷ ಸ ಹ ಳ ಱ ಳ ಕ್ಷ ೞ-ಎಂದೈವತ್ತಾರು ವರ್ಣಗಳು.
೧೧-ಈ ವರ್ಣಗಳೆಷ್ಟು ವಿಧವು.	ಸ್ವರಗಳೆಂತಲೂ-ವ್ಯಂಜನಗಳೆಂತಲೂ-ಎರಡು ವಿಧವು.
೧೨-ಸ್ವರಗಳು ಯಾವವು.	ಅಕಾರ ವಿಡಿದು ಔಕಾರದವರಿಗೂ ಹದಿನಾರು ಸ್ವರಗಳು.
೧೩-ವ್ಯಂಜನಗಳು ಯಾವವು.	ಕಕಾರ ಮೊದಲು ೞಱದವರಿಗೂ ಮೂವತ್ತಾರು ವ್ಯಂಜನಗಳು.
೧೪-ಕಡಮೆ ವರ್ಣಗಳು ಯಾವವರಲ್ಲಿ ಸೇರುತ್ತವೆ.	ಕಡಮೆ ನಾಲ್ಕೂ ಸ್ವರದಲ್ಲಿಯೂ ವ್ಯಂಜನದಲ್ಲಿಯೂ ಸೇರಿಸಲ್ಪಡುತ್ತವೆ.
೧೫-ಇವುಗಳಿಗೆ ಮತ್ತೆ ಬೇರೆ ಹೆಸರುಂಟೋ.	ಸ್ವರಕ್ಕೆ ಅಚ್ಚೆಂತಲೂ-ವ್ಯಂಜನಕ್ಕೆ ಹಲ್ಲೆಂತಲೂ-ಕಡಮೆ ನಾಲ್ಕಕ್ಕೂ ಅಯೋಗವಾಹವೆಂತಲೂ-ಹೆಸರುಂಟು.
೧೬-ಸ್ವರಗಳೆಷ್ಟು ವಿಧವಾಗಿರುವವು.	ಹ್ರಸ್ವವೆಂತಲೂ-ದೀರ್ಘವೆಂತಲೂ-ಎರಡು ವಿಧವಾಗಿರುವವು.
೧೭-ಹ್ರಸ್ವಗಳೆಷ್ಟು.	ಅ ಇ ಉ ಋ ಌ ಎ ಒ-ಇವು ಏಳೂ ಹ್ರಸ್ವಗಳು.
೧೮-ದೀರ್ಘಗಳೆಷ್ಟು.	ಆ ಈ-ಊ ೠ ೡ ಏ ಐ ಓ ಔ ಇವು ಒಂಬತ್ತೂ ದೀರ್ಘಗಳು.
೧೯-ವ್ಯಂಜನಗಳೆಷ್ಟು ವಿಧವು.	ವರ್ಗ್ಯಗಳೆಂತಲೂ-ಅವರ್ಗ್ಯಗಳೆಂತಲೂ-ಎರಡು ವಿಧವು.
೨೦-ವರ್ಗ್ಯಗಳು ಯಾವವು.	ಕಕಾರ ಮೊದಲು ಮಕಾರದವರಿಗೂ ಇಪ್ಪತ್ತೈದು ವರ್ಗ್ಯಗಳು.

ಪ್ರಶ್ನೆ	ಉತ್ತರವು
೨೧-ಅವರ್ಗೀಯಗಳು ಯಾವವು.	ಯಕಾರ ಹಿಡಿದು ಳಕಾರದವರಿಗೂ ಅವರ್ಗೀಯಗಳು ಹನ್ನೊಂದು.
೨೨-ಆ ವರ್ಗಗಳೆಷ್ಟು.	ಕವರ್ಗ-ಚವರ್ಗ-ಟವರ್ಗ-ತವರ್ಗ-ಪವರ್ಗ-ಯಿಂತೈದು ವಿಧವು.
೨೩-ಒಂದೊಂದು ವರ್ಗಕ್ಕೆಷ್ಟಕ್ಷರವು.	ಒಂದೊಂದು ವರ್ಗಕ್ಕೈದೈದಕ್ಷರ-ಕಖಗಘಙ-ಇದು ಕವರ್ಗವು-ಚಛಜಝಞ-ಇದು ಚವರ್ಗವು-ಟಠಡಢಣ-ಇದು ಟವರ್ಗವು-ತಥದಧನ-ಇದು ತವರ್ಗವು-ಪಫಬಭಮ-ಇದು ಪವರ್ಗವು.
೨೪-ಅವರ್ಗಾಕ್ಷರಗಳೆಷ್ಟು ವಿಧವು.	ಯರಲವ-ಇವುಗಳಂತಸ್ಥೆಗಳು-ಶಷಸಹಗಳೂಷ್ಮಗಳು-ಳಱಗಳನ್ನಂತಸ್ಥೆಯೊಳಗೆ ಕೆಲವರು ಸೇರಿಸುತ್ತಾರೆ.
೨೫-ಈ ವ್ಯಂಜನಗಳಿಗೆ ಬೇರೆ ಭಾಗವುಂಟೋ.	ಈ ವ್ಯಂಜನಗಳಲ್ಲಿ ವರ್ಗಪ್ರಥಮ-ವರ್ಗದ್ವಿತೀಯ-ಶಷಸ-ಇವುಗಳಿಗೆ ಅಘೋಷಗಳೆಂದು ಹೆಸರು-ಕಡಮೆ ವರ್ಣಗಳಿಗೆ ಘೋಷಗಳೆಂದು ಹೆಸರು-ಮತ್ತು ವರ್ಗದ್ವಿತೀಯ-ವರ್ಗಚತುರ್ಥಗಳಿಗೂ ಊಷ್ಮಗಳಿಗೂ ಮಹಾಪ್ರಾಣವೆಂದು ಹೆಸರು-ಕಡಮೆಗೆ ಅಲ್ಪಪ್ರಾಣವೆಂದು ಹೆಸರು.
೨೬-ವರ್ಣಗಳಲ್ಲೊಂದಕ್ಕೊಂದಕ್ಕೇನಾದರೂ ಹೆಸರುಂಟೋ.	ವರ್ಣಗಳೊಳಗೊಂದಕ್ಕೊಂದಕ್ಕೆ ಸವರ್ಣಗಳೆಂಬ ಹೆಸರುಂಟು.
೨೭-ಯಾವಯಾವದಕ್ಕೆ ಯಾವಯಾವದು ಸವರ್ಣವು.	ಅಆ-ಇಈ-ಉಊ-ಋೠ-ಌೡ-ಎಏ-ಒಓ-ಇವುಗಳೊಂದಕ್ಕೊಂದಕ್ಕೆ ಸವರ್ಣಗಳು-ವರ್ಗಾಕ್ಷರಗಳಲ್ಲೂ ಆಯಾ ವರ್ಗದ ಐದಕ್ಷರಗಳೂ ಒಂದಕ್ಕೊಂದಕ್ಕೆ ಸವರ್ಣಗಳು.
೨೮-ಸವರ್ಣಗಳಿಗೆ ಹೆಸರೇನು,	ಅ ಇ ಉ ಋ ಌ ಎ ಒ-ಇವುಗಳ ಮೇಲೆ ವರ್ಗಪದವ ಸೇರಿಸಿದರೂ ಕ ಚ ಟ ತ ಪ-ಇವುಗಳ ಮೇಲೆ ವರ್ಗಪದವ ಸೇರಿಸಿದರೂ ಅವು ಸವರ್ಣಕ್ಕೂ ಅವುಗಳಿಗೂ ಹೆಸರು.
೨೯-ಅಯೋಗವಾಹಗಳ ಸ್ವರೂಪವೇನು ಅವುಗಳ ಹೆಸರೇನು.	ಅಂ ಎಂಬಲ್ಲಿ ಅಕಾರದ ಮೇಲಿರುವದಕ್ಕೆ ಅನುಸ್ವಾರವೆಂತಲೂ-ಬಿಂದುವೆಂತಲೂ-ಸೊನ್ನೆಯೆಂತಲೂ-ಹೆಸರು-ಹಾಂಗೆ-ಅಃ ಎಂಬಾಗ ಅಕಾರದ ಮೇಲಿರುವದಕ್ಕೆ ವಿಸರ್ಗವೆಂತಲೂ-ವಿಸರ್ಜನೀಯವೆಂತಲೂ-ಹೆಸರು-ೱಕ ಎಂಬಲ್ಲಿ-ಕಕಾರಕ್ಕೆ ಹಿಂದಿರುವದಕ್ಕೆ

ಜಿಹ್ವಾಮೂಲೀಯವೆಂತಲೂ-ಪಕಾರದ ಹಿಂದೆಯಿರುವದಕ್ಕೆ ಉಪಧ್ಮಾನೀಯವೆಂತಲೂ ಹೆಸರು.

೩೦-ಇದು ಮೊದಲಾದವಕ್ಕೆ ಅನುಸ್ವಾರ ಮೊದಲಾದ ಹೆಸರಾದಕೆ ಅಕಾರ ಮೊದಲಾದವು ಯಾತಕ್ಕೆ ಸೇರಿಸಲ್ಪಡುತ್ತವೆ.

ಅನುಸ್ವಾರವಿಸರ್ಗಗಳನ್ನಚ್ಚಿಲ್ಲದೆ ಉಚ್ಚರಿಸಕೂಡದಾದ್ದರಿಂದಲೂ-ಜಿಹ್ವಾಮೂಲೀಯೋಪಧ್ಮಾನೀಯಗಳನ್ನು ಹಲ್ಲಿಲ್ಲದೆ ಉಚ್ಚರಿಸಕೂಡದಾದ್ದರಿಂದಲೂ-ಅಕಾರ ಮೊದಲಾದವು ಸೇರಿಸಲ್ಪಡುತ್ತವೆ.

೩೧-ಮತ್ತೂ ಎಲ್ಲಾದರೂ ಹೀಂಗುಚ್ಚರಿಸಲಿಕ್ಕಾಗಿ ವರ್ಣಗಳ ಸೇರಿಸಿದ್ದೇಳದೆಯೋ-

ಎಲ್ಲಾ ವ್ಯಂಜನಗಳ ಮೇಲೂ ಅಕಾರ ಸೇರಿಸಲ್ಪಟ್ಟಿದೆ - ಅಕಾರ ಸೇರದ ವರ್ಣಕ್ಕೆ-ಕ್ಷ್ ಮೊದಲಾದವರ ಹಾಂಗೆ ಬರೆವದು ಗುರುತು.

೩೨-ಎಲ್ಲಾ ವರ್ಣಗಳೂ ಎಲ್ಲಾ ಕಡೆಯಲ್ಲೂ ಬರುತ್ತವೆಯೋ.

ಕೆಲವು ವರ್ಣಗಳು ತತ್ಸಮದಲ್ಲಿ ಮಾತ್ರವೇ ಬರುತ್ತದೆ-ಕೆಲವು ವರ್ಣಗಳು ತತ್ಸಮದಲ್ಲಿ ಮಾತ್ರ ಬರುವದಿಲ್ಲ.

೩೩-ತತ್ಸಮಗಳಲ್ಲಿ ಮಾತ್ರ ಬರತಕ್ಕ ವರ್ಣಗಳು ಯಾವವು.

ಋ ೠ ಌ ೡ ಶ ಷ ವಿಸರ್ಗ ಜಿಹ್ವಾಮೂಲೀಯೋಪಧ್ಮಾನೀಯಗಳು.

೩೪-ಈ ವರ್ಣಗಳಿಗೆ ಹೆಸರೇನು.

ಇವುಗಳಿಗೆ ಕ್ಲೀಬವರ್ಣಗಳೆಂದು ಹೆಸರು.

೩೫-ಈ ಕ್ಲೀಬದಲ್ಲಿ ಯಾವದಕ್ಕಾದರೂ ಪ್ರಯೋಗವುಂಟೋ.

ಇವರ್ಣ ಏವರ್ಣಗಳ ಪರವಾಗಲು ಸಕಾರ-ಶಕಾರವಾಗುತ್ತದೆ.

೩೬-ತತ್ಸಮದಲ್ಲಿ ಬಾರದ ವರ್ಣಗಳು ಯಾವವು-

ಎ ಒ ೞ ಱ - ಇವು ನಾಲ್ಕು ತತ್ಸಮದಲ್ಲಿಲ್ಲದ ವರ್ಣಗಳು.

೩೭-ಇವುಗಳಿಗೇನು ಹೆಸರು.

ದೇಶ್ಯವರ್ಣಗಳೆಂದು ಹೆಸರು.

೩೮-ಕ್ಲೀಬದೇಶ್ಯಗಳಲ್ಲೆಲ್ಲಾ ವರ್ಣಗಳು ಹೊಸಗನ್ನಡದಲ್ಲಿ ಬರುತ್ತವೆಯೋ.

ಕ್ಲೀಬದಲ್ಲಿ-ಜಿಹ್ವಾಮೂಲಿಯೋಪಧ್ಮಾನೀಯಗಳೆರಡಕ್ಕಾವಿಸರ್ಗ ಬರೆಯಲ್ಪಡುತ್ತದೆ-ಉಚ್ಚಾರಣದಲ್ಲಿ ಋವರ್ಣಗಳೇ ಉಚ್ಚರಿಸಲ್ಪಡುತ್ತವೆ-ದೇಶ್ಯಗಳಲ್ಲಿ-ೞಕಾರ ಱಱಗಳಿಗೆ ರೇಫವೆ ಬರೆಯಲ್ಪಡುತ್ತದೆ-ಉಚ್ಚರಿಸಲೂಪಡುತ್ತದೆ.

೩೯-ಎಲ್ಲಾ ಪ್ರಕರಣಕ್ಕೂ ಸಾಧಾರಣವಾದ ಸಂಜ್ಞೆಗಳು ಯಾವವು.

ಶಬ್ದ-ಪ್ರಕೃತಿ-ಪ್ರತ್ಯಯ-ಪದ-ವಾಕ್ಯ-ಸಮಾಸ-ಆಗಮ-ಆದೇಶ-ಲೋಪ-ಸ್ಥಾನಿ-ಗದ್ಯ-ಪದ್ಯ-ದು-ಉಪಧೆ-ಅಕ್ಷರ-ತ್ರಿಕ-ಇವು ಮೊದಲಾದವು.

೪೦-ಶಬ್ದವೆಂದರೇನು.

ಅನೇಕ ವರ್ಣಗಳ ಗುಂಪು.

ಪ್ರಶ್ನೆ	ಉತ್ತರವು
೪೧. ಪ್ರಕೃತಿಯೆಂದರೇನು.	ಪ್ರತ್ಯಯವು ಯಾತರ ಮೇಲೆ ಬರುತ್ತದೆಯೋ ಅದು ಪ್ರಕೃತಿಯು.
೪೨. ಪ್ರಕೃತಿಯೆಷ್ಟು ವಿಧವು.	ಲಿಂಗವೆಂತಲೂ - ಧಾತುವೆಂತಲೂ - ಎರಡು ವಿಧವು.
೪೩. ಲಿಂಗವೆಂದರೇನು.	ಸುಪ್ಪ್ರತ್ಯಯಕ್ಕೂ ಸ್ತ್ರೀಪ್ರತ್ಯಯಕ್ಕೂ ಪ್ರಕೃತಿಯಾದದ್ದು ಲಿಂಗವು - ಈ ಲಿಂಗಕ್ಕೆ ಸಂಸ್ಕೃತ ವ್ಯಾಕರಣದಲ್ಲಿ ಪ್ರಾತಿಪದಿಕವೆಂದು ಹೆಸರು.
೪೪. ಧಾತುವೆಂದರೇನು.	ತಿಙ್ಪ್ರತ್ಯಯಗಳಿಗೂ ಕೃತ್ಪ್ರತ್ಯಯಗಳಿಗೂ ಪ್ರಕೃತಿಯಾದದ್ದು ಧಾತುವು.
೪೫. ಪ್ರತ್ಯಯವೆಂದರೇನು.	ವಿಭಕ್ತಿ ಮೊದಲಾದದ್ದು.
೪೬. ಆ ಪ್ರತ್ಯಯವೆಷ್ಟು ವಿಧವು.	ವಿಭಕ್ತಿ - ಕೃತ್ತು - ತದ್ಧಿತ - ಸಮಾಸಾಂತ - ಸ್ತ್ರೀಪ್ರತ್ಯಯಗಳೆಂದೈದು ವಿಧವು.
೪೭. ವಿಭಕ್ತಿಯೆಷ್ಟು ವಿಧವು.	ಸುಪ್ಪೆಂತಲೂ - ತಿಙ್ಙೆಂತಲೂ - ಎರಡು ವಿಧವು.
೪೮. ಪದವೆಂದರೇನು.	ವಿಭಕ್ತ್ಯಂತವಾದ ಶಬ್ದಕ್ಕೆ ಪದವೆಂದು ಹೆಸರು.
೪೯. ಪದವೆಷ್ಟು ವಿಧವು.	ನಾಮಪದ - ಕ್ರಿಯಾಪದ - ಅವ್ಯಯಪದ - ಎಂದು ಮೂರು ವಿಧವು.
೫೦. ಅವು ಯಾವವು.	ಸುಬಂತ ಪದವು ನಾಮಪದವು - ತಿಙಂತ ಪದವು ಕ್ರಿಯಾಪದವು - ಎಲ್ಲಾ ವಿಭಕ್ತಿಗಳಲ್ಲಿಯೂ ಎಲ್ಲಾ ಲಿಂಗದಲ್ಲಿಯೂ ವಚನಗಳೆಲ್ಲವರಲ್ಲಿಯೂ - ಏಕರೂಪವಾಗಿ ಸುಪ್ಪ್ರತ್ಯಯ ಲೋಪಿಸಿರುವ ಸುಬಂತ ಪದವು - ಅವ್ಯಯ ಪದವು.
೫೧. ಅವ್ಯಯವೆಷ್ಟು ವಿಧವು.	ಶುದ್ಧಾವ್ಯಯವೆಂತಲೂ - ನಿಪಾತಾವ್ಯಯವೆಂತಲೂ - ಎರಡು ವಿಧವು - ಇದರ ವಿವರವು ಶಬ್ದಪ್ರಕರಣದಲ್ಲಿ ಹೇಳಲ್ಪಡುತ್ತದೆ.
೫೨. ವಾಕ್ಯವೆಂದರೇನು.	ಒಂದೇ ಕ್ರಿಯಾಪದದಲ್ಲನ್ವಯಿಸತಕ್ಕ ಪದಗಳ ಸಮೂಹವು - ಕೆಲವರು ತಿಙಂತ ಸುಬಂತ ಪದಗಳ ಸಮೂಹವೆಂದು ಹೇಳುತ್ತಾರೆ.
೫೩. ಸಮಾಸವೆಂದರೇನು.	ಎರಡು ಪದಗಳೊಂದಾಗಿ ಸೇರಿಯೊಂದು ಪದವಾಗುವದು.

ಪ್ರಶ್ನೆ.	ಉತ್ತರವು.
೨೪-ಪದ್ಯವೆಂದರೇನು.	ಪಾದ-ಗಣ-ಯತಿ-ಮಾತ್ರೆ-ಪ್ರಾಸ-ಮುಂತಾದ ನಿಯಮವುಳ್ಳದು-ಪದ್ಯವು.
೨೫-ಗದ್ಯವೆಂದರೇನು.	ಆ ನಿಯಮವೊಂದೂ ಇಲ್ಲದ್ದು.
೨೬-ಆದೇಶವೆಂದರೇನು.	ಒಂದು ವರ್ಣವನ್ನಾಗಲಿ-ಶಬ್ದವನ್ನಾಗಲಿ-ಕೆಡಿಸಿ-ಆ ಸ್ಥಾನದಲ್ಲಿ ಯಾವ ಮತ್ತೊಂದು ವರ್ಣವಾಗಲಿ ಶಬ್ದವಾಗಲಿ ಮಾಡಲ್ಪಡುತ್ತದೆಯೋ ಅದು ಆದೇಶವು.
೨೭-ಲೋಪವೆಂದರೇನು.	ಇರಬೇಕಾದ ವರ್ಣವಾಗಲಿ ಶಬ್ದವಾಗಲಿ ಕಾಣಬರದೆ ಇರುವಿಕೆ.
೨೮-ಆಗಮವೆಂದರೇನು.	ಒಂದು ವರ್ಣವನ್ನಾಗಲಿ ಶಬ್ದವನ್ನಾಗಲಿ ಹತ್ತಿಕ್ಕೊಂಡು ಬರುವದು.
೨೯-ಸ್ಥಾನಿಯೆಂದರೇನು.	ಆದೇಶವು ಯಾವದಕ್ಕೆ ಬರುತ್ತದೆಯೋ ಅದು ಸ್ಥಾನಿ.
೩೦-ಅಕ್ಷರವೆಂದರೇನು.	ಬರೀ ಸ್ವರವಾಗಲಿ ವ್ಯಂಜನದೊಂದಿಗೆ ಹಿಂದಾಗಲಿ ಮುಂದಾಗಲಿ ಸೇರಿದ ಸ್ವರವಾಗಲಿ ಅಕ್ಷರವು.
೩೧-ಅಕ್ಷರವೆಷ್ಟು ವಿಧವು.	ಗುರುವೆಂತಲೂ-ಲಘುವೆಂತಲೂ-ಎರಡು ವಿಧವು-
೩೨-ಗುರುವು ಯಾವದು.	ದೀರ್ಘಕ್ಕೆ ಗುರುವೆಂದು ಹೆಸರು-
೩೩-ಮತ್ತು ಗುರುಸಂಜ್ಞೆ ಯಾವದಕ್ಕಾದರೂ ಉಂಟೋ.	ಸಂಯುಕ್ತಪರವಾದ ಹ್ರಸ್ವಕ್ಕೂ-ವಿಸರ್ಗಾನುಸ್ವಾರಪರವಾದ ಹ್ರಸ್ವಕ್ಕೂ-ಸ್ವರಪರವಿಲ್ಲದ ವ್ಯಂಜನಪರವಾದ ಹ್ರಸ್ವಕ್ಕೂ-ಗುರುವೆಂದು ಹೆಸರು.
೩೪-ಲಘುವು ಯಾವದು.	ಕೇವಲ ಹ್ರಸ್ವವು ಲಘುವು.
೩೫-ಸಂಯುಕ್ತವೆಂದರೇನು.	ನಡುವೆ ವ್ಯಂಜನವಿಲ್ಲದೆ ಸೇರಿರುವ ವ್ಯಂಜನಗಳಿಗೆ ಸಂಯುಕ್ತವೆಂದು ಹೆಸರು ಅದಕ್ಕೆ ಒತ್ತಕ್ಕರವೆಂದೂ ಹೆಸರು.
೩೬-ಉಪಧೆಯೆಂದರೇನು.	ಕಡೆಯ ವರ್ಣದ ಹಿಂದಣ ವರ್ಣಕ್ಕೆ ಹೆಸರು-ಅದಕ್ಕೆ ಉಪಾಂತ್ಯವೆಂದೂ ಹೆಸರು.
೩೭-ಟುವೆಂದರೇನು.	ಕಡೇ ವ್ಯಂಜನಕ್ಕೂ-ಅದರ ಮೇಗಣ ಸ್ವರಕ್ಕೂ-ಹೆಸರು.
೩೮-ತ್ರಿಕವೆಂದರೇನು.	ಕಡೆಯಲ್ಲಿರುವ ಮೂರು ವರ್ಣಕ್ಕೆ ಹೆಸರು.

ಪ್ರಶ್ನೆ.	ಉತ್ತರವು.
೧೯ - ಪ್ಲುತವೆಂದರೇನು.	ದೀರ್ಘವನ್ನೊಂದು ಮಾತ್ರೆ ಹೆಚ್ಚಾಗಿಯೆಳೆದು ಹೇಳಿದರೆ ಪ್ಲುತವು - ಹ್ರಸ್ವವನ್ನೆರಡು ಮಾತ್ರೆ ಹೆಚ್ಚಾಗಿಯೆಳೆದು ಹೇಳಿದರೆ ಅದು ಸಹ ಪ್ಲುತವು.
೨೦ - ಮಾತ್ರೆಯೆಂದರೇನು.	ಒಂದು ನೊಡಿಯಷ್ಟು ಕಾಲವು ಮಾತ್ರೆಯು.
೨೧ - ಯಾವಯಾವ ವರ್ಣವೆಷ್ಟೆಷ್ಟು ಮಾತ್ರೆ.	ಹ್ರಸ್ವವೊಂದು ಮಾತ್ರೆ - ದೀರ್ಘವೆರಡು ಮಾತ್ರೆ - ಪ್ಲುತವು ಮೂರು ಮಾತ್ರೆ - ವ್ಯಂಜನಗಳೂ - ಮತ್ತು ಅಯೋಗವಾಹಗಳೂ - ಅರೆಯರೆ ಮಾತ್ರೆ.
೨೨ - ಇದಕ್ಕಪವಾದವುಂಟೋ.	ಮಾತ್ರಾವೃತ್ತದಲ್ಲಿ - ಗುರುವೆರಡು ಮಾತ್ರೆ - ಲಘುವೊಂದು ಮಾತ್ರೆ - ಯೆಂದು ಮಾತ್ರೆಗಳೆಣಿಕೆ ಮಾಡುವದೇ ಹೊರ್ತು - ವ್ಯಂಜನಗಳನ್ನು ಮಾತ್ರೆಯ ಲೆಕ್ಕಕ್ಕೆ ಸೇರಿಸುವದಿಲ್ಲ.
೨೩ - ಪದಗಳು ಯಾವಯಾವ ವರ್ಣಗಳಲ್ಲಂತವಾಗಿರುವವು.	ಹೊಸಗನ್ನಡದಲ್ಲಿ ವ್ಯಂಜನಾಂತ ಪದಗಳಿಲ್ಲ - ಹಳಗನ್ನಡದಲ್ಲಿ ವ್ಯಂಜನಾಂತವಾದ ಪದಗಳು ಹೊಸಗನ್ನಡದಲ್ಲಿ ಬರುವಾಗ ಉಕಾರಾಗಮ ಬರುತ್ತದೆ - ಆದ್ದರಿಂದ - ಋೠಌೡಗಳನ್ನುಳಿದ ಕಡಮೆ ಸ್ವರಾಂತವಾಗಿರುವವು - ಅಯೋಗವಾಹಾಂತವಾಗಿಲ್ಲವು.
೨೪ - ಪದಾದಿಯಾದ ವರ್ಣಗಳು ಯಾವವು.	ಋ - ಙಞಣಳ ಱಳಗಳನ್ನು ಅಯೋಗವಾಹಗಳ ಸಹಾ ಕಳೆದು ಕಡಮೆ ವರ್ಣಗಳೆಲ್ಲಾ ಪದಾದಿಯಾಗಿರುತ್ತದೆ.
೨೫ - ಈವರ್ಣಗಳು ಹುಟ್ಟುವ ಸ್ಥಾನಗಳು ಯಾವವು.	ಕಂಠ - ತಾಲು - ಮೂರ್ಧ - ದಂತ - ಓಷ್ಠ - ಜಿಹ್ವಾಮೂಲ - ನಾಸಿಕೆ - ಮೊದಲಾದವು.
೨೬ - ಕಂಠದಲ್ಲಿ ಯಾವವು ಹುಟ್ಟುತ್ತವೆ.	ಕಂಠದಲ್ಲಿ ಅವರ್ಣ - ಕವರ್ಗ - ಹಕಾರ - ವಿಸರ್ಗಗಳು ಹುಟ್ಟುತ್ತವೆಯಾದ್ದರಿಂದ - ಈವರ್ಣಗಳಿಗೆ ಕಂಠ್ಯಗಳೆಂದು ಹೆಸರು ಕಂಠವೆಂದರೆ ಕತ್ತು.
೨೭ - ತಾಲುವಲ್ಲಿ ಯಾವವು ಹುಟ್ಟುತ್ತವೆ.	ಇವರ್ಣ - ಚವರ್ಗ - ಯಕಾರ - ಶಕಾರಗಳು - ತಾಲುವಲ್ಲಿ ಹುಟ್ಟುತ್ತವೆಯಾದ್ದರಿಂದ ಈವರ್ಣಗಳು ತಾಲವ್ಯಗಳು - ತಾಲುವೆಂದರೆ - ಒಳನಾಲಿಗೆ.
೨೮ - ಮೂರ್ಧದಲ್ಲಿ ಯಾವವು ಹುಟ್ಟುತ್ತವೆ.	ಮೂರ್ಧದಲ್ಲಿ ಋವರ್ಣ - ಟವರ್ಗ - ರೇಫ - ಱಕಾರ - ೞ - ಷಕಾರ - ಳಕಾರಗಳು - ಆದ್ದರಿಂದ ಇವು ಮೂರ್ಧನ್ಯಗಳು - ಮೂರ್ಧವೆಂದರೆ ಬಾಯೊಳಗಣ ಗೂಟವು.

ಪ್ರಶ್ನೆ.	ಉತ್ತರವು.
೭೯-ದಂತದಲ್ಲಿ ಯಾವವು ಹುಟ್ಟುತ್ತವೆ.	ದಂತದಲ್ಲಿ ಌವರ್ಣ-ತವರ್ಗ-ಲಕಾರ-ಸಕಾರಗಳು-ಹುಟ್ಟುತ್ತವೆಯಾದ್ದರಿಂದ ಇವು ದಂತ್ಯಗಳು-ದಂತವೆಂದರೆ ಹಲ್ಲುಗಳು.
೮೦-ಓಷ್ಠದಲ್ಲಿ ಯಾವವು ಹುಟ್ಟುತ್ತವೆ.	ಓಷ್ಠದಲ್ಲಿ ಉವರ್ಣ-ಪವರ್ಗ-ಉಪಧ್ಮಾನೀಯಗಳು-ಹುಟ್ಟುತ್ತವೆಯಾದ್ದರಿಂದ ಇವು ಓಷ್ಠ್ಯಗಳು-ಓಷ್ಠವೆಂದರೆ ತುಟಿ.
೮೧-ಜಿಹ್ವಾಮೂಲದಲ್ಲಿ ಯಾವದು ಹುಟ್ಟುತ್ತದೆ.	ಜಿಹ್ವಾಮೂಲದಲ್ಲಿ ಹುಟ್ಟುತ್ತದೆಯಾದ್ದರಿಂದ ೱ-ಕ ಇದಕ್ಕೆ ಜಿಹ್ವಾಮೂಲೀಯವೆಂದು ಹೆಸರು-ಜಿಹ್ವಾಮೂಲವೆಂದರೆ ಅಣ್ಣಾಲಿಗೆ.
೮೨-ನಾಸಿಕೆಯಲ್ಲಿ ಯಾವವು ಹುಟ್ಟುತ್ತವೆ.	ನಾಸಿಕೆಯಲ್ಲಿ ಅನುಸ್ವಾರ ಹುಟ್ಟುತ್ತದೆಯಾದ್ದರಿಂದ ಇದಕ್ಕೆ ನಾಸಿಕ್ಯವೆಂದು ಹೆಸರು-ನಾಸಿಕೆಯೆಂದರೆ ಮೂಗು.
೮೩-ಕಡಮೆ ಸ್ವರಗಳಿಗೇನು ಸ್ಥಾನ.	ಎ ಏ ಐ ಗಳಿಗೆ ಕಂಠತಾಲುಗಳಾದ್ದರಿಂದ ಇವು ಕಂಠತಾಲವ್ಯಗಳು-ಒ ಓ ಔ ಗಳಿಗೆ ಕಂಠೋಷ್ಠಗಳಾದ್ದರಿಂದ ಇವು ಕಂಠೋಷ್ಠ್ಯಗಳು.
೮೪-ವಕಾರಕ್ಕೇನು ಸ್ಥಾನವು.	ವಕಾರಕ್ಕೆ ದಂತೋಷ್ಠ ಸ್ಥಾನವಾದ್ದರಿಂದ ಇದು ದಂತೋಷ್ಠ್ಯವು.
೮೫-ಇನ್ನಾ ಹೇಳಿದವುಗಳಲ್ಲಾವದಕ್ಕಾದರೂ ಬೇರೆ ಸ್ಥಾನವುಂಟೋ.	ವರ್ಗಪಂಚಮಗಳಿಗೆ ಆಯಾವರ್ಗಗಳಿಗೆ ಹೇಳಿದ ಸ್ಥಾನಗಳಲ್ಲದೆ ನಾಸಿಕೆ ಸಹಾ ಸ್ಥಾನವು ಆದ್ದರಿಂದ ಇವುಗಳಿಗನುನಾಸಿಕಗಳೆಂದು ಹೆಸರು.
೮೬-ಸ್ವರಗಳಲ್ಲಿ ಭೇದವುಂಟೋ.	ಸ್ವರಗಳೆಲ್ಲಾ ಅನುನಾಸಿಕವೆಂತಲೂ-ಅನನುನಾಸಿಕವೆಂತಲೂ-ಎರಡು ವಿಧವು.
೮೭-ಸ್ವರಗಳು ಸೇರದ ವ್ಯಂಜನಕ್ಕೆ ಯೇನು ಹೆಸರು-ಅದರ ಸ್ವರೂಪವೇನು.	ಅಂಥಾ ವ್ಯಂಜನಕ್ಕೆ ಅರ್ಧಾಕ್ಷರವೆಂದು ಹೆಸರು-ಅದರ ಸ್ವರೂಪವು-೩೧-ನೇ ಉತ್ತರದಲ್ಲಿ ತೋರಿಸಲ್ಪಟ್ಟಿದೆ.

ಇಂತು ಸಂಜ್ಞಾಪ್ರಕರಣವು ಮುಗಿಯಿತು.

ಪ್ರಶ್ನೆ.	ಉತ್ತರವು.
೧. ಸಂಧಿಪ್ರಕರಣದಲ್ಲೇನು ಹೇಳಲ್ಪಡುತ್ತದೆ.	ಸಂಧಿಕಾರ್ಯವೂ ಪ್ರಕೃತಿಭಾವವೂ ಹೇಳಲ್ಪಡುತ್ತದೆ.
೨. ಸಂಧಿಯೆಂದರೇನು.	ಎರಡು ವರ್ಣಗಳನ್ನೆಡೆಬಿಡದೆ ಕೂಡಿಸಿಹೇಳುವದು.
೩. ಸಂಧಿಕಾರ್ಯವೆಂದರೇನು.	ಹೀಗೆ ಮಾಡುವ ಲೋಪಾಗಮಾದೇಶಗಳು ಸಂಧಿಕಾರ್ಯವು.
೪. ಪ್ರಕೃತಿಭಾವವೆಂದರೇನು.	ಸಂಧಿಕಾರ್ಯವಾದ ಲೋಪಾಗಮಾದೇಶಗಳ ಮಾಡದೆಯಿರುವಿಕೆ.
೫. ಎಲ್ಲಾ ಕಡೆಯಲ್ಲೂ ಸಂಧಿ ನಿತ್ಯವೋ.	ಒಂದೇಪದದಲ್ಲಿ ಪೂರ್ವೋತ್ತರವರ್ಣಗಳಿಗೆ ಸಂಧಿ ನಿತ್ಯವು - ಒಂದೇಪದದಲ್ಲಿ ಪ್ರಕೃತಿಪ್ರತ್ಯಯಾಗಮಾದೇಶಗಳಿಗೆ ಸಂಧಿ ನಿತ್ಯವು - ಸಮಾಸದಲ್ಲಿ ಪೂರ್ವೋತ್ತರಪದಗಳಿಗೆ ಸಂಧಿ ನಿತ್ಯವು - ವಾಕ್ಯದಲ್ಲಿ ಮನಸ್ಸುಬಂದಹಾಂಗೆ ಸಂಧಿ ಮಾಡಿದರೂ ಮಾಡದಿದ್ದರೂ ಬೆಂಕೆಯಿಲ್ಲವು.
೬. ಅಕಾರಕ್ಕೆ ಸ್ವರ ಪರವಾಗಲೇನು ಬರುತ್ತದೆ.	ಅಕಾರಕ್ಕೆ ಸ್ವರ ಪರವಾಗಲು ಲೋಪ ಬರುತ್ತದೆ.

a. in inda
da = ದ
na — ನ

ಉದಾಹರಣೆ.

ಬುಧ - ಅರು - ಇದಕ್ಕೆ - ಬುಧರು.
ಅಲ್ಲಿಂದ - ಅಲ್ಲಿಗೆ - ಇದಕ್ಕೆ - ಅಲ್ಲಿಂದಲ್ಲಿಗೆ.
ಬೆಟ್ಟದಿಂದ - ಇಳಿದನು - ಇದಕ್ಕೆ - ಬೆಟ್ಟದಿಂದಿಳಿದನು.
ಲೋಕದ - ಈಶ್ವರನು - ಇದಕ್ಕೆ - ಲೋಕದೀಶ್ವರನು.
ಸಮುದ್ರದ - ಉದಕವು - ಇದಕ್ಕೆ - ಸಮುದ್ರದುದಕವು.
ನೆಂಟರ - ಊಟವು - ಇದಕ್ಕೆ - ನೆಂಟರೂಟವು.
ಮಾವಿನ - ಎಲೆ - ಇದಕ್ಕೆ - ಮಾವಿನೆಲೆ.
ಮರದ - ಏಣಿ - ಇದಕ್ಕೆ - ಮರದೇಣಿ.
ಚಿನ್ನದ - ಒಂಟಿ - ಇದಕ್ಕೆ - ಚಿನ್ನದೊಂಟಿ.
ಹುಡುಗನ - ಓಟವು - ಇದಕ್ಕೆ - ಹುಡುಗನೋಟವು.
ಇಂದ್ರನ - ಐರಾವತವು - ಇದಕ್ಕೆ - ಇಂದ್ರನೈರಾವತವು.
ಹುಡುಗರ - ಔತನವು - ಇದಕ್ಕೆ - ಹುಡುಗರೌತನವು - ಇತ್ಯಾದಿ.

ಪ್ರಶ್ನೆ.	ಉತ್ತರವು.
೭ - ಇದಕ್ಕಪವಾದವುಂಟೊ.	ಹೊಸಾದಿಶಬ್ದಗಳ ಅಕಾರಕ್ಕೆ ಸ್ವರ ಪರವಾಗಲು - ಪ್ರಕೃತಿಭಾವ ಬರುತ್ತದೆ.

radical ă remains

ಉದಾಹರಣೆ.

ಹೊಸ - ಆನೆ - ಇದಕ್ಕೆ - ಹೊಸಆನೆ.

ಹೊರ - ಅದಿ - ಇದಕ್ಕೆ - ಹೊರಅದಿ - ಇತ್ಯಾದಿ.

ಹೊಸ - ಹೊರ - ಒಳ - ಎಳ - ಹಳ - ಇವು ಹೊಸಾದಿಗಳು.

ಪ್ರಶ್ನೆ.	ಉತ್ತರವು.
೮ - ಅ ಇ ಈ ಎ ಏ ಐ ಇವುಗಳಿಗೆ ಸ್ವರ ಪರವಾಗಲೇನು ಬರುತ್ತದೆ.	ಇವುಗಳಿಗೆ ಸ್ವರ ಪರರಾಗಲು - ನಡುವೆ - ಯಕಾರಾಗಮ ಬರುತ್ತದೆ.

ಉದಾಹರಣೆ.

ಜ್ಯಾ - ಅನ್ನ - ಇದಕ್ಕೆ - ಜ್ಯಾಯನ್ನ.

ಗಿರಿ - ಇಂದ - ಇದಕ್ಕೆ - ಗಿರಿಯಿಂದ.

ಮನೆ - ಅಲ್ಲಿ - ಇದಕ್ಕೆ - ಮನೆಯಲ್ಲಿ.

ಮೇ - ಅಲು - ಇದಕ್ಕೆ - ಮೇಯಲು.

ಕೈ - ಅ - ಇದಕ್ಕೆ - ಕೈಯ.

ಇತ್ಯಾದಿಗಳಲ್ಲಿ ಆಗಮ ಯಕಾರವು ಪರವರ್ಣದಲಿಂ ಬೆಸೇರಿಯಿದೆ.

ಪ್ರಶ್ನೆ.	ಉತ್ತರವು.
೯ - ಆಕಾರಕ್ಕಿಲ್ಲಾದರೂ ಅಪವಾದವುಂಟೋ.	ಅದುಶಬ್ದಕ್ಕಾದೇಶವಾದ ಆರಕ್ಕೆ - ಔಕಾರವನ್ನುಳಿದ ಓಷ್ಠ್ಯಸ್ವರ ಪರವಾಗಲು - ನಡುವೆ - ವಕಾರಾಗಮ ಬರುತ್ತದೆ.

ಉದಾಹರಣೆ.

ಆ - ಉದಕವು - ಇದಕ್ಕೆ - ಆವುದಕವು.

ಆ - ಊರು - ಇದಕ್ಕೆ - ಆವೂರು.

ಆ - ಒಂಟೆ - ಇದಕ್ಕೆ - ಆವೊಂಟೆ.

ಆ - ಓಲೆ - ಇದಕ್ಕೆ - ಆವೋಲೆ.

ಇಲ್ಲಿ ಓಷ್ಠ್ಯವೆಂದರೆ - ಶುದ್ಧೋಷ್ಠ್ಯವಾದ ಉವರ್ಣವು - ಕಂಠೋಷ್ಠ್ಯವಾದ ಒ ಓ ಔ - ಗಳೆಂದಿಯಲ್ಪಡುತ್ತವೆ.

ಪ್ರಶ್ನೆ.

೧೦ - ಅಕಾರಕ್ಕೆ ಔಕಾರ ಪರವಾದರೇನು ಬರುತ್ತದೆ.

ಔಕಾರ ಪರವಾದರೆ ಅದು ಶಬ್ದದ ಆಕಾರಕ್ಕೆ ನಡುವೆ ವಕಾರಾಗಮವಾಗಲಿ - ಪ್ರಕೃತಿಭಾವವಾಗಲಿ - ಬರುತ್ತದೆ.

ಉದಾಹರಣೆ.

ಆ ಔರಣವು - ಇದಕ್ಕೆ - ಆವೌರಣವು - ಆಔರಣವು.

೧೧ - ಈ ಯಾಕಾರಕ್ಕೆ ವಿಕಲ್ಪವಾಗಿ ಪ್ರಕೃತಿಭಾವವಿನ್ನು ಎಲ್ಲಿ ಬರುತ್ತದೆ.

ಈ ಯಾಕಾರಕ್ಕೆ ವಿಕಲ್ಪವಾಗಿ ಪ್ರಕೃತಿಭಾವವು ಅಕಾರವಾಗಲಿ ಐಕಾರವಾಗಲಿ ಪರವಾದಾಗ ಬರುತ್ತದೆ. ಪ್ರಕೃತಿಭಾವ ಬಾರದ ಪಕ್ಷದಲ್ಲಿ ಎಂಟನೆಯ ಸೂತ್ರ ಪ್ರಕಾರ ಯಕಾರಾಗಮ ಬರುತ್ತದೆ.

ಉದಾಹರಣೆ.

ಆ - ಅರಸನು - ಇದಕ್ಕೆ - ಆಯರಸನು - ಆಅರಸನು.

ಆ - ಐಶ್ವರ್ಯವು - ಇದಕ್ಕೆ - ಆಯೈಶ್ವರ್ಯವು - ಆಐಶ್ವರ್ಯವು.

೧೨ - ಅದು ಶಬ್ದದ ಅಕಾರಕ್ಕೆ ಹೇಳಿದ ಕಾರ್ಯಗಳು ಮತ್ತಾವ ಶಬ್ದಕ್ಕಾದರೂ ಬರುತ್ತದೆಯೊ.

ಎಲ್ಲಾ ಶಬ್ದದ ಆಕಾರಕ್ಕೂ - ೯ - ೧೦ - ೧೧ - ಸೂತ್ರದ ವಿಧಿಗಳು ಬರುತ್ತವೆ.

ಉದಾಹರಣೆ.

ಎಲ್ಲಾ - ಉಳಿಗಳು - ಇದಕ್ಕೆ - ಎಲ್ಲಾವುಳಿಗಳು.

ಎಲ್ಲಾ - ಊರುಗಳು - ಇದಕ್ಕೆ - ಎಲ್ಲಾವೂರುಗಳು.

ಎಲ್ಲಾ - ಔರಣವು - ಇದಕ್ಕೆ - ಎಲ್ಲಾಔರಣವು - ಎಲ್ಲಾವೌರಣವು.

ಎಲ್ಲಾ - ಅಂಬೆಯು - ಇದಕ್ಕೆ - ಎಲ್ಲಾಅಂಬೆಯು - ಎಲ್ಲಾಯಂಬೆಯು

ಎಲ್ಲಾಐಶ್ವರ್ಯವು - ಇದಕ್ಕೆ - ಎಲ್ಲಾಐಶ್ವರ್ಯವು - ಎಲ್ಲಾಯೈಶ್ವರ್ಯವು

೧೩ - ಎಂಟನೇ ಸೂತ್ರಕ್ಕೆ ಎಲ್ಲಾದರೂ ಅಪವಾದವುಂಟಾ.

ಸುಬ್ವಿಭಕ್ತಿಯ ಕಡೆಯಲ್ಲಿರುವ ಇಕಾರಕ್ಕೂ - ಎಕಾರಕ್ಕೂ - ಸ್ವರ ಪರವಾದರೂ - ಲಿ ಪ್ರತ್ಯಯಾಂತಗಳ ಇಕಾರಕ್ಕೆ ಪಂಚಮೀ ಷಷ್ಠೀ ವಿಭಕ್ತಿಗಳ ಅಣ ಪ್ರತ್ಯಯವು - ಇವುಗಳ ಮೊದಲಲ್ಲಿರುವ ಅಕಾರವನ್ನುಳಿದ ಸ್ವರ ಪರವಾಗಲು - ಲೋಪ ಬರುತ್ತದೆ.

ಉದಾಹರಣೆ.

ಮನೆಯಲ್ಲಿ - ಇದ್ದನು - ಇದಕ್ಕೆ - ಮನೆಯಲ್ಲಿದ್ದನು -

ದೇವರಿಗೆ - ಒಪ್ಪಿಸಿದನು - ಇದಕ್ಕೆ - ದೇವರಿಗೊಪ್ಪಿಸಿದನು.

ಲಿಪ್ರತ್ಯಯಾಂತಕ್ಕೆ - ಅಲ್ಲಿ - ಇಧಾನೆ - ಇದಕ್ಕೆ - ಅಲ್ಲಿಧಾನೆ.

ಹೊರಗೆ - ಇದೆ - ಇದಕ್ಕೆ - ಹೊರಗಿದೆ - - - ಸಪ್ತಮಿ.

ಪ್ರಶ್ನೆ.	ಉತ್ತರವು.

ಹೊರಗೆ - ಓದಿದನು - ಇದಕ್ಕೆ - ಹೊರಗೋದಿದನು. ಚತುರ್ಥೀ.

ಒಳಗೆ - ಅವನು - ನೋಡಿದನು - ಇದಕ್ಕೆ - ಒಳಗವನೋಡಿದನು. ದ್ವಿತೀಯೆ.

ಪ್ರತ್ಯುದಾಹರಣೆ.

ಅಲ್ಲಿ - ಅದೆಸೆಯಿಂದ - ಇದಕ್ಕೆ - ಅಲ್ಲಿಯದೆಸೆಯಿಂದ.

ಅಲ್ಲಿ - ಅ - ಇದಕ್ಕೆ - ಅಲ್ಲಿಯ.

ಅಲ್ಲಿ - ಅಣಾ - ಇದಕ್ಕೆ - ಅಲ್ಲಿಯಣಾ.

ಇತ್ಯಾದಿಗಳಲ್ಲಿ ಎಂಟನೇಯ ಸೂತ್ರದಿಂದ ಯಕಾರಾಗಮ ಬರುತ್ತದೆ.

೧೪ - ಈ ವಿಭಕ್ತಿ ಪ್ರತ್ಯಯಗಳ - ಇವು - ಇವುಗಳಿಗೂ - ಲಿ ಪ್ರತ್ಯಯದ ಇಕಾರಕ್ಕೂ - ಚೆರಿಯೇನಾದರೂ ಎಲ್ಲಾದರೂ ಬರುತ್ತದೆಯೊ.

ಇವುಗಳಿಗೆ - ಊ - ಏ - ಈ ನಿಪಾತಗಳು ಪರವಾಗಲು ಯಕಾರಾಗಮವಾಗಲಿ - ಲೋಪವಾಗಲಿ - ಬರುತ್ತವೆ.

ಮನೆಯಲ್ಲಿ - ಊ - ಇದಕ್ಕೆ - ಮನೆಯಲ್ಲಿಯೂ - ಮನೆಯಲ್ಲೂ.

ಮನೆಯಲ್ಲಿ - ಏ - ಇದಕ್ಕೆ - ಮನೆಯಲ್ಲಿಯೇ - ಮನೆಯಲ್ಲೇ.

ದೇವರಿಗೆ - ಊ - ಇದಕ್ಕೆ - ದೇವರಿಗೆಯೂ - ದೇವರಿಗೂ.

ದೇವರಿಗೆ - ಏ - ಇದಕ್ಕೆ - ದೇವರಿಗೆಯೇ - ದೇವರಿಗೇ.

ಹೊರಗೆ - ಊ - ಇದಕ್ಕೆ - ಹೊರಗೆಯೂ - ಹೊರಗೂ.

ಅಲ್ಲಿ - ಏ - ಇದಕ್ಕೆ - ಅಲ್ಲಿಯೇ - ಅಲ್ಲೇ.

ಇತ್ಯಾದಿ.

೧೫ - ಈ ಎರಡು ವರ್ಣಗಳಿಗೂ ಲೋಪ ಯಕಾರಾಗಮಗಳೆರಡೂ ಎಲ್ಲಾದರೂ ಬರುತ್ತವೆಯೊ.

ಈ ಎರಡು ವರ್ಣಾಂತವಾದ ಪ್ರಕೃತಿಗಳಿಗೆ ಇಸು ಪ್ರತ್ಯಯ ಪರವಾದರೂ - ಮಧ್ಯಮಪುರುಷೈಕವಚನವನ್ನು ಅದೆ ಇದೆ ಶಬ್ದಗಳನ್ನು ಸಹಾ ಬಿಟ್ಟು ಮಿಕ್ಕದ್ದು ಮೆ-ಎ-ಇ ಅಂತವಾದ ಆಖ್ಯಾತ ಪ್ರತ್ಯಯಗಳೂ - ತಿ - ಅದೆ-ಇ-ಪ್ರತ್ಯಯಗಳೂ-ಸ್ವರ ಪರವಾಗಲು ಲೋಪವಾಗಲಿ - ಯಕಾರಾಗಮವಾಗಲಿ - ಬರುತ್ತದೆ.

ಉದಾಹರಣೆ.

ಇಳಿ - ಇಸು - ಇದಕ್ಕೆ - ಇಳಿಸು - ಇಳಿಯಿಸು.

ಕರೆ - ಇಸು - ಇದಕ್ಕೆ - ಕರಿಸು - ಕರೆಯಿಸು.

ಸ್ತುತಿ - ಇಸು - ಇದಕ್ಕೆ - ಸ್ತುತಿಸು - ಸ್ತುತಿಯಿಸು.

ಮಾಡಿದಿರಿ - ಅದನ್ನು - ಇದಕ್ಕೆ - ಮಾಡಿದಿರದನ್ನು - ಮಾಡಿದಿರಿಯದನ್ನು.

ಮಾಡುತ್ತೇನೆ - ಆದ್ದರಿಂದ - ಇದಕ್ಕೆ - ಮಾಡುತ್ತೇನಾದ್ದರಿಂದ - ಮಾಡುತ್ತೇನೆಯಾದ್ದರಿಂದ.

ಬಂದರೆ - ಏನು - ಇದಕ್ಕೆ - ಬಂದರೇನು - ಬಂದರೆಯೇನು.

ಕೊಡದೆ - ಇದ್ದನು - ಇದಕ್ಕೆ - ಕೊಡದಿದ್ದನು - ಕೊಡದೆಯಿದ್ದನು.

ಹೋಗಿ - ಇದ್ದನು - ಇದಕ್ಕೆ - ಹೋಗಿದ್ದನು - ಹೋಗಿಯಿದ್ದನು ಇತ್ಯಾದಿ.

ಪ್ರತ್ಯುದಾಹರಣೆ.

ಮಧ್ಯಮಪುರುಷೈಕವಚನದ ಇಕಾರಕ್ಕೆ.

ಓದಿದಿ - ಅರಿತ್ವರೆಯಿಂದ - ಇದಕ್ಕೆ - ಓದಿದಿಯರಿತ್ವರೆಯಿಂದ.

ಅಧರ ಎಕಾರಕ್ಕೆ.

ಬಂದೆ - ಈಗ - ಇದಕ್ಕೆ - ಬಂದೆಯೀಗ.

ಅದೆ - ಇದೆ - ಶಬ್ದಗಳಿಗೆ.

ಅದೆ - ಅಲ್ಲಿ - ಇದಕ್ಕೆ - ಅದೆಯಲ್ಲಿ.

ಇದೆ - ಇಲ್ಲಿ - ಇದಕ್ಕೆ - ಇದೆಯಿಲ್ಲಿ.

ಇತ್ಯಾದಿ. ಇಲ್ಲಿ ಎಂಟನೇ ಸೂತ್ರ ಪ್ರಕಾರ ನಿತ್ಯವಾಗಿ ಯಕಾರ ಬರುವದು.

೧೭.- ಕಡಮೆಸ್ವರಗಳಿಗೆ ಸ್ವರ ಪರವಾಗಲೇನು ಬರುತ್ತದೆ.

ಕಡಿಮೆ - ಉಊ - ಋ - ಓಔ - ಇವುಗಳಿಗೆ ಸ್ವರ ಪರವಾಗಲು ವಕಾರಾಗಮ ಬರುತ್ತದೆ - ಋ - ಌ - ಇವುಗಳಿಗೆ ಮೋಕದಲ್ಲಿ ಪ್ರಯೋಗವಿಲ್ಲವು - ಮಂತ್ರಶಾಸ್ತ್ರದಲ್ಲಿಯೂ ವರ್ಣಮಾತೃಕೆಯಲ್ಲಿಯೂ ಪ್ರಯೋಗವುಂಟು - ಸಂಸ್ಕೃತ ವ್ಯಾಕರಣದಲ್ಲಿ - ಌ ಕಾರಕ್ಕೆ ದೀರ್ಘವೇ ಇಲ್ಲವೆಂದು ಹೇಳಿಯದೆ.

ಉದಾಹರಣೆ.

ಗುರು - ಅನ್ನು - ಇದಕ್ಕೆ - ಗುರುವನ್ನು.
ಮಗು - ಅನ್ನು - ಇದಕ್ಕೆ - ಮಗುವನ್ನು.
ಭೂ - ಇಂದ - ಇದಕ್ಕೆ - ಭೂವಿಂದ.
ಪಿತೃ - ಇನ - ಇದಕ್ಕೆ - ಪಿತೃವಿನ.
ೠ - ಎಂದು - ಇದಕ್ಕೆ - ೠವೆಂದು.
ಌ - ಎಂದು - ಇದಕ್ಕೆ - ಌವೆಂದು.
ೡ - ಎಂದು - ಇದಕ್ಕೆ - ೡವೆಂದು.

೧೭ - ಇದಕ್ಕಪವಾದವುಂಟೋ.

ಒಂದೆರಡು ಲಘ್ವಕ್ಷರ ಶಬ್ದಗಳನ್ನುಳಿದ ಕಡೆಯ ಅಚ್ಚಗನ್ನಡ ಶಬ್ದದ-ಕಡೆಯ ಉಕಾರಕ್ಕೂ - ಪ್ರತ್ಯಯದ ಉಕಾರಗಳಿಗೆ ತತ್ಸಮ ತದ್ಭವಗಳ ಕಡೆಯಲ್ಲಿ ಬರುವ ಉಗಾಗಮಾದೇಶಗಳ ಉಕಾರಕ್ಕೂ - ಸ್ವರ ಪರವಾಗಲು ಲೋಪ ಬರುತ್ತದೆ.

ಕಾಸು - ಅನ್ನು - ಇದಕ್ಕೆ - ಕಾಸನ್ನು.
ಕರಡು - ಇಂದ - ಇದಕ್ಕೆ - ಕರಡಿಂದ.
ರಾಮನು - ಎಲ್ಲಿ - ಇದಕ್ಕೆ - ರಾಮನೆಲ್ಲಿ.
ಇದ್ದನು - ಇಲ್ಲಿ - ಇದ್ದಕ್ಕೆ - ಇದ್ದನಿಲ್ಲಿ.
ಮನಸ್ಸು - ಇಲ್ಲ - ಇದಕ್ಕೆ - ಮನಸ್ಸಿಲ್ಲ.
ಹೂವು - ಇಂದ - ಇದಕ್ಕೆ - ಹೂವಿಂದ.
ಹಾಡು - ಇಗೆ - ಇದಕ್ಕೆ - ಹಾಡಿಗೆ.
ಇತ್ಯಾದಿ

ಪ್ರತ್ಯುದಾಹರಣೆ.

ಒಂದೆರಡು ಲಘ್ವಕ್ಷರ ಶಬ್ದಗಳ ಉಕಾರಕ್ಕೆ.
ಮಡು - ಇಗೆ - ಇದಕ್ಕೆ - ಮಡುವಿಗೆ.
ಕರು - ಇನ - ಇದಕ್ಕೆ - ಕರುವಿನ.
ಡು - ಇಗೆ - ಇದಕ್ಕೆ - ಡುವಿಗೆ.
ಇತ್ಯಾದಿ.

೧೮ - ಓಕಾರಕ್ಕಪವಾದವುಂಟೋ.

ಇಲ್ಲಿ ಅಚ್ಚಗನ್ನಡ ಧಾತುಗಳ ಓಕಾರಕ್ಕೆ ಸ್ವರ ಪರವಾಗಲು ಯಕಾರಾಗಮ ಬರುತ್ತದೆ.

ಹೋ - ಅಲು - ಇದಕ್ಕೆ - ಹೋಯಲು.

ನೋ - ಉತ್ತದೆ - ಇದಕ್ಕೆ - ನೋಯುತ್ತದೆ.

ಇತ್ಯಾದಿ.

೧೯ - ಎಲ್ಲಾ ಸ್ವರಗಳಿಗೂ ಕ್ಲೀಬಸ್ವರ ಪರವಾದರೆ ಏನು ಬರುತ್ತದೆ.

ಎಲ್ಲಾ ಸ್ವರಗಳಿಗೂ ಕ್ಲೀಬಸ್ವರ ಪರವಾದರೆ ಪ್ರಕೃತಿಭಾವವೇ ಬರುತ್ತದೆ.

ತಂದೆಯ - ಮಗನು - ಇದಕ್ಕೆ - ತಂದೆಯಮಗನು.

ನಿನ್ನ - ಮಗು - ಇದಕ್ಕೆ - ನಿನ್ನಮಗು - ಇತ್ಯಾದಿ.

೨೦ - ಇದಕ್ಕಪವಾದವುಂಟೊ.

ಅದ್ವಾದಿಶಬ್ದಗಳಿಗಾದೇಶವಾದ - ಊ - ಈ - ಉ - ಎಲ್ಲಾ ಶಬ್ದಗಳ ದೀರ್ಘಕ್ಕಿಂತ ಪರವಾದ ಮಕಾರಕ್ಕೆ ರುಶಬ್ದವಾದೇಶವಾಗಿ ಬರುತ್ತದೆ.

ಊ - ಮಗನು - ಇದಕ್ಕೆ - ಊರುಗನು.

ಈ - ಮಪ್ಪವು - ಇದಕ್ಕೆ - ಈರುಪ್ಪವು.

ಎಲ್ಲಾ - ಮಕ್ಷಿಗಳು - ಇದಕ್ಕೆ - ಎಲ್ಲಾರುಕ್ಷಿಗಳು - ಇತ್ಯಾದಿ.

೨೧ - ಇನ್ನಾ ಪ್ರಕೃತಿಭಾವವೆಲ್ಲಿ ಬರುತ್ತದೆ.

ಸಂಬೋಧನಪ್ರಥಮಾವಿಭಕ್ತಿಗೂ ನಿಪಾತಕ್ಕೂ ಪ್ಲುತಕ್ಕೂ ಸ್ವರಪರವಾಗಲು ಪ್ರಕೃತಿಭಾವ ಬರುತ್ತದೆ.

ರಾಮ - ಇಲ್ಲಿಗೆಬಾ - ಇದಕ್ಕೆ - ರಾಮಇಲ್ಲಿಗೆಬಾ.

ಅಹಹ - ಎಂದನು - ಇದಕ್ಕೆ - ಅಹಹಎಂದನು.

ಎಲಾ - ೩ - ಅಣ್ಣಾ - ಇದಕ್ಕೆ - ಎಲಾ - ೩ - ಅಣ್ಣಾ.

೨೨ - ಪ್ಲುತವೆಲ್ಲಿ ಬರುತ್ತದೆ.

ತಾನು ಸ್ವಭಾವವಾಗಿ ಕೂಗಿದ ಶಿಕ್ಕೆಗೆ ಬಾರದಷ್ಟು ದೂರದಲ್ಲಿರುವವನ ಕೂಗುವಾಗ ಪ್ರಯೋಗಿಸಲ್ಪಡುವ ಸಂಬೋಧನಪ್ರಥಮಾಂತ ಪದದ ಕಡೆಯ ಸ್ವರಕ್ಕೂ - ಸಂಬೋಧ್ಯವಿಶೇಷದ್ಯೋತಕವಾದ - ಓ - ಮೊದಲಾದ ನಿಪಾತಗಳೊಂದಿಗೆ ಸಂಬೋಧನಪ್ರಥಮಾಂತ ಪದವು ಸೇರಿದಾಗ - ಸಂಬೋಧನಪ್ರಥಮಾಂತ ಪದಕ್ಕೆ ಮಾತ್ರವಾಗಲಿ - ನಿಪಾತಕ್ಕೆ ಮಾತ್ರವಾಗಲಿ - ಎರಡಕ್ಕೂ ಆಗಲಿ - ಪ್ಲುತ ಬರುತ್ತದೆ.

ಉದಾಹರಣೆ.

ರಾಮಾ - ೩ - ಇಲ್ಲಿಗೆಬಾ - ಇದಕ್ಕೆ - ರಾಮಾ - ೩ - ಇಲ್ಲಿಗೆಬಾ.

ಓ - ಅಪ್ಪಾ - ೩ - ಇದಕೇಳು - ಇದಕ್ಕೆ - ಓ - ಅಪ್ಪಾ - ೩ - ಇದಕೇಳು.

ಓ - ೩ - ಅಯ್ಯಾ - ೩ - ಇದೇನು - ಇದಕ್ಕೆ - ಓ - ೩ - ಅಯ್ಯಾ ೩ - ಇದೇನು.

ಓ - ೩ - ಅಣ್ಣಾ - ಇಲ್ಲಿರು - ಇದಕ್ಕೆ - ಓ - ೩ - ಅಣ್ಣಾಇಲ್ಲಿರು.

ಇತ್ಯಾದಿ.

ಮೇಲಿಬರದ ಉದಾಹರಣೆಗಳಲ್ಲಿ - ೩ - ಗುರುತು - ಎಲ್ಲಿ ಹಾಕಲ್ಪಟ್ಟಿದೆಯೋ - ಅದು ಮೂರು ಮಾತ್ರೆಯುಳ್ಳ ಪ್ಲುತವೆಂದು ತಿಳಿದುಕೊಳ್ಳುವದು.

೨೩ - ಎಲ್ಲಾ ಸ್ವರಗಳಿಗೂ ಸ್ವರಪರವಾಗಲು ಲೋಪವೆಲ್ಲಿ ಬರುತ್ತದೆ.

ಇಟ್ಟಹೆಸರುಗಳ - ಅಂತ್ಯದಲ್ಲಿರುವ ಸ್ವರಕ್ಕೆ - ಅಮ್ಮಾದಿ ಶಬ್ದಗಳು ಪರವಾಗಲು - ಲೋಪಬರುತ್ತದೆ - ದ್ವಿರ್ಭಾವದಲ್ಲಿಯೂ - ಪೂರ್ವಪದದ ಕಡೆಯ ಸ್ವರಕ್ಕೆ ಪರಪದದ ಮೊದಲು ಸ್ವರಪರವಾಗಲು - ಸಹ - ಲೋಪ ಬರುತ್ತದೆ.

ಉದಾಹರಣೆ.

ಲಕ್ಷ್ಮಿ - ಅಮ್ಮ - ಇದಕ್ಕೆ - ಲಕ್ಷ್ಮಮ್ಮ.
ಮೀನಾಕ್ಷಿ - ಅಯ್ಯ - ಇದಕ್ಕೆ - ಮೀನಾಕ್ಷಯ್ಯ.
ಗಂಗೆ - ಅಮ್ಮ - ಇದಕ್ಕೆ - ಗಂಗಮ್ಮ.

ಇತ್ಯಾದಿ.

ಅಮ್ಮ - ಅಕ್ಕ - ಅವ್ವ - ಅವ್ವೆ - ಅಮ್ಮಿ - ಅಜ್ಜಿ - ಆಜಿ - ಅಯ್ಯ - ಅಪ್ಪ - ಅಣ್ಣಾ - ಇತ್ಯಾದಿಗಳು - ಅಮ್ಮಾದಿಗಳು.

೨೪ - ದ್ವಿರ್ಭಾವವೆಂದರೇನು.

ಒಂದುಪದವನಿಮ್ಮಡಿಸಿಯಾಗಲಿ - ಮುಮ್ಮಡಿಸಿಯಾಗಲಿ - ಹೇಳೋಣವು - ಅದನ್ನು ವಿವರವಾಗಿ ಸಮಾಸಪ್ರಕರಣದಲ್ಲಿ ತಿಳಿದುಕೊಳ್ಳಬಹುದು.

ಉದಾಹರಣೆ.

ಅಯ್ಯೋ - ಅಯ್ಯೋ - ಇದಕ್ಕೆ - ಅಯ್ಯಯ್ಯೋ.
ಎಲಾ - ಎಲಾ - ಇದಕ್ಕೆ - ಎಲೆಲಾ - ಇತ್ಯಾದಿ.

೨೫ - ಇನ್ನೂಯೆಲ್ಲಾಸ್ವರಗಳಿಗೂ ಲೋಪವೆಲ್ಲಿಬರುತ್ತದೆ.

ನಾಮಧಾತುಗಳ ಪಕ್ಷದಲ್ಲಿಲೋಪವಿಧಿಸದಕಡೆಯಲ್ಲಿಸ ಡಾಲೋಪಬರುತ್ತದೆ.

ಉದಾಹರಣೆ.

ನಿದ್ರಾ - ಇಸು - ಇದಕ್ಕೆ - ನಿದ್ರಿಸು.

ಹುಸಿ - ಇಗಸು - ಇದಕ್ಕೆ - ಹುಸಿಗಸು.

೨೬ - ನಾಮಧಾತುಗಳು ವದೂ - ಕಿದಷ್ಟೂ ಹ್ಯಾಂಗೆ ತಿಳಿಯುತ್ತದೆ.

ಹಿರಿಯರ ಪ್ರಯೋಗದಿಂದ ತಿಳಿಯುತ್ತದೆ - ಊಹದರಿಂದ ಮನಸ್ಸುಬಂದ ಹಾಂಗೆ ಹೊಸವ ಮಾಡಬಾರದು.

೨೭ - ಇನ್ನೂ ಎಲ್ಲಾ ಸ್ವರಗಳಿಗೂ - ಮೇಲಿಹೇಳಿದ ಪ್ರಕೃತಿಭಾವವು - ಎಲ್ಲಿಬರುತ್ತದೆ.

ಅನುಕರಣಶಬ್ದಗಳಿಗೆ ಎನುಧಾತುವಿನ ಎಕಾರ ಪರವಾಗಲು - ಆಯಾವರ್ಣಗಳಿಗೆ ಹೇಳಿದ ಸಂಧಿಯಾಗಲಿ - ಪ್ರಕೃತಿಭಾವವಾಗಲಿ - ಬರುತ್ತದೆ - ಅಕಾರಾಂತಕ್ಕೂ - ಓಕಾರಾಂತಕ್ಕೂ - ಯಕಾರಾಗಮ ಸಹ - ಬರುತ್ತದೆ.

ಉದಾಹರಣೆ.

ಗುಡುಗುಡು - ಎಂದು - ಇದಕ್ಕೆ - ಗುಡುಗುಡೆಂದು - ಗುಡುಗುಡು ಎಂದು.

ಗುರು - ಎಂದು - ಇದಕ್ಕೆ - ಗುರುವೆಂದು - ಗುರು ಎಂದು.

ಹರಿ - ಎಂದು - ಇದಕ್ಕೆ - ಹರಿಯೆಂದು - ಹರಿ ಎಂದು.

ಪಳಪಳ - ಎಂದು - ಇದಕ್ಕೆ - ಪಳಪಳೆಂದು - ಪಳಪಳಯೆಂದು - ಪಳಪಳ ಎಂದು.

ಜ್ಯಾಃ - ಎಂದು - ಇದಕ್ಕೆ - ಜ್ಯಾಃವೆಂದು - ಜ್ಯಾಃಎಂದು - ಜ್ಯಾಃಯೆಂದು.

೨೮ - ಅನುಸ್ವಾರಾಂತವಾದನುಕರಣಕ್ಕೇನು ಬರುತ್ತದೆ.

ಅನುಸ್ವಾರಾಂತವಾದನುಕರಣಕ್ಕೆ ಎನುಧಾತುವಿನ ಎಕಾರ ಪರವಾಗಲು - ಅನುಸ್ವಾರಕ್ಕೆ ಮಕಾರಾದೇಶ ಬರುತ್ತದೆ - ಒಂದುವೇಳೆ ಪ್ರಕೃತಿಭಾವವೂ ಬರುವದುಂಟು.

ಉದಾಹರಣೆ.

ಶ್ರೀಕೃಷ್ಣಂ - ಎಂದು - ಇದಕ್ಕೆ - ಶ್ರೀಕೃಷ್ಣಮೆಂದು - ಶ್ರೀಕೃಷ್ಣಂಎಂದು.

೨೯ - ವಿಸರ್ಗಾಂತವಾ

ವಿಸರ್ಗಾಂತವಾದನುಕರಣಕ್ಕೆ ಎನುಧಾತುವಿನ ಎಕಾರ ಪರ

ದಸಕರಣಾತ್ಕೆಸು ಬರುತ್ತದೆ.

ಹಾಗಲು ವಿಸರ್ಗಕ್ಕೆ ಲೋಪ ಬರುತ್ತದೆ - ಲೋಪ ಬಂದಾಗ ಉಪಧೆಗೆ ಮೇಲೆ ಹೇಳಿದ ಸಂಧಿಯಾಗಲಿ - ಪ್ರಕೃತಿಭಾವವಾಗಲಿ - ಬರುತ್ತದೆ - ಒಂದು ವೇಳೆ ವಿಸರ್ಗಕ್ಕೆ ಲೋಪವಿಲ್ಲದೆ ಪ್ರಕೃತಿಭಾವ ಮಾತ್ರವೇ ಬರುತ್ತದೆ - ಅಕಾರೋಪಧವಾದ ವಿಸರ್ಗಕ್ಕೆ ಲೋಪ ಬಂದಾಗ ಅಕಾರಕ್ಕೆ ಮೇಲೆ ಹೇಳಿದ ಯಕಾರಾಗಮವು ಬರುವದಿಲ್ಲ.

ಉದಾಹರಣೆ.

ಕಶ್ಶಂಭುಃ - ಎಂದು - ಇದಕ್ಕೆ - ಕಶ್ಶಂಭು ಎಂದು - ಕಶ್ಶಂಭು ವೆಂದು - ಕಶ್ಶಂಭುಃ ಎಂದು.

ಕೋದರಿದ್ರಃ - ಎಂದು - ಇದಕ್ಕೆ - ಕೋದರಿದ್ರ ಎಂದು - ಕೋದರಿದ್ರಃ ಎಂದು.

೩೦ - ಸಂಧಿಯಲ್ಲಿ ವರ್ಣಲೋಪವೇ ಹೊರ್ತು ಅಕ್ಷರಲೋಪವಿಲ್ಲಾದರೂ ಉಂಟೋ.

ನಕಾರಾಗಮ - ವಕಾರಾಗಮ - ಗಳೊಂದಿಗೆ ಪ್ರಥಮೈಕವಚನದ - ಉ - ಪ್ರತ್ಯಯಕ್ಕೂ - ಆಖ್ಯಾತಾಂತದಲ್ಲಿರುವ ನು ಶಬ್ದಕ್ಕೂ - ಅಲ್ಲವು ಇಲ್ಲವು ಶಬ್ದಗಳ - ವು - ಶಬ್ದಕ್ಕೂ - ಅಲು ಪ್ರತ್ಯಯದ - ಲು - ಶಬ್ದಕ್ಕೂ - ವ್ಯಂಜನಪರವಾದಾಗಲೂ - ಒಂದೂ ಪರವಿಲ್ಲದಾಗಲೂ - ವಿಕಲ್ಪವಾಗಿ ಲೋಪ ಬರುತ್ತದೆ - ಸ್ವರಪರವಾದಾಗ ಲೋಪ ಬಂದರೆ ಪ್ರಕೃತಿಭಾವ ಬರುತ್ತದೆಯೇ ಹೊರ್ತು ಸಂಧಿಕಾರ್ಯ ಬರುವದಿಲ್ಲವು.

ಉದಾಹರಣೆ.

ರಾಮನು - ಬಂದನು - ಇದಕ್ಕೆ - ರಾಮ ಬಂದನು - ರಾಮನು ಬಂದ - ರಾಮ ಬಂದ - ಬಂದ ರಾಮ.

ರಾಮನು - ಇಲ್ಲವು - ಇದಕ್ಕೆ - ರಾಮನಿಲ್ಲ - ರಾಮ ಇಲ್ಲವು - ರಾಮ ಇಲ್ಲ - ಇಲ್ಲ ರಾಮ.

ಗಜವು - ಬಂತು - ಇದಕ್ಕೆ - ಗಜವು ಬಂತು - ಗಜ ಬಂತು - ಬಂತು ಗಜ.

ಗಜವು - ಇದು - ಇದಕ್ಕೆ - ಗಜವಿದು - ಗಜ ಇದು - ಇದು ಗಜ.

ಪ್ರಶ್ನೆ.

ನಾನು - ಬಂದೆನು - ಇದಕ್ಕೆ - ನಾನುಬಂದೆನು - ನಾಬಂದೆನು - ನಾಬಂದೆ - ಇತ್ಯಾದಿ.

೪೧ - ಲೋಪಯಕಾರಾಗಮ ಪ್ರಕೃತಿಭಾವಗಳು ಮೂರೂ ಎಲ್ಲಿಬರುತ್ತದೆ.

ನೆ-ಗೆ-ಅಂತವಾದ ಅವ್ಯಯಗಳಿಗೆ ಸ್ವರ ಪರವಾಗಲು - ಲೋಪ ಯಕಾರಾಗಮ ಪ್ರಕೃತಿಭಾವಗಳು ಮೂರೂ ಬರುತ್ತದೆ.

ಉದಾಹರಣೆ,

ಸುಮ್ಮನೆ - ಇದ್ದನು - ಇದಕ್ಕೆ - ಸುಮ್ಮನಿದ್ದನು - ಸುಮ್ಮನೆಯಿದ್ದನು - ಸುಮ್ಮನೆಇದ್ದನು.

ಬೆಳ್ಳಗೆ - ಇತ್ತು - ಇದಕ್ಕೆ - ಬೆಳ್ಳಗಿತ್ತು - ಬೆಳ್ಳಗೆಯಿತ್ತು - ಬೆಳ್ಳಗೆಇತ್ತು.

೪೨ - ಪದಾದಿಯಲ್ಲಿ ಯವಾದ ರೂಪಾಗಮಗಳುಂಟೋ.

ಪದಾದಿಯಾದ - ಇ - ಈ - ಎ - ಏ - ಇವುಗಳಿಗೆ ಯಕಾರಾಗಮವೂ - ಉ - ಊ - ಒ - ಓ - ಇವುಗಳಿಗೆ ವಕಾರಾಗಮವೂ - ವಿಕಲ್ಪವಾಗಿಬರುತ್ತದೆ.

ಉದಾಹರಣೆ.

ಇದು - ಇದಕ್ಕೆ - ಇದು - ಯಿದು.
ಈಡು - ಇದಕ್ಕೆ - ಈಡು - ಯೀಡು.
ಎಷ್ಟು - ಇದಕ್ಕೆ - ಎಷ್ಟು - ಯೆಷ್ಟು.
ಏನು - ಇದಕ್ಕೆ - ಏನು - ಯೇನು.
ಉಂಟು - ಇದಕ್ಕೆ - ವುಂಟು - ಉಂಟು.
ಊಟ - ಇದಕ್ಕೆ - ವೂಟ - ಊಟ.
ಒಂದು - ಇದಕ್ಕೆ - ವೊಂದು - ಒಂದು.
ಓಲೆ - ಇದಕ್ಕೆ - ವೋಲೆ - ಓಲೆ.

ಇತ್ಯಾದಿ.

೪೩ - ಯಾವವರ್ಣವನ್ನಾದರೂ ಪ್ರಯೋಗಿಸುವಾಗ ಮತ್ತೊಂದು ವರ್ಣವಾಗಿ ಪ್ರಯೋಗಿಸುವದುಂಟೋ.

ಕೆಲವ್ಯಂಜನಗಳ ಮೇಲಿನ ಎಕಾರವನ್ನು ಅಕಾರವಾಗಿಯೂ - ವಕಾರದ ಮೇಗಳ ಒಕಾರವನ್ನು ಅಕಾರವಾಗಿಯೂ ಬರೆಯುವದು - ಉಚ್ಚರಿಸುವದು - ಸಹವುಂಟು.

ಉದಾಹರಣೆ.

ಎಲ್ಲಿ - ಇದಕ್ಕೆ - ಯೆಲ್ಲಿ - ಯಲ್ಲಿ.

ಚೆಪ್ಪರ - ಇದಕ್ಕೆ - ಚಪ್ಪರ.

ಜೆಟ್ಟಿ - ಇದಕ್ಕೆ - ಜಟ್ಟಿ.

ಒಂದು - ಇದಕ್ಕೆ - ವಂದು - ಪೊಂದು.

ಒಂಟೆ - ಇದಕ್ಕೆ - ಪೊಂಟೆ - ವಂಟೆ - ಇತ್ಯಾದಿ.

೪೪ - ಸಂಧಿಯಲ್ಲಿಯಕಾರಾಗಮವಕಾರಾಗಮಗಳು ಹೊರ್ತು ಮತ್ತೇ ವಿಶೇಷವಾದ ರಾವ್ಯಂಜನವಾಗಮವಾಗಿ ಬರುವದುಂಟೊ.

ಬಾ-ರಾ-ಶಬ್ದಗಳಿಗೆ ಸ್ವರ ಪರವಾಗಲು ವಿಕಲ್ಪವಾಗಿ ರೇಫಾಗಮ ಬರುತ್ತದೆ - ಇಲ್ಲದಿದ್ದರೆ ಪ್ರಕೃತಿಭಾವ ಬರುತ್ತದೆ - ಚಿಕ್ಕವರ ಕುರಿತು ಹೇಳುವಾಗ ಒ ಎಂಬ ನಿಪಾತ ಪರವಾಗಲು ನಿತ್ಯವಾಗಿ ರೇಫಾಗಮ ಬರುತ್ತದೆ.

ಉದಾಹರಣೆ.

ಬಾ - ಅಪ್ಪಾ - ಇದಕ್ಕೆ - ಬಾರಪ್ಪಾ - ಬಾಅಪ್ಪಾ.

ರಾ - ಅಮ್ಮಾ - ಇದಕ್ಕೆ - ರಾರಮ್ಮಾ - ರಾಅಮ್ಮಾ.

ಬಾ - ಓ - ಇದಕ್ಕೆ - ಬಾರೊ.

ರಾ - ಓ - ಇದಕ್ಕೆ - ರಾರೊ.

ಇತ್ಯಾದಿ.

೪೫ - ಸ್ವರಸಂಧಿಯಲ್ಲಿ ಮೇಲೆ ಹೇಳಿದ ವಿಧಿಗಳೆಲ್ಲಾ ಕನ್ನಡಕ್ಕೆ ಪ್ರಾಚೀನವಾದ ಶಬ್ದಾನುಶಾಸನ ಶಬ್ದಮಣಿದರ್ಪಣಾಗಳೆಂಬ ಮೂಲಗ್ರಂಥಗಳಲ್ಲಿಯೂ ಹೇಳಲ್ಪಟ್ಟಿವೆಯೊ.

೩೯ - ೪೦ - ೪೧ - ೪೨ - ೪೪ - ಈ ಸೂತ್ರಗಳಲ್ಲಿ ಹೇಳಿದ ವಿಧಿಗಳು - ಶಬ್ದಾನುಶಾಸನ - ಶಬ್ದಮಣಿದರ್ಪಣಾಗಳಲ್ಲಿಯೂ - ಅದರ ವ್ಯಾಖ್ಯಾನಗಳಲ್ಲಿಯೂ - ಇಲ್ಲವು - ಈಗಿನವರಿಯರ ಪ್ರಯೋಗವನ್ನು ನೋಡಿ ಬರೆಯಲ್ಪಟ್ಟಿವೆ.

ಕಡಮೆ ಸೂತ್ರಗಳಲ್ಲಿ ಹೇಳಿದ ವಿಧಿಗಳು - ಕೆಲವು ಕಂಠೋಕ್ತವಾಗಿಯೂ - ಕೆಲವುದಾಹರಣೆಯ ಮೂಲವಾಗಿಯೂ ಆ ಗ್ರಂಥಗಳಲ್ಲಿ ಹೇಳಲ್ಪಟ್ಟಿವೆ.

೪೬ - ಮೇಲೆ ಹೇಳಿದ ಗ್ರಂಥಗಳಲ್ಲಿ ಸ್ವರಸಂಧಿ ವಿಷಯವಾಗಿಯಿನ್ನೇನು ಹೇಳಿಲ್ಲವೊ.

ಈ ವಿಷಯವಾಗಿ ಸ್ವಲ್ಪ ಬಹಳ ವಿಧಿಗಳು - ಹೇಳಲ್ಪಟ್ಟಿವೆ - ಆದರೆ ಅವುಗಳು ಗ್ರಂಥಗಳಲ್ಲಿ ಮಾತ್ರವೇ ಬರುವವಾದ್ದರಿಂದ ಹಳಗನ್ನಡ ವಿಷಯವಾದ ಎರಡನೆಯ ಕಾಂಡದಲ್ಲಿ ಬರೆಯಲ್ಪಡುತ್ತವೆ.

೩೭ - ಸಂಸ್ಕೃತ ಪದಗಳಿಗೆ ಸಮಾಸಮಾಡಿ ಅದನ್ನು ಕನ್ನಡದಲ್ಲಿ ಪ್ರಯೋಗಿಸುವದರಿಂದ ಆ ಪದಗಳಲ್ಲಿ ಒಂದಕ್ಕೊಂದಕ್ಕೆ ಕನ್ನಡ ಸಂಧಿಯೋ - ಸಂಸ್ಕೃತ ಸಂಧಿಯೋ.

ಸಂಸ್ಕೃತ ವ್ಯಾಕರಣದಲ್ಲಿ ಹೇಳಿದ ಸಂಧಿಯೇ ಬರುತ್ತದೆ.

೩೮ - ಆದಕೆ ಉಪಯೋಗವಾದ ಸಂಸ್ಕೃತ ಸ್ವರಸಂಧಿ ಯಾವದು.

ಸವರ್ಣದೀರ್ಘ - ಯಣ್ಣು - ಗುಣ - ವೃದ್ಧಿ - ಪರರೂಪ ಅಯಾದ್ಯಾದೇಶ - ಗಳೆಂದಾರು ವಿಧವು.

೩೯ - ಸವರ್ಣದೀರ್ಘವೆಂದರೇನು - ಅದೆಲ್ಲಿ ಬರುತ್ತದೆ.

ಸಮಾನವರ್ಣಗಳಲ್ಲಿ ಸವರ್ಣಗಳಾದ ವರ್ಣಗಳಲ್ಲಿ ಒಂದಕ್ಕೊಂದು ಪರವಾದಲ್ಲಿ ಆ ಯೆರಡು ವರ್ಣಕ್ಕೂ - ಒಂದು ದೀರ್ಘವು ಆದೇಶವಾಗಿ ಬರುತ್ತದೆ.

ಉದಾಹರಣೆ.

ಮುರ - ಅರಿಯು - ಇದಕ್ಕೆ - ಮುರಾರಿಯು.
ದಶರಥ - ಆತ್ಮಜನು - ಇದಕ್ಕೆ - ದಶರಥಾತ್ಮಜನು.
ಗಂಗಾ - ಆತ್ಮಜನು - ಇದಕ್ಕೆ - ಗಂಗಾತ್ಮಜನು.
ಗಂಗಾ - ಅಂಭಸ್ಸು - ಇದಕ್ಕೆ - ಗಂಗಾಂಭಸ್ಸು.
ಕಪಿ - ಇಂದ್ರನು - ಇದಕ್ಕೆ - ಕಪೀಂದ್ರನು.
ಲಕ್ಷ್ಮೀ - ಈಶನು - ಇದಕ್ಕೆ - ಲಕ್ಷ್ಮೀಶನು.
ವಿಷ್ಣು - ಉತ್ಸವ - ಇದಕ್ಕೆ - ವಿಷ್ಣೂತ್ಸವ.
ವಧೂ - ಉದ್ವಾಹ - ಇದಕ್ಕೆ - ವಧೂದ್ವಾಹ.
ದಾತೃ - ಋದ್ಧಿ - ಇದಕ್ಕೆ - ದಾತೄದ್ಧಿ.
ಇತ್ಯಾದಿ.

೪೦ - ಯಣ್ಣೆಂದರೇನು - ಅದೆಲ್ಲಿ ಬರುತ್ತದೆ.

ಯ - ವ - ರ - ಲ - ಇವುಗಳಿಗೆ ಯಣ್ಣೆಂದು ಹೆಸರು - ಇವರ್ಣಕ್ಕೆ ಯಕಾರವು - ಉವರ್ಣಕ್ಕೆ ವಕಾರವು - ಋವರ್ಣಕ್ಕೆ ರೇಫವು ಅದರದರ ಸವರ್ಣವನ್ನುಳಿದ ಕಡಮೆ ಯೆಲ್ಲಾ ಸ್ವರ ಪರವಾಗಲು - ಬರುತ್ತದೆ.

ಉದಾಹರಣೆ.

ಹರಿ - ಅನುಭವವು - ಇದಕ್ಕೆ - ಹರ್ಯನುಭವವು.
ಸುಧೀ - ಉಪಾಸ್ಯನು - ಇದಕ್ಕೆ - ಸುಧ್ಯುಪಾಸ್ಯನು.
ಮಧು - ಅರಿಯು - ಇದಕ್ಕೆ - ಮಧ್ವರಿಯು.
ವಧೂ - ಅಭಿಮಾನವು - ಇದಕ್ಕೆ - ವಧ್ವಭಿಮಾನವು.
ಧಾತೃ - ಅಂಶವು - ಇದಕ್ಕೆ - ಧಾತ್ರಂಶವು.
ಇತ್ಯಾದಿ.

ೠಕಾರಕ್ಕೆ ಪ್ರಯೋಗವಿಲ್ಲದ್ದರಿಂದದಕ್ಕುದಾಹರಣೆಯ ಬರೆಯಲಿಲ್ಲವು.

೪೧. ಗುಣವೆಂದರೇನು - ಅದೆಲ್ಲಿ ಬರುತ್ತದೆ.

ಸಂಸ್ಕೃತ ವ್ಯಾಕರಣದಲ್ಲಿ - ಅ - ಏ - ಓ - ಈ ಮೂರು ವರ್ಣಗಳಿಗೂ ಗುಣವೆಂದು ಹೆಸರು.

ಅವರ್ಣಕ್ಕೆ - ಅವರ್ಣವುಳಿದ ಸಮಾನಾಕ್ಷರ ಪರವಾಗಲು ಪೂರ್ವೋತ್ತರ ವರ್ಣಗಳೆರಡಕ್ಕೂ - ಒಂದು ಗುಣ ಬರುತ್ತದೆ.

೪೨. ಅವರಲ್ಲಿ ಯಾವ ಯಾವ ಕಡೆಯಲ್ಲೇನು ಬರುತ್ತದೆ.

ಅವರ್ಣಕ್ಕೆ - ಇವರ್ಣಪರವಾಗಲು - ಏಕಾರವು - ಉವರ್ಣಪರವಾಗಲು - ಓಕಾರವು - ಋವರ್ಣಪರವಾಗಲು - ಅಕಾರವು - ಬರುತ್ತದೆ - ಆದರೆ - ಋವರ್ಣಕ್ಕೆ ಅಕಾರ ಬರುವಾಗ - ಅರ್ - ಎಂದಾಗುತ್ತದೆ.

ಏಕಾರಗುಣಕ್ಕುದಾಹರಣೆ.

ದೇವ - ಇಂದ್ರನು - ಇದಕ್ಕೆ - ದೇವೇಂದ್ರನು.
ದೇವ - ಈಶನು - ಇದಕ್ಕೆ - ದೇವೇಶನು.
ರಮಾ - ಇಂದ್ರನು - ಇದಕ್ಕೆ - ರಮೇಂದ್ರನು.
ರಮಾ - ಈಶನು - ಇದಕ್ಕೆ - ರಮೇಶನು.

ಓಕಾರಗುಣಕ್ಕುದಾಹರಣೆ.

ಸಮುದ್ರ - ಉದಕವು - ಇದಕ್ಕೆ - ಸಮುದ್ರೋದಕವು.
ಗಂಗಾ - ಉದಕವು - ಇದಕ್ಕೆ - ಗಂಗೋದಕವು.
ವಾಮ - ಊರುವು - ಇದಕ್ಕೆ - ವಾಮೋರುವು.

ರಂಭಾ - ಊರುವು - ಇದಕ್ಕೆ - ರಂಭೋರುವು.
ಅಕಾರದ - ಅರ್ - ಎಂಬುದಕ್ಕುದಾಹರಣೆ.
ಕೃಷ್ಣ - ಋದ್ಧಿಯು - ಇದಕ್ಕೆ - ಕೃಷ್ಣರ್ದ್ಧಿಯು.
ಮಹಾ - ಋದ್ಧಿಯು - ಇದಕ್ಕೆ - ಮಹರ್ದ್ಧಿಯು.

೪೩ - ವೃದ್ಧಿಯೆಂದರೇನು - ಅದು ಎಲ್ಲಿ ಬರುತ್ತದೆ.

ಸಂಸ್ಕೃತದಲ್ಲಿ - ಆ - ಐ - ಔ - ಇವುಗಳಿಗೆ ವೃದ್ಧಿಯೆಂದು ಹೆಸರು - ಅವರ್ಣಕ್ಕೆ ಸಂಧ್ಯಕ್ಷರ ಪರವಾಗಲು - ಪೂರ್ವೋತ್ತರ ವರ್ಣಗಳು - ಎರಡಕ್ಕೂ - ಒಂದೇ ವೃದ್ಧಿ ಆದೇಶವಾಗಿ ಬರುತ್ತದೆ.

೪೪ - ಅವರಲ್ಲಿ ಯಾವ ಯಾವದು ಎಲ್ಲೆಲ್ಲಿ ಬರುತ್ತದೆ.

ಅವರ್ಣಕ್ಕೆ - ಏ - ಐ - ಪರವಾಗಲು - ಐಕಾರವು - ಓ - ಔ - ಪರವಾಗಲು - ಔಕಾರವು - ಬರುತ್ತದೆ.

ಐಕಾರವೃದ್ಧಿಗುದಾಹರಣೆ.

ಬ್ರಹ್ಮ - ಏಕತ್ವವು - ಇದಕ್ಕೆ - ಬ್ರಹ್ಮೈಕತ್ವವು.
ದೇವತಾ - ಏಕತ್ವವು - ಇದಕ್ಕೆ - ದೇವತೈಕತ್ವವು.
ಬ್ರಹ್ಮ - ಐಕ್ಯವು - ಇದಕ್ಕೆ - ಬ್ರಹ್ಮೈಕ್ಯವು.
ದೇವತಾ - ಐಕ್ಯವು - ಇದಕ್ಕೆ - ದೇವತೈಕ್ಯವು.

ಔಕಾರವೃದ್ಧಿಗುದಾಹರಣೆ.

ಜನ - ಓಘವು - ಇದಕ್ಕೆ - ಜನೌಘವು.
ಸೇನಾ - ಓಘವು - ಇದಕ್ಕೆ - ಸೇನೌಘವು.
ಜನ - ಔತ್ಕಂಠ್ಯವು - ಇದಕ್ಕೆ - ಜನೌತ್ಕಂಠ್ಯವು.
ಅಂಗನಾ - ಔತ್ಕಂಠ್ಯವು - ಇದಕ್ಕೆ - ಅಂಗನೌತ್ಕಂಠ್ಯವು.

೪೫ - ಆಕಾರವೃದ್ಧಿಯೆಲ್ಲಿ ಬರುತ್ತದೆ.

ಅವರ್ಣಾಂತವಾದುಪಸರ್ಗಕ್ಕೆ - ಋಕಾರಾದಿಕೃದಂತಶಬ್ದಗಳು ಪರವಾದಾಗಲು - ತೃತೀಯಾಸಮಾಸ ಘಟಕವಾದ ಅವರ್ಣಾಂತ ಪೂರ್ವಪದಕ್ಕೆ - ಋತಶಬ್ದಪರವಾದಾಗಲೂ - ಪ್ರ - ವತ್ಸ - ವತ್ಸರ - ಕಂಬಳ - ವಸನ - ಋಣ - ದಶ - ಈ ಶಬ್ದಗಳಿಗೆ ಋಣಶಬ್ದಪರವಾದಾಗಲೂ - ಪೂರ್ವಪದದ ಕಡೆಯ ವರ್ಣ - ಉತ್ತರಪದದ ಮೊದಲ ವರ್ಣ - ಇವೆರಡಕ್ಕೂ - ಒಂದು ಆಕಾರವೃದ್ಧಿ ಬರುತ್ತದೆ - ಆದರೆ - ಆ ಆಕಾರವು - ಆರ್ ಎಂದಾಗುತ್ತದೆ.

ಉದಾಹರಣೆ.

ಉಪ - ಋಷಭವು - ಇದಕ್ಕೆ - ಉಪಾರ್ಷಭವು.
ಸುಖ - ಋತನು - ಇದಕ್ಕೆ - ಸುಖಾರ್ತನು.
ಪ್ರ - ಋಣವು - ಇದಕ್ಕೆ - ಪ್ರಾರ್ಣವು.

ವತ್ಸ - ಋಣವು - ಇದಕ್ಕೆ - ವತ್ಸಾರ್ಣವು.
ವತ್ಸತರ - ಋಣವು - ಇದಕ್ಕೆ - ವತ್ಸತರಾರ್ಣವು.
ಕಂಬಳ - ಋಣವು - ಇದಕ್ಕೆ - ಕಂಬಳಾರ್ಣವು.
ಋಣ - ಋಣವು - ಇದಕ್ಕೆ - ಋಣಾರ್ಣವು.
ವಸನ - ಋಣವು - ಇದಕ್ಕೆ - ವಸನಾರ್ಣವು.
ದಶಋಣವು - ಇದಕ್ಕೆ - ದಶಾರ್ಣವು.

ದಶಾರ್ಣವೆಂಬೊಂದು ದೇಶದ ಹೆಸರು - ದಶಾರ್ಣೆಯೆಂದು ಒಂದು ನದಿಗ್ಹೆಸರುಂಟು - ಋಣವೆಂದರೆ - ಸಾಲಕ್ಕೂ - ದುರ್ಗಭೂಮಿಗೂ - ನೀರಿಗೂ - ಹೆಸರು.

೪೬ - ಗುಣಕ್ಕಪವಾದವುಂಟೋ.

ಸ್ವಶಬ್ದಕ್ಕೆ - ಈರ - ಈರಿನ್ - ಈರಿಣೀ ಶಬ್ದಗಳು ಪರವಾದಾಗಲೂ - ಅಕ್ಷಶಬ್ದಕ್ಕೆ ಊಹಿನೀ ಶಬ್ದ ಪರವಾದಾಗಲೂ - ಪ್ರವೆಂಬ ಉಪಸರ್ಗಕ್ಕೆ - ಊಹ - ಊಢ - ಊಢಿ ಶಬ್ದಗಳು ಪರವಾದಾಗಲೂ - ಪೂರ್ವಪದಾಂತ್ಯವರ್ಣ - ಉತ್ತರಪದಾದಿವರ್ಣ - ಇವೆರಡಕ್ಕೂ ಒಂದು ವೃದ್ಧಿಯೂ ಆದೇಶವಾಗಿ ಬರುತ್ತದೆ.

ಉದಾಹರಣೆ.

ಸ್ವ - ಈರ - ಇದಕ್ಕೆ - ಸ್ವೈರವು.
ಅಕ್ಷ - ಊಹಿನೀ - ಇದಕ್ಕೆ - ಅಕ್ಷೌಹಿಣೀ.
ಪ್ರ - ಊಹವು - ಇದಕ್ಕೆ - ಪ್ರೌಹವು.
ಪ್ರ - ಊಢನು - ಇದಕ್ಕೆ - ಪ್ರೌಢನು.
ಪ್ರ - ಊಢಿಯು - ಇದಕ್ಕೆ - ಪ್ರೌಢಿಯು.

ಇತ್ಯಾದಿ.

೪೭ - ಪರರೂಪವೆಂದರೇನು.

ಪೂರ್ವೋತ್ತರವರ್ಣಗಳೆರಡಕ್ಕೂ - ಒಂದು ವರ್ಣವಾದೇಶವಾಗಿ ಬರುವದು.

೪೮ - ಅದೆಲ್ಲಿ ಬರುತ್ತದೆ.

ಅವರ್ಣಾಂತವಾದುಪಸರ್ಗಕ್ಕೆ - ಏಕಾರ - ಓಕಾರಾದಿಕೃದಂತ ಪರವಾದಾಗ - ಪರರೂಪ ಬರುತ್ತದೆ.

ಉದಾಹರಣೆ.

ಪ್ರ - ಏಜನವು - ಇದಕ್ಕೆ - ಪ್ರೇಜನವು.
ಪ್ರ - ಓಖನವು - ಇದಕ್ಕೆ - ಪ್ರೋಖನವು.

೪೯ - ಇನ್ನಾವಲ್ಲಾದರೂ ಪರರೂಪವುಂಟೋ.

ಅವರ್ಣಾಂತಶಬ್ದಕ್ಕೆ - ಓಷ್ಠ - ಓತು - ಶಬ್ದಗಳು ಪರವಾದರೆ - ಪರರೂಪವಾಗಲಿ - ವೃದ್ಧಿಯಾಗಲಿ - ಬರುತ್ತದೆ.

ಉದಾಹರಣೆ.

ಬಿಂಬ - ಓಷ್ಠವು - ಇದಕ್ಕೆ - ಬಿಂಬೋಷ್ಠವು - ಬಿಂಬೌಷ್ಠವು.
ಸ್ಥೂಲ - ಓತುವು - ಇದಕ್ಕೆ - ಸ್ಥೂಲೋತುವು - ಸ್ಥೂಲೌತುವು.

೫೦ - ಸಂಸ್ಕೃತಶಬ್ದವು ಕನ್ನಡದಲ್ಲಿ ಪ್ರಯೋಗಿಸುವಾಗ ಪ್ರಕೃತಿಭಾವವೆಲ್ಲಾದರೂ ಬರುತ್ತದೆಯೋ.

ಅಕಾರಕ್ಕೆ ಕೃದಂತಭಿನ್ನ ಋಕಾರಾದಿಶಬ್ದ ಪರವಾದಾಗ - ವಿಕಲ್ಪವಾಗಿ ಪ್ರಕೃತಿಭಾವ ಬರುತ್ತದೆ - ಆಕಾರಕ್ಕೆ ಪ್ರಕೃತಿಭಾವ ಬಂದಾಗ ಹ್ರಸ್ವಕೂಡಾ ಬರುತ್ತದೆ.

ಉದಾಹರಣೆ.

ಸಪ್ತ - ಋಷಿಗಳು - ಇದಕ್ಕೆ - ಸಪ್ತಋಷಿಗಳು - ಸಪ್ತರ್ಷಿಗಳು.

ವರ್ಷಾ - ಋತುವು - ಇದಕ್ಕೆ - ವರ್ಷಋತುವು - ವರ್ಷರ್ತುವು.

೫೧ - ಸಂಧ್ಯಕ್ಷರಗಳಿಗೆ ಸ್ವರಪರವಾದರೇನು ಬರುತ್ತದೆ.

ಸ್ವರಪರವಾದಾಗ - ಏಕಾರಕ್ಕೆ - ಅಯ್ - ಓಕಾರಕ್ಕೆ - ಅವ್ - ಐಕಾರಕ್ಕೆ - ಆಯ್ - ಔಕಾರಕ್ಕೆ - ಆವ್ - ಆದೇಶ ಬರುತ್ತದೆ. ಏಕಾರಕ್ಕುದಾಹರಣೆ ದುರ್ಲಭ.

ಉದಾಹರಣೆ.

ದ್ಯೋ - ಇಂದ್ರನು - ಇದಕ್ಕೆ - ದ್ಯವೀಂದ್ರನು.
ರೈ - ಆನಂದವು - ಇದಕ್ಕೆ - ರಾಯಾನಂದವು.
ನೌ - ಆರೋಹಣವು - ಇದಕ್ಕೆ - ನಾವಾರೋಹಣವು.

ಪ್ರಶ್ನೆ.	ಉತ್ತರವು.
	ಇತ್ಯಾದಿ - ಇಲ್ಲಿ - ಯ - ವ - ಗಳಿಗೆ ಸಂಸ್ಕೃತದಲ್ಲಿ ಲೋಪವಿಕಲ್ಪವಾಗಿ ವಿಧಿಸಿದೆ ಅದಕ್ಕೆ ಕನ್ನಡದಲ್ಲಿ ಪ್ರಯೋಗವಿಲ್ಲದ್ದರಿಂದ ಬರೆಯಲಿಲ್ಲ.
೬೧ - ಇದಕ್ಕಪವಾದವುಂಟೋ.	ಗೋಶಬ್ದಕ್ಕೆ ಸ್ವರಪರವಾದರೆ - ಗೋಶಬ್ದದ - ಓಕಾರಕ್ಕೆ ಅವಶಬ್ದವಾದೇಶವಾಗಿ ಬರುತ್ತದೆ - ಈಶಬ್ದದಲ್ಲಿಯಿನ್ನೂ ಕೆಲವು ರೂಪಗಳುಂಟು - ಕನ್ನಡದಲ್ಲಿ ಪ್ರಯೋಗವಿಲ್ಲದ್ದರಿಂದ ವನ್ನು ಬರೆಯಲಿಲ್ಲ.

ಉದಾಹರಣೆ.

ಗೋ - ಇಂದ್ರನು - ಇದಕ್ಕೆ - ಗವೇಂದ್ರನು.

ಗೋ - ಅಕ್ಷವು - ಇದಕ್ಕೆ - ಗವಾಕ್ಷವು.

ಇತ್ಯಾದಿ.

೬೨ - ಸ್ವರಸಂಧಿಯಲ್ಲಿ ಇನ್ನೂ ವಿಶೇಷವುಂಟೋ.	ಉಂಟು - ಅವುಗಳಿಗೆ ಕನ್ನಡದಲ್ಲಿ ಪ್ರಯೋಗವಿಲ್ಲದ ಕಾರಣ ಅವುಗಳ ಬರೆಯಲಿಲ್ಲವು.

ಇಂತು ಸ್ವರಸಂಧಿ ಮುಗಿಯಿತು.

ಪ್ರಶ್ನೆ.	ಉತ್ತರವು.
೭೪. ಯಾವಯಾವ ವ್ಯಂಜನಕ್ಕೇನೇನಾದೇಶ ಬರುತ್ತದೆ.	ಸಮಾಸಪದದಲ್ಲಿ ಮೇಗಳ ಪದದ ಮೊದಲುವರ್ಣಪ್ರಾಪ್ತ ಕ-ತ-ಪ-ಗಳಿಗೆ- ಕ್ರಮವಾಗಿ-ಗ-ದ-ಬ-ಗಳು ಬರುತ್ತವೆ.

ಉದಾಹರಣೆ.

ಮರ - ಕಾಲು - ಇದಕ್ಕೆ - ಮರಗಾಲು.

ತೆಙ್ - ಕದಿರು - ಇದಕ್ಕೆ - ತೆಙ್ಗದಿರು.

ಪೆಱ - ತಲೆಯನು - ಇದಕ್ಕೆ - ಪೆಱದಲೆಯನು.

ಬೆಳ್ - ತಾವರೆ - ಇದಕ್ಕೆ - ಬೆಳ್ದಾವರೆ.

ಕಿಮ್ - ಪೊದಲಿ - ಇದಕ್ಕೆ - ಕಿಂಬೊದಲಿ.

ತೊಮ್ - ಪತ್ತು - ಇದಕ್ಕೆ - ತೊಂಬತ್ತು.

ಇತ್ಯಾದಿಗಳು ಸಮಾಸಗಳು ಸಮಾಸಭೇದವು ಕ್ರಮಗಳು ವಿಸ್ತಾರವಾಗಿ ಸಮಾಸಪ್ರಕರಣದಲ್ಲಿ ಹೇಳಲ್ಪಡುತ್ತದೆ.

೭೫. ಇದಕ್ಕಪವಾದವುಂಟೋ.	ಮತ್ತೊಂದಕ್ಕಾದೇಶವಾಗಿಯೂ - ಪೂರ್ವಪದಾಂತದಲ್ಲಿರುವ ಱೇಫಳಕಾರಗಳಿಗೆ ಪರವಾದ ಪರಪದದ ಮೊದಲ - ಕ - ತ ಪ - ಗಳಿಗೆ - ಗ - ದ - ಬ - ಗಳು ಬರುವದಿಲ್ಲ.

ಉದಾಹರಣೆ.

ಒರ್ - ಕೈ - ಇದಕ್ಕೆ - ಒರ್ಕೈ.

ಒರ್ - ತಲೆ - ಇದಕ್ಕೆ - ಒರ್ತಲೆ.

ಬೇರ್ - ಪಾಡು - ಇದಕ್ಕೆ - ಬೇರ್ಪಾಡು.

ಕಾಳ್ - ಕಿಚ್ಚು - ಇದಕ್ಕೆ - ಕಾಳ್ಕಿಚ್ಚು.

ಇತ್ಯಾದಿ.

ಮೇಲೆ ಬರೆದ - ಒರ್ಕೈ - ಒರ್ತಲೆ - ಎಂಬ ಶಬ್ದಗಳ ವಿಗ್ರಹವಾಕ್ಯದಲ್ಲಿರುವ - ಒಂದು ಶಬ್ದದ ತ್ರಿಕಕ್ಕೆ ರೇಫಾದೇಶ ಬಂದು - ಒರ್ ಎಂತಲೂ - ಬೇರ್ಪಾಡು - ಶಬ್ದದ ವಿಗ್ರಹವಾಕ್ಯದಲ್ಲಿರುವ - ಬೇಱು ಶಬ್ದದ - ಱು ವಿಗೆ - ರೇಫಾದೇಶ ಬಂದು - ಬೇರ್ - ಎಂತಲೂ - ಕಾಳ್ಕಿಚ್ಚು ಶಬ್ದದ - ವಿಗ್ರಹವಾಕ್ಯದಲ್ಲಿರುವ - ಕಾಡು - ಶಬ್ದದ - ಡು ವಿಗೆ - ಳಕಾರಾದೇಶ ಬಂದು - ಕಾಳ್ - ಎಂತ್ರಲೂ - ಆಗಿರುವದ್ದರಿಂದ - ಅವುಗ

ಳಿಗಿಂತ ಪರವಾದ - ಕ - ತ - ಪ - ಗಳಿಗೆ - ವರ್ಗತೃತೀಯಾದೇಶ
ಬರಲಿಲ್ಲ - ಶಬ್ದಮಣಿದರ್ಪಣದಲ್ಲಿ - ಕಾಡು ಶಬ್ದದ - ಡುವಿಗೆ
ಱ ಱಾದೇಶ ವಿಧಿಸಿ - ಕಾಱ್ - ಎಂದು ಮಾಡಿ - ಅದಕ್ಕಿಂತ ಪರವಾದ
ಕ - ತ - ಪ - ಗಳಿಗೆ - ವರ್ಗತೃತೀಯಾದೇಶ ಬರುವದಿಲ್ಲವೆಂದು - ಹೇ
ಳುವದ್ದರಿಂದ - ಕಾಱ್ಕಿಚ್ಚು - ಎಂದಾಯಿತು.

೨೬ - ಪಕಾರಕ್ಕೆಲ್ಲಾದರೂ ಬೇರೆ ಆದೇಶ ಬರುವದುಂಟೋ.

ಸಮಾಸದ - ಪೂರ್ವಪದಾಂತ್ಯದಲ್ಲಿರುವ ಮತ್ತೊಂದಕ್ಕಾ
ದೇಶವಲ್ಲದ - ವ್ಯಂಜನಕ್ಕಿಂತ ಪರವಾದ ಪರಪದಾದಿ ಪಕಾರಕ್ಕೆ
ಕೆಲವು ಪದಗಳಲ್ಲಿ ಬಕಾರ - ಕೆಲವು ಪದಗಳಲ್ಲಿ ವಕಾರ - ಕೆಲ
ವು ಪದಗಳಲ್ಲಿ ಪ್ರಕೃತಿಭಾವ - ಈ ಮೇರೆಗೆ - ಕ್ಲಿಪ್ತವಾಗಿ ಬರುತ್ತದೆ.

ಉದಾಹರಣೆ.

ಕಣ್ - ಪರಿಯು - ಇದಕ್ಕೆ - ಕಣ್ಬರಿಯು.
ನೀರ್ - ಪಕ್ಕಿಯು - ಇದಕ್ಕೆ - ನೀರ್ವಕ್ಕಿಯು.
ಬೆಳ್ - ಪಕ್ಕಿಯು - ಇದಕ್ಕೆ - ಬೆಳ್ವಕ್ಕಿಯು.

ಇತ್ಯಾದಿ - ಬ - ವ - ಪ್ರಕೃತಿಭಾವಗಳು ಬರುವ ಪದಗಳಿವು
ವೆಂದು ನಿಘಂಟುವಿನಿಂದಲೂ - ಪ್ರಯೋಗದಿಂದಲೂ - ತಿಳಿದುಕೊ
ಳ್ಳಬೇಕು.

೨೭ - ಇನ್ನ್ಯಾವ ವರ್ಣಕ್ಕಾದರೂ ವಕಾರಾದೇಶ ಬರುವದುಂಟೋ.

ಸಮಾಸದಲ್ಲಿ ಪೂರ್ವಪದಾಂತ್ಯಸ್ವರಕ್ಕಿಂತ ಪರವಾದ ಪ
ರಪದದ ಮೊದಲ - ಪ - ಬ - ಮಗಳಿಗೆ - ವಕಾರಾದೇಶ ನಿತ್ಯವಾಗಿ
ಬರುತ್ತದೆ - ಒಂದು ವರ್ಣಕ್ಕಾದೇಶವಲ್ಲದ ಪೂರ್ವಪದಾಂತ್ಯವ್ಯಂ
ಜನಕ್ಕಿಂತ ಪರವಾದ - ಪರಪದಾದಿ - ಬ - ಮಗಳಿಗೆ - ವಿಕಲ್ಪವಾ
ಗಿ ವಕಾರಾದೇಶ ಬರುತ್ತದೆ.

ಉದಾಹರಣೆ.

ರಕ್ಕಸ - ಪಗೆಯ - ಇದಕ್ಕೆ - ರಕ್ಕಸವಗೆಯ.
ಊಗಸ - ಬಟ್ಟೆಯು - ಇದಕ್ಕೆ - ಊಗಸವಟ್ಟೆಯು.
ಊಗಸ - ಮಣೆಯು - ಇದಕ್ಕೆ - ಊಗಸವಣೆಯು.
ಮ್ಯೇಲ್ - ಮಾತು - ಇದಕ್ಕೆ - ಮ್ಯೇಲ್ವಾತು - ಮ್ಯೇಲ್ಮಾತು.
ಮ್ಯೇಲ್ - ಬಣ್ಣವು - ಇದಕ್ಕೆ - ಮ್ಯೇಲ್ವಣ್ಣವು - ಮ್ಯೇಲ್ಬಣ್ಣವು.

೭೮ - ಮೇಲೆಹೇಳಿದವಿಧಿಗಳಿಗೆಲ್ಲಾ ನಿಷೇಧವೆಲ್ಲಾದರೂ ಉಂಟೊ.

ಸಮಾಸದಲ್ಲಿ ಪೂರ್ವಪದಕ್ಕೆ ವಿಧಿಸಿದ ಲೋಪಾಗಮಾದೇಶಗಳು ಬಂದಾಗಲು-ಸ್ವಭಾವದಿಂದಾಗಲು-ಅಕಾರಾಂತವಾದ ಗುಣವಾಚಕಗಳಿಗೂ-ಅಂಥಾ- ಅಕಾರಾಂತವಾದ ಕೃದಂತನಾಮವಿಶೇಷಣಕ್ಕೂ- ಸಮಾಸದಲ್ಲಿ ವಿಕಾರವನ್ನೈದದ ಸಂಖ್ಯಾವಾಚಕಕ್ಕೂ ಪರವಾದ ಪರಪದಾದಿ - ಕ - ತ - ಪ - ಬ - ಮ - ಗಳಿಗೆ - ಮೇಲೆಹೇಳಿದ ಆದೇಶಗಳೊಂದೂ ಬರುವದಿಲ್ಲವು.

ಗುಣವಚನಕ್ಕುದಾಹರಣೆ.

ಬಟ್ಟ - ಕಣ್ಣು - ಇದಕ್ಕೆ - ಬಟ್ಟಕಣ್ಣು.
ಪರಟ - ತಲೆ - ಇದಕ್ಕೆ - ಪರಟತಲೆ.
ದೊಡ್ಡ - ಪೆಟ್ಟಿಗೆ - ಇದಕ್ಕೆ - ದೊಡ್ಡಪೆಟ್ಟಿಗೆ.
ಚಿಕ್ಕ - ಬಟ್ಟೆ - ಇದಕ್ಕೆ - ಚಿಕ್ಕಬಟ್ಟೆ.
ಚಿಕ್ಕ - ಮನೆ - ಇದಕ್ಕೆ - ಚಿಕ್ಕಮನೆ.

ಇತ್ಯಾದಿ.

ಕೃದಂತಕ್ಕುದಾಹರಣೆ.

ಕೂಗುವ - ಕೋಳಿ - ಇದಕ್ಕೆ - ಕೂಗುವಕೋಳಿ.
ತೂಗುವ - ತೊಟ್ಟಿಲು - ಇದಕ್ಕೆ - ತೂಗುವತೊಟ್ಟಿಲು.
ಹೊದ್ದಿದ - ಬಟ್ಟೆ - ಇದಕ್ಕೆ - ಹೊದ್ದಿದಬಟ್ಟೆ.
ಕಟ್ಟಿದ - ಮನೆ - ಇದಕ್ಕೆ - ಕಟ್ಟಿದಮನೆ.
ತುಂಬಿದ - ಪುಟ್ಟಿ - ಇದಕ್ಕೆ - ತುಂಬಿದಪುಟ್ಟಿ.

ಇತ್ಯಾದಿ.

ಸಂಖ್ಯಾವಾಚಕಕ್ಕುದಾಹರಣೆ.

ಒಂದು - ಕೈಯ್ಯನು - ಇದಕ್ಕೆ - ಒಂದುಕೈಯ್ಯನು.
ನಾಲ್ಕು - ತೊಳಸು - ಇದಕ್ಕೆ - ನಾಲ್ಕುತೊಳಸು.
ಆರು - ಬಾಯಸು - ಇದಕ್ಕೆ - ಆರುಬಾಯಸು.
ನಾಲ್ಕು - ಮೊಗಸು - ಇದಕ್ಕೆ - ನಾಲ್ಕುಮೊಗಸು.

ಇತ್ಯಾದಿ.

೭೯ - ಇನ್ನೂ ಮೇಲೆ ಹೇಳಿದ ಆದೇಶಗಳು ಎಲ್ಲಿ ಬರುವದಿಲ್ಲ.

ಒಳ - ಕೈಯ್ಯಾದಿಶಬ್ದಗಳಲ್ಲಿಯೂ ಬರುವದಿಲ್ಲವು.

ಉದಾಹರಣೆ.

ಒಳ್ - ಕೈ - ಎಂದಕ್ಕೆ - ಒಳಕೈ - ಇತ್ಯಾದಿ.

ಒಳಕೈ - ಹೊರಕೈ - ಒಳಕೋಟೆ - ಹೊಸಕೋಟೆ - ಹೊರಕೋಟೆ - ಒಳಕಟ್ಟು - ಬರಿಃಕಾಲು - ತಲೆಕಟ್ಟು - ಕಸ್ತುರಿಮಿಗವು - ನಸುಮುಳಿಸು - ಹಾಳ್ಮನೆ - ಬಾಳ್ಮನೆ - ನಾಮ್ಮೊಗಸು - ಊಮ್ಮೊಗಸು - ಒಕ್ಕಣ್ಣನು - ಇತ್ತಲೆಯನು - ಮುಪ್ಪೊಳಲು - ಮುಕ್ಕಣ್ಣನು - ಇತ್ಯಾದಿಗಳು ಬಹಳವುಂಟು - ಅವುಗಳನ್ನು ಪ್ರಯೋಗಗಳಿಂದ ತಿಳಿದು ಕೊಳ್ಳತಕ್ಕದ್ದು.

೭೦ - ಸಕಾರಕ್ಕೇವಾದೇಶ ಬರುತ್ತದೆ.

ಲಯಕಾರಗಳನ್ನುಳಿದ ಪೂರ್ವಪದಾಂತ್ಯವ್ಯಂಜನಕ್ಕಿಂತ ಪರವಾದ ಪರಪದದ ಮೊದಲ ಸಕಾರಕ್ಕೆ ಕೆಲವು ಪದಗಳಲ್ಲಿ ಚಕಾರಾದೇಶ - ಕೆಲವು ಪದಗಳಲ್ಲಿ ಜಕಾರಾದೇಶ - ಕೆಲವು ಪದಗಳಲ್ಲಿ ಪ್ರಕೃತಿಭಾವ - ಈ ಮೇರೆಗೆ ವ್ಯವಸ್ಥಿತವಾಗಿ ಬರುತ್ತದೆ.

ಉದಾಹರಣೆ.

ಮುನ್ - ಸರವು - ಎಂದಕ್ಕೆ - ಮುಚ್ಚರವು.

ಪೊನ್ - ಸುರಿಗೆ - ಎಂದಕ್ಕೆ - ಪೊಂಜುರಿಗೆ.

ಕನ್ - ಸೂಳೆ - ಎಂದಕ್ಕೆ - ಕನ್ಸೂಳೆ.

ಇತ್ಯಾದಿ.

ಇನ್ನಿಂಥಾ ಪದಗಳನ್ನು ಪ್ರಯೋಗಗಳಿಂದ ತಿಳಿದುಕೊಳ್ಳತಕ್ಕದ್ದು.

೭೧ - ಸಮಾಸದಲ್ಲಿ ಪೂರ್ವಪದದ ಕಡೆಯ ಯಾವ ವರ್ಣಕ್ಕಾದರೂ ಆದೇಶ ಬರುವದುಂಟೋ.

ಸಮಾಸದಲ್ಲಿ ಪೂರ್ವಪದದ ಕಡೆಯ ನಕಾರ ಮಕಾರಗಳಿಗೆ ಪರಪದಾದಿವ್ಯಂಜನ ಪರವಾಗಲು ಅನುಸ್ವಾರಾದೇಶ ಬರುತ್ತದೆ. ಅಂಥಾ ಅನುಸ್ವಾರಕ್ಕೆ ವರ್ಗಾಕ್ಷರ ಪರವಾಗಲು ಆ ವರ್ಗದ ಕಡೆಯ ವರ್ಣ ವಿಕಲ್ಪವಾಗಿ ಬರುತ್ತದೆ.

ಉದಾಹರಣೆ.

ಹೊನ್ - ಬಳೆ - ಎಂದಕ್ಕೆ - ಹೊಂಬಳೆ - ಹೊಮ್ಬಳೆ.

ತೊಮ್ - ಪತ್ತು - ಎಂದಕ್ಕೆ - ತೊಂಬತ್ತು - ತೊಮ್ಬತ್ತು.

ಇತ್ಯಾದಿ.

೬೨ - ಪೂರ್ವಪದದ ಕಡೆಯವರ್ಣಕ್ಕೆ ನ್ನಾಪಸು ಬರುತ್ತದೆ.

ಸಮಾಸದಲ್ಲಿ ಲಘುವಾದೊಂದಕ್ಷರವು ಪೂರ್ವದಲ್ಲುಳ್ಳ ಪದಾಂತವಾದ - ಟ - ತ - ಗಳಿಗೆ ಸ್ವರ ಪರವಾಗಲು - ದ್ವಿತ್ವ ಬರುತ್ತದೆ.

ದ್ವಿತ್ವವೆಂದರೆ ಒಂದೇ ವರ್ಣವನ್ನು ಎರಡು ವರ್ಣವಾಗಿ ಮಾಡಿಸಿ ಸಂಯುಕ್ತವಾಗಿ ಹೇಳುವದು.

ಉದಾಹರಣೆ.

ನಟ್ - ಅಡವಿ - ಇದಕ್ಕೆ - ನಟ್ಟಡವಿ.

ಕಿತ್ - ಇಳಿ - ಇದಕ್ಕೆ - ಕಿತ್ತಿಳಿ.

ಇತ್ಯಾದಿ.

೬೩ - ಇನ್ನಾ ದ್ವಿತ್ವವೆಲ್ಲಿ ಬರುತ್ತದೆ.

ಲಘುವಾದೊಂದಕ್ಷರವನ್ನು ಪೂರ್ವದಲ್ಲುಳ್ಳ ಪದಾಂತ್ಯವಾದ - ಣ - ಯ - ಲ - ಳ - ಇವುಗಳನ್ನಂತದಲ್ಲುಳ್ಳ - ಹಳಗನ್ನಡ ಶಬ್ದಗಳನ್ನು ಹೊಸಗನ್ನಡದಲ್ಲಿ ಪ್ರಯೋಗಿಸುವಾಗ ಬರುವ ಉಕಾರಾಗಮ ಪರವಾದಾಗ ಮೇಲೆ ಹೇಳಿದ ವರ್ಣಗಳಿಗೂ - ಸಂಸ್ಕೃತ ವ್ಯಂಜನಾಂತ ಶಬ್ದಗಳನ್ನು ಕನ್ನಡದಲ್ಲಿ ತತ್ಸಮವ ಮಾಡುವಾಗ ಬರುವ ಉಕಾರಾಗಮ ಪರವಾದಾಗ ಆ ವ್ಯಂಜನಗಳಿಗೂ ದ್ವಿತ್ವ ಬರುತ್ತದೆ.

ಉದಾಹರಣೆ.

ಕಣ್ - ಉ - ಇದಕ್ಕೆ - ಕಣ್ಣು.

ಹೊನ್ - ಉ - ಇದಕ್ಕೆ - ಹೊನ್ನು.

ಮೆಯ್ - ಉ - ಇದಕ್ಕೆ - ಮೆಯ್ಯು.

ಕಲ್ - ಉ - ಇದಕ್ಕೆ - ಕಲ್ಲು.

ಮುಳ್ - ಉ - ಇದಕ್ಕೆ - ಮುಳ್ಳು.

ಜಗತ್ - ಉ - ಇದಕ್ಕೆ - ಜಗತ್ತು.

ಇತ್ಯಾದಿ.

೬೪ - ಪರಪದದ ಮೊದಲ ವ್ಯಂಜನಕ್ಕೆಲ್ಲಾದರೂ ದ್ವಿತ್ವ ಬರುತ್ತದೆಯೋ.

ಸಮಾಸದಲ್ಲಿ ಒಂದು ಎರಡು ಮೂರು - ಇವುಗಳಿಗಾದೇಶವಾದ - ಒ - ಇ - ಮು - ಇವುಗಳಿಗೆ ಪರವಾದ ವ್ಯಂಜನಗಳಿಗೆ ದ್ವಿತ್ವ ಬರುತ್ತದೆ.

ಉದಾಹರಣೆ.

ಒ - ಕಣ್ಣನು - ಇದಕ್ಕೆ - ಒಕ್ಕಣ್ಣನು.

ಇ - ತಲೆಯನು - ಇದಕ್ಕೆ - ಇತ್ತಲೆಯನು.

ಮು - ಗಡ್ಡೆ - ಇದಕ್ಕೆ - ಮುಗ್ಗಡ್ಡೆ.

ಇತ್ಯಾದಿ.

೭೫ - ವಾಕ್ಯದಲ್ಲಿ ದ್ವಿತ್ವವಿಲ್ಲದರೂ ಉಂಟೋ.

ವಾಕ್ಯದಲ್ಲಿ-ದುಪ್ರತ್ಯಯಾಂತವಾದವ್ಯಯಕ್ಕೆ ಪರವಾದ ಕೊಡು ಕೊಳ್ಳು ಧಾತುಗಳ ಕಕಾರಕ್ಕೆ-ವಿಕಲ್ಪವಾಗಿ ದ್ವಿತ್ವ ಬರುತ್ತದೆ.

ಉದಾಹರಣೆ.

ತೆಗೆದು - ಕೊಳ್ಳು - ಇದಕ್ಕೆ - ತೆಗೆದುಕ್ಕೊಳ್ಳು - ತೆಗೆದುಕೊಳ್ಳು.

ಎತ್ತಿ - ಕೊಡು - ಇದಕ್ಕೆ - ಎತ್ತಿಕ್ಕೊಡು - ಎತ್ತಿಕೊಡು.

ಎತ್ತಿ - ಕೊಂಡನು - ಇದಕ್ಕೆ - ಎತ್ತಿಕ್ಕೊಂಡನು - ಎತ್ತಿಕೊಂಡನು - ಇಲ್ಲಿ ದುಪ್ರತ್ಯಯಕ್ಕಿಕಾರಾದೇಶ ಬಂದದೆ.

೭೬ - ಸಂಧಿಯಲ್ಲಿ ಮೂರು ವರ್ಣಕ್ಕೊಂದು ವರ್ಣಾದೇಶ ಬರುವದುಂಟಾ.

ವರ್ಗಪ್ರಥಮ ವರ್ಗತೃತೀಯೋಪಧಗಳಾಗಿಯೂ - ಪದಾಂತವಾಗಿಯೂ - ಇರುವ ಪೂರ್ವಪದಕ್ಕೆ ಉತ್ತರಪದಾದಿಹಕಾರ ಪರವಾಗಲು - ಪೂರ್ವಪದದ ಉಪಧೆಗೂ - ಕಡೆಯ ಸ್ವರಕ್ಕೂ ಪರಪದಾದಿಹಕಾರಕ್ಕೂ - ಆ ಉಪಧಾವರ್ಣಸವರ್ಣವಾದ ಮಹಾಪ್ರಾಣ ವಿಕಲ್ಪವಾಗಿ ಬರುತ್ತದೆ - ಉಪಧೆ ಅಘೋಷವಾಗಿದ್ದರೆ ಅಘೋಷಮಹಾಪ್ರಾಣ ಬರುತ್ತದೆ - ಘೋಷವಾಗಿರಲು - ಘೋಷಮಹಾಪ್ರಾಣ ಬರುತ್ತದೆ.

ಉದಾಹರಣೆ.

ಓದಿ - ಹೋದನು - ಇದಕ್ಕೆ - ಓಧೋದನು - ಓದಿಹೋದನು.

ಕಟ್ಟಿ - ಹೋಯಿತು - ಇದಕ್ಕೆ - ಕಟ್ಠೋಯಿತು - ಕಟ್ಟಿಹೋಯಿತು.

ತೆಗೆದು - ಹೋಯಿತು - ಇದಕ್ಕೆ - ತೆಗೆಧೋಯಿತು - ತೆಗೆದುಹೋಯಿತು.

ನಿನ್ತು - ಹೋದನು - ಇದಕ್ಕೆ - ನಿನ್ಥೋದನು - ನಿನ್ತುಹೋದನು.

ಇತ್ಯಾದಿ.

೭೩. ಯಾವ ವರ್ಣವನ್ನಾದರೂ ಮತ್ತೊಂದು ವರ್ಣವಾಗಿ ಬರೆಯೋಣವೂ ಉಚ್ಚರಿಸೋಣವೂ ಉಂಟೋ.

ಇವರ್ಣವಾಗಲಿ - ಏವರ್ಣವಾಗಲಿ ಪರವಾದಾಗ ಸಕಾರವು ಶಕಾರವಾಗಿಯೂ - ಯಾವಾಗಲೂ ಹಳಗನ್ನಡದ ಱಕಾರವು ಲೋಪವಾಗಿಯೂ - ೞವು - ಳಕಾರವಾಗಿಯೂ - ಬರೆಯೋಣವೂ ಉಚ್ಚರಿಸೋಣವೂ - ಉಂಟು.

ಸಕಾರದ ಶಕಾರಕ್ಕುದಾಹರಣೆ.

ಕರಿಸಿ - ಇದಕ್ಕೆ - ಕರಿಶಿ.
ಸೀನೀರು - ಇದಕ್ಕೆ - ಶೀನೀರು.
ಸೆಕೆ - ಇದಕ್ಕೆ - ಶೆಕೆ.
ಸೇರು - ಇದಕ್ಕೆ - ಶೇರು.

ಱಕಾರದ ಲೋಪಕ್ಕುದಾಹರಣೆ.

ಊಱು - ಇದಕ್ಕೆ - ಊರು.
ಮೂಱು - ಇದಕ್ಕೆ - ಮೂರು.
ಸೂಱು - ಇದಕ್ಕೆ - ಸೂರು - ಇತ್ಯಾದಿ.

ೞದ ಳಕಾರಕ್ಕುದಾಹರಣೆ.

ಕೋೞಿ - ಇದಕ್ಕೆ - ಕೋಳಿ.
ಬಾೞೆ - ಹಣ್ಣು - ಇದಕ್ಕೆ - ಬಾಳೆಹಣ್ಣು
ಇತ್ಯಾದಿ.

೭೪. ಯಾವ ವರ್ಣವನ್ನಾದರೂ ಒಂದು ವರ್ಣವಾಗಿ ಬರೆದು ಒಂದು ವರ್ಣವಾಗ ಉಚ್ಚರಿಸುವದುಂಟೋ.

ಸಂಸ್ಕೃತಶಬ್ದಗಳಲ್ಲಿರುವ ಜಿಹ್ವಾಮೂಲೀಯೋಪಧ್ಮಾನೀಯಗಳನ್ನು - ವಿಸರ್ಗವಾಗಿ ಬರೆದು ಜಿಹ್ವಾಮೂಲೀಯೋಪಧ್ಮಾನೀಯಗಳಾಗಿ ಉಚ್ಚರಿಸುತ್ತಾರೆ.

ಉದಾಹರಣೆ.

ಅಯೱಕೀಲವು - ಇದನ್ನು - ಅಯಃಕೀಲವು - ಎಂದು ಬರೆದು ಅಯೱಕೀಲವು - ಎಂದುಚ್ಚರಿಸುತ್ತಾರೆ.

ಅಯೲಪಿಂಡವು - ಇದನ್ನು - ಅಯಃಪಿಂಡವು - ಎಂದು ಬರೆದು - ಅಯೲಪಿಂಡವೆಂದುಚ್ಚರಿಸುತ್ತಾರೆ.

೧೯ - ಇನ್ನೊಂದು ವರ್ಣವನ್ನು - ಒಂದು ವರ್ಣವಾಗಿ ಬರೆದು ಒಂದು ವರ್ಣವಾಗುಚ್ಚರಿಸುವದುಂಟೋ.

ವರ್ಗಾಕ್ಷರಗಳ ಪೂರ್ವದಲ್ಲಿರುವ ವರ್ಗಪಂಚಮವನ್ನು ಅನುಸ್ವಾರವಾಗಿ ಬರೆದು ವರ್ಗಪಂಚಮವಾಗುಚ್ಚರಿಸುತ್ತಾರೆ.

ಉದಾಹರಣೆ.

ನಿನ್ತನು - ಇದನ್ನು - ನಿಂತನು - ಎಂದು ಬರೆದು - ನಿನ್ತನು ಎಂದುಚ್ಚರಿಸುತ್ತಾರೆ.

೨೦ - ವ್ಯಂಜನಸಂಧಿಯಲ್ಲಿ ಹೇಳಿದ ವಿಧಿಗಳೆಲ್ಲವೂ ಶಬ್ದಾನುಶಾಸನ ಶಬ್ದಮಣಿದರ್ಪಣಗಳಲ್ಲಿ ಹೇಳಿವೆಯೋ.

೧೫ - ೧೬ - ೧೭ - ೧೮ - ೧೯ - ಈ ಸೂತ್ರದಲ್ಲಿ ಹೇಳಿದ ವಿಧಿಗಳು ಆ ಗ್ರಂಥಗಳಲ್ಲಿಯೂ - ಅದರ ವ್ಯಾಖ್ಯಾನಗಳಲ್ಲಿಯೂ ಹೇಳಿಲ್ಲ - ಆದರೂ ಹಿರಿಯರ ಪ್ರಯೋಗಗಳಿರುವದರಿಂದ ಬರೆಯಲಾಯಿತು.

೨೧ - ಮೇಲೆ ಬರೆದ ಗ್ರಂಥಗಳಲ್ಲಿ ಮೇಲೆ ಬರೆದ ವಿಧಿಗಳು ಹೊರ್ತು ಇನ್ನೂ ಏನಾದರೂ ವ್ಯಂಜನ ಸಂಧಿಯಲ್ಲಿ ವಿಶೇಷ ಬರೆದದೆಯೋ.

ಇನ್ನೂ ಬಹಳ ವಿಶೇಷಗಳು ಬರೆದಿವೆ - ಅದು ಹೊಸಗನ್ನಡಕ್ಕೆ ಪ್ರಯೋಗವಿಲ್ಲದ್ದರಿಂದ ಈ ಕಾಂಡದಲ್ಲಿ ಬರೆಯಲಿಲ್ಲ - ಎರಡನೇ ಕಾಂಡದಲ್ಲಿ ಬರೆಯಲ್ಪಡುವದು.

೨೨ - ಕನ್ನಡಕ್ಕೆ ಪ್ರಯೋಗಿಸುವ ಸಂಸ್ಕೃತ ವ್ಯಂಜನ ಸಂಧಿಯಲ್ಲೇನು ಬರುತ್ತದೆ.

ಶ್ಚುತ್ವ - ಷ್ಟುತ್ವ - ಅನುಸ್ವಾರ - ಪರಸವರ್ಣ - ವಿಸರ್ಗ ಜಿಹ್ವಾಮೂಲೀಯ - ಉಪಧ್ಮಾನೀಯ - ಅನುನಾಸಿಕ - ಸುಡಾಗಮ ತುಗಾಗಮ - ಜಸ್ತ್ವ - ಚರ್ತ್ವ - ಛತ್ವ - ರತ್ವ - ಉತ್ವ - ರಲೋಪ ಮುಂತಾದವು ಬರುತ್ತವೆ.

೨೩ - ಶ್ಚುವೆಂದರೇನು ಅದೆಲ್ಲಿ ಬರುತ್ತದೆ.

ಶ - ಚವರ್ಗಗಳಿಗೆ ಶ್ಚುವೆಂದು ಹೆಸರು - ಸಕಾರ ತವರ್ಗಗಳಿಗೆ - ಶಕಾರ ಚವರ್ಗ - ಪರವಾಗಲು - ಸಕಾರಕ್ಕೆ ಶಕಾರವೂ - ತವರ್ಗಕ್ಕೆ ಚವರ್ಗವೂ ಬರುತ್ತದೆ.

ಉದಾಹರಣೆ.

ಪಯಸ್ - ಶಯನವು - ಇದಕ್ಕೆ - ಪಯಶ್ಶಯನವು.
ಪಯಸ್ - ಚರವು - ಇದಕ್ಕೆ - ಪಯಶ್ಚರವು.
ತದ್ - ಚಿಂತನವು - ಇದಕ್ಕೆ - ತಚ್ಚಿಂತನವು.
ತತ್ - ಶಿವನು - ಇದಕ್ಕೆ - ತಚ್ಛಿವನು.
ಇಲ್ಲಿ ಮೇಲೆ ಹೇಳುವ ಛತ್ವ ಸಹಾ ಬಂತು.

೭೪ - ಷ್ಟುವೆಂದರೇನು ಅದುಯೆಲ್ಲಿಬರುತ್ತದೆ. — ಷಕಾರ ಟವರ್ಗಗಳಿಗೆ ಷ್ಟುವೆಂಬಹೆಸರು - ಸಕಾರ ತವರ್ಗಗಳು - ಟವರ್ಗದೊಂದಿಗೆ ಸೇರಿದಾಗಲೂ - ಸಕಾರ - ಷಕಾರದೊಡನೆ ಸೇರಿಸದಾಗ ಸಕಾರಕ್ಕೆ ಷಕಾರವೂ - ತವರ್ಗಕ್ಕೆ - ಟವರ್ಗವೂ ಬರುತ್ತದೆ.

ಉದಾಹರಣೆ.

ತಪಸ್ - ಷಡ್ಭಾಗವು - ಇದಕ್ಕೆ - ತಪಷ್ಷಡ್ಭಾಗವು.
ಅಯಸ್ - ಟಂಕವು - ಇದಕ್ಕೆ - ಅಯಷ್ಟಂಕವು.
ತತ್ - ಟೀಕೆಯು - ಇದಕ್ಕೆ - ತಟ್ಟೀಕೆಯು.

೭೫ - ಟವರ್ಗಕ್ಕಿಂತ ಪರವಾದ ಸತವರ್ಗಗಳಿಗೆ ಷ್ಟುತ್ವ ಬರುತ್ತದೆಯೋ. — ನವತಿನಗರೀಶಬ್ದಗಳ ನಕಾರ ಹೊರ್ತಕಡಮೆ ಸಕಾರ ತವರ್ಗಗಳಿಗೆ ಷ್ಟುತ್ವ ಬರುವದಿಲ್ಲ.

ಉದಾಹರಣೆ.

ಷಟ್ - ಸತ್ಪುರುಷರು - ಇದಕ್ಕೆ - ಷಟ್ಸತ್ಪುರುಷರು.
ಷಟ್ - ತರುಣರು - ಇದಕ್ಕೆ - ಷಟ್ತರುಣರು.
ಷಟ್ - ನವತಿಯು - ಇದಕ್ಕೆ - ಷಣ್ಣವತಿಯು.
ಷಟ್ - ನಗರಿಯು - ಇದಕ್ಕೆ - ಷಣ್ಣಗರಿಯು.
ಇಲ್ಲಿ ಮೇಲೆಹೇಳುವ ಅನುನಾಸಿಕ ಸಹಾ ಬಂದದೆ.

೭೬ - ಅನುಸ್ವಾರವೆಲ್ಲಿ ಬರುತ್ತದೆ. — ಮಕಾರಕ್ಕೆ ವ್ಯಂಜನ ಪರವಾಗಲು ಅನುಸ್ವಾರ ಬರುತ್ತದೆ.

ಉದಾಹರಣೆ.

ಅಸ್ತ್ರಮ್ - ಸಮಯವು - ಇದಕ್ಕೆ - ಅಸ್ತ್ರಂಸಮಯವು.

೭೭ - ಪರಸವರ್ಣವೆಲ್ಲಿ ಬರುತ್ತದೆ. — ಅನುಸ್ವಾರಕ್ಕೆ - ಊಷ್ಮವ್ಯತಿರಿಕ್ತವ್ಯಂಜನ ಪರವಾದರೆ - ಪರಸವರ್ಣವಿಕಲ್ಪವಾಗಿ ಬರುತ್ತದೆ - ಯಾದರೆ ಅನುಸ್ವಾರವು ನಾಸಿಕೆಯಲ್ಲಿ ಹುಟ್ಟಿದ್ದಾದ್ದರಿಂದ ಪರವರ್ಣಕ್ಕೆ ಸವರ್ಣವಾದ ಅನುನಾಸಿಕವೇ ಬರುತ್ತದೆ.

ಉದಾಹರಣೆ.

ಸಾಯಮ್ - ಕಾಲವು - ಇದಕ್ಕೆ - ಸಾಯಂಕಾಲವು - ಸಾಯಙ್ಕಾಲವು - ಇತ್ಯಾದಿ.

೭೮ - ವಿಸರ್ಗವೆಲ್ಲಿ ಬರುತ್ತದೆ.

ರೇಫಸಕಾರಗಳಿಗೆ - ಕಖ - ಪಫ - ಶಷಸ - ಇವುಗಳು ಪರವಾದಾಗ ವಿಸರ್ಗ ಬರುತ್ತದೆ - ಅದಕ್ಕೆ - ಕಖ - ಪರವಾದಾಗ ಜಿಹ್ವಾಮೂಲೀಯವು - ಪಫ - ಪರವಾದಾಗ - ಉಪಧ್ಮಾನೀಯವು - ಶಷ - ಸ - ಪರವಾದಾಗ ಊಷ್ಮವರ್ಣವೂ ಬರುತ್ತದೆ.

ಉದಾಹರಣೆ.

ಪ್ರಾತರ್ - ಕಾಲವು - ಇದಕ್ಕೆ - ಪ್ರಾತೱಕಾಲವು.
ಪ್ರಾತರ್ - ಪೂತವು - ಇದಕ್ಕೆ - ಪ್ರಾತೲಪೂತವು.
ಪುನರ್ - ಶಯನವು - ಇದಕ್ಕೆ - ಪುನಶ್ಶಯನವು.
ಪುನರ್ - ಷಂಡವು - ಇದಕ್ಕೆ - ಪುನಷ್ಷಂಡವು.
ಪುನರ್ - ಸಂಸ್ಕಾರವು - ಇದಕ್ಕೆ - ಪುನಸ್ಸಂಸ್ಕಾರವು.
ಯಶಸ್ - ಕಾರಣವು - ಇದಕ್ಕೆ - ಯಶೱಕಾರಣವು.
ಪಯಸ್ - ಪಾನವು - ಇದಕ್ಕೆ - ಪಯೲಪಾನವು.

೭೯ - ಇದಕ್ಕಪವಾದವುಂಟೋ.

ನಮಸ್ಕಾರಾದಿಶಬ್ದಗಳಲ್ಲಿ ವಿಸರ್ಗ ಬರುವದಿಲ್ಲ.

ನಮಸ್ಕಾರ - ಪುರಸ್ಕಾರ - ತಿರಸ್ಕಾರ - ಇತ್ಯಾದಿ.

೮೦ - ರೇಫಕ್ಕೆ ಚಛ - ಟಠ - ತಥ - ಪರವಾದಾಗ ಏನು ಬರುತ್ತದೆ.

ರೇಫಕ್ಕೆ - ಚಛ ಪರವಾದ ಶಕಾರವು - ಟಠ - ಪರವಾದ ಷಕಾರವೂ - ತಥ - ಪರವಾದರೆ ಸಕಾರವೂ ಬರುತ್ತದೆ.

ಉದಾಹರಣೆ.

ಪುನರ್ - ಚರಣೆ - ಇದಕ್ಕೆ - ಪುನಶ್ಚರಣೆ.
ಪುನರ್ - ಟಂಕವು - ಇದಕ್ಕೆ - ಪುನಷ್ಟಂಕವು.
ಪ್ರಾತರ್ - ತೂರ್ಣವೂ - ಇದಕ್ಕೆ - ಪ್ರಾತಸ್ತೂರ್ಣವು - ಇತ್ಯಾದಿ.

೮೧ - ಅನುನಾಸಿಕವೆಲ್ಲಿ ಬರುತ್ತದೆ.

ವರ್ಗಾಕ್ಷರಗಳಲ್ಲಿ ಯಾವವರ್ಣಕ್ಕಾಗಲಿ - ಯಾವವರ್ಗಪಂಚಮವಾದ ರೂಪ ಪರವಾಗಿದ್ದರೆ ಪೂರ್ವಸವರ್ಣವಾದ ಅನುನಾಸಿಕವು ಆದೇಶವಾಗಿ ಬರುತ್ತದೆ.

ಉದಾಹರಣೆ.

ಷಟ್ - ನಕ್ಷತ್ರವು - ಇದಕ್ಕೆ - ಷಣ್ಣಕ್ಷತ್ರವು.

ಚಿತ್ - ಮಾತ್ರವು - ಇದಕ್ಕೆ - ಚಿನ್ಮಾತ್ರವು.

ಅಪ್ - ಮಯವು - ಇದಕ್ಕೆ - ಅಮ್ಮಯವು.

೬೨ - ಜಶ್ತ್ವಂದರೇನು ಅದೆಲ್ಲಿಬರುತ್ತದೆ.

ವರ್ಗತೃತೀಯಾಕ್ಷರಗಳಿಗೆಜಶ್ ಎಂದುಹೆಸರು - ವರ್ಗದ ಪ್ರಥಮದ್ವಿತೀಯಚತುರ್ಥಗಳಿಗೆಅಘೋಷಾಕ್ಷರವುಳಿದಕಡಮೆವರ್ಣಗಳು ಪರವಾಗಲುಆಯಾವರ್ಗದತೃತೀಯವು ಬರುತ್ತದೆ.

ಉದಾಹರಣೆ.

ವಾಕ್ - ಇಂದ್ರಿಯವು - ಇದಕ್ಕೆ - ವಾಗಿಂದ್ರಿಯವು.

ವಾಕ್ - ಜಾಲವು - ಇದಕ್ಕೆ - ವಾಗ್ಜಾಲವು.

ಶಿವತ್ - ಆತ್ರತಸು - ಇದಕ್ಕೆ - ಶಿವದಾತ್ರತಸು.

ಶಿವತ್ - ಘಕ್ರಿಯ - ಇದಕ್ಕೆ - ಶಿವದ್ಘಕ್ರಿಯ.

ಶಿವತ್ - ಉಕ್ರಿಯ - ಇದಕ್ಕೆ - ಶಿವದುಕ್ರಿಯ.

ವೀರುಧ್ - ಆಲಯವು - ಇದಕ್ಕೆ - ವೀರುದಾಲಯವು.

ವೀರುಧ್ - ಗ್ರಹವು - ಇದಕ್ಕೆ - ವೀರುದ್ಗ್ರಹವು.

ಅಪ್ - ಇಂಧನವು - ಇದಕ್ಕೆ - ಅಬಿಂಧನವು.

ಅಪ್ - ಜಾತವು - ಇದಕ್ಕೆ - ಅಬ್ಜಾತವು.

ಇತ್ಯಾದಿ.

೬೩ - ಚರೆಂದರೇನು ಅದೆಲ್ಲಿಬರುತ್ತದೆ.

ವರ್ಗಪ್ರಥಮಗಳಿಗೆಚರ್ ಎಂದುಹೆಸರು - ವರ್ಗದ್ವಿತೀಯತೃತೀಯಚತುರ್ಥಗಳಿಗೆಅಘೋಷಾಕ್ಷರಪರವಾಗಲು - ವರ್ಗಪ್ರಥಮಬರುತ್ತದೆ.

ಉದಾಹರಣೆ.

ಷಡ್ - ಚಕ್ರವು - ಇದಕ್ಕೆ - ಷಟ್ಚಕ್ರವು.

ತದ್ - ಶಾದೃಶವು - ಇದಕ್ಕೆ - ತಶ್ಶಾದೃಶವು.

ಇತ್ಯಾದಿ.

೬೪ - ತವರ್ಗಕ್ಕೆಲಕಾರಪರವಾಗೆ ಏನುಬರುತ್ತದೆ.

ತವರ್ಗಕ್ಕೆಲಕಾರಪರವಾಗಲುಲಕಾರಬರುತ್ತದೆ.

ಉದಾಹರಣೆ.

ಭಗವತ್ - ಲಿಪಿ - ಇದಕ್ಕೆ - ಭಗವಲ್ಲಿಪಿ. ಇತ್ಯಾದಿ.

೮೫ - ಛತ್ವವೆಲ್ಲಿ ಬರುತ್ತದೆ.

ಪಂಚಮವುಳಿದ ವರ್ಗಾಕ್ಷರಗಳಿಗಿಂತ ಪರವಾದ ಶಕಾರಕ್ಕೆ - ಸ್ವರವಾಗಲಿ - ಅಂತಸ್ಥೆಯಾಗಲಿ - ವರ್ಗಪಂಚಮವಾಗಲಿ ಪರವಾಗಿರಲು ಛಕಾರಾದೇಶ ಬರುತ್ತದೆ.

ಉದಾಹರಣೆ.

ತಿರ್ಯಕ್ - ಶರೀರವು - ಇದಕ್ಕೆ - ತಿರ್ಯಕ್ಛರೀರವು.

ತತ್ - ಶಿವನು - ಇದಕ್ಕೆ - ತಚ್ಛಿವನು.

ಭಗವತ್ - ಶ್ಲೋಕವು - ಇದಕ್ಕೆ - ಭಗವಚ್ಛ್ಲೋಕವು.

ಬೃಹತ್ - ಶ್ಮಶ್ರುವು - ಇದಕ್ಕೆ - ಬೃಹಚ್ಛ್ಮಶ್ರುವು.

ಇತ್ಯಾದಿ.

೮೬ - ಪೂರ್ವಸವರ್ಣವೆಲ್ಲಾದರೂ ಉಂಟೋ.

ಉತ್ - ಶಬ್ದಕ್ಕಿಂತ ಪರವಾದ ಸ್ಥಾ - ಸ್ತಂಭ ಧಾತುಗಳ ಸಕಾರಕ್ಕೆ - ಪೂರ್ವಸವರ್ಣವಾದ ತಕಾರ ಬರುತ್ತದೆ.

ಉದಾಹರಣೆ.

ಉತ್ - ಸ್ಥಾನವು - ಇದಕ್ಕೆ - ಉತ್ಥಾನವು.

ಉತ್ - ಸ್ತಂಭನವು - ಇದಕ್ಕೆ - ಉತ್ತಂಭನವು. ಇತ್ಯಾದಿ.

೮೭ - ಇನ್ನ್ವಾ ಎಲ್ಲಿ ಬರುತ್ತದೆ.

ಪಂಚಮವುಳಿದ ವರ್ಗಾಕ್ಷರಕ್ಕಿಂತ ಪರವಾದ ಹಕಾರಕ್ಕೆ ಆಯಾ ವರ್ಗದ ಚತುರ್ಥವು ಬರುತ್ತದೆ.

ಉದಾಹರಣೆ.

ಜ್ವಲತ್ - ಹೀರವು - ಇದಕ್ಕೆ - ಜ್ವಲದ್ಧೀರವು. ಇತ್ಯಾದಿ.

೮೮ - ಹ್ರಸ್ವಾಕಾರಕ್ಕಿಂತ ಪರವಾದ ಸಕಾರಕ್ಕೇನು ಬರುತ್ತದೆ.

ಅಕಾರಕ್ಕಿಂತ ಪರವಾದ ಸಕಾರಕ್ಕೆ - ಅಕಾರ ಪರವಾಗಲು ಯೆರಡಕಾರಕ್ಕೂ ನಡುವಿನ ಸಕಾರಕ್ಕೂ - ಒಂದು - ಓಕಾರವಾದೇಶವಾಗಿ ಬರುತ್ತದೆ.

ಉದಾಹರಣೆ.

ಯಶಸ್ - ಅತಿಶಯವು - ಇದಕ್ಕೆ - ಯಶೋತಿಶಯವು.

ವಯಸ್ - ಅಧಿಕನು - ಇದಕ್ಕೆ - ವಯೋಧಿಕನು. ಇತ್ಯಾದಿ.

౫౯ - కడమేస్వరగళు పరవాగలేను బరుత్తదె.

సంస్కృతగ్రంథగళల్లి సకారక్కె - యకారవాగి లోపవాగి బరుత్తదె - లోపబందాగ పూర్వోత్తర వర్ణగళిగె సంధిబరువదిల్ల - కన్నడదల్లి దకార బరుత్తదె.

ఉదాహరణె.

యశస్ - ఉన్నతియు - ఇదక్కె - యశదున్నతియు.

౬౦ - వ్యంజనపరవాగలేను బరుత్తదె.

అఘోష పరవాదాగ బరువ వివరవు హిందెహేళియాయితు - ఘోషాక్షర పరవాదాగ అకారసకారగళిరదక్కె - ఒందు ఓకార బరుత్తదె.

ఉదాహరణె.

తపస్ - ధనవు - ఇదక్కె - తపోధనవు.

౬౧ - ఆకారక్కింత పరవాద సకారక్కేను బరుత్తదె,

భాస్కర శబ్దహొరతు బేరెప్రయోగవిల్ల.

౬౨ - నామిగింత పరవాద సకారక్కేను బరుత్తదె.

అఘోష పరవాదాగ హిందెహేళిద్దె - స్వరవాగలి - ఘోషాక్షరవాగలి పరవాదరె - రేఫ బరుత్తదె.

ఉదాహరణె.

హవిస్ - ఆజ్యవు - ఇదక్కె - హవిరాజ్యవు.

హవిస్ - భాగవు - ఇదక్కె - హవిర్భాగవు.

ధనుస్ - ఆరోపణవు - ఇదక్కె - ధనురారోపణవు.

ధనుస్ - భారవు - ఇదక్కె - ధనుర్భారవు.

ఇత్యాది.

౬౩ - సంస్కృతశబ్దగళు కన్నడదల్లి శేరిసెహేళ బారదకడెయుంటో.

తివిగింపిల్లదకడెయల్లి శేరిసిహేళ బారదు.

విద్యుత్ స్త్రీయరు - ఇత్యాది.

ఇంతు ఎరడనెయ సంధిప్రకరణవు ముగియితు.

ಪ್ರಶ್ನೆ.	ಉತ್ತರವು.
೧ - ಶಬ್ದಪ್ರಕರಣದಲ್ಲೇನು ಹೇಳಲ್ಪಡುತ್ತದೆ.	ಈ ಪ್ರಕರಣದಲ್ಲಿ ಶಬ್ದಗಳ ಭೇದಗಳು ಅವುಗಳ ಸ್ವರೂಪಗಳು ಸುಪ್ರತ್ಯಯಗಳು ಅವುಗಳ ಭೇದಗಳು ಅವುಗಳು ಪ್ರಕೃತಿಯೊಂದಿಗೆ ಸೇರುವಾಗ ಪ್ರಕೃತಿಪ್ರತ್ಯಯಗಳಿಗೆ ಬರುವ ಲೋಪಾಗಮಾದೇಶಗಳು ಅವ್ಯಯನಿಪಾತಗಳ ಭೇದಗಳು ಅವುಗಳ ಸ್ವರೂಪಗಳು ಸಹಾ ಹೇಳಲ್ಪಡುತ್ತದೆ.
೨ - ಶಬ್ದಗಳೆಷ್ಟು ವಿಧವು.	ತತ್ಸಮ - ತದ್ಭವ - ದೇಶ್ಯ - ಅನ್ಯದೇಶ್ಯ - ಗ್ರಾಮ್ಯಗಳೆಂದು ಐದು ವಿಧವು.
೩ - ತತ್ಸಮವೆಂದರೇನು.	ಸಂಸ್ಕೃತ ದ್ರಾವಿಡಗಳಿಗೆ ಕನ್ನಡ ವಿಭಕ್ತಿಗಳು ಸೇರಿದರೂ ಆ ಶಬ್ದಗಳಿಗೆ ಆ ಪ್ರತ್ಯಯಗಳು ಸೇರುವಾಗ ಕಡೆಯಕ್ಷರಕ್ಕೆ ಲೋಪಾಗಮಾದೇಶಗಳು ಬಂದು ಸೇರಿದರೂ ತತ್ಸಮ ಶಬ್ದಗಳು.
೪ - ತದ್ಭವವೆಂದರೇನು.	ಅನೇಕ ವರ್ಣಗಳಿಗೆ ವಿಕಾರ ಬಂದು ಸಂಸ್ಕೃತ ದ್ರಾವಿಡ ಶಬ್ದಗಳು ಕನ್ನಡದಲ್ಲಿ ಪ್ರಯೋಗಿಸಲ್ಪಟ್ಟರೆ ಅವು ತದ್ಭವವು.
೫ - ದೇಶ್ಯವೆಂದರೇನು.	ಅಚ್ಚಕನ್ನಡದಲ್ಲಿ ಮಾತ್ರವೆ ಪ್ರಯೋಗಿಸಲ್ಪಡುವದು ದೇಶ್ಯವು.
೬ - ಅನ್ಯದೇಶ್ಯವೆಂದರೇನು.	ಹಿಂದುಸ್ಥಾನಿ ಮೊದಲಾದ್ದು - ಈ ಭಾಷೆಯಲ್ಲಿ ಪ್ರಯೋಗಿಸ್ತರೆ ಅದು ಅನ್ಯದೇಶ್ಯವು.
೭ - ಗ್ರಾಮ್ಯವೆಂದರೇನು.	ವ್ಯಾಕರಣಕ್ಕೆ ವಿರೋಧವಾದದ್ದು ಗ್ರಾಮ್ಯವು.
೮ - ಸುಬ್ವಿಭಕ್ತಿ ಯಾತರ ಮೇಲೆ ಬರುತ್ತದೆ.	ಸುಬ್ವಿಭಕ್ತಿ ಲಿಂಗದ ಮೇಲೆ ಬರುತ್ತದೆ.
೯ - ಲಿಂಗವೆಂದರೇನು.	ಧಾತು ಪ್ರತ್ಯಯಾಂತಗಳಲ್ಲದ ಅರ್ಥವುಳ್ಳ ಶಬ್ದಗಳು ಲಿಂಗವೆಂದು ಹೇಳಲ್ಪಡುತ್ತದೆ.
೧೦ - ಇನ್ನು ಲಿಂಗವೆಂಬ ಹೆಸರು ಯಾವದಕ್ಕಾದರೂ ಉಂಟೋ.	ಕೃತ್ಪ್ರತ್ಯಯ-ತದ್ಧಿತಪ್ರತ್ಯಯ-ಸಮಾಸಾಂತಪ್ರತ್ಯಯ ಸ್ತ್ರೀಪ್ರತ್ಯಯಾಂತಗಳಿಗೂ ಸಮಾಸಕ್ಕೂ ಲಿಂಗವೆಂದು ಹೆಸರು.
೧೧ - ಲಿಂಗವೆಷ್ಟು ವಿಧವು.	ಪುಲ್ಲಿಂಗವೆಂತಲೂ - ಸ್ತ್ರೀಲಿಂಗವೆಂತಲೂ - ನಪುಂಸಕಲಿಂಗವೆಂತಲೂ - ಮೂರು ವಿಧವಾಗಿರುವದು.

ಪ್ರಶ್ನೆ.	ಉತ್ತರವು.
೧೨ - ಪುಲ್ಲಿಂಗವಾದ ಶಬ್ದವೆಂಥಾದ್ದು.	ಗಂಡಸರ ಹೇಳುವ ಶಬ್ದವು ಪುಲ್ಲಿಂಗವು. M
೧೩ - ಸ್ತ್ರೀಲಿಂಗ ಶಬ್ದವೆಂಥಾದ್ದು.	ಹೆಂಗಸರ ಹೇಳುವ ಶಬ್ದವು ಸ್ತ್ರೀಲಿಂಗವು. f
೧೪ - ನಪುಂಸಕಲಿಂಗವೆಂಥಾದ್ದು.	ಕಡಮೆಯ ಹೇಳುವದು ನಪುಂಸಕಲಿಂಗವು. N.
೧೫ - ಇದಕ್ಕಪವಾದವುಂಟೋ.	ಕಳತ್ರಾದಿಶಬ್ದಗಳು ಯಾರ ಹೇಳಿದರೂ ನಪುಂಸಕಲಿಂಗವೆ. ಕಳತ್ರವು - ಬಂತು - ಇತ್ಯಾದಿ. ಕಳತ್ರ - ದಾರ - ಅಪತ್ಯ - ತೋಕ - ಶಿಶು - ಕೂಸು - ಪಸುಳೆ - ಮಗು - ಇತ್ಯಾದಿ.
೧೬ - ಜನಶಬ್ದವು ಯಾವ ಲಿಂಗವು.	ಜನಶಬ್ದವು ಏಕವಚನದಲ್ಲಿ ನಪುಂಸಕಲಿಂಗವು - ಕು-ಸು-ದುಃ-ಇವುಗಳಿಗೆ ಪರವಾದ ಜನಶಬ್ದವು-ವಾಚ್ಯಲಿಂಗವಾಗಿರುವದು ಕುಲಸ್ತ್ರೀಯ ಹೇಳುವ ಸಜ್ಜನ ಶಬ್ದವು ನಪುಂಸಕಲಿಂಗವಾಗಿರುವದು - ಗಂಡಸರ ಹೇಳಿದರೆ ಪುಲ್ಲಿಂಗವಾಗುತ್ತದೆ.

ಉದಾಹರಣೆ.

ಜನವು - ಬಹುಜನವು - ಸ್ತ್ರೀಜನವು - ಗಂಡುಜನವು.
ಕುಜನನು - ದುರ್ಜನನು - ಸುಜನನು.
ಕುಜನೆ - ದುರ್ಜನೆ - ಸುಜನೆ.
ಅವಳು - ಸಜ್ಜನವು.
ಅವನು - ಸಜ್ಜನನು.
ಜನಗಳು - ಬಂದರು.

ಇತ್ಯಾದಿ.

ಪ್ರಶ್ನೆ.	ಉತ್ತರವು.
೧೭ - ಪುನ್ನಪುಂಸಕ ಶಬ್ದಗಳು ಯಾವವು.	ನವಗ್ರಹವಾಚಕ ಶಬ್ದಗಳು ವರಾಹಾದಿಶಬ್ದಗಳು ಪುಂನಪುಂಸಕಲಿಂಗಗಳಾಗಿರುವವು.

ಉದಾಹರಣೆ.

ಸೂರ್ಯನುದಯಿಸಿದನು - ಉದಯಿಸಿತು.
ಬಸವನು - ಬಂದನು - ಬಂತು.

ಇತ್ಯಾದಿ.

ಪ್ರಶ್ನೆ.	ಉತ್ತರವು.
೧೮ - ಸ್ತ್ರೀನಪುಂಸಕಗಳು ಯಾವವು.	ದೇವತಾದಿಶಬ್ದಗಳು ಸ್ತ್ರೀನಪುಂಸಕಗಳು. ದೇವತೆ ವರವನಿತೆಯು - ಇತ್ತಿತು. ದೇವಶ್ರೀ-ಸಿರಿ - ಸರಸ್ವತಿ - ಹೆಂಡತಿ - ಶಾಸ್ತ್ರ - ಇತ್ಯಾದಿ.
೧೯ - ಪುಂಸ್ತ್ರೀಲಿಂಗಗಳಾದ ಶಬ್ದಗಳು ಯಾವವು.	ಮನುಷ್ಯಜಾತಿವಾಚಕ ಶಬ್ದಗಳು ಪುಂಸ್ತ್ರೀಲಿಂಗಗಳು - ಅದುವಾಚ್ಯಲಿಂಗವು - ವಾಚ್ಯಲಿಂಗವೆಂದರೆ ಅರ್ಥಾನುಗುಣಲಿಂಗವು. ಬ್ರಾಹ್ಮಣನು - ಬ್ರಾಹ್ಮಣಗಿತಿ - ಅರಸನು - ಅರಸಿತಿ. ಇತ್ಯಾದಿ.
೨೦ - ತ್ರಿಲಿಂಗವಾದ ಶಬ್ದಗಳು ಯಾವವು.	ಕರ್ತೃಕರ್ಮಕೃದಂತಗಳು ಗುಣವಾಚಕಗಳು ಆದ ವಂತಾಂತಗಳು ಅದುಮೊದಲಾದ ಶಬ್ದಗಳು ಮೂರುಲಿಂಗವು ಅರ್ಥವು ಯಾವಲಿಂಗವೋ ಆಲಿಂಗವಾಗಿರುವದು - ಮೂರುಲಿಂಗವೆಂದರೆ ವಾಚ್ಯಲಿಂಗವೆಂದು ಹೆಸರು. ಮಾಡುವನು - ಮಾಡುವಳು - ಮಾಡಿದುದು. ಕರಿಯನು - ಕರಿಯಳು - ಕರಿದು. ಅವನು - ಅವಳು - ಅದು. ಅದು - ಇದು - ಉದು - ಯಾವದು - ಕೆಲ - ಹಲ - ಎಷ್ಟು - ಅಷ್ಟು ಇಷ್ಟು - ಎಲ್ಲಾ ಇತ್ಯಾದಿಗಳು - ಅದ್ವಾದಿಗಳು.
೨೧ - ಲಿಂಗಭೇದವಿಲ್ಲದ ಶಬ್ದಗಳುಂಟೋ.	ನೀ - ನಾ - ತಾ - ಶಬ್ದಗಳು - ಅವ್ಯಯಾದಿಗಳು - ಲಿಂಗಭೇದವಿಲ್ಲದವು. ನೀನು - ಕರಿಯನು - ಕರಿಯಳು - ಕರಿದು - ಇತ್ಯಾದಿ.
೨೨ - ಸುಬ್ವಿಭಕ್ತಿಯೆಂದರೇನು.	ಒಂದು ಪದಾರ್ಥಕ್ಕೂ ಮತ್ತೊಂದು ಪದಾರ್ಥಕ್ಕೂ ಉಂಟಾದ ಸಂಬಂಧವ ಹೇಳುವ ಲಿಂಗದ ಮೇಗಣ ಪ್ರತ್ಯಯವು ಸುಬ್ವಿಭಕ್ತಿಪ್ರತ್ಯಯವು.
೨೩ - ಆ ಸುಪ್ರತ್ಯಯವೆಷ್ಟುವಿಧವು.	ಪ್ರಥಮೆ - ಸಂಬೋಧನಪ್ರಥಮೆ - ದ್ವಿತೀಯೆ - ತೃತೀಯೆ - ಚತುರ್ಥೀ - ಪಂಚಮಿ - ಷಷ್ಠಿ - ಸಪ್ತಮಿಗಳೆಂದು ಸುಬ್ವಿಭಕ್ತಿಪ್ರತ್ಯಯವೆಂಟುವಿಧವು.

ಪ್ರಶ್ನೆ	ಉತ್ತರವು
೨೪ - ಅವುಗಳ ಸ್ವರೂಪವೇನು.	ಉ - ಪ್ರಥಮೆ - ಏ - ಸಂಬೋಧನ ಪ್ರಥಮೆ - ಅ - ಅನ್ನು - ದ್ವಿತೀಯೆ - ಇಂದ - ತೃತೀಯೆ - ಗೆ - ಇಗೆ - ಅಕ್ಕೆ - ಚತುರ್ಥಿ - ಅದೆಸೆಯಿಂದ - ಪಂಚಮಿ - ಅ - ಷಷ್ಠಿ - ಅಲ್ಲಿ - ಸಪ್ತಮಿ.
೨೫ - ವಿಭಕ್ತಿಗಳೊಂದೊಂದೆಷ್ಟುವಿಧವಾಗಿರುವವು.	ಏಕವಚನವೆಂತಲೂ - ಬಹುವಚನವೆಂತಲೂ - ಎರಡುವಿಧವಾಗಿರುವವು - ಇವೆರಡಕ್ಕೂ ಪ್ರತ್ಯಯಗಳೊಂದೆ - ಆಗಮಾದೇಶಗಳಿಂದ ಭೇದ ತಿಳಿಯುತ್ತದೆ.
೨೬ - ಏಕವಚನವೆಲ್ಲಿ ಬರುತ್ತದೆ.	ಒಂದುವಸ್ತುವ ಹೇಳುವಾಗ ಬರುತ್ತದೆ.
೨೭ - ಬಹುವಚನವೆಲ್ಲಿ ಬರುತ್ತದೆ.	ಎರಡು ಮೊದಲು ಎಷ್ಟುವಸ್ತುಗಳ ಹೇಳಿದರೂ ಬಹುವಚನವೇ ಬರುತ್ತದೆ.
೨೮ - ಎಲ್ಲಾ ವಚನಗಳಲ್ಲಿಯೂ ಎಲ್ಲಾ ಲಿಂಗಕ್ಕೂ ಭೇದವುಂಟೋ.	ಏಕವಚನದಲ್ಲಿ ಎರಡು ಮೂರು ಲಿಂಗವಾದ ಶಬ್ದಗಳಲ್ಲಿ ಎರಡು ಮೂರು ಲಿಂಗಕ್ಕೂ ಭೇದವುಂಟು ಬಹುವಚನದಲ್ಲಿ ಪುಂಸ್ತ್ರೀಲಿಂಗಗಳಿಗೆ ಭೇದವಿಲ್ಲ ಅದಕ್ಕೆ ದ್ವಿಬಹುವಚನವೆಂದು ಹೆಸರು - ನಪುಂಸಕ ಬಹುವಚನಕ್ಕೆ ಬೇರೆ ಭೇದವುಂಟು.
೨೯ - ದ್ವಿತೀಯಾ ಚತುರ್ಥಿಗಳ ಎರಡು ರೂಪಗಳೂ ಎಲ್ಲಾ ಕಡೆಯಲ್ಲೂ ಬರುತ್ತವೆಯೋ.	ದ್ವಿತೀಯಾ ರೂಪವು ಸರ್ವತ್ರ ಬರುತ್ತದೆ - ಚತುರ್ಥಿಯಲ್ಲಿ ಪ್ರಕೃತಿಯ ಕಾರಾಂತವಾಗಿದ್ದರೆ - ಆ ಏಕವಚನದಲ್ಲಿ ಗೆ ಇಗೆ ಎರಡೂ ಬರುತ್ತದೆ - ನಪುಂಸಕೈಕವಚನಕ್ಕೆ - ಅಕ್ಕೆ ಬರುತ್ತದೆ ಆಕಾರ ಕಾಲವ್ಯಾಂತ್ಯೈಕವಚನಕ್ಕೆ ಗೆ ಮಾತ್ರ ಬರುತ್ತದೆ - ಉಕಾರಾಂತವಾದ ಗುಣವಚನಕ್ಕೆ - ಕೃದಂತಕ್ಕೆ ಅದ್ವ್ಯಾದಿಗೆ ಸಹ ನಪುಂಸಕದಲ್ಲಿ ಎರಡುವಚನದಲ್ಲಿಯೂ ಅಕ್ಕೆ ಬರುತ್ತದೆ - ಕದಮೆವರ್ಣಗಳ ಮೇಲೆ ಇಗೆ ಮಾತ್ರ ಬರುತ್ತದೆ.
೩೦ - ಬಹುವಚನದಲ್ಲೇನು ಆಗಮಗಳು ಬರುತ್ತವೆ.	ಅಕಾರಾಂತ ದ್ವಿಬಹುವಚನಕ್ಕೆ - ಅರ್ - ಅರುಗಳ್ - ಇವು ಬರುತ್ತವೆ - ನಪುಂಸಕದಲ್ಲಿ ಗಳ್ ಮಾತ್ರ ಬರುತ್ತದೆ - ಆಕಾರ ಕಾಲವ್ಯಾಂತ ದ್ವಿಬಹುವಚನಕ್ಕೆ - ಅರ್ - ಅರುಗಳ್ - ಗಳ್ - ಸಹ ಬರುತ್ತದೆ - ಕದಮೆವರ್ಣಗಳಂತಕ್ಕೆ ಮೂರು ಲಿಂಗದಲ್ಲಿ ಎಲ್ಲಾ ಅಂತಕ್ಕೂ ನಪುಂಸಕದಲ್ಲಿಯೂ ಗಳ್ - ಮಾತ್ರ ಬರುತ್ತದೆ.

೫೦ - ಏಕವಚನದಲ್ಲೇನು ಬರುತ್ತದೆ.

ಪುಲ್ಲಿಂಗದಲ್ಲಿ ಅಕಾರಾಂತಕ್ಕೆ ಸ್ವರಾದಿವಿಭಕ್ತಿ ಪರವಾಗಲು ನಕಾರಾಗಮವು - ಸ್ತ್ರೀಲಿಂಗದಲ್ಲಿ ಳಕಾರಾಗಮ ಸಾರ್ವತ್ರಿಕವಾಗಿ ಬರುತ್ತದೆ - ನಪುಂಸಕದಲ್ಲಿ ಚತುರ್ಥಿಯುಳಿದ ತೃತೀಯಾದಿಗಳಲ್ಲಿ ದಕಾರಾಗಮವು - ಪ್ರಥಮೆ ದ್ವಿತೀಯೆ ಸಂಬೋಧನಗಳಲ್ಲಿ ಮಕಾರಾಗಮವು ಬರುತ್ತದೆ - ಅವರ್ಣಾಂತಾಲವ್ಯಾಂತಗಳನ್ನುಳಿದ ಕಡಮೆ ವರ್ಣಗಳಿಗೆ ಚತುರ್ಥಿಯುಳಿದ ತೃತೀಯಾದಿಗಳು ಪರವಾಗಲು - ಗ್ಉ ಆಗಮ ಬರುತ್ತದೆ.

೫೧ - ಸಂಬೋಧನದಲ್ಲೇನು ವಿಶೇಷವು.

ಸಂಬೋಧನ ಪ್ರಥಮೆಗೆ ಏಕವಚನದಲ್ಲಿ ವಿಕಲ್ಪವಾಗಿ ಲೋಪ ಬರುತ್ತದೆ - ಬಹುವಚನದಲ್ಲಿ ಲೋಪ ಬಂದಾಗಲೂ ಬಾರದಾಗಲು - ದೀರ್ಘ ವಿಕಲ್ಪವಾಗಿ ಬರುತ್ತದೆ - ಲೋಪ ಬಂದಾಗ ಪ್ರಕೃತಿಗೆ ದೀರ್ಘವು - ಬಾರದಾಗ ಪ್ರತ್ಯಯಕ್ಕೆ ದೀರ್ಘ ಬರುತ್ತದೆ.

ಉದಾಹರಣೆ.

	ಏಕವಚನವು.	ಬಹುವಚನವು.	
ಪ್ರ	ರಾಮನು	ರಾಮರು	ರಾಮರುಗಳು.
ಸಂ	ರಾಮನೆ - ರಾಮನೇ	ರಾಮರೆ	ರಾಮರುಗಳೆ.
	ರಾಮ - ರಾಮಾ	ರಾಮರೇ	ರಾಮರುಗಳೇ.
ದ್ವಿ	ರಾಮನ - ರಾಮನನ್ನು	ರಾಮರ	ರಾಮರುಗಳ.
		ರಾಮರನ್ನು	ರಾಮರುಗಳನ್ನು.
ತೃ	ರಾಮನಿಂದ	ರಾಮರಿಂದ	ರಾಮರುಗಳಿಂದ.
ಚ	ರಾಮನಿಗೆ - ರಾಮಗೆ	ರಾಮರಿಗೆ	ರಾಮರುಗಳಿಗೆ.
ಪಂ	ರಾಮನದೆಸೆಯಿಂದ	ರಾಮರದೆಸೆಯಿಂದ	ರಾಮರುಗಳದೆಸೆಯಿಂದ.
ಷ	ರಾಮನ	ರಾಮರ	ರಾಮರುಗಳ.
ಸ	ರಾಮನಲ್ಲಿ	ರಾಮರಲ್ಲಿ	ರಾಮರುಗಳಲ್ಲಿ.

ಹೀಂಗೆ ಅರಸ - ಕೃಷ್ಣ - ಗೋವಿಂದ - ಮುಂತಾದ ಶಬ್ದಗಳ ಹೇಳಿಕೊಳ್ಳುವದು.

	ಏಕವಚನವು.			ಬಹುವಚನವು.
ಪ್ರ -	ಗಜವು			ಗಜಗಳು.
ಸಂ -	ಗಜವೆ	ಗಜವೇ		ಗಜಗಳೆ.
	ಗಜ	ಗಜಾ		ಗಜಗಳೇ.
ದ್ವಿ -	ಗಜವ	ಗಜವನ್ನು	ಗಜಗಳ	ಗಜಗಳನ್ನು.
ತೃ -	ಗಜದಿಂದ			ಗಜಗಳಿಂದ.
ಚ -	ಗಜಕ್ಕೆ			ಗಜಗಳಿಗೆ.
ಪ -	ಗಜದ ದೆಸೆಯಿಂದ			ಗಜಗಳ ದೆಸೆಯಿಂದ.
ಷ -	ಗಜದ			ಗಜಗಳ.
ಸ -	ಗಜದಲ್ಲಿ			ಗಜಗಳಲ್ಲಿ.

ಹೀಂಗೆ ಮರ ಕಂಬ ಮೊದಲಾದ ಶಬ್ದಗಳನ್ನೂ ಹೇಳಿಕೊಳ್ಳುವದು.

೩೩ - ಇದಕ್ಕಪವಾದವುಂಟಾ.

ಗರುಡಾದಿ ಶಬ್ದಗಳಿಗೇಕವಚನದಲ್ಲಿ ಸ್ವರಾದಿ ವಿಭಕ್ತಿಗಳು ಪರವಾಗಲು ನಕಾರಾಗಮವೂ - ಚತುರ್ಥಿಯಲ್ಲಿ ಗೆ - ಇಗೆಗಳು ಬರುತ್ತವೆ - ಕಡಿಮೆಯೆಲ್ಲಾ ರಾಮ ಶಬ್ದದ ಹಾಂಗೆ.

ಪ್ರ - ಏ - ಗರುಡನು - ಬ - ಗರುಡಗಳು.
ಚ - ಏ - ಗರುಡಗೆ - ಗರುಡನಿಗೆ - ಬ - ಗರುಡಗಳಿಗೆ.

ಕಡಮೆಯೆಲ್ಲಾ ಏಕವಚನದಲ್ಲಿ ರಾಮಶಬ್ದದ ಹಾಂಗೂ ಬಹುವಚನದಲ್ಲಿ ಗಜಶಬ್ದದ ಹಾಂಗೂ ಹೇಳಿಕೊಳ್ಳುವದು.

ಗರುಡ - ಕಮಠ - ಕೋಣ - ವರಾಹ - ಬಸವ - ಇತ್ಯಾದಿಗಳು ಗರುಡಾದಿಗಳು.

ಆಕಾರಾಂತೋದಾಹರಣೆ.

ಆಕಾರಾಂತಕ್ಕೆ ನಪುಂಸಕದಲ್ಲಿ ಜ್ಯಾ ಶಬ್ದವು - ಜ್ಯಾ ಎಂದರೆ ಭೂಮಿಯೂ - ಬಿಲ್ಲಿನ ಹೆದೆಯೂ.

	ಏಕವಚನವು.		ಬಹುವಚನವು.	
ಪ್ರ -	ಜ್ಯಾಯು			ಜ್ಯಾಗಳು.
ಸಂ -	ಜ್ಯಾಯೆ	ಜ್ಯಾಯೇ	ಜ್ಯಾಗಳೆ	ಜ್ಯಾಗಳೇ.

ದ್ವಿ - ಜ್ಯಾಯ - ಜ್ಯಾಯನ್ನು - ಜ್ಯಾಗಳ - ಜ್ಯಾಗಳನ್ನು.
ತೃ - ಜ್ಯಾಯಿಂದ - - - - ಜ್ಯಾಗಳಿಂದ.
ಚ - ಜ್ಯಾಗೆ - - - ಜ್ಯಾಗಳಿಗೆ.
ಪ - ಜ್ಯಾಯದೆಸೆಯಿಂದ - - - ಜ್ಯಾಗಳ ದೆಸೆಯಿಂದ.
ಷ - ಜ್ಯಾಯ - - - - ಜ್ಯಾಗಳ.
ಸ - ಜ್ಯಾಯಲ್ಲಿ - - - - ಜ್ಯಾಗಳಲ್ಲಿ.

ಇಂತೆಮಾ ಶಬ್ದಮೊದಲಾದವು.

ಋಕಾರಾಂತ ಪುಲ್ಲಿಂಗಕ್ಕುದಾಹರಣೆ.

ಏಕವಚನವು. ಬಹುವಚನವು.

ಪ್ರ - ಹರಿಯು - ಹರಿ - ಹರಿಯರು - ಹರಿಯರುಗಳು - ಹರಿಗಳು.
ಸಂ - { ಹರಿಯೆ - ಹರಿಯೇ } ಹರಿಯರೆ - ಹರಿಯರುಗಳೆ - ಹರಿಗಳೆ.
{ ಹರಿ - ಹರೀ } ಹರಿಯರೇ - ಹರಿಯರುಗಳೇ - ಹರಿಗಳೇ
ದ್ವಿ - ಹರಿಯ - ಹರಿಯನ್ನು - ಹರಿಯರ - ಹರಿಯರುಗಳ - ಹರಿಗಳ.
ತೃ - ಹರಿಯಿಂದ - - - ಹರಿಯರಿಂದ - ಇತ್ಯಾದಿ.
ಚ - ಹರಿಗೆ - - - ಹರಿಯರಿಗೆ - ಇತ್ಯಾದಿ.
ಪ - ಹರಿಯದೆಸೆಯಿಂದ - - ಹರಿಯರ ದೆಸೆಯಿಂದ - ಇತ್ಯಾದಿ.
ಷ - ಹರಿಯ - - ಹರಿಯರ - ಇತ್ಯಾದಿ.
ಸ - ಹರಿಯಲ್ಲಿ - - - ಹರಿಯರಲ್ಲಿ - ಇತ್ಯಾದಿ.

ಋಕಾರಾಂತ ನಪುಂಸಕಕ್ಕೆ ಬಹುವಚನದಲ್ಲಿ - ಅರ್ - ಅರುಗಳಿಲ್ಲವು - ಹರಿಯು - ಹರಿಗಳು - ಇತ್ಯಾದಿ - ಹರಿಶಬ್ದದ ಹಾಂಗೆ, ಇಂತೇ - ಈಕಾರಾಂತಕ್ಕೆ ಶ್ರೀಶಬ್ದ - ಏಕಾರಾಂತಕ್ಕೆ ರಮೆ ಮನೆ ಮೊದಲಾದ ಶಬ್ದಗಳು - ಐಕಾರಾಂತಕ್ಕೆ ಕೈ ಮೊದಲಾದ ಶಬ್ದಗಳು ಉದಾಹರಣೆಯಾಗಿ ಹೇಳಿಕೊಳ್ಳುವದು.

ಋೠ - ಌೡ - ಏಐ - ಓಔ - ಇವುಗಳಿಗೆ ಲಿಂಗಭೇದವುಂಟೋ.

ಈ ವರ್ಣಾಂತ ಶಬ್ದಗಳಿಗೆ ಮೂರು ಲಿಂಗದಲ್ಲಿಯೂ ಭೇದವಿಲ್ಲ.

ಉಕಾರಾಂತ ಪುಲ್ಲಿಂಗ ಗುರು ಶಬ್ದ.

	ಏಕವಚನವು.			ಬಹುವಚನವು.
ಪ್ರ	ಗುರುವು	-	-	ಗುರುಗಳು.
ಸಂ	ಗುರುವೆ ಗುರು	ಗುರುವೇ ಗುರೂ	-	ಗುರುಗಳೆ. ಗುರುಗಳೇ.
ದ್ವಿ	ಗುರುವ	ಗುರುವನ್ನು	ಗುರುಗಳ	ಗುರುಗಳನ್ನು.
ತೃ	ಗುರುವಿಂದ ಗುರುವಿನಿಂದ	-	-	ಗುರುಗಳಿಂದ.
ಚ	ಗುರುವಿಗೆ	-	-	ಗುರುಗಳಿಗೆ.
ಪ	ಗುರುವಿನ ದೆಸೆಯಿಂದ ಗುರುವ ದೆಸೆಯಿಂದ	-	-	ಗುರುಗಳ ದೆಸೆಯಿಂದ.
ಷ	ಗುರುವಿನ ಗುರುವ	-	ಗುರುಗಳ	
ಸ	ಗುರುವಿನಲ್ಲಿ ಗುರುವಲ್ಲಿ	-	-	ಗುರುಗಳಲ್ಲಿ.

ಹೀಂಗೆ ಉಕಾರಾಂತ ಸ್ತ್ರೀಲಿಂಗಕ್ಕೆ ವಧು ಮೊದಲಾದ್ದು - ನಪುಂಸಕಕ್ಕೆ - ಹೂಸು ಮೊದಲಾದ್ದು - ಋಕಾರಾಂತ ಪುಲ್ಲಿಂಗಕ್ಕೆ - ಪಿತೃ ಮೊದಲಾದ್ದು - ಸ್ತ್ರೀಲಿಂಗಕ್ಕೆ - ಮಾತೃ - ಮೊದಲಾದ್ದು - ನಪುಂಸಕಕ್ಕೆ - ಕರ್ತೃ ಮೊದಲಾದ್ದು - ೠಕಾರಾಂತಕ್ಕೆ - ೠ ಮೊದಲಾದ್ದು - ಓಕಾರಾಂತಕ್ಕೆ - ಗೋ ಮೊದಲಾದ್ದು - ಔಕಾರಾಂತಕ್ಕೆ ಗ್ಲೌ ಮೊದಲಾದ್ದು - ಉದಾಹರಣೆಗಳು ಅವುಗಳ ಗುರು ಶಬ್ದದ ಹಾಂಗೆ ಹೇಳಿಕ್ಕೊಳ್ಳುವದು.

೩೭ - ಇದಕ್ಕಪವಾದವುಂಟಾ.

ಗಂಡಸು - ಹೆಂಗಸು - ಶಬ್ದಗಳಿಗೆ ಬಹುವಚನದಲ್ಲಿ ಅರ್ - ಅರುಗಳ್ - ಗಳ್ - ಇವು ಮೂರಾಗಮಗಳೂ ಬರುತ್ತವೆ ಕಡಮೆಯೆಲ್ಲಾ ಗುರು ಶಬ್ದದ ಹಾಂಗೆ.

ಏ - ಗಂಡಸು - ಬ - ಗಂಡಸರು - ಗಂಡಸರುಗಳು - ಗಂಡಸುಗಳು - ಇತ್ಯಾದಿ.

೩೭ - ಮೇಲಿಹೇಳಿದಸಾಮಾನ್ಯವಾದವಿಧಿಗೆಲ್ಲಾದರೂ ಅಪವಾದವುಂಟೋ.

ಬಂಧುವಾಚಕ - ಗುಣವಾಚಕ - ಕೃದಂತ - ಸಂಖ್ಯಾವಾಚಕ ಅದ್ವಾದಿ - ಕಾಲವಾಚಕ - ದೇಶವಾಚಕ - ಪರಿಮಾಣವಾಚಕ - ಅಲಿಂಗಶಬ್ದ - ಇವುಗಳಲ್ಲಿ ವಿಶೇಷವುಂಟು.

೩೮ - ಬಂಧುವಾಚಕಕ್ಕೇನು ವಿಶೇಷವು.

ಅಕಾರಾಂತವಾದ ಬಂಧುವಾಚಕಕ್ಕೆ - ಬಹುವಚನದಲ್ಲಿ ಅಂದಿರ್ - ಅಂದಿರುಗಳೆಂಬಾಗಮಗಳು ಬರುತ್ತವೆ - ಅಮ್ಮಾದಿಗಳಿಗೆ - ಏಕವಚನದಲ್ಲಿ ಪುಲ್ಲಿಂಗದ ಹಾಂಗೆ ರೂಪವಾಗುತ್ತದೆ ತಾಲವ್ಯಾಂತಗಳಿಗೆ - ಬಹುವಚನದಲ್ಲಿ ಅರ್ - ಅರುಗಳ್ - ಅಂದಿರ್ ಅಂದಿರುಗಳ್ - ಗಳ್ - ಎಂದೈದಾಗಮಗಳೂ ಬರುತ್ತವೆ - ಸಂಬೋಧನ ಬಹುವಚನಕ್ಕೆ - ವಿಕಲ್ಪವಾಗಿ ಇರ - ಆದೇಶ ಬರುತ್ತದೆ.

	ಏಕವಚನವು.	ಬಹುವಚನವು.
ಪ್ರ	ಅಪ್ಪನು	ಅಪ್ಪಂದಿರು - ಅಪ್ಪಂದಿರುಗಳು.
ಸಂ	ಅಪ್ಪನೆ	ಅಪ್ಪಂದಿರೆ - ಅಪ್ಪಂದಿರುಗಳೆ. ಅಪ್ಪಂದಿರಿರ - ಅಪ್ಪಂದಿರುಗಳಿರ. ಅಪ್ಪಂದಿರಿರಾ - ಅಪ್ಪಂದಿರುಗಳಿರಾ.

ಇತ್ಯಾದಿಗಳ ಕಡೆಗೂ ನೋಡಿಕೊಳ್ಳುವದು.

	ಏಕವಚನವು.	ಬಹುವಚನವು.	
ಪ್ರ	ಅಮ್ಮನು	ಅಂಮ್ಮಂದಿರು	ಅಂಮ್ಮಂದಿರುಗಳು.
ಸಂ	ಅಮ್ಮ ಅಮ್ಮಾ	ಅಂಮ್ಮಂದಿರಿರ ಅಂಮ್ಮಂದೀರಿರಾ	ಅಂಮ್ಮಂದಿರುಗಳಿರ. ಅಂಮ್ಮಂದೀರುಗಳಿರಾ.

ಹೀಂಗೆ - ಅಕ್ಕನು - ಅವ್ವನು - ಮಾತರನು - ಇತ್ಯಾದಿಗಳು ಅಮ್ಮಾದಿಗಳು - ಅಮ್ಮಶಬ್ದದ ಹಾಂಗಾಗುತ್ತವೆ.

೩೯ - ಮಗಶಬ್ದಕ್ಕೆರೂಪಹ್ಯಾಂಗೆ.

ಮಗಶಬ್ದಕ್ಕೆ - ಮೂರು ಲಿಂಗವೂ - ಉಂಟು - ಪುಲ್ಲಿಂಗದಲ್ಲೈಕವಚನದಲ್ಲಿ - ಮಗ - ಎಂದಾಗುತ್ತದೆ - ಸ್ತ್ರೀಲಿಂಗೈಕವಚನದಲ್ಲಿಯೂ - ಮಗ ಎಂದಾಗುತ್ತದೆ - ದ್ವಿಬಹುವಚನದಲ್ಲಿ ಮಕ್ಕಳ್ - ಎಂದಾಗುತ್ತದೆ - ಹೆಣ್ಣುಗಂಡೆಂಬವಿಶೇಷವಿವಕ್ಷೆಯಿಲ್ಲದಾಗ - ಮಗಶಬ್ದ ಉಕಾರಾಂತನಪುಂಸಕವು - ಅದಕ್ಕೂ ಬಹುವಚನದಲ್ಲಿ ಮಕ್ಕಳ್ - ಎಂದೇಆಗುತ್ತದೆ.

	ಪುಮೇಕ.	ಸ್ತ್ರ್ಯೇಕ.	ನಬೇಕ.	ತ್ರ್ಯೇಕ.
ಪ್ರ	ಮಗನು	ಮಗಳು	ಮಗುವು	ಮಕ್ಕಳು.
ಸಂ	ಮಗನೆ	ಮಗಳೆ	ಮಗುವೆ	ಮಕ್ಕಳೆ - ಮಕ್ಕಳಿರ.
ದ್ವಿ	ಮಗನನ್ನು	ಮಗಳನ್ನು	ಮಗುವನ್ನು	ಮಕ್ಕಳನ್ನು.
ತೃ	ಮಗನಿಂದ	ಮಗಳಿಂದ	ಮಗುವಿನಿಂದ / ಮಗುವಿಂದ	ಮಕ್ಕಳಿಂದ.
ಚ	ಮಗಗೆ / ಮಗನಿಗೆ	ಮಗಳಿಗೆ	ಮಗುವಿಗೆ	ಮಕ್ಕಳಿಗೆ.
ಪ	ಮಗನ ದೆಸೆಯಿಂದ	ಮಗಳ ದೆಸೆಯಿಂದ	ಮಗುವಿನ ದೆಸೆಯಿಂದ / ಮಗುವ ದೆಸೆಯಿಂದ	ಮಕ್ಕಳ ದೆಸೆಯಿಂದ.
ಷ	ಮಗನ	ಮಗಳ	ಮಗುವ / ಮಗುವಿನ	ಮಕ್ಕಳ.
ಸ	ಮಗನಲ್ಲಿ	ಮಗಳಲ್ಲಿ	ಮಗುವಲ್ಲಿ / ಮಗುವಿನಲ್ಲಿ	ಮಕ್ಕಳಲ್ಲಿ.

ಇಕಾರಾಂತ ಸ್ತ್ರೀಲಿಂಗದಲ್ಲಿ - ಏ - ಅಜ್ಜಿಯು - ಬ - ಅಜ್ಜಿಯರು ಅಜ್ಜಿಯರುಗಳು - ಅಜ್ಜಿಯಂದಿರು - ಅಜ್ಜಿಯಂದಿರುಗಳು - ಅಜ್ಜಿಗಳು - ಇತ್ಯಾದಿ.

ಹೆಂಗಿತೆಂಡೆ ಸೊಸೆ ಮೊದಲಾದ ಎಕಾರಾಂತ ಶಬ್ದಗಳನ್ನು ನೋಡಿಕೊಳ್ಳುವದು.

೩೯ - ಗುಣವಾಚಕಗಳ ಲಿಂಗವಿಶೇಷವು.

ಗುಣವಾಚಕಗಳು ವಸ್ತುವನ್ನು - ಅದರಲ್ಲಿರುವ ಧರ್ಮವನ್ನು ಸೂಚಿಸುತ್ತವೆ - ಧರ್ಮವನ್ನುದ್ದೇಶಿಸುವಾಗ ನಪುಂಸಕವು ವಸ್ತುವನ್ನುದ್ದೇಶಿಸುವಾಗ ವಾಚ್ಯಲಿಂಗವು.

೪೦ - ಇವು ಯೆಷ್ಟು ವರ್ಣಾಂತಗಳು.

ಅ - ಇ - ಉ - ಎ - ಈ ನಾಲ್ಕು ವರ್ಣಾಂತಗಳು.

೪೧ - ಡು ವ ದು ವರ್ಣಾಂತಗಳಿಗೆ ವಿಶೇಷವುಂಟೆ.

ಡು - ದು - ಶಬ್ದಾಂತಗಳನ್ನುಳಿದ ಕಡೆ ಮಿಕ್ಕ ಗುಣವಾಚಕಗಳಿಗೆ ವಿಶೇಷವಿಲ್ಲ.

೪೨ - ದುಶಬ್ದಾಂತಕ್ಕೇನು ಬರುತ್ತದೆ.

ದುಶಬ್ದಾಂತಕ್ಕೆ ಪುಂಸ್ತ್ರೀಲಿಂಗಗಳಲ್ಲಿಯೂ ನಪುಂಸಕಬಹುವಚನದಲ್ಲಿಯೂ ದುಶಬ್ದಕ್ಕೆ ಅಕಾರಾದೇಶ ಬರುತ್ತದೆ - ಕ

ಪ್ರಶ್ನೆ. ಉತ್ತರವು.

ಇವೆಯೆಲ್ಲಾ ಮೊದಲು ಹೇಳಿದ ಸಾಮಾನ್ಯಸೂತ್ರದ ಮೇರೆಗೆ ನಪುಂಸಕದಲ್ಲಿ ಚತುರ್ಥಿಯುಳಿದ ತೃತೀಯಾದಿಗಳಲ್ಲಿ ಅಕಾರಾಗಮ ಬರುತ್ತದೆ - ಚತುರ್ಥಿಗೆ ಅಕ್ಕೆ ಮಾತ್ರ ಬರುತ್ತದೆ - ಬಹುವಚನದಲ್ಲಿ - ವು - ವುಗಳೆಂಬಾಗಮಗಳು ಸಹಾ ಬರುತ್ತದೆ - ವು ಶಬ್ದಾಗಮ ಬಂದಾಗ ಏಕವಚನಕ್ಕೆ ಹೇಳಿದ ರೂಪವೆಲ್ಲಾ ಬರುತ್ತದೆ.

	ಪುಏ.	ಸ್ತ್ರೀಏ.	ದ್ವಿಬ.	
ಪ್ರ	ಕರಿಯನು	ಕರಿಯಳು	ಕರಿಯರು	ಕರಿಯರುಗಳು.
ಸಂ	ಕರಿಯನೆ	ಕರಿಯಳೆ	ಕರಿಯರೆ	ಕರಿಯರುಗಳೆ.
ದ್ವಿ	ಕರಿಯನ	ಕರಿಯಳ	ಕರಿಯರ	ಕರಿಯರುಗಳ.
ತೃ	ಕರಿಯನಿಂದ	ಕರಿಯಳಿಂದ	ಕರಿಯರಿಂದ	ಕರಿಯರುಗಳಿಂದ.
ಚ	ಕರಿಯಗೆ, ಕರಿಯನಿಗೆ	ಕರಿಯಳಿಗೆ	ಕರಿಯರಿಗೆ	ಕರಿಯರುಗಳಿಗೆ.
ಪ	ಕರಿಯನ ದೆಸೆಯಿಂದ	ಕರಿಯಳ ದೆಸೆಯಿಂದ	ಕರಿಯರ ದೆಸೆಯಿಂದ	ಕರಿಯರುಗಳ ದೆಸೆಯಿಂದ
ಷ	ಕರಿಯನ	ಕರಿಯಳ	ಕರಿಯರ	ಕರಿಯರುಗಳ.
ಸ	ಕರಿಯನಲ್ಲಿ	ಕರಿಯಳಲ್ಲಿ	ಕರಿಯರಲ್ಲಿ	ಕರಿಯರುಗಳಲ್ಲಿ.

	ನಏ.	ನಬ.	
ಪ್ರ	ಕರಿದು	ಕರಿಯವು	ಕರಿಯವುಗಳು.
ಸಂ	ಕರಿದೆ	ಕರಿಯವೆ	ಕರಿಯವುಗಳೆ.
ದ್ವಿ	ಕರಿದ	ಕರಿಯವ	ಕರಿಯವುಗಳ.
ತೃ	ಕರಿದರಿಂದ	ಕರಿಯವರಿಂದ	ಕರಿಯವುಗಳಿಂದ.
ಚ	ಕರಿದಕ್ಕೆ	ಕರಿಯವಕ್ಕೆ	ಕರಿಯವುಗಳಿಗೆ
ಪ	ಕರಿದರ ದೆಸೆಯಿಂದ	ಕರಿಯವರ ದೆಸೆಯಿಂದ	ಕರಿಯವುಗಳ ದೆಸೆಯಿಂದ.
ಷ	ಕರಿದರ	ಕರಿಯವರ	ಕರಿಯವುಗಳ.
ಸ	ಕರಿದರಲ್ಲಿ	ಕರಿಯವರಲ್ಲಿ	ಕರಿಯವುಗಳಲ್ಲಿ.

ಹೀಂಗೆ ಬಿಳುಪು ಮೊದಲಾದ ಶಬ್ದಗಳಿಗೂ ಹೇಳಿಕೊಳ್ಳುವದು.

೪೩ - ಇದಕ್ಕಪವಾದವುಂಟೊ.

ಎಳೆದು ಶಬ್ದಕ್ಕೆ ಪುಂಸ್ತ್ರೀಲಿಂಗಗಳಲ್ಲಿಯೂ ನಪುಂಸಕಬಹುವಚನದಲ್ಲಿ ಎಳೆದು ಶಬ್ದದ ದುವಿಗೆ ಎಯ ಎಂಬಾದೇಶ ಬರುತ್ತದೆ - ಕಡಮೆಯೆಲ್ಲಾ ಕರಿದು ಶಬ್ದದ ಹಾಗೆ ನೋಡಿಕೊಳ್ಳಬಹುದು.

ಎಳೆಯನು - ಎಳೆಯಳು - ಎಳೆಯದು - ಎಳೆಯರುಗಳು ಎಳೆದು - ಎಳೆಯವು - ಎಳೆಯವುಗಳು - ಎಳೆದರಿಂದ - ಎಳೆದಕ್ಕೆ - ಎಳೆಯವರಿಂದ - ಎಳೆಯವಕ್ಕೆ - ಇತ್ಯಾದಿ.

೪೪ - ಇನ್ನ್ಯಾವಶಬ್ದದಲ್ಲಿ ವಿಶೇಷವುಂಟು.

ಹಳದು ಶಬ್ದದ ದುವಿಗೆ ಪುಂಸ್ತ್ರೀಲಿಂಗಗಳಲ್ಲಿ ಬಶಬ್ದವಾದೇಶವಾಗಿ ಬರುತ್ತದೆ - ನಪುಂಸಕಬಹುವಚನದಲ್ಲಿ ದುವಿಗೆ ಎಯ ಆದೇಶ ಬರುತ್ತದೆ - ಕಡಮೆಯೆಲ್ಲಾ ಕರಿದು ಶಬದ ಹಾಗೆ.

ಹಳಬನು - ಹಳಬಳು - ಹಳಬರು - ಹಳಬರುಗಳು ಹಳದು - ಹಳೆಯವು - ಹಳೆಯವುಗಳು - ಹಳದರಿಂದ - ಹಳೆಯವರಿಂದ - ಹಳೆಯವುಗಳಿಂದ - ಹಳಬಗೆ - ಹಳಬನಿಗೆ ಹಳಬಳಿಗೆ - ಹಳದಕ್ಕೆ - ಹಳೆಯವಕ್ಕೆ - ಇತ್ಯಾದಿ.

೪೫ - ತು ಅಂತವಾದ ಗುಣವಾಚಕಗಳಿಗೆ ರೂಪದಲ್ಲಿ ವಿಶೇಷವುಂಟಾ.

ತು ಶಬ್ದಾಂತವಾದ ಗುಣವಾಚಕಗಳ ದುವಿಗೆ ಪುಂಸ್ತ್ರೀಲಿಂಗಗಳಲ್ಲಿ ದ ಶಬ್ದವಾದೇಶವಾಗಿ ಬರುತ್ತದೆ - ಕಡಮೆಯೆಲ್ಲಾ ಕರಿದು ಶಬ್ದದ ಹಾಗೆ - ನಪುಂಸಕದ ಬಹುವಚನದಲ್ಲಿಯು ಷಷ್ಠೀಕಾರಕ್ಕೆ ದಕಾರಾಗಮವೂ - ಏಕವಚನದಲ್ಲಿ ಚತುರ್ಥ್ಯಾ ಉಳಿದ ತೃತೀಯಾದಿಗಳಿಗೆ ಅರ್ - ಆಗಮ - ಆ ಚತುರ್ಥಿಗೆ ಅಕ್ಕೆ ಸಹ ಬರುತ್ತವೆ.

ಒಳಿತು - ಒಳ್ಳಿದ.

ಒಳ್ಳಿದನು - ಒಳ್ಳಿದಳು - ಒಳ್ಳಿದರು - ಒಳ್ಳಿದರುಗಳು - ಒಳ್ಳಿತು ಒಳ್ಳಿದುವು - ಒಳ್ಳಿದುವುಗಳು - ಒಳ್ಳಿದಗೆ - ಒಳ್ಳಿದನಿಗೆ - ಒಳ್ಳಿದರಿಂದ - ಒಳ್ಳಿದುವರಿಂದ - ಒಳ್ಳಿತಕ್ಕೆ - ಒಳ್ಳಿದುವಕ್ಕೆ - ಒಳ್ಳಿದುವುಗಳಿಗೆ ಇತ್ಯಾದಿ.

೪೬ - ಇದಕ್ಕೆಲ್ಲಾದರೂ ಅಪವಾದವುಂಟೋ.

ಹೊಸತು ಶಬ್ದದ ದುವಿಗೆ ಪುಂಸ್ತ್ರೀಲಿಂಗಗಳಲ್ಲಿ - ಬಶಬ್ದವಾದೇಶವಾಗಿ ಬರುತ್ತದೆ - ಕಡೆಯೆಲ್ಲಾ ಬಳ್ಳಿರು ಶಬ್ದದ ಹಾಂಗೆ.

ಹೊಸಬನು - ಹೊಸಬಳು - ಹೊಸಬರು - ಹೊಸಬರುಗಳು - ಹೊಸತು - ಹೊಸದುವು - ಹೊಸದುವುಗಳು - ಇತ್ಯಾದಿ.

೪೭ - ಇನ್ನ್ಯಾವ ಶಬ್ದಗಳಿಗಾದರೂ ಗುಣವಚನಗಳ ಹಾಂಗೆ ರೂಪ ಬರುತ್ತದೆಯೋ.

ದು ಅಂತವಾದ ಕೃದಂತಗಳಿಗೆ ದು ಅಂತವಾದ ಗುಣವಾಚಕಗಳ ಹಾಂಗೆ ರೂಪವು - ಅದರ ಹಾಂಗೆ ಸ್ತ್ರೀಲಿಂಗದಲ್ಲಿ ನಪುಂಸಕ ಬಹುವಚನದಲ್ಲಿ ಳಕಾರಾಗಮ - ವು - ವುಗಳ್ - ಊಗಮಗಳು ವಶಬ್ದಾಗಮ ಬಂದಾಗ ಏಕವಚನದಲ್ಲಿಯೂ - ತೃತೀಯಾದಿಗಳಲ್ಲಿ ಅರ್ ಊಗಮ - ಚತುರ್ಥಿಗೆ ಅಕ್ಕೆ ಸಹ ಬರುತ್ತದೆ.

ಭೂತಕಾಲದ ಉಪ ಪ್ರತ್ಯಯಕ್ಕೆ.

ಮಾಡಿದನು - ಮಾಡಿದಳು - ಮಾಡಿದರು - ಮಾಡಿದರುಗಳು ಮಾಡಿದುದು - ಮಾಡಿದ್ದು - ಮಾಡಿದವು - ಮಾಡಿದವುಗಳು - ಮಾಡಿದುದರಿಂದ - ಮಾಡಿದ್ದರಿಂದ - ಮಾಡಿದವರಿಂದ - ಮಾಡಿದುದಕ್ಕೆ - ಮಾಡಿದ್ದಕ್ಕೆ - ಮಾಡಿದವಕ್ಕೆ.

ಹೀಂಗೆ ಮಾಡುವನು - ಮಾಡುವಳು - ಇತ್ಯಾದಿಗಳು - ಭವಿಷ್ಯತ್ಕಾಲದಲ್ಲಿಯೂ ನೋಡಿಕೊಳ್ಳುವದು.

೪೮ - ಭಾವೆಯಲ್ಲಿ ಹ್ಯಾಂಗೆ.

ಭಾವೆಯಲ್ಲಿ ನಿತ್ಯ ನಪುಂಸಕವಾದ್ದರಿಂದ ಕರಿದು ಶಬ್ದದ ಹಾಂಗೆ ಹೇಳಿಕೊಳ್ಳುವದು.

ಮಾಡುವದು - ಮಾಡುವವು - ಮಾಡುವವುಗಳು - ಮಾಡುವದರಿಂದ - ಮಾಡುವವರಿಂದ - ಮಾಡುವದಕ್ಕೆ - ಮಾಡುವವಕ್ಕೆ.

ಇತ್ಯಾದಿ ಕರಿದಿನ ಹಾಂಗೆ ಕಡಿಸಿ ಹೇಳಿಕೊಳ್ಳುವದು.

೪೯ - ಅದು ಇದು ಉದು ಶಬ್ದಗಳಿಗೆ ಸ್ವರೂಪದಲ್ಲಿ ವಿಶೇಷವು.

ಇವುಗಳ ದುವಿಗೆ ಪುಂಸ್ತ್ರೀಲಿಂಗಗಳಲ್ಲಿ - ವಶಬ್ದವಾದೇಶವಾಗಿ ಬರುತ್ತದೆ - ಕಡೆಯೆಲ್ಲಾ ಕರಿಯ ಶಬ್ದದ ಹಾಂಗೆ - ನಪುಂಸಕ ಬಹುವಚನದಲ್ಲಿ ದಕಾರಕ್ಕೆ ವಕಾರಾದೇಶ ಬರುತ್ತದೆ. ಒಂದು ವೇಳೆ ವಕಾರಾದೇಶ ಬಂದ ಮೇಲೆ ಗಳಾಗಮ ಸಹ ಬರುವದುಂಟು - ದ್ವಿಬಹುವಚನದಲ್ಲಿ ಅರ್ ಅರುಗಳಲ್ಲಿ ದಿಕಂದಿರ್ - ಅಂದರು ಗಳ್ - ಊಗಮಗಳು ಸಹ ಬರುತ್ತವೆ.

ಇನ್ನುಮೇಲೆ ಹೇಳುವ ಶಬ್ದಗಳಿಗೆ ಸಂಬೋಧನ ಬಹುತರವಾಗಿಲ್ಲವು.

	ಪುಂ.	ಸ್ತ್ರೀ.	ದ್ವಿಬ.	
ಪ್ರ	ಅವನು	ಅವಳು	ಅವರು	ಅವರುಗಳು.
			ಅವಂದಿರು	ಅವಂದಿರುಗಳು.
ದ್ವಿ	ಅವನ	ಅವಳ	ಅವರ	ಅವರುಗಳ.
	ಅವನನ್ನು	ಅವಳನ್ನು	ಅವರನ್ನು	ಅವಂದಿರುಗಳ.
ತೃ	ಅವನಿಂದ	ಅವಳಿಂದ	ಅವರಿಂದ	ಅವರುಗಳಿಂದ.
ಚ	ಅವನಿಗೆ / ಅವಗೆ	ಅವಳಿಗೆ	ಅವರಿಗೆ	ಅವರುಗಳಿಗೆ.
ಪ	ಅವನ	ಅವಳ	ಅವರ	ಅವರುಗಳ
	ದೆಸೆಯಿಂದ	ದೆಸೆಯಿಂದ	ದೆಸೆಯಿಂದ	ದೆಸೆಯಿಂದ.
ಷ	ಅವನ	ಅವಳ	ಅವರ	ಅವರುಗಳ.
ಸ	ಅವನಲ್ಲಿ	ಅವಳಲ್ಲಿ	ಅವರಲ್ಲಿ	ಅವರುಗಳಲ್ಲಿ.

	ನಪುಂ.	ನಬ.	
ಪ್ರ	ಅದು	ಅವು	ಅವುಗಳು.
ದ್ವಿ	ಅದ	ಅವ	ಅವುಗಳ.
	ಅದನ್ನು	ಅವನ್ನು	ಅವುಗಳನ್ನು.
ತೃ	ಅದರಿಂದ	ಅವರಿಂದ	ಅವುಗಳಿಂದ.
ಚ	ಅದಕ್ಕೆ	ಅವಕ್ಕೆ	ಅವುಗಳಿಗೆ.
ಪ	ಅದರ ದೆಸೆಯಿಂದ	ಅವರ ದೆಸೆಯಿಂದ	ಅವುಗಳ ದೆಸೆಯಿಂದ.
ಷ	ಅದರ	ಅವರ	ಅವುಗಳ.
ಸ	ಅದರಲ್ಲಿ	ಅವರಲ್ಲಿ	ಅವುಗಳಲ್ಲಿ.

ಹೀಂಗೆ - ಇವನು - ಇವಳು - ಇವರು - ಇವರುಗಳು - ಇವಂದಿರು - ಇವಂದಿರುಗಳು ಇದು - ಇವು - ಇವುಗಳು - ಇದರಿಂದ - ಇವರಿಂದ - ಇದಕ್ಕೆ - ಇವಕ್ಕೆ - ಇತ್ಯಾದಿ - ಉವನು - ಉವಳು - ಇತ್ಯಾದಿ - ಅದು ಶಬ್ದದ ಹಾಂಗೆ ನೋಡಿಕ್ಕೊಳ್ಳುವದು.

ಪ್ರಶ್ನೆ.	ಉತ್ತರವು.
೭೦ - ಈ ಶಬ್ದಗಳಿಗೆ ಮತ್ತೆ ಬೇರೆ ರೂಪಗಳುಂಟೋ.	ಸ್ವಲ್ಪ ಮರ್ಯಾದೆ ತೋರುವಲ್ಲಿ ಪುಲ್ಲಿಂಗದಲ್ಲಿ ಅದು ಇದು ಉದು ಶಬ್ದಗಳಿಗೆ ಕ್ರಮವಾಗಿ ಆತ ಈತ ಊತ ಎಂಬಾದೇಶಗಳು ಬರುತ್ತವೆ - ಬಹುವಚನದಲ್ಲಿ ಆಯಾದೇಶದ ಮೇಲೆ ಅಂದಿರ್ - ಅಂದಿರುಗಳ್ - ಆಗಮಗಳು ಬರುತ್ತವೆ - ಕಡಮೆಯೆಲ್ಲಾ ರಾಮ ಶಬ್ದದ ಹಾಂಗೆ ಸ್ತ್ರೀಲಿಂಗದಲ್ಲಿ ಕ್ರಮವಾಗಿ ಆಕೆ - ಈಕೆ - ಊಕೆ - ಆದೇಶಗಳು ಬರುತ್ತವೆ ಬಹುವಚನದಲ್ಲಿ ಅಂದಿರ್ - ಅಂದಿರುಗಳ್ ಅರ್ - ಅರುಗಳ್ - ಗಳ್ - ಎಂಬಾಗಮಗಳು ಬರುತ್ತವೆ. ಪುಲ್ಲಿಂಗಕ್ಕೆ - ಆತನು - ಆತಂದಿರು - ಆತಂದಿರುಗಳು ಆತನ - ಆತಂದಿರ - ಆತಂದಿರುಗಳ - ಇತ್ಯಾದಿ - ಹೀಂಗೆ ಈತನು - ಊತನು - ಇತ್ಯಾದಿ. ಸ್ತ್ರೀಲಿಂಗಕ್ಕೆ - ಆಕೆಯು - ಆಕೆಯರು - ಆಕೆಯರುಗಳು - ಆಕೆಯಂದಿರು - ಆಕೆಯಂದಿರುಗಳು - ಆಕೆಗಳು ಇತ್ಯಾದಿ ಹೀಂಗೆ - ಈಕೆ - ಊಕೆ - ಮೊದಲಾದವು ನೋಡಿಕೊಳ್ಳಬಹುದು.
೭೧ - ಯಾವದು ಶಬ್ದಕ್ಕೆ ರೂಪಹ್ಯಾಂಗೆ.	ಪುಂಸ್ತ್ರೀಲಿಂಗಗಳಲ್ಲಿದು ವಿಶೇಷ ಬರುತ್ತದೆ - ಕಡಮೆಯೆಲ್ಲಾ ಅಕಾರಾಂತ ಪುಲ್ಲಿಂಗದ ಹಾಂಗೆ - ಒಂದು ವೇಳೆ ಸ್ತ್ರೀಪುಲ್ಲಿಂಗಗಳಲ್ಲಿ ಪ್ರಕೃತಿಗಳಿಗೆ ಯಾರ್ - ಆದೇಶ ಬರುತ್ತದೆ - ನಪುಂಸಕಲಿಂಗದಲ್ಲಿ ಅದು ಶಬ್ದದ ಹಾಂಗೊಂದು ರೂಪವು ಒಂದು ವೇಳೆ ಏಕವಚನದಲ್ಲಿ ಪ್ರಥಮೆ ದ್ವಿತೀಯೆಗಳಲ್ಲಿ ಏನು ಆದೇಶವು ತೃತೀಯಾದಿಗಳಲ್ಲಿ ಏತು ಆದೇಶ ಸಹ ಬರುತ್ತದೆ - ಚತುರ್ಥ್ಯ ಯುಳಿದ ವಿಭಕ್ತಿಗಳಿಗೆ ಅರ್ ಆಗಮ ಬರುತ್ತದೆ - ಚತುರ್ಥಿಗೆ ಅಕ್ಕೆ ಬರುತ್ತದೆ - ಒಂದು ವೇಳೆ ಪ್ರಕೃತಿ ಪ್ರತ್ಯಯಗಳಿಗೆ ಏಕೆ - ಎಂಬಾದೇಶ ಬರುತ್ತದೆ.

	ಪು ಏ.	ಸ್ತ್ರೀ.	ದ್ವಿ ಬ.	
ಪ್ರ -	ಯಾವನು ಯಾರು	ಯಾವಳು ಯಾರು	ಯಾವರು ಯಾರು	ಯಾವರುಗಳು.

ದ್ವಿ - ಯಾವನ / ಯಾರ } - ಯಾವಳ / ಯಾರ - ಯಾವರ / ಯಾರ — ಯಾವರುಗಳ.

ತೃ - ಯಾವನಿಂದ / ಯಾರಿಂದ } - ಯಾವಳಿಂದ / ಯಾರಿಂದ - ಯಾವರಿಂದ. / ಯಾರಿಂದ — ಯಾವರುಗಳಿಂದ.

ಚ - ಯಾವನಿಗೆ / ಯಾವಗೆ / ಯಾರಿಗೆ } - ಯಾವಳಿಗೆ / ಯಾರಿಗೆ - ಯಾವರಿಗೆ / ಯಾರಿಗೆ — ಯಾವರುಗಳಿಗೆ.

ಪ - ಯಾವನ ದೆಸೆಯಿಂದ / ಯಾರ ದೆಸೆಯಿಂದ } - ಯಾವಳ ದೆಸೆಯಿಂದ - ಯಾವರ ದೆಸೆಯಿಂದ - ಯಾವರುಗಳ ದೆಸೆಯಿಂದ.

ಷ - ಯಾವನ / ಯಾರ } - ಯಾವಳ / ಯಾರ - ಯಾವರ / ಯಾರ — ಯಾವರುಗಳ.

ಸ - ಯಾವನಲ್ಲಿ / ಯಾರಲ್ಲಿ } - ಯಾವಳಲ್ಲಿ / ಯಾರಲ್ಲಿ - ಯಾವರಲ್ಲಿ. / ಯಾರಲ್ಲಿ — ಯಾವರುಗಳಲ್ಲಿ.

ನ ಏ. ನ ಬ.

ಪ್ರ - ಯಾವದು / ಏನು } - ಯಾವವು - - ಯಾವವುಗಳು.

ದ್ವಿ - ಯಾವದ / ಏನ } - ಯಾವವ - ಯಾವವುಗಳ.

ತೃ - ಯಾವದರಿಂದ / ಏತರಿಂದ } - ಯಾವವರಿಂದ - ಯಾವವುಗಳಿಂದ.

ಚ - ಏತಕ್ಕೆ / ಏಕೆ / ಯಾವದಕ್ಕೆ } - ಯಾವವಕ್ಕೆ - ಯಾವವುಗಳಿಗೆ.

ಪ - { ಯಾವದರ ದೆಸೆಯಿಂದ / ಏತರ ದೆಸೆಯಿಂದ - ಯಾವವರ ದೆಸೆಯಿಂದ - ಯಾವವುಗಳ ದೆಸೆಯಿಂದ.

ಷ - ಯಾವದರ / ಏತರ } - ಯಾವವರ - ಯಾವವುಗಳ.

ಸ - ಯಾವದರಲ್ಲಿ / ಏತರಲ್ಲಿ } - ಯಾವವರಲ್ಲಿ - ಯಾವವುಗಳಲ್ಲಿ.

೭೨ - ಇರಡು ಶಬ್ದಕ್ಕೆ ರೂಪವ್ಯಾಂಗೆ.

ಪುಂಸ್ತ್ರೀಲಿಂಗಗಳಲ್ಲಿ ಇರಡು ಶಬ್ದದ ರೂಪವಿಶೇಷ ಬರುತ್ತದೆ - ಕಡಮೆಯೆಲ್ಲಾ ಅಕಾರಾಂತಕ್ಕೆ ಹೇಳಿದ ಹಾಂಗೆ ನಪುಂಸಕದಲ್ಲಿ ಉಪಧಾತ್ಕಾರಕ್ಕೆ ವಕಾರಾದೇಶ ಬರುತ್ತವೆ - ಕಡಮೆಯೆಲ್ಲಾ ಅದು ಶಬ್ದದ ಹಾಂಗೆ.

ಇರಸು - ಇರಳು - ಇರರು - ಇರರುಗಳು - ಇರಡು ಇರವು - ಇರವುಗಳು - ಇರರಿಂದ - ಇರವರಿಂದ - ಇರವುಗಳಿಂದ - ಇರರಕ್ಕೆ - ಇರವಕ್ಕೆ - ಇರವುಗಳಿಗೆ - ಇತ್ಯಾದಿ.

೭೩ - ಹಲವು ಕೆಲವು ಶಬ್ದಗಳಿಗೆ ರೂಪವ್ಯಾಂಗೆ.

ಈ ಶಬ್ದಗಳು ನಿತ್ಯಬಹುವಚನಾಂತಗಳು ದ್ವಿಬಹುವಚನದಲ್ಲಿ ಅರ್ - ಅರುಗಳ್ - ಊಗಮಗಳು ಬರುತ್ತವೆ - ನಪುಂಸಕ ಬಹುವಚನದಲ್ಲಿ - ಗಳಾಗಮ ವಿಕಲ್ಪವಾಗಿ ಬರುತ್ತದೆ - ಬಾರದಾಗ ತೃತೀಯಾದಿಗಳಲ್ಲಿ ಅರಾಗಮ ಬರುತ್ತದೆ - ಚತುರ್ಥಿಗೆ ಇಗೆ - ಅರಾಗಮ ಸಹಾ ಬರುತ್ತದೆ.

	ದ್ವಿಬ.		ನಬ.	
ಪ್ರ	ಕೆಲವರು	ಕೆಲವರುಗಳು	ಕೆಲವು	ಕೆಲವುಗಳು.
ದ್ವಿ	ಕೆಲವರ	ಕೆಲವರುಗಳ	ಕೆಲವ	ಕೆಲವುಗಳ.
ತೃ	ಕೆಲವರಿಂದ	ಕೆಲವರುಗಳಿಂದ	ಕೆಲವರಿಂದ	ಕೆಲವುಗಳಿಂದ.
ಚ	ಕೆಲವರಿಗೆ	ಕೆಲವರುಗಳಿಗೆ	ಕೆಲವರಿಗೆ	ಕೆಲವುಗಳಿಗೆ.
ಪ	ಕೆಲವರ ದೆಸೆಯಿಂದ	ಕೆಲವರುಗಳ ದೆಸೆಯಿಂದ	ಕೆಲವರ ದೆಸೆಯಿಂದ	ಕೆಲವುಗಳ ದೆಸೆಯಿಂದ.
ಷ	ಕೆಲವರ	ಕೆಲವರುಗಳ	ಕೆಲವರ	ಕೆಲವುಗಳ.
ಸ	ಕೆಲವರಲ್ಲಿ	ಕೆಲವರುಗಳಲ್ಲಿ	ಕೆಲವರಲ್ಲಿ	ಕೆಲವುಗಳಲ್ಲಿ.

ಹೀಂಗೆ ಹಲವು ಶಬ್ದಕ್ಕೂ ಹೇಳಿಕೊಳ್ಳುವದು.

೭೪ - ಎಲ್ಲಾ ಶಬ್ದಕ್ಕೆ ರೂಪವ್ಯಾಂಗೆ.

ಎಲ್ಲಾ ಶಬ್ದಕ್ಕೆ - ಏಕವಚನವಿಲ್ಲ - ಬಹುವಚನ ಮಾತ್ರವೇ ಅದಕ್ಕೆ - ದ್ವಿಬಹುವಚನದಲ್ಲಿ - ಅರ್ - ಅರುಗಳಾಗಮ ಬರುತ್ತದೆ - ನಪುಂಸಕ ಬಹುವಚನದಲ್ಲಿ - ವು ಶಬ್ದಾಗಮ ಬರುತ್ತದೆ - ಊಂ ತೃತೀಯಾದಿಗಳಲ್ಲಿ - ಅರ್ - ಊಗಮ ಬರುತ್ತದೆ

ಚತುರ್ಥಿಗೆ ಅಕ್ಕೆ ಬರುತ್ತದೆ - ವುಶಬ್ದಾಗಮವಿಲ್ಲದೆಯೂ ಒಂದು ವೇಳೆ ಅಕ್ಕೆ ಬರುವದುಂಟು - ಒಂದು ವೇಳೆ ವುಗಳ್ ಆಗಮವು ಬರುತ್ತದೆ - ಒಂದು ವೇಳೆ ಮೂರು ಲಿಂಗದಲ್ಲಿಯೂ ಪ್ರಥಮೆ ದ್ವಿತೀಯೆಗಳಿಗೆ ಆಕಾರಾದೇಶ ಬರುತ್ತದೆ - ಒಂದು ವೇಳೆ ವಿಶೇಷ್ಯ ಪದಗಳ ಪೂರ್ವದಲ್ಲಿದ್ದರೆ - ವಿಶೇಷಣವಾಗಿ ಎಲ್ಲಶಬ್ದವ ಮೇಲೆ ಹೇಳಿದರೆ - ಆಗ ಷಷ್ಠಿಯುಳಿದ ಎಲ್ಲಾ ವಿಭಕ್ತಿಗಳಿಗೂ ಮೂರು ಲಿಂಗದಲ್ಲೂ - ಆಕಾರಾದೇಶ ಬರುತ್ತದೆ.

ಉದಾಹರಣೆ.

ದ್ವಿಬ. ನಬ.

ಪ್ರ - ಎಲ್ಲರು = ಎಲ್ಲರುಗಳು - ಎಲ್ಲಾ = ಎಲ್ಲವು = ಎಲ್ಲವುಗಳು - ಎಲ್ಲಾ.

ದ್ವಿ - ಎಲ್ಲರ - ಎಲ್ಲರುಗಳ - ಎಲ್ಲಾ - ಎಲ್ಲವ - ಎಲ್ಲವುಗಳ - ಎಲ್ಲಾ.

ತೃ - ಎಲ್ಲರಿಂದ - ಎಲ್ಲರುಗಳಿಂದ - ಎಲ್ಲವರಿಂದ - ಎಲ್ಲವುಗಳಿಂದ.

ಚ - ಎಲ್ಲರಿಗೆ - ಎಲ್ಲರುಗಳಿಗೆ - ಎಲ್ಲವಕ್ಕೆ - ಎಲ್ಲವುಗಳಿಗೆ - ಎಲ್ಲಕ್ಕೆ.

ಪ - { ಎಲ್ಲರದೆ - ಎಲ್ಲರುಗಳದೆ - ಎಲ್ಲವರದೆ - ಎಲ್ಲವುಗಳದೆ.
ಸೆಯಿಂದ - ಸೆಯಿಂದ - ಸೆಯಿಂದ - ಸೆಯಿಂದ.

ಷ - ಎಲ್ಲರ - ಎಲ್ಲರುಗಳ - ಎಲ್ಲವರ - ಎಲ್ಲವುಗಳ.

ಸ - ಎಲ್ಲರಲ್ಲಿ - ಎಲ್ಲರುಗಳಲ್ಲಿ - ಎಲ್ಲವರಲ್ಲಿ - ಎಲ್ಲವುಗಳಲ್ಲಿ.

ವಿಶೇಷ್ಯಪೂರ್ವವಾದೆಲ್ಲಶಬ್ದಕ್ಕುದಾಹರಣೆ.

ಪ್ರ - ಅವರೆಲ್ಲಾ ಬಂದರು - ಅದೆಲ್ಲಾ ಬಂದವು.

ದ್ವಿ - ಅವರನ್ನೆಲ್ಲಾ ನೋಡು - ಅವುಗಳನ್ನೆಲ್ಲಾ ನೋಡು.

ತೃ - ಅವರಿಂದೆಲ್ಲಾ - ಅವುಗಳಿಂದೆಲ್ಲಾ - ಮಾಡಲ್ಪಟ್ಟಿತು.

ಚ - ಅವರಿಗೆಲ್ಲಾ ಕೊಡು - ಅವಕ್ಕೆಲ್ಲಾ ಕೊಡು.

ಪ - ಹುಲಿಗಳದೆಸೆಯಿಂದೆಲ್ಲಾ ಭಯವು.

ಸ - ಆದೇಶಗಳಲ್ಲೆಲ್ಲಾ - ಅವರಲ್ಲೆಲ್ಲಾ ಹಣಗಳವೆ.

೭೮ ಪ್ರಶ್ನೆ. ಉತ್ತರವು.

೭೭ - ಅಂದ್ವಾದಿಗಳಿಗೆ ಹ್ಯಾಂಗೆ. ಅಂದ್ವಾದಿಗಳಿಗೆ ಬಹುವಚನವಿಲ್ಲ - ನಿತ್ಯನಪುಂಸಕೈಕವಚನಾಂತವು - ಪ್ರಥಮಾದ್ವಿತೀಯಾಸಪ್ತಮೀವಿಭಕ್ತಿಗಳಿಗೆ ಲೋಪ ಬರುತ್ತದೆ - ಚತುರ್ಥಿಗೆ ಇಗೆ ಬರುತ್ತದೆ - ಕಡಮೆಗೆ ಇನ್ ಆಗಮ ಬರುತ್ತದೆ.

ಪ್ರ - ದ್ವಿ - ತೃ - ಚ - ಪ - ಷ - ಸ

ಅಂದು - ಅಂದು - ಅಂದಿನಿಂದ - ಅಂದಿಗೆ - ಅಂದಿನ ದೆಸೆಯಿಂದ - ಅಂದಿನ - ಅಂದು.

ಹ್ಯಾಂಗೆ - ಇಂದು - ಎಂದು - ಇತ್ಯಾದಿ.

೭೬ - ಅಲ್ಲ್ಯಾದಿಗಳಿಗೆ ಹ್ಯಾಂಗೆ. ಇವು ನಿತ್ಯನಪುಂಸಕೈಕವಚನಾಂತವೆ - ಮೊದಲೆರಡು ಕಡೆ ವಿಭಕ್ತಿಗಳಿಗೆ ಲೋಪ ಬರುತ್ತದೆ - ಚತುರ್ಥಿಗೆ - ಗೆ ಬರುತ್ತದೆ.

ಪ್ರ - ದ್ವಿ - ತೃ - ಚ - ಪ - - ಷ - ಸ

ಅಲ್ಲಿ - ಅಲ್ಲಿ - ಅಲ್ಲಿಂದ - ಅಲ್ಲಿಗೆ - ಅಲ್ಲಿಯ ದೆಸೆಯಿಂದ - ಅಲ್ಲಿಯ - ಅಲ್ಲಿ.

ಹ್ಯಾಂಗೆ - ಇಲ್ಲಿ - ಎಲ್ಲಿ ಶಬ್ದಗಳನ್ನು ಸಾಧಿಸಿಕೊಳ್ಳುವದು.

೭೯ - ಅತ್ತಾದಿ ಶಬ್ದಗಳಿಗೆ ಹ್ಯಾಂಗೆ. ಇವುಗಳು ನಿತ್ಯನಪುಂಸಕೈಕವಚನಾಂತಗಳು ಎಲ್ಲಾ ವಿಭಕ್ತಿಗಳಲ್ಲಿಯೂ ಲಕಾರಾಗಮ ಬರುತ್ತದೆ - ಚತುರ್ಥಿಗೆ ಇಗೆ ಬರುತ್ತದೆ - ಒಂದು ವೇಳೆ ಮೊದಲೆರಡು ಕಡೆ ವಿಭಕ್ತಿಗಳಿಗೆ ಲೋಪಸಹ ಬರುತ್ತದೆ - ಆಗ ಲಾಗಮವಿಲ್ಲವು.

ಪ್ರ - ದ್ವಿ - ತೃ - ಚ - ಪ - ಷ

ಅತ್ತಲು - ಅತ್ತ - ಅತ್ತಲ - ಅತ್ತ - ಅತ್ತಲಿಂದ - ಅತ್ತಲಿಗೆ - ಅತ್ತಲ ದೆಸೆಯಿಂದ - ಅತ್ತಲ

ಸ

ಅತ್ತಲಲಿ - ಅತ್ತ }

ಇದೇ ಮೇರೆಗೆ ಇತ್ತ ಮೊದಲಾದವುಗಳನ್ನು ತಿಳಿಕೊಳ್ಳುವದು - ಅತ್ತ - ಇತ್ತ - ಎತ್ತ - ಮೂಡ ಪಡುವ - ತೆಂಕ - ಬಡಗ - ಇತ್ಯಾದಿ.

೭೮ - ನಿನ್ನೆ ಮೊದಲಾದವುಕ್ಕೆ ಹ್ಯಾಂಗೆ. ಇವುಗಳು ನಿತ್ಯನಪುಂಸಕೈಕವಚನಾಂತವು - ಇವುಗಳಿಗೆ ಮೊದಲೆರಡು ಕಡೆ ವಿಭಕ್ತಿಗಳಿಗೆ ಲೋಪ ಬರುತ್ತದೆ - ಚತುರ್ಥಿಗೆ - ಗೆ - ಬರುತ್ತದೆ - ಷಷ್ಠಿಯಲ್ಲಿ ಕಡೆಯ ಎಕಾರಕ್ಕೆ ಇನ್ ಆದೇಶ

ವಿಕಲ್ಪವಾಗಿಬರುತ್ತದೆ - ಇವುಗಳನ್ನವ್ಯಯವೆಂದು ಕೆಲವರು ಹೇಳುತ್ತಾರೆ - ಇವುಗಳಿಗವ್ಯಯಲಕ್ಷಣ ಹೇಳಿದರೆ ಅಂದ್ವಾದಿಗಳಸಾ ಹೇಳಬೇಕಾಗುತ್ತದೆಯೆಂದು ಶಬ್ದದಲ್ಲಿ ಸೇರಿಸಲ್ಪಟ್ಟಿತು.

ಪ್ರ - ದ್ವಿ - ತೃ - ಚ - ಪ - - ಷ - ಸ
ನಿನ್ನೆ - ನಿನ್ನೆ - ನಿನ್ನೆಯಿಂದ - ನಿನ್ನೆಗೆ - ನಿನ್ನೆಯ ದೆಸೆಯಿಂದ - ನಿನ್ನಿನ - ನಿನ್ನೆಯ - ನಿನ್ನೆ.
ಹೀಗೆ - ಮೊನ್ನೆ - ನಾಳೆ - ಇತ್ಯಾದಿ.

೭೯ - ನಾಳಿದ್ದು ಶಬ್ದವೆಂಥಾದ್ದು.

ಅಪೂರ್ಣಿಕ್ಯನಪುಂಸಕ್ಯೈಕವಚನಾಂತವು - ಪ್ರಥಮಾದ್ವಿತೀಯಾಸಪ್ತಮಿಗಳಿಗೆ ಲೋಪಬರುತ್ತದೆ - ಚತುರ್ಥಿಗೆ ಅಕ್ಕೆ ಬರುತ್ತದೆ - ಕಡಮೆಗಳಲ್ಲಿ ಅರ್ ಆಗಮ ಬರುತ್ತದೆ - ಇದನ್ನ ಸಹಾ ಅವ್ಯಯದಲ್ಲಿಯೇ ಕೆಲವರು ಸೇರಿಸಿದಾರೆ - ಈ ಶಬ್ದವನ್ನು - ನಾಳಿದು ಎಂದೂ ಹೇಳುವದುಂಟು.

ಪ್ರ - ದ್ವಿ - ತೃ - ಚ - ಪ - ಷ - ಸ
ನಾಳಿದ್ದು - ನಾಳಿದ್ದು - ನಾಳಿದ್ದರಿಂದ - ನಾಳಿದ್ದಕ್ಕೆ - ನಾಳಿದ್ದರ - ನಾಳಿದ್ದರ - ನಾಳಿದ್ದು.
ದೆಸೆಯಿಂದ.

೮೦ - ಹೊರಗು ಮೊದಲಾದವುಗಳಿಗೆ ರೂಪಹ್ಯಾಂಗೆ.

ಹೊರಗು ಮೊದಲಾದವುಗಳ ಪ್ರಥಮಾದ್ವಿತೀಯಾಚತುರ್ಥೀಸಪ್ತಮೀವಿಭಕ್ತಿಗಳಿಗೆ ಎಕಾರಾದೇಶ ವಿಕಲ್ಪವಾಗಿಬರುತ್ತದೆ ಅವರಲ್ಲಿ - ಗು ಶಬ್ದಾಂತಕ್ಕೆ ಲೋಪಪೂರ್ವ ಚತುರ್ಥಿಗೆ ಅಕ್ಕೆ ಸಹ ಬರುತ್ತದೆ - ನಡುವು ಮುಂಬು ಶಬ್ದಗಳಿಗೆ - ಅದು ಸಹಾ ಸೇರಿ ಇಗೆ ಸಹ ಬರುತ್ತದೆ.

ಪ್ರ - ದ್ವಿ - ತೃ - ಚ - ಪ - ಷ - ಸ
ಹೊರಗೆ - ಹೊರಗೆ - ಹೊರಗಿನಿಂದ - ಹೊರಕ್ಕೆ - ಹೊರ - ಹೊರಗಿನ - ಹೊರಗಿನಲ್ಲಿ
ಹೊರಗು - ಹೊರಗ ಹೊರಗೆ - ಗಿನ ದೆಸೆಯಿಂದ - ಹೊರಗೆ.

ಹೀಂಗೆ ಕೆಳಗು ಮೇಲಗು ಮೊದಲಾದವು - ನಡುವಿಗೆ - ಮುಂಬೆಗೆ - ಹಿಂದಕ್ಕೆ - ಮುಂದಕ್ಕೆ - ಇವುಗಳಿಗೆ ಕಡಮೆ ರೂಪವೆಲ್ಲಾ - ಹೊರಗಿನ ಹಾಂಗೆ.

೭೦ ಪ್ರಶ್ನೆ: ಉತ್ತರವು.

೭೧ - ಅಷ್ಟು ಮೊದಲಾದವಕ್ಕೆ ಹ್ಯಾಂಗೆ.

ಅಷ್ಟು ಮೊದಲಾದವು - ನಿತ್ಯಬಹುವಚನಾಂತವು - ದ್ವಿಬಹುವಚನದಲ್ಲಿ - ಅರ್ ಆಗಮ ಬರುತ್ತದೆ - ನಪುಂಸಕಬಹುವಚದಲ್ಲಿ - ಚತುರ್ಥಿಗೆ - ಅಕ್ಕೆ ಬರುತ್ತದೆ - ತೃತಿಯಾದಿಗಳಲ್ಲಿ ಅರ್ ಆ ಆಗಮ ಬರುತ್ತದೆ.

ಪ್ರ - ದ್ವಿ - ತೃ - ಚ - ಪ - ಷ - ಸ

ದ್ವಿಬ - ಅಷ್ಟರು - ಅಷ್ಟರ - ಅಷ್ಟರಿಂದ - ಅಷ್ಟರಿಗೆ - ಅಷ್ಟರ ದೆಸೆಯಿಂದ - ಅಷ್ಟರ - ಅಷ್ಟರಲ್ಲಿ.
ನಬ - ಅಷ್ಟು - ಅಷ್ಟನ್ನು - ಅಷ್ಟರಿಂದ - ಅಷ್ಟಕ್ಕೆ - ಅಷ್ಟರ ದೆಸೆಯಿಂದ - ಅಷ್ಟರ - ಅಷ್ಟರಲ್ಲಿ.

ಹೀಂಗೆ - ಇಷ್ಟು - ಎಷ್ಟು ಶಬ್ದಗಳು ಸಾಧಿಸಿಕೊಳ್ಳುವದು.

೭೨ - ಒಂದು ಮೊದಲಾದವಕ್ಕೆ ಹ್ಯಾಂಗೆ ಅವುಗಳ ಸ್ವರೂಪವೇನು.

ಒಂದು ಮೊದಲಾದವು - ಸಂಖ್ಯಾವಾಚಕಗಳೆಂತಲೂ - ಸಂಖ್ಯೇಯವಾಚಕಗಳೆಂತಲೂ - ಎರಡು ವಿಧವು - ಅವರಲ್ಲಿ - ಸಂಖ್ಯಾವಾಚಕವೆಂದರೆ ಲೆಖ್ಖವ ಹೇಳುವದು - ಸಂಖ್ಯೇಯವಾಚಕವೆಂದರೆ - ಲೆಖ್ಖಿಸಲ್ಪಡುವದ ಹೇಳುವದು - ಸಂಖ್ಯಾವಾಚಕಗಳು ನಿತ್ಯನಪುಂಸಕೈಕವಚನಾಂತವು - ಸಂಖ್ಯೇಯವಾಚಕಗಳು - ಎರಡು ಮೊದಲಾದ ವಾಚ್ಯಲಿಂಗವಾಗಿಯೂ - ವಾಚ್ಯವಚನವಾಗಿಯೂ ಇರುತ್ತವೆ - ಒಂದು ಶಬ್ದವು ಸಂಖ್ಯೇಯವಾಚಕವಾದಾಗಲೂ - ಸಂಖ್ಯಾವಾಚಕವಾದಾಗಲೂ - ಏಕವಚನವಾಗಿ - ವಾಚ್ಯಲಿಂಗವಾಗಿರುವದು - ಕೆಲವೆಂಬರ್ಥವ ಹೇಳುವಲ್ಲೂ - ಪೂಜೆತೋರುವಲ್ಲೂ - ಒಂದು ಶಬ್ದವು ನಿತ್ಯಬಹುವಚನಾಂತವು - ವಾಚ್ಯಲಿಂಗವು - ಸಂಖ್ಯಾವಾಚಕಗಳು ಅವುಗಳಲ್ಲಿರುವ ಸಂಖ್ಯೆಯ ಹೇಳಿದರೆ ಆಗ ಬಹುವಚನ ಸಹಾವುಂಟು.

೭೩ - ಅವುಗಳಿಗೆ ರೂಪ ಹ್ಯಾಂಗೆ.

ಒಂದು ಮೊದಲಾದ ಶಬ್ದಗಳಿಗೆ ಪುಂಸ್ತ್ರೀಲಿಂಗಗಳಲ್ಲಿ - ಒಬ್ಬ ಮೊದಲಾದಾದೇಶಗಳು ಬರುತ್ತವೆ - ಅಕಾರಾಂತವಾದ ಮೇಲೆ - ಅಕಾರಾಂತಕ್ಕೆ ಹೇಳಿದ ವಿಧಿಯೆಲ್ಲಾ ಬರುತ್ತವೆ - ನಪುಂಸಕೈಕವಚನದಲ್ಲಿ ಚತುರ್ಥಿಗೆ ಅಕ್ಕೆ - ತೃತೀಯಾದಿಗಳಲ್ಲಿ ರಾಗಮವೂ ಬರುತ್ತದೆ ಸಂಖ್ಯೆಯಲ್ಲಿರುವ ಸಂಖ್ಯೆಯ ಹೇಳುವಾಗ ಬಹುವಚನದಲ್ಲಿ ಗಳಾಗಮ ವಿಕಲ್ಪವಾಗಿ ಬರುತ್ತದೆ - ಮಗ್ಗಿಯಲ್ಲಿ ಮಾತ್ರ ಉಕಾರಾಂ

ಕೆ ಸಂಖ್ಯಾವಾಚಕಗಳ ಕಡೆಯ ಉಕಾರಕ್ಕೆ ಲಕಾರಾದೇಶ ಬರುತ್ತದೆ - ಸಂಖ್ಯೇಯವಾಚಕಗಳಿಗೆ ನಪುಂಸಕದಲ್ಲಿ ಎರಡು ವಚನದಲ್ಲಿಯೂ ರೂಪಭೇದವಿಲ್ಲವು ಮಗ್ಗಿಯಲ್ಲಿ ಪ್ರಥಮೆಯುಳಿದ ವಿಭಕ್ತಿಯಿಲ್ಲವಾದ್ದರಿಂದ ಕಡಿಮೆ ವಿಭಕ್ತಿಗಳು ಬರುವದಿಲ್ಲವು.

೭೪ - ಒಂದು ಮೊದಲಾದವುಗಳಿಗೆ ಬರುವ ಒಬ್ಬಾದಿಗಳು ಯಾವವು.

ಒಂದು - ಒಬ್ಬ - ಎರಡು - ಇಬ್ಬ - ಮೂರು - ಮೂವ - ನಾಲ್ಕು - ನಾಲ್ವ - ಐದು - ಐವ - ಆರು - ಆರ್ವ - ಏಳು - ಏಳ್ವ - ಎಂಟು - ಎಣ್ಬ - ಒಂಭತ್ತು - ಒಂಬದಿಂಬ - ಹತ್ತು - ಹದಿಂಬ - ಹನ್ನೊಬ್ಬ - ಹನ್ನಿಬ್ಬ - ಹದಿಮೂವ - ನೂರು - ನೂರ್ವ - ಸಾವಿರ - ಸಾವಿರ್ವ.

	ಪು. ಏ.	ಸ್ತ್ರೀ.	ದ್ವಿ ಬ.
ಪ್ರ	ಒಬ್ಬನು	ಒಬ್ಬಳು	ಒಬ್ಬರು.
ದ್ವಿ	ಒಬ್ಬನ	ಒಬ್ಬಳ	ಒಬ್ಬರ.
ತೃ	ಒಬ್ಬನಿಂದ	ಒಬ್ಬಳಿಂದ	ಒಬ್ಬರಿಂದ.
ಚ	ಒಬ್ಬನಿಗೆ / ಒಬ್ಬಗೆ	ಒಬ್ಬಳಿಗೆ	ಒಬ್ಬರಿಗೆ.
ಪ	ಒಬ್ಬನ ದೆಸೆಯಿಂದ	ಒಬ್ಬಳ ದೆಸೆಯಿಂದ	ಒಬ್ಬರ ದೆಸೆಯಿಂದ.
ಷ	ಒಬ್ಬನ	ಒಬ್ಬಳ	ಒಬ್ಬರ.
ಸ	ಒಬ್ಬನಲ್ಲಿ	ಒಬ್ಬಳಲ್ಲಿ	ಒಬ್ಬರಲ್ಲಿ.

	ನ ಏ.	ನ ಬ.	
ಪ್ರ	ಒಂದು	ಒಂದು	ಒಂದುಗಳು.
ದ್ವಿ	ಒಂದು	ಒಂದು	ಒಂದುಗಳ.
ತೃ	ಒಂದರಿಂದ	ಒಂದರಿಂದ	ಒಂದುಗಳಿಂದ.
ಚ	ಒಂದಕ್ಕೆ	ಒಂದಕ್ಕೆ	ಒಂದುಗಳಿಗೆ.
ಪ	ಒಂದರ ದೆಸೆಯಿಂದ	ಒಂದರ ದೆಸೆಯಿಂದ	ಒಂದುಗಳ ದೆಸೆಯಿಂದ.
ಷ	ಒಂದರ	ಒಂದರ	ಒಂದುಗಳ.
ಸ	ಒಂದರಲ್ಲಿ	ಒಂದರಲ್ಲಿ	ಒಂದುಗಳಲ್ಲಿ.

	ಪ್ರ	ದ್ವಿ	ತೃ	ಚ	ಪ	ಷ	ಸ
ದ್ವಿಬ	ಇಬ್ಬರು	ಇಬ್ಬರ	ಇಬ್ಬರಿಂದ	ಇಬ್ಬರಿಗೆ	ಇಬ್ಬರ ದೆಸೆಯಿಂದ	ಇಬ್ಬರ	ಇಬ್ಬರಲ್ಲಿ.

೭೧ ಪ್ರಶ್ನೆ. ಉತ್ತರವು.

	ಏಕವ.	ಬಹುವ.
ಪ್ರ	ಎರಡು	ಎರಡು - ಎರಡುಗಳು.
ದ್ವಿ	ಎರಡ	ಎರಡ - ಎರಡುಗಳ.
ತೃ	ಎರಡರಿಂದ	ಎರಡರಿಂದ - ಎರಡುಗಳಿಂದ.
ಚ	ಎರಡಕ್ಕೆ	ಎರಡಕ್ಕೆ - ಎರಡುಗಳಿಗೆ.
ಪ	ಎರಡರ ದೆಸೆಯಿಂದ	ಎರಡರ ದೆಸೆಯಿಂದ - ಎರಡುಗಳ ದೆಸೆಯಿಂದ.
ಷ	ಎರಡರ	ಎರಡರ - ಎರಡುಗಳ.
ಸ	ಎರಡರಲ್ಲಿ	ಎರಡರಲ್ಲಿ - ಎರಡುಗಳಲ್ಲಿ.

ಹೀಗೆ - ಮೂರು - ಮೂವರು - ನಾಲ್ಕು - ನಾಲ್ವರು - ಐದು - ಐವರು - ಆರು - ಆರ್ವರು ಏಳು - ಏಳ್ವರು - ಎಂಟು - ಎಣ್ಬರು - ಒಂಭತ್ತು - ಒಂಬದಿಂಬರು - ಹತ್ತು - ಹದಿಂಬರು - ಹನ್ನೊಂದು - ಹನ್ನೊಬ್ಬರು - ಹನ್ನೆರಡು - ಹನ್ನಿಬ್ಬರು - ಹದಿಮೂರು - ಹದಿಮೂವರು - ನೂರು ನೂರ್ವರು - ಸಾವಿರ - ಸಾವಿರ್ವರು - ಇತ್ಯಾದಿ.

೭೨ - ಮಗ್ಗಿಯಲ್ಲುಕಾರಕ್ಕೆ ಬಂದಲಕಾರಕ್ಕೆ ಡಾದರಗಾವಲ್ಲಿ.

ಎರಡೊಂದ್ಲು - ಎರಡು - ಎರಡೆರಡ್ಲು - ನಾಲ್ಕು - ಎರಡುಮೂರ್ಲು - ಆರು - ಎರಡು - ನಾಲ್ಲು - ಎಂಟು - ಎರಡೈದ್ಲು - ಹತ್ತು - ಎರಡಾರ್ಲು - ಹನ್ನೆರಡು - ಎರಡೇಳ್ಲು - ಹದಿನಾಲ್ಕು - ಎರಡೆಂಟ್ಲು ಹದಿನಾರು - ಎರಡೊಂಭತ್ಲು - ಹದಿನೆಂಟು - ಎರಡಹತ್ಲು - ಇಪ್ಪತ್ತು - ಮೂರೆರಡ್ಲು ಆರು - ಇತ್ಯಾದಿ.

೭೩ - ಆಗಾದಿಶಬ್ದಗಳಿಗೆ ರೂಪವುಹ್ಯಾಂಗೆ.

ಪ್ರಥಮಾದ್ವಿತೀಯಾಸಪ್ತಮೀವಿಭಕ್ತಿಗಳಿಗೆ ವಿಕಲ್ಪವಾಗಿ ಲೋಪಬರುತ್ತದೆ - ತೃತೀಯಾಸಪ್ತಮೀವಿಭಕ್ತಿಗಳಿಗೆ - ಉಕಾರಾದೇಶಬರುತ್ತದೆ - ಆದೇಶವುಳ್ಳ ವಿಭಕ್ತಿಪ್ರತ್ಯಯಗಳು ಪರವಾದಾಗ ನಡುವೆ ಲಕಾರಾಗಮಬರುತ್ತದೆ - ಚತುರ್ಥಿಗೆ - ಗೆಯೂ ಪ್ರಕೃತಿಯ ಕಡೆಯ ಕಾರಕ್ಕೆ ಲೋಪವೂ - ಬರುತ್ತದೆ - ಇದನ್ನು ಸಹ ಅವ್ಯಯದಲ್ಲಿ ಕೆಲವರು ಸೇರಿಸುತ್ತಾರೆ.

ಪ್ರ	ದ್ವಿ	ತೃ	ಚ	ಪ	ಷ	ಸ
ಆಗ / ಆಗಲು	ಆಗ / ಆಗಲು	ಆಗಲಿಂದ	ಆಗ್ಗೆ	ಆಗಲದೆಸೆಯಿಂದ	ಆಗಲ	ಆಗ / ಆಗಲು.

೭೪ - ನಾ - ನೀ - ತಾ - ಶಬ್ದಗಳಿಗೆ ರೂಪವ್ಯಾಂಗೆ.

ಈ ಶಬ್ದಗಳಿಗೆ ಪ್ರಥಮೈಕವಚನದಲ್ಲಿ ನಕಾರಾಗಮವು ಪ್ರಥಮಾ ಬಹುವಚನದಲ್ಲಿ ವಕಾರಾಗಮವು ಬರುತ್ತದೆ - ಚತುರ್ಥಿಗೆ - ಗೆ - ಪ್ರತ್ಯಯವು ಬರುತ್ತದೆ - ಚತುರ್ಥ್ಯೇಕವಚನದಲ್ಲಿ - ನಶಬ್ದಾಗಮ ಬರುತ್ತದೆ - ಕಡಮೆ ವಿಭಕ್ತ್ಯೇಕವಚನದಲ್ಲಿ ಸಂಯುಕ್ತನಕಾರಾಗಮ ಬರುತ್ತದೆ - ಇವುಗಳ ಬಹುವಚನದಲ್ಲಿ ನಕಾರಾಗಮಗಳಿಗೆಲ್ಲಾ ಮಕಾರಾದೇಶ ಬರುತ್ತದೆ - ದ್ವಿತೀಯಾದಿಗಳಲ್ಲಿ ಪ್ರಕೃತಿಯ ದೀರ್ಘಕ್ಕೆ ಹ್ರಸ್ವ ಬರುತ್ತದೆ.

	ನಾ		ನೀ		ತಾ	
	ಏ.	ಬ.	ಏ.	ಬ.	ಏ.	ಬ.
ಪ್ರ	ನಾನು	ನಾವು	ನೀನು	ನೀವು	ತಾನು	ತಾವು.
ದ್ವಿ	ನನ್ನ	ನಮ್ಮ	ನಿನ್ನ	ನಿಮ್ಮ	ತನ್ನ	ತಮ್ಮ.
	ನನ್ನನ್ನು	ನಮ್ಮನ್ನು	ನಿನ್ನನ್ನು	ನಿಮ್ಮನ್ನು	ತನ್ನನ್ನು	ತಮ್ಮನ್ನು.
ತೃ	ನನ್ನಿಂದ	ನಮ್ಮಿಂದ	ನಿನ್ನಿಂದ	ನಿಮ್ಮಿಂದ	ತನ್ನಿಂದ	ತಮ್ಮಿಂದ.
ಚ	ನನಗೆ	ನಮಗೆ	ನಿನಗೆ	ನಿಮಗೆ	ತನಗೆ	ತಮಗೆ.
ಪ	ನನ್ನದೆ	ನಮ್ಮದೆ	ನಿನ್ನದೆ	ನಿಮ್ಮದೆ	ತನ್ನದೆ	ತಮ್ಮದೆ
	ಸೆಯಿಂದ	ಸೆಯಿಂದ	ಸೆಯಿಂದ	ಸೆಯಿಂದ	ಸೆಯಿಂದ	ಸೆಯಿಂದ.
ಷ	ನನ್ನ	ನಮ್ಮ	ನಿನ್ನ	ನಿಮ್ಮ	ತನ್ನ	ತಮ್ಮ.
ಸ	ನನ್ನಲ್ಲಿ	ನಮ್ಮಲ್ಲಿ	ನಿನ್ನಲ್ಲಿ	ನಿಮ್ಮಲ್ಲಿ	ತನ್ನಲ್ಲಿ	ತಮ್ಮಲ್ಲಿ.

೭೫ - ಸುಪ್ಪುಪತರ ಮೇಲೆ ಬಂದು ಹೋಗುತ್ತದೆ.

ಸುಪ್ಪು ಅವ್ಯಯಗಳ ಮೇಲೆ ಬಂದು ಹೋಗುತ್ತದೆ - ಆದ್ದರಿಂದ ಎಲ್ಲಾ ವಿಭಕ್ತಿಗಳ ಅರ್ಥವು ಅವ್ಯಯಗಳಿಗೆ ಉಂಟು - ಆದ್ದರಿಂದ ತಿವಚನಭೇದವುಗಳಿಲ್ಲ - ಎಲ್ಲಾ ವಚನಗಳ ಅರ್ಥಗಳೂ ಉಂಟು ಆದ್ದರಿಂದ ಲಿಂಗಭೇದವುಗಳಿಲ್ಲವು.

೭೬ - ಅವ್ಯಯಗಳಿಂದ ಶೇಷ.

ಲಿಂಗತ್ರಯದಲ್ಲಿಯೂ - ವಚನದ್ವಯಗಳಲ್ಲಿಯೂ - ಸಪ್ತವಿಭಕ್ತಿಗಳಲ್ಲಿಯೂ - ವಾಂಚ್ಯೇರೀತಿಯಾಗಿರುವ ವಿಭಕ್ತಿಲೋಪಿಸಿದ ಸುಬಂತಶಬ್ದಗಳು.

೨೦ - ಅವುಗಳೆಷ್ಟುವಿಧವು.

ಶುದ್ಧಾವ್ಯಯವೆಂತಲೂ - ನಿಪಾತಾವ್ಯಯವೆಂತಲೂ - ಕೃದಂತಾವ್ಯಯವೆಂತಲೂ - ತದ್ಧಿತಾಂತಾವ್ಯಯವೆಂತಲೂ - ನಾಲ್ಕುವಿಧವು.

೨೧ - ಅವುಗಳಿಗೆ ಲಕ್ಷಣಾವೇನು.

ವಾಚ್ಯವಾದರ್ಥವುಳ್ಳ ಸಂಗಡಾದಿಗಳು - ಶುದ್ಧಾವ್ಯಯಗಳು ಯಾವ ಪದವು ಯಾವರ್ಥವನ್ನೇಳುತ್ತದೆಯೋ ಆ ಪದಕ್ಕದು ವಾಚ್ಯವು.

ನಿಪಾತಾವ್ಯಯವೆಂದರೆ ದ್ಯೋತ್ಯವಾದರ್ಥವುಳ್ಳ ಅಹಹಾದಿಗಳು ದ್ಯೋತ್ಯವೆಂದರೆ ಒಂದು ಪದದ ಅರ್ಥವು ಇತರ ಶೇರಿಕೆಯಿಂದ ತೋರುತ್ತದೆಯೋ ಆ ಪದಕ್ಕೆ ಆ ಅರ್ಥವು ದ್ಯೋತ್ಯವು - ಪ್ರತ್ಯಯಾವ್ಯಯಗಳು ವಾಚ್ಯಾರ್ಥವುಳ್ಳವಾದರೂ ಕೃತ್ತದ್ಧಿತಾಂತಗಳಾದದ್ದು - ಇವುಗಳಿಗೆಲ್ಲಾ ಉದಾಹರಣೆಯೂ ಪ್ರಯೋಗ ಕ್ರಮಗಳು - ಪ್ರಯೋಗ ಪ್ರಕರಣದಲ್ಲಿ ಸವಿಸ್ತಾರವಾಗಿ ಹೇಳಲ್ಪಡುತ್ತವೆ.

೨೨ - ಶುದ್ಧಾವ್ಯಯಗಳ್ಯಾವವು.

ಸಂಗಡಾದಿಗಳು.

ಸಂಗಡ - ಸಂಗಾತ - ಒಡನೆ - ಕೂಡ - ಓಸ್ಕರ - ಓಸರ - ಬಗ್ಗೆ ನಿಮಿತ್ತ - ನಿಮಿತ್ತವಾಗಿ - ತುಸುಕ - ಇಂತಲೂ - ಅಂತಲೂ - ಇಂತ ಅಂತ - ತನಕ - ವರಿಗೆ - ಪಟ್ಟಿಗೆ - ಪರ್ಯಂತ - ಪರ್ಯಂತರ ಸುತ್ತ - ಸುತ್ತಲು - ಸುತ್ತು - ಬಳಿಕ - ತರುವಾಯ - ಹೊರತು ಹೊರ್ತು - ಹೊರ್ತಾಗಿ - ಮುಂಚೆ - ಮುಂಚಿತವಾಗಿ - ಬಳಿಯ ಕಿರಿಗೆ - ಕಿರುಗ - ಬರಿದೆ - ಹಾಂಗೆ - ಹಾಗೆ - ಹೀಂಗೆ - ಹೀಗೆ - ಹ್ಯಾಂಗೆ ಹ್ಯಾಗೆ - ಆಗ - ಆಗಲು - ಆಗಿನಿಂದ - ಆಗ್ಗೆ - ಈಗ - ಈಗಲು - ಈಗಿನಿಂದ - ಈಗ್ಗೆ - ಯಾವಾಗ - ಯಾವಾಗಲು - ಯಾವಾಗಿನಿಂದ - ಯಾವಾಗ್ಗೆ - ನಿನ್ನೆ - ನಿನ್ನೆಯಿಂದ - ನಿನ್ನೆಗೆ - ನಿನ್ನಿನ - ಮೊನ್ನೆ ಮೊನ್ನೆಯಿಂದ - ಮೊನ್ನೆಗೆ - ಮೊನ್ನಿನ - ನಾಳೆ - ನಾಳೆಯಿಂದ - ನಾಳೆಗೆ - ನಾಳಿನ - ನಾಳಿದ್ದು - ನಾಳಿದ್ದರಿಂದ - ನಾಳಿದ್ದಕ್ಕೆ - ನಾಳಿದ್ದರ ಈಬಾರಿ - ಹಾಡಬಾರಿ - ಬೆಳಿಗ್ಗೆ - ಹಾತಾಶೆ - ಮುಂಜಾನೆ - ಬಯಿಗೆ - ತುಸ - ಬಹಳ - ಹೇರಳ - ಹೆಗ್ಗಳ - ಮತ್ತಿನ - ಅಂತೆ

ಓಪಾದೆಯಲ್ಲಿ - ಅಂತು - ಇಂತು - ಅಲ್ಲವೆ - ಏಂಗಡ - ಬೇರೆ - ಸುಮ್ಮನೆ - ಸುಮ್ಮಗೆ - ನೆಟ್ಟನೆ - ನೆಟ್ಟಗೆ - ಬಳ್ಳನೆ - ಬಿಂಮನೆ - ಬಿಂಮಗೆ ತೆಪ್ಪನೆ - ತೆಪ್ಪಗೆ - ಉಸಿಕನೆ - ಡೊಂಕನೆ - ಚಕ್ಕನೆ - ಡೊರನೆ - ಚಗನೆ - ಬೇಗನೆ - ಬೇಗ - ಒಮ್ಮೆಗೆ - ಒಟ್ಟಿಗೆ - ಕಿಂಪಗೆ - ಕಿಬ್ಬಗೆ - ಕಪ್ಪಗೆ ಕೇಂಯ್ಯಗೆ - ಕೈಂಯ್ಯಗೆ - ಬೆಳ್ಳಗೆ - ಮೆಲ್ಲನೆ - ಮೆಲ್ಲಗೆ - ತಣ್ಣನೆ - ತಣ್ಣಗೆ - ಸಣ್ಣನೆ - ಸಣ್ಣಗೆ - ಬೆಚ್ಚಗೆ - ಬೆಚ್ಚನೆ.

೨೦ - ನಿಪಾತಾವ್ಯಯಗಳು ಯಾವವು.

ಅಹಹ - ಅಕಟ - ಅಯ್ಯೊ - ಅಃ - ಊಃ - ಇಸ್ - ಎಲೆ - ಎಲೆಗೆ ಅಣೆ - ಎಲಾ - ಎಲ್ಯೈ - ಎಲೊ - ಅ - ಆ - ಆಂ - ಮಿಮಿ - ಉ - ಊ - ಎ - ಏ - ಐ ಒ - ಓ - ಹುಂ - ಹೊ - ಹೈ - ಹಾ - ಹಾ - ಹೊ - ಇತ್ಯಾದಿಗಳು.

೨೧ - ತದ್ಧಿತಾಂತಾವ್ಯಯಗಳು ಯಾವವು.

ಘಳಿರನೆ - ಊಗ - ಊಗಲು - ಅಂತು - ಅಂತೆ - ಇತ್ಯಾದಿಗಳು ತದ್ಧಿತ ಪ್ರಕರಣದಲ್ಲಿ ಸ್ಪಷ್ಟವು - ಅನೆ - ಗಲು - ಗ - ತು ತೆ - ಗೆ - ಗೈ - ಅಂಥಾ ಇತ್ಯಾದಿ ತದ್ಧಿತಾವ್ಯಯ ಪ್ರತ್ಯಯಗಳು.

೨೨ - ಕೃದಂತಾವ್ಯಯಗಳು ಯಾವವು.

ಅ - ಅಲು - ಅಲಿಕ್ಕೆ - ಇ - ಉ - ಅದೆ - ಉತ್ತ - ಉತೆ - ಉತ್ತಾ - ಉತಾ ಅರೆ - ಉವದು - ಉವದುಷ್ಟ - ಬೇಡ - ಬಹುದು - ಬೇಕು - ಬಾರದು ಇತ್ಯಾದಿಗಳು - ಕೃದವ್ಯಯಪ್ರತ್ಯಯಗಳು - ಮಾಡ - ಮಾಡಲು ಮಾಡಲಿಕ್ಕೆ - ಮಾಡಿ - ಇತ್ಯಾದಿಗಳು ಕೃತ್ಪ್ರಕರಣದೊಳಗೆ ವಿವರವಾಗಿ ಹೇಳಲ್ಪಡುತ್ತವೆ.

೨೩ - ಈ ಶಬ್ದಪ್ರಕರಣದಲ್ಲಿ ಹೇಳಿದ ವಿಧಿಗಳೆಲ್ಲಾ ಶಬ್ದಾನುಶಾಸನ ಶಬ್ದಮಣಿದರ್ಪಣಗಳಲ್ಲಿ ಹೇಳಲ್ಪಟ್ಟಿವೆಯೊ.

ಯೆಲ್ಲಾ ರೀತಿಯ ಪ್ರಯೋಗವನ್ನು ಅನುಸರಿಸಿ ಹೇಳಿದ್ದೆ ಹೊರತು ಒಂದು ವಿಧಿಯಾದರೂ - ಅದನ್ನನುಸರಿಸಿ ಹೇಳಲಿಲ್ಲ ಊದಕಿಕಲವು ಮಾತ್ರ ಪರದೂಬಂದಾಗಿದೆ.

ಇಂತು ಮೂರನೆಯ ಶಬ್ದಪ್ರಕರಣವು ಮುಗಿಯಿತು.

ಪ್ರಶ್ನೆ.	ಉತ್ತರವು.
೧ - ಆಖ್ಯಾತ ಪ್ರಕರಣದಲ್ಲೇನು ಹೇಳಲ್ಪಡುತ್ತವೆ.	ಆಖ್ಯಾತ ಪ್ರತ್ಯಯಗಳೂ ಅವುಗಳು ಬರುವ ಸ್ಥಲಗಳೂ ಅವು ಬರುವಾಗ ಪ್ರಕೃತಿಪ್ರತ್ಯಯಗಳಿಗೆ ಬರುವ ಲೋಪಾಗಮಾದೇಶಗಳೂ ಹೇಳಲ್ಪಡುತ್ತವೆ.
೨ - ಆ ಪ್ರತ್ಯಯಗಳು ಏತರ ಮೇಲೆ ಬರುತ್ತವೆ.	ಧಾತುಗಳ ಮೇಲೆ ಬರುತ್ತವೆ.
೩ - ಧಾತುವೆಂದರೆ ಯಾವದು.	ಕ್ರಿಯೆಯರ್ಥವಾಗುಳ್ಳದು - ಕ್ರಿಯೆಯೆಂದರೆ ಮಾಡೋಣ ಹೋಗೋಣ ಮುಂತಾದ ಕೆಲಸಗಳು.
೪ - ಆ ಧಾತುವೆಷ್ಟು ವಿಧವು.	ಶುದ್ಧ ಧಾತುವೆಂತಲೂ - ಪ್ರತ್ಯಯಾಂತ ಧಾತುವೆಂತಲೂ ಎರಡು ವಿಧವು.
೫ - ಅವು ಯಾವವು.	ಮಾಡು ಮೊದಲಾದವು ಶುದ್ಧಧಾತು - ಇಸು ಪ್ರತ್ಯಯಾಂತವಾದದ್ದು ಪ್ರತ್ಯಯ ಧಾತುವು.
೬ - ಅವು ಎಷ್ಟು ವರ್ಣಾಂತಗಳು.	ಆ - ಇ - ಈ - ಉ - ಊ - ಎ - ಏ - ಓ - ಈ ಯೆಂಟು ವರ್ಣಾಂತವಾಗಿರುವದು.
೭ - ಆಖ್ಯಾತ ಪ್ರತ್ಯಯಗಳೆಷ್ಟು ವಿಧವು.	ವರ್ತಮಾನ - ಭೂತ - ಭಾವಿ - ಭವಿಷ್ಯತ್ತು - ವಿಧಿ - ನಿಷೇಧಗಳೆಂದು - ಆರು ವಿಧವಾಗಿರುವವು.
೮ - ವರ್ತಮಾನವೆಂದರೇನು,	ಮಾತನಾಡುವ ಸಮಯದಲ್ಲಿ ತೊಡಗಿದ ಕೆಲಸವು ಮುಗಿಯದ ಕಾಲವ ಹೇಳುವ ಧಾತುವಿನ ಮೇಲೆ ಬರುವ ಪ್ರತ್ಯಯ ವರ್ತಮಾನ ಪ್ರತ್ಯಯವು.
೯ - ಭೂತವೆಂದರೇನು.	ಮಾತನಾಡುವಾಗ ಮುಗಿದ ಕೆಲಸವ ಹೇಳುವ ಧಾತುವಿನ ಮೇಗಣ ಪ್ರತ್ಯಯವು ಭೂತ ಪ್ರತ್ಯಯವು.
೧೦ - ಭಾವಿಯೆಂದರೇನು.	ಮುಂಗಾಲದಲ್ಲಿ ಹುಟ್ಟುವ ಕೆಲಸವ ಹೇಳುವ ಧಾತುವಿನ ಮೇಗಳದು.
೧೧ - ಭವಿಷ್ಯತ್ತೆಂದರೇನು.	ಮುಂಗಾಲದಲ್ಲಿ ಹುಟ್ಟುವ ಮಾಡ ಕೂಡುವ ಕೆಲಸವ ಹೇಳುವ ಧಾತುವಿನದು ಪ್ರತ್ಯಯವು.

೧೨ - ವಿಧಿಯೆಂದರೇನು.

ಪ್ರೇರೇಪಣೆಗೆ ವಿಷಯವಾದ ಕೆಲಸವ ಹೇಳುವ ಪ್ರತ್ಯಯವು.

೧೩ - ನಿಷೇಧವೆಂದರೇನು.

ಇಲ್ಲದೆ ಇರುವಿಕೆಗೆ ಪ್ರತಿಯೋಗಿಯಾದ ಕ್ರಿಯೆಯ ಹೇಳುವ ಧಾತುವಿನ ಮೇಗಣ ಪ್ರತ್ಯಯವು - ನಿಷೇಧ ಪ್ರತ್ಯಯವು.

೧೪ - ಈ ಪ್ರತ್ಯಯಗಳಿಗೆಲ್ಲಾ ಅರ್ಥವೇನು.

ಕರ್ತೃವಾಗಲಿ - ಕರ್ಮವಾಗಲಿಯರ್ಥವು - ಕರ್ತೃವೆಂದರೆ ಮಾಡುವದು - ಕರ್ಮವೆಂದರೆ ಮಾಡಲ್ಪಡುವದು.

೧೫ - ಈ ಮೂರು ವಿಧದ ಒಂದೊಂದೆಷ್ಟು ವಿಧವಾಗಿರುವದು.

ಪ್ರಥಮಪುರುಷವೆಂತಲೂ - ಮಧ್ಯಮಪುರುಷವೆಂತಲೂ ಉತ್ತಮಪುರುಷವೆಂತಲೂ - ಮೂರುವಿಧವಾಗಿರುವದು.

೧೬ - ಯಾವ ಯಾವ ಪುರುಷವೆಲ್ಲೆಲ್ಲಿ ಬರುತ್ತದೆ.

ನಾಶಬ್ದಾರ್ಥವನ್ನು ಹೇಳುವಾಗ ಉತ್ತಮಪುರುಷವು - ನೀಶಬ್ದಾರ್ಥವ ಹೇಳುವಾಗ ಮಧ್ಯಮಪುರುಷ - ಕಡಮೆಶಬ್ದಾರ್ಥಗಳ ಹೇಳುವಾಗ ಪ್ರಥಮಪುರುಷವೂ ಬರುತ್ತದೆ.

೧೭ - ಆಖ್ಯಾತಕ್ಕೆ ಲಿಂಗವಚನಗಳುಂಟಾ.

ತಾನು ಹೇಳುವ ಪದಾರ್ಥವು - ಯಾವಲಿಂಗವೊ - ಯಾವ ವಚನವೊ ಆ ಲಿಂಗವಾಗಿಯೂ ಆ ವಚನವಾಗಿಯೂ ಈ ಪ್ರತ್ಯಯಗಳಿರುತ್ತವೆ - ಆದರೆ ಲಿಂಗಭೇದವಿಲ್ಲದ ನಾನೀಶಬ್ದಾರ್ಥಗಳ ಹೇಳುವ ಉತ್ತಮ ಮಧ್ಯಮಪುರುಷಗಳಿಗೆ ಲಿಂಗಭೇದವಿಲ್ಲ ಕಡಮೆಶಬ್ದಾರ್ಥಗಳ ಹೇಳುವ ಪ್ರಥಮಪುರುಷವು ವಾಚ್ಯಲಿಂಗವಾಗಿರುವವು.

೧೮ - ಪುಂಸ್ತ್ರೀಲಿಂಗಗಳ ಬಹುವಚನ ಬೇರೆಯೊ.

ಪುಂಸ್ತ್ರೀಲಿಂಗಗಳ ಬಹುವಚನ ಒಂದೆಯಾಗಿರುತ್ತವೆ.

೧೯ - ವರ್ತಮಾನ ಪ್ರತ್ಯಯಗಳು ಯಾವವು.

ಪ್ರಥಮ - ಮಧ್ಯಮ - - ಉತ್ತಮ.

ಪುಮೆ - ಆನೆ - ಏ - ಕ - ಈಯೆ - - ಏನೆ.

ಸ್ತ್ರೀ - ಆಳೆ - ಬ - ಈರಿ - - ಏವೆ.

ದ್ವಿಬ - ಆರೆ.

ನಚೆ - ಅದೆ.

ನಬ - ಅವೆ.

೨೦ - ಭೂತ ಪ್ರತ್ಯಯಗಳು ಯಾವವು.

ಪ್ರಥಮ - ಮಧ್ಯಮ - - - ಉತ್ತಮ.

ಪುಮೆ - ಅನು - ಏ - ಕ - ಎ - - - ಎನು.

೭೮ ಪ್ರಶ್ನೆ.	ಉತ್ತರವು.
	ಸ್ತ್ರೀ - ಅಳು - ಬ - ಇ - ೦ : : : ಎವು.
	ದ್ವಿಬ - ಅರು.
	ವಚೆ - ಇತು-
	ನಬ - ಅವು.
೨೧ - ಭಾವಿಪ್ರತ್ಯಯಗಳು ಯಾವವು.	ಭೂತ ಪ್ರತ್ಯಯಗಳೇ ಭಾವಿ ಪ್ರತ್ಯಯಗಳು.
	ಪ್ರಥಮ - ಮಧ್ಯಮ : - ಉತ್ತಮ.
೨೨ - ಭವಿಷ್ಯತ್ಪ್ರತ್ಯಯಗಳು ಯಾವವು.	ಪುಮೆ - ಊನು.
	ಸ್ತ್ರೀ - ಊಳು - ಏ - ಈಯೆ : : : ಏನು.
	ದ್ವಿಬ - ಊರು - ಬ - ಈರಿ : : ಏವು.
	ನಚೆ - ಈತು.
	ನಬ - ಊವು.
	ಪ್ರ : ಮ : ಉ:
೨೩ - ವಿಧಿಪ್ರತ್ಯಗಳು ಯಾವವು.	ಏ - ಅಲಿ - : - ಅಯ್ - ಅಲಿ - ಉವೆ.
	ಬ - ಉವದು - - ಇರಿ - ಇರಿ - ಅಲಿ - ಉವ.
೨೪ - ನಿಷೇಧಪ್ರತ್ಯಗಳು ಯಾವವು.	ಭೂತ ಪ್ರತ್ಯಯಗಳೇ - ನಿಷೇಧಕ್ಕೂ ಪ್ರತ್ಯಯಗಳು - ಊದಶಿ ಮಧ್ಯಮ ಬರುವ ನಬ ಮಾತ್ರ - ಅರಿ.
೨೫ - ವರ್ತಮಾನಪ್ರತ್ಯಯ ಪರವಾದರೇನಾಗಮ ಬರುತ್ತದೆ.	ಉತ್ತ - ಎಂಬಾಗಮ ಬರುತ್ತದೆ.
೨೬ - ಭೂತದಲ್ಲೇನಾಗಮ ಬರುತ್ತದೆ.	ದಕಾರಾಗಮ ಬರುತ್ತದೆ - ಉಕಾರಾಂತ ಧಾತು ವಿಷಿದ ಕಾರಾಗಮ ಪರವಾಗಲು - ಧಾತುವಿನ ಕಡೆಯ ಕಾರಕ್ಕಿಇಕಾರಾದೇಶ ಬರುತ್ತದೆ - ಆಗಮಗಳು ಪರವಾಗಲು ಬಾರದು - ಭೂತ ವಿಕಾರಿ ಧಾತುಗಳಿಗೆಲ್ಲಾ ಪರವಾದಾಗಲೂ ದಕಾರಾಗಮ ಬರುತ್ತದೆ.
೨೭ - ಭಾವಿಗೇನು ಬರುತ್ತದೆ.	ಉವಾಗಮ ಬರುತ್ತದೆ.

ప్రశ్నె.	ఉత్తరవు.
౨౯ - ఆశీర్వృత్తిగెను బరుత్తదె.	ఈదు - ఈరి - ఈయెగళన్నుళిదకడమె ప్రత్యయగళు పరవాగలు ఆశీర్వృత్తిప్రత్యయ పరవాదాగ ఇకారవన్నుళిద దలుకారాంతదలుకారక్కిగ్నకారాదేశ బరుత్తదె - కడమెవర్ణాంతగళిగూ - ఇకారవన్నుళిదు వలుకారాంతధాతుగళిగూ ఎల్లా ప్రత్యయగళల్లూ దకారాగమ బరుత్తదె.
౩౦ - విధిప్రత్యయగళిగెను బరుత్తదె.	విధిప్రత్యయపరవాగలు ఊగమగళాందూన్నల్ల - మధ్యమైకవచనక్కిమొపవెల్లా కడెయల్లూ బరుత్తదె - ఊబరువచనదల్లి ఉకారాపుళిదవర్ణాంతగళమేలి - గ్నరి మాత్ర బరుత్తదె.
౩౧ - నిషేధక్కెను బరుత్తదె.	సుమ్మనె ప్రకృతిగూ ప్రత్యయక్కూ సంబంధబందరె అదు నిషేధవు.

		వర్తమాన.	భూత.	భావి.	
ప్ర -	పు -	మాడుత్తానె -	మాడిదను -	మాడువను -	అవను.
	స్త్రీ -	మాడుత్తాళె -	మాడిదళు -	మాడువళు -	అవళు.
	ద్వి -	మాడుత్తారె -	మాడిదరు -	మాడువరు -	అవరు.
	నచే -	మాడుత్తదె -	మాడితు -	మాడువదు -	అదు.
	నబ -	మాడుత్తవె -	మాడిదవు -	మాడువవు -	అవు.
మ -	ఏ -	మాడుత్తి -	మాడిది -	మాడువి	నీను.
		మాడుత్తీయె -	మాడిదె -	మాడువె.	
	బ -	మాడుత్తీరి -	మాడిదిరి -	మాడువిరి -	నీవు.
ఉ -	ఏ -	మాడుత్తేనె -	మాడిదెను -	మాడువెను -	నాను.
	బ -	మాడుత్తేవె -	మాడిదెవు -	మాడువెవు -	నావు.

		ఆశీర్వృత్తి.	విధి.	నిషేధ.
ప్ర -	పు -	మాడియాను -	మాడలి -	మాడను.
	స్త్రీ -	మాడియాళు - -	డాం - - -	మాడళు.
	ద్విబ -	మాడియారు - -	డాం - - -	మాడరు.
	నచే -	మాడీతు - - -	డాం - - -	మాడదు.
	నబ -	మాడియావు - - -	డాం - -	మాడవు.

 ಪ್ರಶ್ನೆ. ಉತ್ತರವು.

ಮ - ಏ - ಮಾಡೀಯೆ - ಮಾಡು - - ಮಾಡೆ.
ಬ - ಮಾಡೀರಿ - ಮಾಡಿ - ಮಾಡಿರಿ - ಮಾಡರಿ.

ಉ - ಏ - ಮಾಡಿಯೇನು - ಮಾಡಲಿ - ಮಾಡುವೆ - ಮಾಡೆನು.
ಬ - ಮಾಡಿಯೇವು - ಮಾಡಲಿ - ಮಾಡುವ - ಮಾಡೆವು.

ಯಿಂಗೆ ಬಾಳು ಮೊದಲಾದ ಉಕಾರಾಂತ ಧಾತುಗಳಿಗೆಲ್ಲಾ ರೂಪಗಳ ಹೇಳಿಕೊಳ್ಳುವದು.

ವರ್ತಮಾನ. ಭೂತ. ಭಾವಿ.

ಪ್ರ - ಪುಮೆ - ನುಡಿಯುತ್ತಾನೆ - ನುಡಿದನು - ನುಡಿಯುವನು.
ಸ್ತ್ರೀ - ನುಡಿಯುತ್ತಾಳೆ - ನುಡಿದಳು - ನುಡಿಯುವಳು.
ದ್ವಿಬ - ನುಡಿಯುತ್ತಾರೆ - ನುಡಿದರು - ನುಡಿಯುವರು.
ನಏ - ನುಡಿಯುತ್ತದೆ - ನುಡಿಯಿತು - ನುಡಿಯುವದು.
ನಬ - ನುಡಿಯುತ್ತವೆ - ನುಡಿದವು - ನುಡಿಯುವವು.

ಮ - ಏ - ನುಡಿಯುತ್ತೀ - ನುಡಿಯುತ್ತೀಯೆ - ನುಡಿದೆ - ನುಡಿದೆ - ನುಡಿಯುವಿ - ನುಡಿಯುವೆ.
ಬ - ನುಡಿಯುತ್ತೀರಿ - ನುಡಿದಿರಿ - ನುಡಿಯುವಿರಿ.

ಉ - ಏ - ನುಡಿಯುತ್ತೇನೆ - ನುಡಿದೆನು - ನುಡಿಯುವೆನು.
ಬ - ನುಡಿಯುತ್ತೇವೆ - ನುಡಿದೆವು - ನುಡಿಯುವೆವು.

ಭವಿಷ್ಯತ್ತು. ವಿಧಿ. ನಿಷೇಧ.

ಪ್ರ - ಪುಮೆ - ನುಡಿದಾನು - ನುಡಿಯಲಿ - ನುಡಿಯುವದು - ನುಡಿಯನು.
ಸ್ತ್ರೀ - ನುಡಿದಾಳು - ಹಾಂ - - - ನುಡಿಯಳು.
ದ್ವಿಬ - ನುಡಿದಾರು - ಹಾಂ - - - ನುಡಿಯರು.
ನಏ - ನುಡಿದೀತು - ಹಾಂ - - ನುಡಿಯದು.
ನಬ - ನುಡಿದಾವು - ಹಾಂ - - ನುಡಿಯವು.

ಮ - ಏ - ನುಡಿದೀಯೆ - ನುಡಿ - - - ನುಡಿಯೆನು.
ಬ - ನುಡಿದೀರಿ - ನುಡಿಯಿರಿ - - - ನುಡಿಯರಿ.

ಉ - ಏ - ನುಡಿದೇನು - ನುಡಿಯಲಿ - ನುಡಿಯುವೆ - ನುಡಿಯೆನು.
ಬ - ನುಡಿದೇವು - ನುಡಿಯಲಿ - ನುಡಿಯುವ - ನುಡಿಯೆವು.

ಯಿಂಗೆ ಕಡೆ ಮೊದಲಾದ ಇಕಾರಾಂತಗಳಾದ ಧಾತುಗಳಿಗೂ ಹೇಳಿಕೊಳ್ಳುವದು.

౪౨ - మేలెహేళిదవిధిగళిగెల్లాదరూ అపవాదవుంటొ.

కెలవుధాతుగళిగె - భూతభవిష్యత్తుగళల్లియూ - కెలవుగళిగె - భూతభవిష్యద్భావిగళల్లియూ - కెలవుగళిగె భూతభవిష్యద్భావివిధినిషేధగళల్లియూ - కెలవుగళిగె - భూతభవిష్యద్భావివర్తమానగళల్లియూ - కెలవుగళిగె - భూతభవిష్యద్విధిగళల్లియూ - కెలవక్కె - విధియల్లియూ - వికారగళు బరుత్తదె.

౪౩ - యావధాతుగళిగె భూతభవిష్యత్తినల్లి వికారబరుత్తదె.

నగు - ఊగు - కాడు - కొరడు - కాణు - కళు - తేరు - సీను - మిళిరు - అగి - మని - హది - కొలు - ఈధాతుగళ మొదలాదద్దగాగళిగూ - నిల్లుధాతువిగూ - భూతభవిష్యత్తుగళల్లి ప్రకృతిప్రత్యయగళిగెవికారబరుత్తదె.

౪౪ - నగు మొదలాద ధాతుగళిగేను వికారబరుత్తదె.

నగు మొదలాద ధాతుగళ దువిగూ - ఆగమద దకారక్కూ - ఒందు సంయుక్తకకార ఆదేశవాగిబరుత్తదె.

		భూత.	భవిష్యత్తు.
ప్ర	పుమె	నక్కను	నక్కాను.
	స్త్రీ	నక్కళు	నక్కాళు.
	ద్విబ	నక్కరు	నక్కారు.
	నపె	నక్కితు	నక్కీతు.
	నబ	నక్కవు	నక్కావు.
మ	ఏ	నక్కె	నక్కియె.
	బ	నక్కిరి	నక్కిరి.
ఉ	ఏ	నక్కెను	నక్కేను.
	బ	నక్కెవు	నక్కేవు.

ఈమేరెగె - మిగు - హొగు - బిగు - ఉగు - ఈధాతుగళిగూ మిక్కను - హొక్కను - బిక్కను - ఉక్కను - ఇత్యాదిగళహేళిక్కొళ్ళువదు - కడమెరూపగళెల్లామాడుధాతువిన హాంగెహేళిక్కొళ్ళువదు.

೨೫ - ಆಗು ಮೊದಲಾದವುಗಳಿಗೇನು ಬರುತ್ತದೆ.

ಆಗು ಮೊದಲಾದವುಗಳಿಗೆ ಭೂತಕೃದ್ವಿಕೃತಿಗಳಲ್ಲಿ ಧಾತುವಿನ ದುವಿಗೆ ಲೋಪ ಬರುತ್ತದೆ - ಇತು ಪ್ರತ್ಯಯ ಪರವಾದಾಗ ಆಗಮದ ದಕಾರಕ್ಕೆ ಯಕಾರಾದೇಶ ಸಹ ಬರುತ್ತದೆ.

ಆಗು - ಆದನು - ಆದಾನು - ಆಯಿತು - ಹೋಗು - ಹೋದನು - ಹೋದಾನು - ಹೋಯಿತು - ಇತ್ಯಾದಿ - ಆಗು - ಹೋಗು - ಇವೆರಡೂ ಆಗ್ವಾದಿಗಳು.

೨೬ - ಕೊಡು ಮೊದಲಾದ ಧಾತುಗಳಿಗೇನು ಬರುತ್ತದೆ.

ಕೊಡು ಮೊದಲಾದ ಧಾತುಗಳ ಡುವಿಗೂ - ದಕಾರಾಗಮಕ್ಕೂ ಭೂತಕೃದ್ವಿಕೃತಿಗಳಲ್ಲಿ - ಒಂದು ಸಂಯುಕ್ತ ಟಕಾರಾದೇಶ ಬರುತ್ತದೆ.

ಕೊಡು - ಕೊಟ್ಟನು - ಕೊಟ್ಟಾನು - ಬಿಡು - ಅಡು - ಇಡು - ನಡು - ಪಡು - ಸುಡು - ಉಡು - ಕೆಡು - ಮಡು - ತೊಡು - ಪಡವಿಡು - ಪಾಡಮಡು - ಮುಂಬಡು - ಮೂಗುವಡು - ಕರುವಿಡು - ಬಾಳಿಡು - ಉಳಿಡು - ಗೋಳಿಡು - ಒಡಂಬಡು - ಬೇರ್ಪಡು - ಇವು ಇಪ್ಪತ್ತು ಕೊಡ್ವಾದಿಗಳು.

೨೭ - ಹಾರಡ್ವಾದಿಧಾತುಗಳಿಗೇನು ಬರುತ್ತದೆ.

ಹಾರಡು ಮೊದಲಾದ ಧಾತುವಿನ ಡುವಿಗೂ - ಆಗಮದಕಾರಕ್ಕೂ - ಒಂದು ಟಕಾರವಾದೇಶವಾಗಿ ಬರುತ್ತದೆ - ಆದರೆ ಹಾರಡು ಧಾತುವಿಗೆ ನಿತ್ಯವಾಗಿಯೂ - ಕಡಮೆ - ಬಿಸುಡು - ಬಿಸಾಡು ಧಾತುಗಳಿಗೆ ವಿಕಲ್ಪವಾಗಿಯೂ - ಟಕಾರಾದೇಶ ಬರುತ್ತದೆ - ಬಿಸುಡು ಬಿಸಾಡು - ಧಾತುಗಳಿಗೆ - ಟಕಾರಾದೇಶ ಬಾರದಾಗ ಮಾಡು ಧಾತುವಿನ ಹಾಂಗೆ ರೂಪವಾಗುತ್ತದೆ - ಹಾರಡು - ಹಾರಟನು - ಹಾರಟಾನು - ಬಿಸುಡು - ಬಿಸುಟನು - ಬಿಸುಡಿದನು - ಬಿಸಾಡು - ಬಿಸಾಟನು - ಬಿಸಾಡಿದನು - ಹೊರಡು - ಬಿಸುಡು - ಬಿಸಾಡು - ಈ ಮೂರು ಹಾರಡ್ವಾದಿಗಳು.

೨೮ - ಕಾಣ್ವಾದಿಗಳಿಗೇನು ಬರುತ್ತದೆ.

ಕಾಣ್ವಾದಿಗಳ ಣುವಿಗೆ ಣಕಾರಾದೇಶವೂ - ಆಗಮದಕಾರಕ್ಕೆ - ಡಕಾರಾದೇಶವೂ ಬರುತ್ತದೆ - ಆದರೆ ಕಾಣು ಧಾತುವಿನ ಆಕಾರಕ್ಕೆ - ಹ್ರಸ್ವಸಹಾ ಬರುತ್ತದೆ - ಉಣ್ಣು ಕೊಳ್ಳು ಧಾತುಗಳ ಣುವಿನ ಒಂದಳ ವ್ಯಂಜನಕ್ಕೆ - ಲೋಪಸಹಾ ಬರುತ್ತದೆ.

ಕಾಣು - ಕಂಡನು - ಕಂಡಾನು - ಉಣ್ಣು - ಉಂಡನು - ಉಂಡಾನು - ಕೊಳ್ಳು - ಕೊಂಡನು - ಕೊಂಡಾನು - ಇತ್ಯಾದಿ - ಕಾಣು - ಉಣ್ಣು - ಕೊಳ್ಳು - ಈ ಮೂರೂ ಕಾಣ್ಯಾದಿಗಳು.

೫೯ - ಕಲ್ಯಾದಿಧಾತುಗಳಿಗೇನು ಬರುತ್ತದೆ.

ಕಲ್ಯಾದಿಧಾತುಗಳ ದುವಿಗೆ ಸಂಯುಕ್ತದಕಾರಾದೇಶ ಬರುತ್ತದೆ - ಆದರೆ - ಅಗಣಾಪಠಿತವಾದ - ಗೆಲ್ಲು-ಮೆಲ್ಲುಗಳ ದುವಿನಯಿಂದ ಳಲಕಾರಕ್ಕೆ ಲೋಪವೂ - ಏಳು - ಬೀಳು - ಗಳ ದೀರ್ಘಕ್ಕೆ ಹ್ರಸ್ವವೂ - ಸಹಾ ಬರುತ್ತದೆ.

ಕಳು - ಕದ್ದನು - ಕದ್ದಾನು - ಗೆಲ್ಲು - ಗೆದ್ದನು - ಗೆದ್ದಾನು - ಮೆಲ್ಲು ಮೆದ್ದನು - ಮೆದ್ದಾನು - ಏಳು - ಎದ್ದನು - ಎದ್ದಾನು - ಬೀಳು - ಬಿದ್ದನು ಬಿದ್ದಾನು - ಇತ್ಯಾದಿ - ಕಳು - ಗೆಲ್ಲು - ಮೆಲ್ಲು - ಏಳು - ಬೀಳು - ಇವು ಐದೂ ಕಲ್ಯಾದಿಗಳು.

೬೦ - ತೆರ್ಯಾದಿಧಾತುಗಳಿಗೇನು ಬರುತ್ತದೆ.

ತೆರ್ಯಾದಿಧಾತುಗಳ ದುವಿಗೂ - ಆಗಮದಕಾರಕ್ಕೂ - ಒಂದು ಸಂಯುಕ್ತತಕಾರವಾದೇಶವಾಗಿ ಬರುತ್ತದೆ - ಊದರೆ - ಕೀಳು ಧಾತುವಿನ ಈಕಾರಕ್ಕೆ ಹ್ರಸ್ವ ಸಹಾ ಬರುತ್ತದೆ.

ತೆರು - ತೆತ್ತನು - ತೆತ್ತಾನು - ಕೀಳು - ಕಿತ್ತನು - ಕಿತ್ತಾನು - ಇತ್ಯಾದಿ ತೆರು - ಹಾರು - ಪೆರು - ಎಚ್ಚರು - ಊಸರು - ಬೇಸರು - ಉಳು - ಅಳು - ಮಿದಿ - ಕೀಳು - ಇವು ಹತ್ತು - ತೆರ್ಯಾದಿಗಳು.

೬೧ - ಸೀನ್ಯಾದಿಗಳಿಗೇನು ಬರುತ್ತದೆ.

ಸೀನ್ಯಾದಿಗಳ ದುವಿಗೂ - ಆಗಮದಕಾರಕ್ಕೂ - ಒಂದು ತಕಾರವಾದೇಶವಾಗಿ ಬರುತ್ತದೆ.

ಸೀನು - ಸೀತನು - ಸೀತಾನು - ಇತ್ಯಾದಿ - ಸೀನು - ಊನು ನೋನು - ಕೂರು - ಹೊಲು - ಹೇಲು - ಸೋಲು - ನೂಲು - ಸಾಲು - ವೇಲು ಜ್ವಾಲು - ಇವು ಹನ್ನೊಂದೂ - ಸೀನ್ಯಾದಿಗಳು.

೬೨ - ಮಿಳಿರ್ಯಾದಿಗಳಿಗೇನು ಬರುತ್ತದೆ.

ಮಿಳಿರ್ಯಾದಿಗಳ ಕಡೆಯುಕಾರಕ್ಕೆ ಲೋಪ ಬರುತ್ತದೆ - ಆಗಮದಕಾರಕ್ಕೆ ತಕಾರಾದೇಶ ಬರುತ್ತದೆ.

ಮಿಳಿರು - ಮಿಳಿರ್ತನು - ಮಿಳಿರ್ತಾನು - ಇತ್ಯಾದಿ - ಮಿಳಿರು - ಕಾ

ನರು - ತಳಿರು - ಚಿಸರು - ಮಡಲು - ಕವಲು - ಬಲು - ಈಸು - ಬೆವರು - ಈಯೊಂಬತ್ತುಮಿಳಿರ್ವಾದಿಗಳು.

೪೩ - ಅರ್ಯಾದಿಗಳಿಗೇನು ಬರುತ್ತದೆ.

ಅರ್ಯಾದಿಗಳಿಗಿಂತ ಪರವಾದಾಗಮದಕಾರಕ್ಕೆ - ತಕಾರಾದೇಶ ಬರುತ್ತದೆ.

ಅರಿ - ಅರಿತನು - ಅರಿತಾನು - ಇತ್ಯಾದಿ - ಅರಿ - ಕುರಿ - ಕಲಿ - ಅವಿ - ಕಳಿ - ಬಳಿ - ಮಲೆ - ಮೊಳೆ - ಕೊಳೆ - ಮರೆ - ಇವು - ಹತ್ತು ಅರ್ಯಾದಿಗಳು.

೪೪ - ಮನ್ಯಾದಿಗಳಿಗೇನು ಬರುತ್ತದೆ.

ಮನ್ಯಾದಿಗಳಿಗಿಂತ ಪರವಾದಾಗಮದಕಾರಕ್ಕೆ ವಿಕಲ್ಪವಾಗಿ ತಕಾರಾದೇಶ ಬರುತ್ತದೆ.

ಮನಿ - ಮನಿತನು - ಮನಿದನು - ಮನಿತಾನು - ಮನಿದಾನು ಇತ್ಯಾದಿ - ಮನಿ - ಬಿರಿ - ರುಸಿ - ನುಸಿ - ಬಸಿ - ಕುಸಿ - ಹಸಿ - ಕಸಿ ಬಿಸಿ - ಅಲೆ - ಬೆಸೆ - ಎಸೆ - ಕೊಸೆ - ಮಸೆ - ಇವು ಹದಿನಾಲ್ಕೂ ಮನ್ಯಾದಿಗಳು.

೪೫ - ಹದ್ಯಾದಿಗಳಿಗೇನು ಬರುತ್ತದೆ.

ಹದ್ಯಾದಿಗಳ ಕಡೆಯ ಸ್ವರಕ್ಕೆ ವಿಕಲ್ಪವಾಗಿ ಲೋಪ ಬರುತ್ತದೆ.

ಹದಿ - ಹದ್ದನು - ಹದಿದನು - ಹದ್ದಾನು - ಹದಿದಾನು - ಇತ್ಯಾದಿ ಹದಿ - ಒಾದಿ - ಒದೆ - ಇವು ಮೂರೂ ಹದ್ಯಾದಿಗಳು.

೪೬ - ಕೊಲ್ವಾದಿಗಳಿಗೇನು ಬರುತ್ತದೆ.

ಕೊಲ್ವಾದಿಗಳ ದುವಿಗೂ - ಆಗಮದಕಾರಕ್ಕೂ - ಒಂದು ದಕಾರವಾದೇಶವಾಗಿ ಬರುತ್ತದೆ - ದುವಿನಯಿಂದಲ ಲಕಾರಕ್ಕೆ ನಕಾರಾದೇಶ ಬರುತ್ತದೆ.

ಕೊಲ್ಲು - ಕೊಂದನು - ಕೊಂದಾನು - ಇತ್ಯಾದಿ - ಕೊಲ್ಲು - ಸಲ್ಲು ಇವು ಎರಡೂ ಕೊಲ್ವಾದಿಗಳು.

೪೭ - ನಿಲ್ಲು ಧಾತುವಿಗೇನು ಬರುತ್ತದೆ.

ನಿಲ್ಲು ಧಾತುವಿನ ದುವಿಗೂ ಆಗಮದಕಾರಕ್ಕೂ - ಒಂದು ತಕಾರವಾದೇಶವಾಗಿ ಬರುತ್ತದೆ - ದುವಿನಯಿಂದಲ ಲಕಾರಕ್ಕೆ ನಕಾರಾದೇಶ ಬರುತ್ತದೆ.

ನಿಲ್ಲು - ನಿಂತನು - ನಿಂತಾನು - ಇತ್ಯಾದಿ.

೪೮ - ಯಾವ ಧಾತುಗಳಿಗೆ ಭೂತಕೃದ್ವಿಭಕ್ತ್ಯಾದಿಯಾಕರಲ್ಲಿಯೂ ವಿಕಾರ ಬರುತ್ತದೆ.

ತಿನ್ನು - ಎನ್ನು ಧಾತುಗಳಿಗೆ ಭೂತಕೃದ್ವಿಭಕ್ತಿಗಳ ಆಗಮ ದಕಾರ ಪರವಾಗಲು - ಉಲೋಪ ಬರುತ್ತದೆ - ಭಾವಿಯಲ್ಲಿಯೂ ಆಗಮ ವಕಾರಕ್ಕೆ ಬಕಾರಾದೇಶವೂ - ಧಾತುಗಳ ಉವಿಗೆ ಲೋಪವೂ ಅದರ ಹಿಂದಣ ನಕಾರಕ್ಕೆ ಬಿಂದುವೂ - ವಿಕಲ್ಪವಾಗಿ ಬರುತ್ತದೆ.

ತಿನ್ನು - ತಿಂದನು - ತಿಂದಾನು - ತಿಂಬನು - ತಿನ್ನುವನು - ಇತ್ಯಾದಿ
ಎನ್ನು - ಎಂದನು - ಎಂದಾನು - ಎಂಬನು - ಎನ್ನುವನು - ಇತ್ಯಾದಿ.

ಕೆಲವರು ಈ ಧಾತುಗಳಿಗೆ ವರ್ತಮಾನ ಕಾಲದಲ್ಲಿ ಕೂಡಾ ಉತ್ತಾಗಮದ ಉಕಾರಕ್ಕೂ - ಧಾತುಗಳ ಉವಿಗೂ - ಲೋಪವ ವಿಕಲ್ಪವಾಗಿ ಹೇಳುತ್ತಾರೆ.

ತಿನ್ನುತ್ತಾನೆ - ತಿಂತಾನೆ - ಎನ್ನುತ್ತಾನೆ - ಎಂತಾನೆ - ಇತ್ಯಾದಿ.

೪೯ - ಯಾವ ಧಾತುಗಳಿಗೆ ಭೂತಕೃದ್ವಿಭಕ್ತ್ಯಾದಿ ವಿಧಿ ನಿಷೇಧಗಳಲ್ಲಿ ವಿಕಾರ ಬರುತ್ತದೆ:

ತರು ಬರು ಧಾತುಗಳಿಗೆ ದಕಾರಾಗಮ ಪರವಾಗಲು - ಧಾತುಗಳ ರುವಿಗೆ ನಕಾರಾದೇಶ ಬರುತ್ತದೆ - ಇತು ಪ್ರತ್ಯಯ ಪರವಾಗಲು ದಕಾರಾಗಮವಿಲ್ಲದೆ ರಕಾರಕ್ಕೆ ಲೋಪ ಸಹ ಬರುತ್ತದೆ ಭಾವಿಯಲ್ಲಿ ಧಾತುವಿನ ರುವಿಗೆ ಲೋಪವೂ - ಆಗಮ ವಕಾರಕ್ಕೆ ಹಕಾರಾದೇಶವೂ - ಬರುತ್ತದೆ.

ವಿಧಿಯಲ್ಲಿಯೂ - ಮಧ್ಯಮಪುರುಷೈಕವಚನದಲ್ಲಿಯೂ ತಾ - ಬಾ - ಎಂತಲೂ - ಆ ಬಹುವಚನದಲ್ಲಿ ತನ್ನಿ - ತನ್ನಿರಿ - ಬನ್ನಿ - ಬನ್ನಿರಿ - ಎಂತಲೂ - ಆಗುತ್ತದೆ - ನಿಷೇಧದಲ್ಲಿ - ಧಾತುಗಳ ರುವಿನ ಹಿಂದಣ ಅಕಾರಕ್ಕೆ ದೀರ್ಘ ಬರುತ್ತದೆ.

ತರು - ತಂದನು - ತಂತು - ತಂದಾನು - ತರುವನು - ತಹನು - ತಾ - ತನ್ನಿ - ತನ್ನಿರಿ - ತಾರನು - ಇತ್ಯಾದಿ - ಬರು - ಬಂದನು - ಬಂತು - ಬಂದಾನು - ಬರುವನು - ಬಹನು - ಬಾ - ಬನ್ನಿ - ಬನ್ನಿರಿ ಬಾರನು - ಇತ್ಯಾದಿ.

೫೦ - ಯಾವ ಧಾತುವಿಗೆ ಭೂತಕೃದ್ವಿಭಕ್ತ್ಯಾದಿ ವರ್ತಮಾ

ಇರು ಧಾತುವಿಗೆ ಬರುತ್ತದೆ - ಇರು ಧಾತುವಿಗೆ ಭೂತಕೃದ್ವಿಭಕ್ತಿಗಳಲ್ಲಿ ಅವರ ದಕಾರಾಗಮ ಪರವಾಗಲು - ಧಾತುವಿನ ರುವಿ

ಪ್ರಶ್ನೆ. ಉತ್ತರವು.

ನ ಭಾವಿಗಳಲ್ಲಿ ವಿಕಾರ ಬರುತ್ತದೆ.

ಗೆ ಒಂದು ದಕಾರಾದೇಶ ಬರುತ್ತದೆ - ಇರು ಪ್ರತ್ಯಯ ಪರವಾದಾಗ - ದಕಾರಾಗಮ ಬರುವದಿಲ್ಲ - ಇರುವಿನ ಇಕಾರಕ್ಕೆ ಲೋಪವೂ ಧಾತುವಿನ ದುವಿಗೆ ತಕಾರಾದೇಶವೂ ಬರುತ್ತದೆ - ಭಾವಿಯಲ್ಲಿ ವಿಕಲ್ಪವಾಗಿ ಧಾತುವಿನ ದುವಿಗೆ ಲೋಪವೂ - ವಕಾರಾಗಮಕ್ಕೆ ಹಕಾರಾದೇಶವೂ ಬರುತ್ತದೆ - ವರ್ತಮಾನದಲ್ಲಿ - ಧಾತುವಿನ ದುವಿಗೂ - ಉತ್ತರಾಗಮಕ್ಕೂ - ಒಂದು ಧಕಾರವಾಗಲಿ ಸಂಯುಕ್ತ ಧಕಾರವಾಗಲಿ - ಆದೇಶವಾಗಿ ಬರುತ್ತದೆ - ಒಂದು ವೇಳೆ ಧಾತುವಿನ ಇಕಾರಕ್ಕೆ ಅಕಾರ ಸಹಾ ಬರುತ್ತದೆ - ನಪುಂಸಕಲಿಂಗದಲ್ಲಿ ಪ್ರಕೃತಿಗೂ - ಉತ್ತರಾಗಮಕ್ಕೂ - ಲೋಪ ಬರುತ್ತದೆ - ಆ ಪ್ರತ್ಯಯಗಳ ಅಕಾರಕ್ಕೆ ವಿಕಲ್ಪವಾಗಿ ಇಕಾರಾದೇಶ ಸಹ ಬರುತ್ತದೆ.

ಇರು - ಭೂತ - ಇದ್ದನು - ಭವಿಷ್ಯತ್ತು - ಇದ್ದಾನು - ಭಾವಿ - ಇರುವನು - ಇಹನು - ಇತ್ಯಾದಿ.

ವರ್ತಮಾನದಲ್ಲಿ.

ಪುಏ.		ಸ್ತ್ರೀಏ.		ದ್ವಿಬ.		ನಏ:		ನಬ:
ಇಧಾನೆ	-	ಇಧಾಳೆ	-	ಇಧಾರೆ	-	ಇದೆ	-	ಇವೆ
ಇದ್ಧಾನೆ	-	ಇದ್ಧಾಳೆ	-	ಇದ್ಧಾರೆ	-	ಅದೆ	-	ಅವೆ
ಅಧಾನೆ	-	ಅಧಾಳೆ	-	ಅಧಾರೆ	-	ಇಧೆ	- -	ಇತ್ಯಾದಿ.

೭೧. ವಿಧಿ ಭೂತ ಭವಿಷ್ಯತ್ತುಗಳಲ್ಲಿ ಯಾವ ಧಾತುಗಳಿಗೆ ವಿಕಾರ ಬರುತ್ತದೆ.

ಬಾ - ಬೀ - ಕೀ - ಧಾತುಗಳಿಗೂ - ಈ - ಸಾ - ಧಾತುಗಳಿಗೂ ಮೀ - ಬೇ - ನೋ - ಧಾತುಗಳಿಗೂ - ವಿಧಿ ಮಧ್ಯಮ ಪುರುಷೈಕವಚನದಲ್ಲಿ - ಇ ಪ್ರತ್ಯಯವು - ಬಹುವಚನದಲ್ಲಿ - ಇರಿ ಪ್ರತ್ಯಯವೂ ಬರುತ್ತದೆ - ಬಾ - ಬೀ - ಕೀ - ಧಾತುಗಳಿಗೆ ಭೂತ ಭವಿಷ್ಯತ್ತುಗಳಲ್ಲಿ - ಆಗಮದಕಾರಕ್ಕೆ ತಕಾರಾದೇಶ ಬರುತ್ತದೆ.

ಈ - ಸಾ - ಧಾತುಗಳಿಗೆ - ಆಗಮದಕಾರಕ್ಕೆ ಸಂಯುಕ್ತ ತಕಾರಾದೇಶವೂ - ಪ್ರಕೃತಿಗೆ ಹ್ರಸ್ವವೂ - ಬರುತ್ತದೆ - ಮೀ ಬೇ - ನೋ - ಧಾತುಗಳಿಗೆ - ಆಗಮದಕಾರಕ್ಕೆ - ಲಿಂದಿನಕಾರಾಗಮವೂ - ಪ್ರಕೃತಿಗೆ ಹ್ರಸ್ವವೂ - ಬರುತ್ತದೆ.

ಬಾರೆಸ - ಬಾರಾಸ - ಬಾಯಿ - ಬಾಯಿರಿ - ಇತ್ಯಾದಿ.
ಇತ್ತೆಸ - ಇತ್ತಾಸ - ಈಯಿ - ಈಯಿರಿ - ಇತ್ಯಾದಿ.
ಮೀ - ಮಿಂದಸ - ಮಿಂದಾಸ - ಮೀಯಿ - ಮೀಯಿರಿ - ಇತ್ಯಾದಿ.

೭೩ - ಇನ್ನಾವಿಧಿಭೂತಭವಿಷ್ಯತ್ತುಗಳಲ್ಲಿಯಾವಧಾತುಗಳಿಗೆವಿಕಾರ ಬರುತ್ತದೆ.

ನೇಯುಮೊದಲಾದವುಗಳಿಗೆಭೂತಭವಿಷ್ಯತ್ತುಗಳದಕಾರ ಪರವಾಗಲುಧಾತುವಿನಕಡೆಯಕಾರಕ್ಕೆಲೋಪಬರುತ್ತದೆ-ಅದರಿಂದಆಯಕಾರಸಂಯುಕ್ತವಾಗಿದ್ದರೆಬಂದುಯಕಾರಕ್ಕೆ-ಸಹಲೋಪಬರುತ್ತದೆ-ಇರುಪ್ರತ್ಯಯಪರವಾದಾಗದಕಾರಾಗಮಬರುವದಿಲ್ಲ-ವಿಧಿಯಲ್ಲಿಮಧ್ಯಮಪುರುಷೈಕವಚನಕ್ಕೆ ಇಕಾರವೂ-ಬಹುವಚನಕ್ಕೆ-ಇರಿಯೂ-ಬರುತ್ತದೆ.

ನೇಯ - ನೇಯ್ದಸ - ನೇಯಿರು - ನೆಯ್ದಾಸ - ನೇಯಿ - ನೇಯಿರಿ - ಇತ್ಯಾದಿ - ನೇಯ - ಸುಯ - ಗೇಯ - ಊಯ - ಊರಯ ಬಯ - ಬಯ್ಯ - ಕೊಯ - ಕೊಯ್ಯ - ಹಾಯ - ಹೊಯ್ಯ ಒಯ್ಯ - ಕಾಯ - ಇವು ನೇಯ್ಯಾದಿಗಳು.

೭೪ - ಯಾವಧಾತುಗಳಿಗೆವಿಧಿಯಲ್ಲಿಮಾತ್ರವಿಕಾರ ಬರುತ್ತದೆ.

ಕಾಮೊದಲಾದಧಾತುಗಳಿಗೆ - ಮಧ್ಯಮಪುರುಷೈಕವಚನದಲ್ಲಿಇಪ್ರತ್ಯಯವೂ - ಬಹುವಚನದಲ್ಲಿಇರಿಪ್ರತ್ಯಯವೂ ಬರುತ್ತದೆ.

ಕಾ - ಕಾಯಿ - ಕಾಯಿರಿ - ಇತ್ಯಾದಿ.

ಕಾ - ಮಾ - ಮೇ - ಕೇ - ಠೇ - ಖೊ - ಇವು - ಊರೂ ಕಾಮೊದಲಾದವು.

೭೫ - ಕಾಲತ್ರಯದಲ್ಲಿಯೂಏಕರೂಪವಾದಧಾತುಗಳುಂಟೋ - ಅವುಗಳಿಗೆರೂಪವುಹ್ಯಾಂಗೆ.

ಊಪ - ಊರ - ಬಲ್ಲ - ಅರಿ - ಒಲ್ಲ - ಈಧಾತುಗಳಿಗೆಕಾಲಭೇದವತೋರಿಸುವಪ್ರತ್ಯಯಾಗಮಾದೇಶಗಳು ಬರುವದಿಲ್ಲ ಊಧಾತುಗಳಮೇಲಿಟ್ಟಾವಿಗೆಯೇಳಿದಪ್ರತ್ಯಯಗಳು ಬರುತ್ತವೆ ಮತ್ತೂಊಧಾತುಗಳಿಗೆಭವಿಷ್ಯದ್ವಿಧಿನಿಷೇಧಗಳು ಸಹಾಬರುವದಿಲ್ಲ.

ಊಪ - ಊರ - ಧಾತುಗಳು ಮತ್ತೊಂದುಧಾತುಗಳೊಂದಿಗೆ ಸೇರಿಯೇಬರುತ್ತವೆ - ಕಡೆಮೆಧಾತುಗಳು - ಒಂದುಧಾತುವಿನೊಂದಿಗೆಸೇರಿಯೂ ಪ್ರತ್ಯೇಕವಾಗಿಯೂಬರುವದುಂಟು - ಊಧಾತು

೭೬ ಪ್ರಶ್ನೆ. ಉತ್ತರವು.

ಗಳು ಯಾವ ಧಾತುಗಳೊಂದಿಗೆ ಸೇರುತ್ತವೆಯೋ - ಆಗಾ ಧಾತುಗಳಿಗೆ - ಅಲ್ ಪ್ರತ್ಯಯ ಬರುತ್ತದೆ - ಬಲ್ಲ ಧಾತು ಪರವಾದಾಗ ಅಲ್ ಪ್ರತ್ಯಯದ ಲಕಾರಕ್ಕೆ ಲೋಪ ಬರುತ್ತದೆ.

ಉದಾಹರಣೆ.

ಪ್ರ -	ಪುಂ -	ಆಪನು -	ಆರನು -	ಬಲ್ಲನು -	ಅರಿಯನು -	ಒಲ್ಲನು.
	ಸ್ತ್ರೀ -	ಆಪಳು -	ಆರಳು -	ಬಲ್ಲಳು -	ಅರಿಯಳು -	ಒಲ್ಲಳು.
	ದ್ವಿಬ -	ಆಪರು -	ಆರರು -	ಬಲ್ಲರು -	ಅರಿಯರು -	ಒಲ್ಲರು.
	ನಏ -	ಆಪದು -	ಆರದು -	ಬಲ್ಲದು -	ಅರಿಯದು -	ಒಲ್ಲದು.
	ನಬ -	ಆಪವು -	ಆರವು -	ಬಲ್ಲವು -	ಅರಿಯವು -	ಒಲ್ಲವು.
ಮ -	ಏ -	ಆಪೆ - ಆಪಿ -	ಆರೆ - ಆರಿ -	ಬಲ್ಲೆ - ಬಲ್ಲಿ -	ಅರಿಯೆ -	ಒಲ್ಲೆ.
	ಬ -	ಆಪಿರಿ -	ಆರಿರಿ -	ಬಲ್ಲಿರಿ -	ಅರಿಯಿರಿ -	ಒಲ್ಲಿರಿ.
ಉ -	ಏ -	ಆಪೆನು -	ಆರೆನು -	ಬಲ್ಲೆನು -	ಅರಿಯೆನು -	ಒಲ್ಲೆನು.
	ಬ -	ಆಪೆವು -	ಆರೆವು -	ಬಲ್ಲೆವು -	ಅರಿಯೆವು -	ಒಲ್ಲೆವು.

ಮಾಡಲಾಪನು - ಮಾಡಲಾರನು - ಮಾಡಬಲ್ಲನು - ಮಾಡಲರಿಯನು - ಮಾಡಲೊಲ್ಲನು ಇತ್ಯಾದಿ.

೭೭ - ಕಾಲತ್ರಯ ಪುರುಷತ್ರಯ ಲಿಂಗತ್ರಯ ವಚನದ್ವಯಗಳಲ್ಲಿಯೂ ಏಕರೀತಿಯಾಗಿರುವ ಧಾತುಗಳುಂಟೋ.

ಬೇಕು ಮೊದಲಾದ ಧಾತುಗಳೂ - ಬೇಡ ಮೊದಲಾದ ಧಾತುಗಳೂ - ಆ ಪ್ರಕಾರವಿರುತ್ತವೆ - ಈ ಧಾತುಗಳೂ - ಮತ್ತೊಂದು ಧಾತುವಿನೊಂದಿಗೆ ಸೇರಿಯೂ ಸೇರದೆಯೂ ಬರುವದುಂಟು - ಸೇರಿದಾಗ ಇವುಗಳು ಯಾವ ಧಾತುವಿನೊಂದಿಗೆ - ಸೇರುತ್ತವೆಯೋ - ಆ ಧಾತುವಿಗೆ ಅಲ್ ಪ್ರತ್ಯಯ ಬರುತ್ತದೆ - ವ್ಯಂಜನಾದಿಗಳು ಪರವಾಗಲು ಲಕಾರಕ್ಕೆ ಲೋಪ ಬರುತ್ತದೆ - ಬೇಕ್ವಾದಿಗಳ ಮೇಲೂ - ಬೇಡಾದಿಗಳ ಮೇಲೂ - ಬರುವ ಆಖ್ಯಾತ ಪ್ರತ್ಯಯಗಳಿಗೆ ಲೋಪ ಬರುತ್ತದೆ - ಬೇಕ್ವಾದಿಗಳು - ಯಾವರ್ಥವನ್ನು ಹೇಳುತ್ತವೆಯೋ - ಬೇಡಾದಿಗಳು ಅದರ ನಿಷೇಧವನ್ನು ಹೇಳುತ್ತವೆ.

ಅವನು - ಅವಳು - ಅವರು - ಅದು - ಅವು - ನೀನು - ನೀವು ನಾನು - ನಾವು - ಮಾಡಬೇಕು - ಮಾಡಬೇಡ - ಮಾಡಲಾಗದು ಇತ್ಯಾದಿ.

బేకు - బహుదు - కూడువదు - ఆగువదు - తక్కద్దు.

బేడ - బారదు - కూడదు - ఆగదు - తగదు.

కెలవరు - బేకు ధాతువినింద బేకు బేడ శబ్దగళూ - బరు ధాతువినింద బహుదు బారదు శబ్దగళూ - కూడు ధాతువినింద కూడువదు కూడదు శబ్దగళూ - తగు ధాతువినింద తక్కద్దు తగదు శబ్దగళూ - ఉంటాగుత్తవెయెందు హేళుత్తారె - బేడ ధాతువిగె మధ్యమపురుష బహువచనదల్లి వికల్పవాగి - ఇ - ఇరి - ప్రత్యయగళు బరుత్తవె స్వరపరవాదాగ బేడశబ్దక్కె - వకారాగమ బరుత్తదె - వ్యంజనపరవాదాగ మొందాగమవూ బరువదిల్లవు - ఒందూ పరవిల్లదాగ వు శబ్దాగమ బరుత్తదె - నీవు మాడబేడ - మాడబేడి - మాడబేడిరి - బేడహోగు - బేడవెందు - బేడ - బేడవు.

౨౬ - కాలపురుషలింగవచనభేదవిల్లదెయిరువంథ ధాతువాందిగె శేరదంథా ధాతుగళుంటో.

ఉంటు - ఇల్ల - హౌదు - అహుదు - అల్ల ఇత్యాది.

అవను - అవళు - అవరు - అదు - అవు - నీను - నీవు - నాను - నావు - ఉంటు - ఇల్ల - హౌదు - అహుదు - అల్ల - ఇత్యాది.

కెలవరు - ఉళు ధాతువిగె - ఉంటువెంతలూ - ఇరు ధాతువిన మేలి - ఇల్లవెంతలూ - ఆగు ధాతువిన మేలి - అహుదు హౌదు అల్లవెంతలూ బంధు ఆయ్యిత మోపిసుత్తదెయెనుత్తారె.

౨౭ - ఇన్నూయావధాతుగళన్నాదరూ మత్తొందు ధాతువినొందిగె శేరిసువదుంటా.

కొడ్వాదిధాతుగళన్ను శేరిసువదుంటు - అవు యావదకొందిగె శేరుత్తవెయో - ఆ ధాతువిగె పూర్వకాలద్యోతకవాద ఉ ప్రత్యయ బరుత్తదె - మాడిక్కొడుత్తానె - మాడిక్కొళ్ళుత్తానె - ఇత్యాది.

కొడు - కొళ్ళు - తెరు - బిడు - హాకు - ఆడు - హోగు ఇత్యాదిగళు కొడ్వాదిగళు.

೬೮ - ದುಪ್ರತ್ಯಯಕ್ಕೆ ಎಲ್ಲಾದರೂ ಲೋಪವುಂಟೋ.

ವಿಕಾರವಿಲ್ಲದ ದುಪ್ರತ್ಯಯಕ್ಕೆ ಲೋಪವೂ - ಪ್ರಕೃತಿಯ ಕಡೆಸ್ವರಕ್ಕೆ ಅಕಾರಾದೇಶವೂ - ಕೊಡು - ಕೊಳ್ಳು - ತರು ಧಾತುಗಳು - ಪರವಾಗಲು - ವಿಕಲ್ಪವಾಗಿ ಬರುತ್ತದೆ - ತೆಗೆ ಧಾತುವಿಗೆ ಮೇಲೆ ಹೇಳಿದ ಧಾತುಗಳು ಪರವಾಗಲು - ಧಾತುವಿನ ದುವಿಗೂ ದುಪ್ರತ್ಯಯಕ್ಕೂ ಲೋಪ ವಿಕಲ್ಪವಾಗಿ ಬರುತ್ತದೆ - ಕೆಲವರು ವಿಧಿಮಧ್ಯಮಪುರುಷೈಕವಚನದಲ್ಲಿ ಕೊಳ್ಳು ಧಾತುವಿನ ಳ್ಳಕ್ಕೆ ಲೋಪವನ್ನು ಸಹ ಹೇಳುತ್ತಾರೆ.

ಬರೆದುಕೊ - ಬರೆದುಕ್ಕೊಳ್ಳು - ಬರಕೊಳ್ಳು - ಬರಕೊ.
ತೆಗೆದುಕೊ - ತೆಗೆದುಕ್ಕೊಳ್ಳು - ತೆಕ್ಕೊಳ್ಳು - ತೆಕ್ಕೊ.
ಇತ್ಯಾದಿ.

೬೯ - ವರ್ತಮಾನಕಾಲದ್ಯೋತಕವಾದ ಉತ್ತಾಗಮದ ಮೇಲೆ ಯಾವ ಧಾತುವನ್ನಾದರೂ ಸೇರಿಸುವದುಂಟೋ.

ವರ್ತಮಾನದ್ಯೋತಕವಾದ ಉತ್ತಾಗಮದ ಮೇಲೆ ಇರು ಧಾತುವು ಸೇರಿಸಲ್ಪಡುತ್ತದೆ.

ಮಾಡುತ್ತಿದ್ದನು - ಮಾಡುತ್ತಿರುತ್ತಾನೆ - ಮಾಡುತ್ತಿರುವನು ಇತ್ಯಾದಿ.

೭೦ - ಆಖ್ಯಾತವು ಕರ್ಮವನ್ನು ಹೇಳುವಾಗೇನು ಬರುತ್ತದೆ.

ಯಾವ ಧಾತುವಿನ ಆಖ್ಯಾತವು ಕರ್ಮವನ್ನು ಹೇಳುತ್ತದೆಯೋ ಆ ಧಾತುವಿನ ಮೇಲೆ ಅಲ್ ಪ್ರತ್ಯಯವೂ ಅದರ ಮೇಲೆ ಪಡು ಧಾತುವೂ - ಬಂದು ಅದರ ಮೇಲೆ ಆಖ್ಯಾತ ಪ್ರತ್ಯಯಗಳೂ ಬರುತ್ತವೆ.

ಕರೆಯಲ್ಪಡುತ್ತಾನೆ - ಕರೆಯಲ್ಪಟ್ಟನು - ಕರೆಯಲ್ಪಡುವನು ಕರೆಯಲ್ಪಟ್ಟಾನು - ಕರೆಯಲ್ಪಡಲಿ - ಕರೆಯಲ್ಪಡನು - ಇತ್ಯಾದಿ.

೭೧ - ಇನ್ನಾವ ಪಡು ಧಾತುವನ್ನೆಲ್ಲಾದರೂ ಹೇಳುವದುಂಟೋ.

ಆತ್ಮನ ಗುಣವನ್ನು ಹೇಳುವ ಶಬ್ದಗಳ ಮೇಲೆ - ಪಡು ಧಾತು ಬಂದು - ಅದರ ಮೇಲೆ - ಆಖ್ಯಾತ ಪ್ರತ್ಯಯಗಳು ಬರುತ್ತವೆ.

ಸುಖಪಡುತ್ತಾನೆ - ದುಃಖಪಡುತ್ತಾನೆ - ಆಶ್ಚರ್ಯಪಡುತ್ತಾನೆ - ಇತ್ಯಾದಿ.

೭೨ - ಇಸು ಪ್ರತ್ಯಯವು ಯಾವದರ ಮೇಲೆ ಬರುತ್ತದೆ.

ಸಕಲ ಧಾತುಗಳ ಮೇಲೂ - ಈ ಧಾತುವಿನ ಅರ್ಥವಾದ ವ್ಯಾಪಾರಕ್ಕೆ - ಪ್ರೇರಣೆಯದೇಶವಾಗ - ಇಸು ಪ್ರತ್ಯಯ ಬರುತ್ತದೆ - ಈ ಪಾದಿ ಧಾತುಗಳಿಗೆ ಮಾತ್ರ ಬರುವದಿಲ್ಲವು - ಇಸು ಪ್ರತ್ಯಯ ಬಂದ ಮೇಲೆ ವಿಕಾರವನ್ನೈದದ ಉಕಾರಾಂತ ಧಾತುಗಳಿಗೆ ಯಾವ ಮೇರೆಗೆ ರೂಪವೋ - ಆ ಮೇರೆಗೆ ರೂಪವಾಗುತ್ತದೆ.

ಮಾಡಿಸುತ್ತಾನೆ - ಮಾಡಿಸಿದನು - ಮಾಡಿಸುವನು - ಮಾಡಿಸಿಯಾನು - ಮಾಡಿಸಲಿ - ಮಾಡಿಸನು - ಇತ್ಯಾದಿ.

೭೩ - ಪ್ರೇರಣವಿಲ್ಲದಾಗಸಹ ಇಸು ಪ್ರತ್ಯಯ ಬರುವದುಂಟೋ.

ಗತ್ಯುಪಸರ್ಗಪೂರ್ವಕವಾದ ಸಂಸ್ಕೃತ ಧಾತುಗಳ ಮೇಲೆಯಾಗಲಿ - ಬರೀ - ಸಂಸ್ಕೃತ ಧಾತುಗಳ ಮೇಲೆಯಾಗಲಿ ಲ್ಯುಟ್ಪ್ರತ್ಯಯವ ಮಾಡಿ - ಅದಕ್ಕೆ ಅನಾದೇಶ ಬಂದು ಸಂಧಿಕಾರ್ಯವೆಲ್ಲಾ ಮಾಡಿ - ಪಾಲನ - ಅನುಕರಣಾ - ಇತ್ಯಾದಿ ಶಬ್ದವು - ಸಿದ್ಧವಾದ ಮೇಲೆ ತ್ರಿಕಲೋಪವನ್ನು ಮಾಡಿ - ಇಸು ಪ್ರತ್ಯಯವನ್ನು ಸೇರಿಸಿದರೆ ಸಂಸ್ಕೃತ ಧಾತುವಿನ ಅರ್ಥವೋ - ಅದೇ ಅರ್ಥವು - ಇಸು ಪ್ರತ್ಯಯಾಂತಕ್ಕೆ ಆಗುತ್ತದೆ.

ಪಾಲನ - ಪಾಲಿಸು - ಅನುಕರಣಾ - ಅನುಕರಿಸು - ಇತ್ಯಾದಿ:

೭೪ - ಇದಕ್ಕೆ ಅಪವಾದವುಂಟೋ.

ಜಯನಾದಿ ಶಬ್ದಗಳಿಗೆ ಇಸು ಪ್ರತ್ಯಯ ಬರುವದಿಲ್ಲವು - ಈ ಧಾತ್ವರ್ಥವ ಹೇಳಬೇಕಾದಲ್ಲಿ - ಮಾಡು ಧಾತುವೊಂದಿಗೆ ಸಮಾಸವ ಮಾಡಿ ಹೇಳಬೇಕು.

ಜಯನಾ ಮಾಡು - ರಕ್ಷಣಾ ಮಾಡು - ಇತ್ಯಾದಿ.

ಜಯನ - ರಕ್ಷಣಾ - ಶ್ರವಣಾ - ರವಣಾ - ನಯನ - ಸ್ರವನ - ರಮನ - ಇತ್ಯಾದಿಗಳು ಜಯನಾದಿಗಳು.

೭೫ - ಯಾವಲ್ಯುಡಂತ ಶಬ್ದಗಳಿಗಾದರೂ ತ್ರಿಕಲೋಪವಾದರೂ ಬೇರೆ ಬರುವದುಂಟೋ.

ನಮನಾದಿಗಳಿಗೆ - ಇಸು ಪ್ರತ್ಯಯ ಬಂದಾಗ - ತ್ರಿಕಲೋಪವಾಗಲಿ - ದುವಿಗೆ ಮಾತ್ರ ಒಂದು ಯಕಾರಾದೇಶವಾಗಲಿ - ಬರುತ್ತದೆ.

ನಮನ - ನಮಿಸು - ನಮಯಿಸು - ಇತ್ಯಾದಿ.

೮೨ ಪ್ರಶ್ನೆ: ಉತ್ತರವು.

ನಮನ - ಕ್ರಮಣ - ರಮಣ - ಕ್ರಮಣ - ಗಮನ - ಸಂಕ್ರಮಣ - ಉಪಕ್ರಮಣ - ಉತ್ಕ್ರಮಣ - ವರಣ - ಧರಣ - ಹರಣ - ಕ್ಷರಣ - ಸ್ಮರಣ - ತ್ವರಣ - ಜ್ವರಣ - ಚರಣ - ಜನನ - ಮವನ - ಕಥನ - ಮಥನ - ಗ್ರಥನ - ಶಾರಣ - ಪೂರಣ - ಜರಣ - ಕದನ - ಇತ್ಯಾದಿಗಳು - ನಮನಾದಿಗಳು.

೭೭ - ಯಾವಲ್ಯುಡಂತ ಶಬ್ದದಹಾದುತ್ರಿಕಲೋಪವಿಲ್ಲದೆ ಇನುಸು ಪ್ರತ್ಯಯಮಾತ್ರ ಬರುವದುಂಟಾ.

ಆಹ್ವಾನಾದಿಗಳಿಗೆ ಇಸು ಪ್ರತ್ಯಯ ಪರವಾಗಲು - ಅಂತ್ಯಸ್ವರಕ್ಕೆ ಲೋಪ ಬರುತ್ತದೆ.

ಆಹ್ವಾನ - ಆಹ್ವಾನಿಸು - ಇತ್ಯಾದಿ.

ಆಹ್ವಾನ - ವ್ಯಾಖ್ಯಾನ - ಟಿಪ್ಪಣ - ಮನನ - ಸೇವನ - ಸಂಘನ - ಇತ್ಯಾದಿಗಳು - ಆಹ್ವಾನಾದಿಗಳು.

೭೮ - ಣ್ಯಂತವಲ್ಲದ ಶಬ್ದಗಳ ಮೇಲೆ ಇಸು ಪ್ರತ್ಯಯ ಬರುವದಿಲ್ಲವೊ.

ಭಾವಾರ್ಥಕ ಘಞಾದಿ ಪ್ರತ್ಯಯಾಂತವಾದ ಭೋಗಾದಿ ಶಬ್ದಗಳಿಗೆ ಇಸು ಪ್ರತ್ಯಯ ಬರುತ್ತದೆ.

ಭೋಗ - ಭೋಗಿಸು - ಭಾವ - ಭಾವಿಸು - ಇತ್ಯಾದಿ.

ಭೋಗ - ಭಾವ - ಕಾಮ - ಪ್ರಾಸ - ರಂಗ - ಬಾಮ - ಲಾವ - ಸ್ವಾದ - ಗಾಧ - ನಾದ - ನಿನಾದ - ಆರಾವ - ಸಂರಾವ - ವೇಗ - ಸಂವೇಗ - ಉದ್ವೇಗ - ನಿಯೋಗ - ವಿಯೋಗ - ಸಂಯೋಗ - ಯೋಗ - ನಿಯಾಮ - ವಿಶ್ವಾಸ - ಆಶ್ವಾಸ - ಆಲಾಪ - ಸಲ್ಲಾಪ - ರಾಗ - ಅಭಿಲಾಷ - ಉಚ್ಛ್ರಾಯ - ಪ್ರಸಾರ - ವಿಶಾಲ - ವಿವೇಕ - ಉದಾರ - ಉದ್ಧಾರ - ವಿಹಾರ - ಸಂಭಾರ - ಸನ್ನಾಹ - ಇವು ಮೊದಲಾದ - ಘಞಂತಗಳು.

ಸ್ತುತಿ - ಮತಿ - ಯತಿ - ಸಿದ್ಧಿ - ವೃದ್ಧಿ - ದೃಷ್ಟಿ - ಪುಷ್ಟಿ - ಕೃಷ್ಟಿ - ಸ್ಥಿತಿ - ಲಬ್ಧಿ - ರಾಧಿ - ಸಮ್ಮತಿ - ನತಿ - ಇವು ಮೊದಲಾದ - ಕ್ತಿನ್ ಪ್ರತ್ಯಯಾಂತಗಳು.

ಉಚ್ಛ್ರಾಯ - ವಿಶದ - ಜಯ - ಕ್ಷಯ - ಇವು ಮೊದಲಾದ ಅ

ಜಂತಗಳೂ - ಸಂಗರ - ದರ - ಇವು ಮೊದಲಾದ ಅಪ್ರತ್ಯಯಾಂತಗಳೂ - ಗೋಚರ - ಸಂಚರ - ಇವು ಮೊದಲಾದ ಟಪ್ರತ್ಯಯಾಂತಗಳೂ - ಟೀಕಾ - ಛಿದಾ - ಮೊದಲಾದ ಅಙ್ಪ್ರತ್ಯಯಾಂತಗಳೂ - ಇಮ್ನಿಚಾವ ಪ್ರತ್ಯಯಾಂತವಾದ ಕೆಲವು ಶಬ್ದಗಳೂ - ಕ್ಷೋಗಾದಿಗಳು - ಅವುಗಳ ಪ್ರಯೋಗಾನುಸಾರವಾಗಿ ನೋಡಿಕೊಳ್ಳುವದು.

೭೮ - ಣಾವಪ್ರತ್ಯಯಾಂತವಲ್ಲದ ಸಂಸ್ಕೃತ ಶಬ್ದಗಳ ಮೇಲೆ ಇಸು ಪ್ರತ್ಯಯ ಬರುವದುಂಟೋ.

ಸಮೀಪ ಮೊದಲಾದ ವಿಶೇಷಣ ಶಬ್ದಗಳ ಮೇಲೆ - ಆಗು ಎಂಬರ್ಥದಲ್ಲಿ ಇಸು ಪ್ರತ್ಯಯ ಬರುತ್ತದೆ.

ಸಮೀಪವಾಗು - ಸಮೀಪಿಸು - ಮೂರ್ಖನಾಗು - ಮೂರ್ಖಿಸು - ಇತ್ಯಾದಿ.

ಸಮೀಪ - ಮೂರ್ಖ - ಶೃಂಗಾರ - ಪುಷ್ಟ - ಸ್ವತಂತ್ರ - ಪರತಂತ್ರ - ಇತ್ಯಾದಿಗಳು - ಸಮೀಪಾದಿಗಳು.

೭೯ - ತದ್ಭವ ಶಬ್ದಗಳ ಮೇಲೆ ಇಸು ಪ್ರತ್ಯಯ ಬರುವದುಂಟೋ.

ಬಿತ್ತರ - ಮೊದಲಾದ ಶಬ್ದಗಳ ಮೇಲೆ ಇಸು ಪ್ರತ್ಯಯ ಬರುತ್ತದೆ.

ವಿಸ್ತಾರ - ಬಿತ್ತರ - ಬಿತ್ತರಿಸು.

ವರ್ಣ - ಬಣ್ಣ - ಬಣ್ಣಿಸು.

ವಿಜ್ಞಾಪನ - ಬಿನ್ನಹ - ಬಿನ್ನೈಸು - ಇತ್ಯಾದಿ.

ಬಿತ್ತರ - ಬಣ್ಣ - ಬಿನ್ನಹ - ಹವಣು - ಕಂಡ - ಗಟ್ಟಿ - ಚಿತ್ರ ಇತ್ಯಾದಿಗಳು ಬಿತ್ತರಾದಿಗಳು.

೮೦ - ಕನ್ನಡದಲ್ಲಿ ಪ್ರೇರಣಾರ್ಥವಿಲ್ಲದೆ ಇಸು ಪ್ರತ್ಯಯ ಬರುವದುಂಟೋ.

ಬುಂಜಾದಿಧಾತುಗಳ ಮೇಲೆ ಪ್ರೇರಣಾರ್ಥವಿಲ್ಲದೆ ಇಸು ಪ್ರತ್ಯಯ ನಿತ್ಯವಾಗಿ ಬರುತ್ತದೆ.

ಬುಂಜ - ಇಸು - ಬುಂಜಿಸು - ಇತ್ಯಾದಿ.

ಬುಂಜ - ಆಲ - ಸದ - ನಿಸುಂಬ - ಬಡ - ನಿಟ್ಟ - ಮಾಲ - ಬಟ್ಟಿ

ಓಸರ - ಜ್ಯಾಸರ - ಮುಸ್ತಳ - ನಿಕ್ಷುಳ - ಜಕ್ಷುಳ - ಉಪ್ಪಳ
ಅಪ್ಪಳ - ಕಾಕ್ಕರ - ಚಿಕ್ಕರ - ಡಾಕ್ಕರ - ತಿಳ್ಕಯ - ಉಮ್ಮಳ
ಡಾಮ್ಮಳ - ಒತ್ತರ - ಸೈರ - ಸಾಗಯ - ಸಮನ - ಕೀಕರ - ಮಾ
ಕರ - ಪವಳ - ಬಾರ - ಇತ್ಯಾದಿಗಳು ಬುಂಜಾದಿಗಳು.

೭೧ - ಇನ್ನ್ಯಾವಾವ ಶಬ್ದಗಳ ಮೇಲಾದರೂ ಇಸು ಪ್ರತ್ಯಯಬರುತ್ತದೆಯೋ.

ಪ್ರಕಾರಾದ್ಯತಿಶಯದ್ಯೋತಕವಾದ ಥಳಥಳಾದಿಶಬ್ದಗಳ ಮೇಲಿಇಸು ಪ್ರತ್ಯಯಬರುತ್ತದೆ.

ಥಳಥಳ - ಇಸು - ಥಳಥಳಿಸು - ಇತ್ಯಾದಿ.

ಥಳಥಳ - ಝಗಝಗ - ಥರಥರ - ಘಣಾಘಣ - ಇತ್ಯಾದಿಗಳು ಥಳಥಳಾದಿಗಳು.

೭೨ - ಪದಧಾತುಸ್ಥಾನದಲ್ಲಿಸು ಪ್ರತ್ಯಯ ಬರುತ್ತದೆಯೋ.

ಆತ್ಮಗುಣವಾಚಕವಾದ ಶಬ್ದಗಳ ಮೇಲಿಬರುವ ಪದಧಾತುವಿಗೆ ಪ್ರತ್ಯಾಮ್ನಾಯವಾಗಿಇಸು ಪ್ರತ್ಯಯಬರುತ್ತದೆ.

ದುಖ್ಖ - ದುಖ್ಖಿಸು - ಇತ್ಯಾದಿ.

೭೩ - ಅನ್ಯದೇಶ್ಯಧಾತುಗಳು ಕನ್ನಡದಲ್ಲಿಬರುವಾಗೇನು ವಿಕಾರವನ್ನು ಹೊಂದುತ್ತವೆ.

ಎರಡು ಅಕ್ಷರಕ್ಕಿಂತಹೆಚ್ಚಾದ - ನಾ - ಅಂತವಾದ ಭಾವಪ್ರತ್ಯಯಾಂತವಾದ ಹಿಂದುಸ್ಥಾನ ಶಬ್ದಗಳ ಮೇಲಿಇಸು ಪ್ರತ್ಯಯಬಂದು ಅವರದುವಿಗೆಲೋಪಸಹಬರುತ್ತದೆ.

ಫರ್ಮಾನಾ - ಫರ್ಮಾಯಿಸು - ಮಿಲಾನಾ - ಮಿಲಾಯಿಸು - ಇತ್ಯಾದಿ.

ಜಾನಾ - ಖಾನಾ - ಇತ್ಯಾದಿದ್ವ್ಯಕ್ಷರಶಬ್ದಗಳಿಗೆಬರುವದಿಲ್ಲವು.

೭೪ - ಇಸು ಪ್ರತ್ಯಯಾಂತಧಾತುಗಳ ಮೇಲಿಪ್ರೇರಣಾರ್ಥದಲ್ಲಿಮತ್ತಾವುದುಇಸು ಪ್ರತ್ಯಯಬರುತ್ತದೆಯೋ.

ಯಾವಧಾತುಗಳ ಮೇಲಿಪ್ರೇರಣಾರ್ಥದಲ್ಲಿಇಸು ಪ್ರತ್ಯಯಬರುತ್ತದೆಯೋಅದರ ಮೇಲಿಪ್ರೇರಣಾರ್ಥದಲ್ಲಿಇಸು ಪ್ರತ್ಯಯಬಂದರೆ - ಆಇಸು ಪ್ರತ್ಯಯಕ್ಕೆಲೋಪಬರುತ್ತದೆ - ಸಂಸ್ಕೃತ - ಅನ್ಯದೇಶ್ಯ - ಶಬ್ದಗಳ ಮೇಲೂ - ಅಚ್ಚಗನ್ನಡಧಾತುಗಳ ಮೇಲೂ - ಬಂದಇಸು ಪ್ರತ್ಯಯದ ಮೇಲಿಪ್ರೇರಣಾರ್ಥದಲ್ಲಿ

ಪ್ರಶ್ನೆ. ಉತ್ತರವು. ೪೭

ಬಂದ ಇಸು ಪ್ರತ್ಯಯಕ್ಕೆ ಲೋಪ ಬರುವದಿಲ್ಲ - ಅದರ ಮೇಲಿನ ದ್ವಿಪ್ರೇರಣಾರ್ಥದಲ್ಲಿ ಇಸು ಪ್ರತ್ಯಯವ ಮಾಡಿದರೆ ಲೋಪ ಬರುತ್ತದೆ.

ಉದಾಹರಣೆ.

ಲಕ್ಷ್ಮಣನು ಇಂದ್ರಜಿತ್ತನ್ನು ಹೊಡೆದನು - ರಾಮನು ಅವನ ಪ್ರೇರಿಸಿದನು - ರಾಮನು ಲಕ್ಷ್ಮಣನಿಂದ ಇಂದ್ರಜಿತ್ತನ್ನು ಹೊಡಿಸಿದನು - ಅವನ ವಿಭೀಷಣನು ಪ್ರೇರಿಸಿದನು - ವಿಭೀಷಣನು ರಾಮನಿಂದ ಲಕ್ಷ್ಮಣನಿಂದ ಇಂದ್ರಜಿತ್ತನ್ನು - ಹೊಡಿಸಿದನು - ಇತ್ಯಾದಿ.

ದೀಪವು ಜ್ವಲಿಸಿತು - ದೇವದತ್ತನು ದೀಪವನ್ನು ಜ್ವಲಸಿಸಿದನು.

ಸೊಸೆಯು ಅನ್ನವ ಬಡಿಸಿದಳು - ಅತ್ತೆಯು ಸೊಸೆಯಿಂದ ಅನ್ನವ ಬಡಿಸಿಸಿದಳು.

ಅರಸನು ಹುಕೂಮ ಫರ್ಮಾಯಿಸಿದನು.

ಮಂತ್ರಿಯು ಅರಸನಿಂದ ಹುಕೂಮ ಫರ್ಮಾಯಿಸಿಸಿದನು - ಇತ್ಯಾದಿ.

೩೭ - ಇಸು ಪ್ರತ್ಯಯ ಪರವಾದಾಗ ಯಾವ ಧಾತುವಿಗಾದರೂ ವಿಕಾರವುಂಟಾ.

ಏಳು ಧಾತುವಿಗೆ ಇಸು ಪ್ರತ್ಯಯ ಪರವಾದಾಗ ಧಾತುವಿನ ಳುವಿಗೆ ಸಂಯುಕ್ತಬಕಾರಾದೇಶವೂ - ಏಕಾರಕ್ಕೆ ಹ್ರಸ್ವವೂ ಬರುತ್ತದೆ.

ಸಂಯುಕ್ತನಕಾರ - ಣಕಾರ - ಳಕಾರ - ಲಕಾರ - ಯಕಾರಾಂತ ಧಾತುಗಳಿಗೆ ಇಸು ಪ್ರತ್ಯಯ ಪರವಾಗಲು - ಸಂಯುಕ್ತದಲ್ಲೊಂದು ವರ್ಣಕ್ಕೆ ವಿಕಲ್ಪವಾಗಿ ಲೋಪ ಬರುತ್ತದೆ.

ಏಳು - ಎಬ್ಬಿಸು - ಉಣ್ಣು - ಉಣ್ಣಿಸು - ಉಣಿಸು - ತಿನ್ನು - ತಿನ್ನಿಸು - ತಿನಿಸು - ಕೊಳ್ಳು - ಕೊಳ್ಳಿಸು - ಕೊಳಿಸು - ನಿಲ್ಲು - ನಿಲ್ಲಿಸು - ನಿಲಿಸು - ಸುಯ್ಯು - ಸುಯ್ಯಿಸು - ಸುಯಿಸು - ಇತ್ಯಾದಿ.

೮೭ ಪ್ರಶ್ನೆ:	ಉತ್ತರವು.
೭೬ - ಇಸ್ವಾಣಸು ಪ್ರತ್ಯಯವೆಲ್ಲಿ ಬರುತ್ತದೆ.	ಧಾತ್ವರ್ಥಕರ್ತನ ಸ್ವಮಯಾದಾರ್ಥವಾಗಿ ಪ್ರೇರಣಾ ಕರ್ತನಾಗಿದ್ದಾಗಿಸಿಣಸು ಪ್ರತ್ಯಯವನ್ನುಹೇಳುತ್ತಾರೆ. ಬರೆದು ಕಳುಹುವಂತೆ ದಯಮಾಡ ಬೇಕು - ಎಂಬುದರ ಬೇಕಾದ್ದಕ್ಕೆ - ಬರೆಯಿಸಿ ಕಳುಹಿಸುವಂತೆ ದಯಮಾಡಿಸ ಬೇಕು ಎಂಬುದೇಳುತ್ತಾರೆ.
೭೭ - ಶಬ್ದಾಖ್ಯಾತ ಪ್ರಕರಣಗಳಲ್ಲಿ ಹೇಳಿದ ವಿಧಿಗಳು ಶಬ್ದಾನುಶಾಸನ ಶಬ್ದಮಣಿದರ್ಪಣಗಳಲ್ಲಿ ಹೇಳವೆಯೋ.	ಈ ಗ್ರಂಥಗಳಲ್ಲಿ ವಿಧಿಗಳು ಕೆಲವು ಬೇರೆಯಿಲ್ಲ - ಅವುಗಳಲ್ಲಿಲ್ಲದ್ದು ಹಿರಿಯರ ಪ್ರಯೋಗಗಳನ್ನು ವಾಕ್ಯಗ್ರಂಥಗಳನ್ನು ಅನುಸರಿಸಿ ಬರೆಯಲ್ಪಟ್ಟಿದೆ.

ಇಂತು ನಾಲ್ಕನೆಯ ಆಖ್ಯಾತ ಪ್ರಕರಣ ಮುಗಿಯಿತು.

ಪ್ರಶ್ನೆ	ಉತ್ತರವು.
೧. ಕೃತ್ಪ್ರಕರಣದಲ್ಲೇನು ಹೇಳಲ್ಪಡುತ್ತದೆ.	ಕೃತ್ಪ್ರತ್ಯಯಗಳ ಸ್ವರೂಪವೂ - ಅವುಗಳ ಅರ್ಥಗಳೂ - ಅವು ಬರುವಾಗ ಪ್ರಕೃತಿಪ್ರತ್ಯಯಗಳಿಗೆ ಬರುವ ಲೋಪಾಗಮಾದೇಶಗಳೂ ಹೇಳಲ್ಪಡುತ್ತವೆ.
೨. ಕೃತ್ಪ್ರತ್ಯಯಗಳು ಯಾವವರ ಮೇಲೆ ಬರುತ್ತವೆ.	ಧಾತುಗಳ ಮೇಲೆ ಬರುತ್ತವೆ.
೩. ಆ ಪ್ರತ್ಯಯಗಳು ಯಾವ ಅರ್ಥದಲ್ಲಿ ಬರುತ್ತವೆ.	ಕರ್ತೃ - ಕರ್ಮ - ಕರಣ - ಸಂಪ್ರದಾನ - ಅಪಾದಾನ - ಅಧಿಕರಣಗಳೆಂಬ ಆರು ಕಾರಕಾರ್ಥದಲ್ಲಿಯೂ - ಭಾವಾರ್ಥದಲ್ಲಿಯೂ ಬರುತ್ತವೆ.
೪. ಕರ್ತ್ರಾದಿಪದಗಳಿಗರ್ಥವೇನು.	ಅವುಗಳರ್ಥವು ಪ್ರಯೋಗಪ್ರಕರಣದಲ್ಲಿ ವಿಸ್ತಾರವಾಗಿ ಹೇಳಲ್ಪಡುತ್ತದೆ - ಭಾವವೆಂದರೆ ಧಾತ್ವರ್ಥವು.
೫. ಈ ಯರ್ಥಗಳಲ್ಲಿ ಯಾವ ಪ್ರತ್ಯಯ ಬರುತ್ತದೆ.	ಈ ಅರ್ಥಗಳಲ್ಲಿ ಪ್ರಾಚೀನ ವ್ಯಾಕರಣ ಪ್ರಕಾರ ಅಚ್ಪ್ರತ್ಯಯವೂ - ಈಗಿನ ಹಿರಿಯರ ಪ್ರಯೋಗ ಪ್ರಕಾರ ಅದು ಪ್ರತ್ಯಯವೂ ಬರುತ್ತದೆ - ಅಚ್ಪ್ರತ್ಯಯದ ಚಕಾರ ಸರ್ವತ್ರ ಲೋಪಿಸುತ್ತದೆ - ಅಚ್ಪ್ರತ್ಯಯಕ್ಕೆ ನಪುಂಸಕೈಕವಚನದಲ್ಲಿ - ಉದು ಆದೇಶವೂ - ಬಹುವಚನದಲ್ಲಿ ಉವು ಆದೇಶವೂ - ಬರುತ್ತದೆ.
೬. ಈ ಪ್ರತ್ಯಯಗಳು ಪರವಾದಾಗ ಕಾಲಾದಿಭೇದ ಸೂಚಕವಾದ ಆಗಮಾದಿಗಳು ಬರುತ್ತವೆಯೋ.	ಕೆಲವರು ಕಾಲಭೇದ ಸೂಚಕವಾದ ಆಖ್ಯಾತಪ್ರಕರಣದಲ್ಲಿ ಹೇಳಿದ - ದ - ಉತ್ತ - ಉವ - ಆಗಮಗಳು ಬರುತ್ತವೆಯೆಂತಲೂ - ಉತ್ತಾಗಮ ಬಂದಾಗ ಅದರ ಮೇಲೆ ಇರು ಧಾತುವ ಸೇರಿಸಿ ಅದರ ಮೇಲೆ ಉವಾಗಮವ ಮಾಡಿ ಅದರ ಮೇಲೆ ಅಚ್ಪ್ರತ್ಯಯವ ಮಾಡಬೇಕೆಂತಲೂ - ಹೇಳಿದರು. ನಮಗೆ ತೋರುವದೇನೆಂದರೆ - ಭೂತಕಾಲದಲ್ಲಿ ದಕಾರಾಗಮವೂ - ವರ್ತಮಾನ ಭವಿಷ್ಯತ್ಕಾಲಗಳೆರಡರಲ್ಲಿಯೂ ಉವಾಗಮವೂ ಬರುತ್ತದೆ - ಆದರೆ ಮಾಡುತ್ತಿರುವ ಎಂಬ ರೂಪವು ಮಾಡುತ್ತಿದ್ದನು - ಮಾಡುತ್ತಿದ್ದಾನೆ - ಎಂಬ ರೂಪದ ಹಾಂಗೆ ನಾಲ್ಕನೆಯ ಪ್ರಕರಣದ - ೫೯ ನೇ ಸೂತ್ರ ಪ್ರಕಾರ ಹೇಳಿಕೊಳ್ಳಬೇಕು - ನಿಷೇಧದಲ್ಲಿ - ಅದ ಎಂಬಾಗಮ ಬರುತ್ತದೆ.

ಈ ಪ್ರತ್ಯಯಾಂತಗಳ ಮೇಲೆ-ಸುತ್ಪ್ರತ್ಯಯಗಳ ಮಾಡುವವಿಷಯದಲ್ಲಿ - ಅತ್ಪ್ರತ್ಯಯವ ಮಾಡಿದ ಶಿಮೂರನೇ ಪ್ರಕರಣದ-೪೭-೪೮ನೇ ಸೂತ್ರವಿಧಿ ಪ್ರಕಾರವೂ - ಅದುಪ್ರತ್ಯಯ ಮಾಡಿದಾಗ ಅದು ಶಬ್ದಕ್ಕೆ ಮೂರನೇ ಪ್ರಕರಣದ-೪೯-೫೦ ನೆಯ ಸೂತ್ರಗಳ ವಿಧಿ ಪ್ರಕಾರವೂ ಕಾರ್ಯಬರುತ್ತದೆ.

ಭಾವಾರ್ಥದಲ್ಲಿಯೂ - ಕಾರಕನ ಪುಂಸಕಲಿಂಗೈಕವಚನದಲ್ಲಿಯೂ - ಇಕಾರವನ್ನೈದದ ಉಕಾರಾಂತ ಧಾತುಗಳಿಗೆ ಭೂತಕಾಲದಲ್ಲಿ ದಕಾರಾಗಮವೂ - ಅದರ ಮೇಲೆ ಅದು ಪ್ರತ್ಯಯವ ಮಾಡಿದಾಗ ಅದು ಪ್ರತ್ಯಯದ ಅಕಾರಕ್ಕೆ ಲೋಪವೂ ಬರುತ್ತದೆ - ಕಡಮೆ ಧಾತುಗಳ ಅದು ಪ್ರತ್ಯಯದ ದಕಾರ ಸಂಯುಕ್ತವಾಗುತ್ತದೆ - ನಿಷೇಧದಲ್ಲಿಯೂ ಅದು ಪ್ರತ್ಯಯದ ದಕಾರ ಸಂಯುಕ್ತವಾಗುತ್ತದೆ.

ಅತ್ಪ್ರತ್ಯಯ.

		ಭೂತ.	ವರ್ತಮಾನ.	ಭಾವಿ	ನಿಷೇಧ.
ಕಾರಕಾರ್ಥ	ಪುಏ	ಮಾಡಿದನು	ಮಾಡುವನು	ಮಾಡುವನು	ಮಾಡದನು.
	ಸ್ತ್ರೀ	ಮಾಡಿದಳು	ಮಾಡುವಳು	ಮಾಡುವಳು	ಮಾಡದಳು.
	ದ್ವಿಬ	ಮಾಡಿದರು	ಮಾಡುವರು	ಮಾಡುವರು	ಮಾಡದರು.
	ನಏ	ಮಾಡಿದುದು	ಮಾಡುವುದು	ಮಾಡುವುದು	ಮಾಡದುದು.
	ನಬ	ಮಾಡಿದುವು	ಮಾಡುವುವು	ಮಾಡುವುವು	ಮಾಡದುವು.
ಭಾವಾರ್ಥ	- - -	ಮಾಡಿದುದು	ಮಾಡುವುದು	ಮಾಡುವುದು	ಮಾಡದುದು.

ಅದು ಪ್ರತ್ಯಯ

		ಭೂತ.	ವರ್ತಮಾನ.	ಭಾವಿ	ನಿಷೇಧ.
ಕಾರಕಾರ್ಥ	ಪುಏ	ಮಾಡಿದವನು	ಮಾಡುವವನು	ಮಾಡುವವನು	ಮಾಡದವನು.
	ಸ್ತ್ರೀ	ಮಾಡಿದವಳು	ಮಾಡುವವಳು	ಮಾಡುವವಳು	ಮಾಡದವಳು.
	ದ್ವಿಬ	ಮಾಡಿದವರು	ಮಾಡುವವರು	ಮಾಡುವವರು	ಮಾಡದವರು.
	ನಏ	ಮಾಡಿದ್ದು	ಮಾಡುವದು	ಮಾಡುವದು	ಮಾಡದ್ದು.
	ನಬ	ಮಾಡಿದವು	ಮಾಡುವವು	ಮಾಡುವವು	ಮಾಡದವು.
ಭಾವಾರ್ಥ	" " "	ಮಾಡಿದ್ದು	ಮಾಡುವದು	ಮಾಡುವದು	ಮಾಡದ್ದು.

೭-ಅಚ್ ಅದು ಪ್ರತ್ಯಯಗಳು ಪರವಾದಾಗ ಬಂದಿರುವ-ದ-ಉವ-ಊಗಮಗಳು ಪರವಾದಾಗ ಧಾತುಗಳಿಗ್ಯಾ ಆಯಾಗಮಳಿಗೂ ವಿಕಾರವಿಲ್ಲಾದರೂ ಬರುತ್ತದೆಯೊ.

ನಗು - ಊಂಗು - ಕೊಡು - ಹಾರಡು - ಕಾಣು - ಕಳು - ತೆರು ಸೀನು - ಮಿಳಿರು - ಅರಿ - ಮುನಿ - ಹದಿ - ಕೊಲ್ಲು - ಬಾ - ಸಾ - ಮೀ-ನೇಯು - ಈಗಣಪಠಿತ ಧಾತುಗಳಿಗೂ - ನಿಲ್ಲು ಧಾತುವಿಗೂ - ದಕಾರಾಗಮ ಪರವಾದಾಗಲೂ - ತಿನ್ನು ಎನ್ನುಗಳಿಗೆ - ದ-ಉವ-ಆಗಮಗಳು ಪರವಾದಾಗಲೂ - ತರು ಬರುಗಳಿಗೆ - ದ-ಉವ-ಆಗಮಗಳು ಪರವಾದಾಗಲೂ - ನಿಷೇಧದಲ್ಲಿಯೂ - ಇರು ಧಾತುವಿಗೆ ದ-ಉವ-ಊಗಮಗಳು ಪರವಾದಾಗಲೂ - ಆಖ್ಯಾತ ಪ್ರಕರಣದ - ೩೪೪ ನೇ ಸೂತ್ರ ಮೊದಲು - ೬೨ ನೇ ಸೂತ್ರದವರಿಗೂ - ಯಾವ ಯಾವ ಸೂತ್ರದಲ್ಲಿ ಯಾವ ಯಾವ ವಕ್ಕಿ - ಯಾವ ಯಾವ ಹೊಸಗ ಮಾದ್ಯೇಶಗಳು ವಿಧಿಸಲ್ಪಟ್ಟವೆಯೊ ಅವೆಲ್ಲಾ ಅಚ್ - ಅದು ಪ್ರತ್ಯಯಗಳು ಪರವಾದಾಗಲೂ ಬರುತ್ತವೆ.

ನಕ್ಕವನು - ನಕ್ಕದ್ದು - ಮಿಕ್ಕವನು - ಊದವನು - ಹೊದವನು - ಕೊಟ್ಟವನು - ಬಿಟ್ಟವನು - ಹಾರಟವನು - ಬಿಸುಟವನು ಬಿಸುಡಿದವನು - ಬಿಸಾಟವನು - ಬಿಸಾಡಿದವನು - ಕಂಡವನು ಉಂಡವನು - ಕೊಂಡವನು - ಕದ್ದವನು - ಮೆದ್ದವನು - ತಿದ್ದವನು ಎದ್ದವನು - ಬಿದ್ದವನು - ತೆತ್ತವನು - ಕೊತ್ತವನು - ಉತ್ತವನು ಅತ್ತವನು - ನುತ್ತವನು - ಕಿತ್ತವನು - ಸೀತವನು - ಊತವನು ಮಿಳಿರ್ದುದು - ಬಳ್ದುದು - ಈನ್ದುದು - ಮುನಿತವನು - ಮುನಿದವನು ಹದ್ದವನು - ಹದಿದವನು - ಒದ್ದವನು - ಒಡೆದವನು - ಕೊಂದವನು-ಸಂದವನು - ನಿಂತವನು - ತಿಂದವನು - ತಿಂಬವನು - ತಿನ್ನುವವನು - ಎಂದವನು - ಎಂಬವನು - ಎನ್ನುವವನು - ತಂದವನು ತರುವವನು - ತಹವನು - ತಾರದವನು - ಬಂದವನು - ಬರುವವನು - ಬಹವನು - ಬಾರದವನು - ಇದ್ದವನು - ಇರುವವನು - ಇಹವನು - ಬಾತವನು - ಇತ್ತವನು - ಸತ್ತವನು ಮಿಂದವನು - ಚೆಂದವನು - ನೊಂದವನು - ನೆಯ್ದವನು - ಸುಯ್ದು

ವನು - ಇತ್ಯಾದಿ - ಆಯಾಗಣಪಠಿತವಾದ ಕೆಲವು ಧಾತುಗಳಿಗೂ - ಕೆಲವು ಲಿಂಗಗಳಲ್ಲಿಯೂ - ಕೆಲವು ಅರ್ಥಗಳಲ್ಲಿಯೂ ಈ ಮೇರೆಗೆ ಏಳ್ಗೆ ಕ್ಲುಪ್ತವದು.

೮ - ಇದಕ್ಕೆ ಅಪವಾದವುಂಟೊ.

ಆಗು ಹೋಗು ಧಾತುಗಳಿಗೆ - ಭೂತಕಾಲದ ಕ್ರಿಯಾರ್ಥಕನ ಪುಂಸ್ತ್ರೀಕ ವಚನದಲ್ಲಿಯೂ - ಭಾವಾರ್ಥದಲ್ಲಿಯೂ - ಅದು ಪ್ರತ್ಯಯಪರವಾದಾಗ ಆ ಧಾತುಗಳ ಗುಣಿಸು - ದಕಾರಾಗಮಕ್ಕೂ ಅದು ಪ್ರತ್ಯಯದ ಅಕಾರಕ್ಕೂ - ಲೋಪಬಂದು - ಅದು ಪ್ರತ್ಯಯದ ದಕಾರ ಸಂಯುಕ್ತಸದು ವಿಕಲ್ಪವಾಗಿ ಆಗುತ್ತದೆ.

ಆದದ್ದು - ಆದ್ದು - ಹೋದದ್ದು - ಹೋದ್ದು - ಇತ್ಯಾದಿ.

೯ - ಇನ್ನ್ಯಾವ ಧಾತುವಿಗೇನು ಬರುತ್ತದೆ.

ಕ್ಲುಪ ಧಾತುವಿಗೆ ಉವಾಗಮ ಪರವಾದಾಗ - ಧಾತುವಿನ ಋಕಾರಕ್ಕೆ ಮಕಾರಾದೇಶವೂ - ಉವಾಗಮಕ್ಕೆ ಬಕಾರಾದೇಶವೂ - ವಿಕಲ್ಪವಾಗಿ ಬರುತ್ತದೆ - ಕೊಂಬವನು - ಕ್ಲುಪ್ತವವನು.

೧೦ - ಆಪಾದಿ ಧಾತುಗಳಿಗೆ ಅದು - ಅಚ್ - ಪ್ರತ್ಯಯಗಳು ಪರವಾದಾಗೇನು ಬರುತ್ತದೆ.

ಆಪ - ಬಲ್ಲ - ದಾತುಗಳಿಗೆ ಕಾಲತ್ರಯದ ವಿಲ್ಲವಾದ್ದರಿಂದ - ಅದು - ಅಚ್ ಪ್ರತ್ಯಯಗಳು ಮಾತ್ರ ಬರುತ್ತವೆ - ಆಗಮಗಳಿಲ್ಲವು - ಆರ - ಅರಿ - ಒಲ್ಲ - ಧಾತುಗಳಿಗೆ ನಿಷೇಧ ಮಾತ್ರವಾದ್ದರಿಂದ - ಅದು - ಅಚ್ ಪ್ರತ್ಯಯಗಳು ಪರವಾದಾಗ - ಇದಿ - ಆಗಮ ಬರುತ್ತದೆ - ಕಾರಕಾರ್ಥನ ಪುಂಸ್ತ್ರೀಕ ವಚನದಲ್ಲಿಯೂ ಭಾವಾರ್ಥದಲ್ಲಿಯೂ - ಅದು ಪ್ರತ್ಯಯದ ದಕಾರ ಸಂಯುಕ್ತವಾಗುತ್ತದೆ.

ಆಪನು - ಆಪವನು - ಆಪದ್ದು - ಬಲ್ಲನು - ಬಲ್ಲವನು ಬಲ್ಲದ್ದು - ಆರದನು - ಆರದವನು - ಆರದ್ದು - ಅರಿಯದನು - ಅರಿಯದವನು - ಅರಿಯದ್ದು - ಒಲ್ಲದನು - ಒಲ್ಲದವನು ಒಲ್ಲದ್ದು - ಇತ್ಯಾದಿ.

೧೧ - ಬೇಕ್ಕಾದಿಗಳಿಗೇನು ಬರುತ್ತದೆ.

ಬೇಕು - ಸಾಕು - ಬಹುದು - ಧಾತುಗಳಿಗೆ - ಅದು - ಅಚ್ ಪ್ರತ್ಯಯಗಳು ಬರುವದಿಲ್ಲವು - ಆದರೆ ಇವರದಕ್ಕೂ ಆಗು

ಧಾತುವನ್ನು ಸೇರಿಸಿ ಅದರ ಮೇಲೆ ಅದು ಪ್ರತ್ಯಯವ ಮಾಡಿ ಕ್ರಾಲ್ ಬೇಕು - ಕೂಡುವದು - ಆಗುವದು - ತಕ್ಕದ್ದು - ಸಾಲದು - ಇವುಗಳಿಗೆ ಅದು ಪ್ರತ್ಯಯ ಮಾತ್ರ ಬರುತ್ತದೆ - ಆದರೆ ಅದು ಬಂದಾಗ ಧಾತುಗಳ ತ್ರಿಕಕ್ಕೆ ಲೋಪ ಬರುತ್ತದೆ - ಬೇಡ ಧಾತುವಿಗೆ ಅದ್ ಆಗಮ ಬರುತ್ತದೆ - ಕಡೆಮೆ ನಾಲ್ಕು ಧಾತುಗಳಿಗೂ ಒಂದು ಆಗಮವೂ ಬರುವದಿಲ್ಲವು.

ಬೇಕಾದವನು - ಬರುದಾದವನು - ಕೂಡುವವನು - ಆಗುವವನು - ತಕ್ಕವನು - ಸಾಕಾದವನು.
ಬೇಡದವನು - ಬಾರದವನು - ಕೂಡದವನು - ಆಗದವನು - ತಗದವನು - ಸಾಲದವನು.

೧೨ - ಉಂಟ್ವಾದಿಗಳಿಗೇನು ಬರುತ್ತದೆ.

ಉಂಟು ಧಾತುವಿಗೆ - ಅದು ಪ್ರತ್ಯಯ ಪರವಾದಾಗ - ಉಳ್ - ಎಂಬಾದೇಶ ವಿಕಲ್ಪವಾಗಿ ಬರುತ್ತದೆ - ಬಾರದಾಗ - ಆಗು ಧಾತುವು ಸೇರಿಸಲ್ಪಡುತ್ತದೆ - ಹೋದು - ಅರುದು - ಗಳಿಗೂ ಆ ಧಾತುವೇ ಸೇರಿಸಲ್ಪಡುತ್ತದೆ - ಇಲ್ಲ - ಅಲ್ಲ ಧಾತುಗಳಿಗೆ ಅದಾಗಮ ಬರುತ್ತದೆ.

ಉಳ್ಳವನು - ಉಂಟಾದವನು - ಹೋದಾದವನು - ಅರುದಾದವನು - ಇಲ್ಲದವನು - ಅಲ್ಲದವನು - ಇತ್ಯಾದಿ.

೧೩ - ಇಸು ಪ್ರತ್ಯಯಾಂತ ಧಾತುಗಳಿಗೇನಾದರೂ ವಿಶೇಷವುಂಟೊ.

ಇಸು ಪ್ರತ್ಯಯಾಂತ ಧಾತುಗಳಿಗೆ ಭೂತಕಾಲದ ದಕಾರಾಗಮ ಪರವಾದಾಗ - ಕೆಲವರು ಇಸು ಪ್ರತ್ಯಯದ ಉಕಾರಕ್ಕೆ ಲೋಪವೂ - ಆಗಮದ ದಕಾರಕ್ಕೆ ತಕಾರಾದೇಶವೂ ಬರುತ್ತದೆಂದರು ಕೆಲವರು ಸಮ್ಮತಿಸಲಿಲ್ಲವು - ಮಾಡಿಸಿದವನು - ಮಾಡಿಸ್ತವನು - ಇತ್ಯಾದಿ.

೧೪ - ಕರ್ತ್ರಾದ್ಯರ್ಥಕವಾದ - ಅಚ್ - ಅದು ಪ್ರತ್ಯಯಗಳು ಪರವಾದಾಗೇನಾದರೂ ವಿಶೇಷವುಂಟೊ.

ಕರ್ಮಾರ್ಥಕವಾದ - ಅಚ್ - ಅದು ಪ್ರತ್ಯಯಗಳು ಪರವಾದಾಗ ಮಾತ್ರ ವಿಕಲ್ಪವಾಗಿ - ಮುಖ್ಯಧಾತುವಿನ ಮೇಲೆ ಅಲ್ ಪ್ರತ್ಯಯವ ಮಾಡಿ ಅದರ ಮೇಲೆ ಪಡು ಧಾತುವ ಸೇರಿಸಿ - ಅದರ ಮೇಲೆ ಅಚ್ - ಅದು ಪ್ರತ್ಯಯಗಳ ಮಾಡುವದು - ಆಗ ಕಾಲಸೂಚಕವಾದ - ದ - ಉ ಆಗಮಗಳೂ - ದಕಾರಾಗಮ ಬಂದಾಗ ಪಡು

ಧಾತುವಿನದುವಿಸ್ವಾದಕಾರಾಗಮಕ್ಕೂ ಸಂಯುಕ್ತಟಕಾರಾದೇಶವು ಬರುತ್ತದೆ - ಪಡು ಧಾತುವು ಬಾರದಾಗ ಕರ್ಮಾರ್ಥದಲ್ಲಿಯೂ ಇತರ ಕಾರಕಾರ್ಥದಲ್ಲಿಯೂ - ಏಕರೀತಿಯಾಗಿಯೇ ರೂಪವಾಗುತ್ತದೆ - ಪ್ರಕರಣಾನುಸಾರವಾಗಿ ಅರ್ಥವಿಶೇಷವ ನಿಶ್ಚಯಿಸಬೇಕು.

ಕರ್ತೃ - ನಾನು ಆ ಮರಕೆಯ ಮಾಡಿದವನು - ಮಾಡುವವನು.

ಕರ್ಮ - { ಊ ಮರಕೆ ನಾನು ಮಾಡಿದ್ದು.
ಊ ಮರಕೆ ನನ್ನಿಂದ ಮಾಡಲ್ಪಟ್ಟದ್ದು.

ಕರಣ - ಊ ಬಳಪ ನಾನು - ಬರೆದದ್ದು.

ಸಂಪ್ರದಾನ - ಊ ಹಾರ್ವನು - ನಾನು ಹಸಾ ಕೊಟ್ಟವನು.

ಅಪಾದಾನ - ಊ ಹುಲಿಯ ನಾನು ಹೆದರಿದ್ದು.

ಅಧಿಕರಣ - ಊ ಮನೆಯ ನಾನು ಒಕ್ಕಲಿದ್ದದ್ದು.

ಭಾವ - ನಾನು ಮಾಡುವದರಿಂದೇನು ಪ್ರಯೋಜನವು.

೧೫. ಈ ಪ್ರತ್ಯಯಗಳು ಧಾತುವಿನ ಮೇಲಿನ ಅರ್ಥಗಳಲ್ಲಿ ಬೇರೆ ಪ್ರತ್ಯಯವುಂಟೋ.

ಕರ್ತ್ರಾದ್ಯರ್ಥಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿಯೂ ಪ್ರತ್ಯಯಗಳು ಬರುತ್ತವೆ - ಊದಕೆ ಆ ಪ್ರತ್ಯಯಗಳು ಪರವಾದಾಗ ಕಾಲಸೂಚಕವಾದ ದಕಾರಾದ್ಯಾಗಮಗಳು ಬರುವದಿಲ್ಲವು.

೧೬. ಕರ್ತ್ರರ್ಥದಲ್ಲೇನು ಪ್ರತ್ಯಯ ಬರುತ್ತದೆ.

ಕುಳಿ - ಇ - ಇಗ - ಉಕ - ಅ - ಅಲ್ - ಪುರುಕ ಇತ್ಯಾದಿಗಳು ಕರ್ತ್ರರ್ಥದಲ್ಲಿ ಬರುವ ಪ್ರತ್ಯಯಗಳು.

೧೭. ಕುಳಿ ಪ್ರತ್ಯಯವು ಯಾವದರ ಮೇಲೆ ಬರುತ್ತದೆ.

ಕುಳಿ ಪ್ರತ್ಯಯವು ಸಕಲ ಧಾತುಗಳ ಮೇಲೂ ತಾಚ್ಛೀಲ್ಯಾರ್ಥದಲ್ಲಿ ಬರುತ್ತದೆ - ತಾಚ್ಛೀಲ್ಯವೆಂದರೆ ಇಲ್ಲಿ ಪ್ರಸ್ತುತ ಧಾತ್ವರ್ಥ ವ್ಯಾಪಾರವು ಯಾವನಿಗೆ ಸ್ವಭಾವವೋ - ಅದು ಅವನಿಗಿರುವಿಕೆ.

ಅಂಜುಕುಳಿ - ಆಡುಕುಳಿ - ಓಡುಕುಳಿ - ಓದುಕುಳಿ - ಇತ್ಯಾದಿ.

೧೮. ಕುಳಿ ಪ್ರತ್ಯಯಪರವಾದಾಗ ಪ್ರಕೃತಿ ಪ್ರತ್ಯಯವಿಕಾರವುಂಟೋ.

ಸೋಲು - ಹೇಲು - ಸಾಲು - ಈ ಧಾತುಗಳಿಗೆ ಕುಳಿ ಪ್ರತ್ಯಯ ಪರವಾದಾಗ ಧಾತುವಿನದುವಿಗೆ ಉಶಬ್ದಾದೇಶವು - ಕುಳಿ ಪ್ರತ್ಯಯದ ಕಕಾರಕ್ಕೆ ಗಕಾರಾದೇಶವು ಬರುತ್ತದೆ.

ಸೋಡುಗಳಿ - ಸಾಡುಗಳಿ - ಯೇಡುಗಳಿ.

೧೯ - ಇಕಾರ ಪ್ರತ್ಯಯವು ಯಾತರ ಮೇಲೆ ಬರುತ್ತದೆ.

ದ್ವಿತೀಯಾತತ್ಪುರುಷ ಸಮಾಸದಲ್ಲಿ ಕರ್ಮೋಪಪದವಾದ ಕೊಲ್ಲು - ಧಾತುವಿಗೂ - ಉಣ್ಣುಧಾತುವಿಗೂ - ಇ ಪ್ರತ್ಯಯ ಬರುತ್ತದೆ - ಆದರೆ - ಕೊಲ್ಲುಧಾತುವಿಗೆ - ಇ ಪ್ರತ್ಯಯ ಪರವಾದಾಗ ಧಾತುವಿನ ದುವಿಗೆ ಲೋಪವೂ - ಆದ್ಯಕ್ಷರಕ್ಕೆ ಗ ಶಬ್ದಾದೇಶವೂ ಬರುತ್ತವೆ - ಉಣ್ಣುಧಾತುವಿನ ದುವಿಗೆ ಲೋಪಮಾತ್ರ ಬರುತ್ತದೆ.

ಮೀನನ್ನು - ಕೊಲ್ಲುವವ - ಮೀಂಗುಲಿ - ಆನೆಗುಲಿ - ಇತ್ಯಾದಿ

ಎಲರನ್ನು - ಉಣ್ಣುವದು - ಎಲರುಣಿ - ಅಮರ್ದುಣಿ - ಇತ್ಯಾದಿ.

೨೦ - ಇಗ ಪ್ರತ್ಯಯವು ಯಾವದರ ಮೇಲೆ ಬರುತ್ತದೆ.

ಕರ್ಮೋಪಪದವಾದ ಕುಟ್ಟು ಧಾತುವಿಗೆ ಇಗ ಪ್ರತ್ಯಯ ಬರುತ್ತದೆ - ಆದರೆ - ಆಗ ಕುಟ್ಟು ಧಾತುವಿನ ದುವಿಗೆ ಲೋಪಸಹಾ ಬರುತ್ತದೆ.

ಕಲ್ಲನ್ನು ಕುಟ್ಟುವವ - ಕಲ್ಲುಕುಟಿಗ - ಮರವನ್ನು ಕುಟ್ಟುವವ - ಮರಕುಟಿಗ - ಇತ್ಯಾದಿ.

೨೧ - ಉಕ ಪ್ರತ್ಯಯವು ಯಾತರ ಮೇಲೆ ಬರುತ್ತದೆ.

ಕರ್ಮೋಪಪದವಾದ - ಬಡಿ - ಮುರಿ - ಒಡಿ - ಮೊದಲಾದ ಧಾತುಗಳಿಗೆ ಉಕ ಪ್ರತ್ಯಯ ಬರುತ್ತದೆ - ಆಗ ಧಾತುವಿನ ಕಡೆಯ ಸ್ವರಕ್ಕೆ - ಲೋಪಸಹಾ ಬರುತ್ತದೆ.

ಬಾಯನ್ನು ಬಡಿಯುವ - ಬಾಯ್ಬಡುಕನು - ಮನೆಯನ್ನು ಮುರಿಯುವ - ಮನೆಮುರುಕ - ತಲೆಒಡುಕ - ಇತ್ಯಾದಿ.

೨೨ - ನಿರುಪಪದವಾದ ಯಾವ ಧಾತುವಿನ ಮೇಲಾದರೂ ಉಕ ಪ್ರತ್ಯಯ ಬರುತ್ತದೆಯೋ.

ಯಾಚನಾರ್ಥವಾಗಿ ತಿರಿಯುವವ ಸಂಬಂಧದಲ್ಲಿ ತಿರಿಧಾತುವಿನ ಮೇಲೆ ಉಕ ಪ್ರತ್ಯಯ ಬರುತ್ತದೆ - ಆಗ ಆ ಧಾತುವಿನಂತ್ಯ ಸ್ವರಕ್ಕೆ ಲೋಪ ಬರುತ್ತದೆ.

ತಿರಿಯುವವನು - ತಿರುಕನು.

೨೩ - ಪ್ರತ್ಯಯಾಂತ ಧಾತುವಿನ ಮೇಲೆ ಉಕ ಪ್ರತ್ಯಯ ಬರುವದುಂಟೋ.

ಇಸು ಪ್ರತ್ಯಯಾಂತವಾದ ಕೆಡು ಧಾತುವಿಗೆ ಉಕ ಪ್ರತ್ಯಯ ಬರುತ್ತದೆ - ಆಗ ಇಸು ಪ್ರತ್ಯಯಕ್ಕೆ ಲೋಪಸಹಾ ಬರುತ್ತದೆ.

ಕೆಡಿಸುವವ - ಕೆಡುಕ.

೨೪ - ಇನ್ನು ಯಾವ ಧಾತುಗಳ ಮೇಲಾದರೂ ಉಕ ಪ್ರತ್ಯಯ ಬರುತ್ತದೆಯೋ.

ಕದಿ - ಹಡು - ಮೊದಲಾದ ಧಾತುಗಳಿಗೆ - ಉಕ ಪ್ರತ್ಯಯ ಬರುತ್ತದೆ.

ಕದಿಯುವವನು - ಕಡುಕನು - ಹಡುವವನು - ಹಡುಕನು - ಇತ್ಯಾದಿ.

೨೫ - ಅಕಾರ ಪ್ರತ್ಯಯವು ಯಾವವರ ಮೇಲೆ ಬರುತ್ತವೆ.

ಮರುಕು ಮೊದಲಾದ ಧಾತುಗಳಿಗೆ ಅಕಾರ ಪ್ರತ್ಯಯ ಬರುತ್ತದೆ.

ಮರುಕುವವನು - ಮರುಕನು - ಕೆಣಕುವವನು - ಕೆಣಕನು - ಕುರುಕುವವನು - ಕುರುಕನು - ಒಡ್ಡುವವನು - ಒಡ್ಡನು ಕುಂಟುವವನು - ಕುಂಟನು.

೨೬ - ಅಲ್ ಪ್ರತ್ಯಯವೆಲ್ಲಿ ಬರುತ್ತದೆ.

ಅರಲು ಮೊದಲಾದ ಧಾತುಗಳಿಗೆ ಕರ್ತ್ರರ್ಥದಲ್ಲಿ ಅಲ್ ಪ್ರತ್ಯಯ ಬರುತ್ತದೆ - ಈ ಅಲ್ ಪ್ರತ್ಯಯಕ್ಕೆ ಸರ್ವತ್ರ ಲೋಪ ಬರುತ್ತದೆ - ಆದ್ದರಿಂದ ಇದನ್ನು ಸರ್ವಲೋಪಿ ಪ್ರತ್ಯಯವೆಂದು ಹೇಳುತ್ತಾರೆ.

ಅರಲುವವದು - ಅರಲು - ಬೆಳೆಯುವದು - ಬೆಳೆ - ತಡೆಯುವದು - ತಡೆ - ಅಳೆಯುವದು - ಅಳೆ - ಉರಿಯುವದು - ಉರಿ - ಇತ್ಯಾದಿ.

ಅರಲ್ವಾದಿ ಧಾತುಗಳು ಬಹಳವವೆ - ಅವನ್ನು ಧಾತುಮಂಜರಿಯಲ್ಲಿ ವಿವರವಾಗಿ ತೋರಿಸುತ್ತೇವೆ.

೨೭ - ಪುರುಕಿ ಪ್ರತ್ಯಯವೆಲ್ಲಿ ಬರುತ್ತದೆ.

ಕುಳಿ ಪ್ರತ್ಯಯವು ಯಾವ ಅರ್ಥದಲ್ಲಿ ಬರುತ್ತದೆಯೋ ಅದೇ ಅರ್ಥದಲ್ಲಿ ಪುರುಕಿ ಪ್ರತ್ಯಯ ಬರುತ್ತದೆ - ಆದರೆ ನಿಂದೆ ತೋರುವಾಗಲೆ ಈ ಪುರುಕಿ ಪ್ರತ್ಯಯ ಬರುತ್ತದೆ - ಮತ್ತು ಸೊಲ್ವಾದಿಗಳದು ವಿಕೆರು ಶಬ್ದಾದೇಶ ಸಹ ಬರುತ್ತದೆ.

ಅಂಜುಪುರಿಕಿ - ಸೋರುಪುರಿಕಿ - ಹೇಡುಪುರಿಕಿ - ಇತ್ಯಾದಿ.

೨೮ - ಇನ್ನಾ ಕಡಮೆ ಕಾರಕದಲ್ಲಿಯೂ ಏನಾದರೂ ಪ್ರತ್ಯಯಗಳು ಬರುವದುಂಟೋ.

ಕಡಮೆ ಅಯಿದು ಕಾರಕದಲ್ಲಿಯೂ - ಕರ್ತ್ರರ್ಥದಲ್ಲಿಯೂ ಬಹಳ ಪ್ರತ್ಯಯಗಳು ಬರುತ್ತವೆ - ಅವುಗಳನ್ನು ಧಾತುಮಂಜರಿಯಲ್ಲಿ ವಿವರವಾಗಿ ಹೇಳುತ್ತೇವೆ ಆದ್ದರಿಂದ ಇಲ್ಲಿ ವಿಸ್ತರಿಸಲಿಲ್ಲವು.

೨೯ - ಭಾವಾರ್ಥದಲ್ಲಿ ಇನ್ನೂ ಏನಾದರೂ ಪ್ರತ್ಯಯಗಳುಂಟೋ.

ಭಾವಾರ್ಥದಲ್ಲಿ ಎಲ್ಲಾ ಧಾತುಗಳ ಮೇಲೂ - ಓಣ - ವದು - ಪ್ರತ್ಯಯಗಳು ಬರುತ್ತವೆ.

ಮಾಡೋಣ - ಮಾಡುವದು - ಹೋಗೋಣ - ಹೋಗುವದು ಇಳಿಯೋಣ - ಇಳಿವದು - ಕರಿಯೋಣ - ಕರಿವದು - ಇತ್ಯಾದಿ.

೩೦ - ಇನ್ನಾ ಧಾತುವಿಶೇಷಗಳ ಮೇಲೆ ಪ್ರತ್ಯಯವಿಶೇಷಗಳುಂಟೋ.

ತ - ಕೆ - ಇಕೆ - ಇಗೆ - ಗೆ - ಅ - ಮೆ - ಎ - ವಿಕೆ - ಅವು - ವು - ತೆ - ಪು - ಸು - ಪದಿ - ವಣಿಗೆ - ಣ - ಹ - ಕು - ಹು - ವಿ - ವೆ - ಗುಳು ವಳಿತ - ಇತ - ಅತ್ ಇತ್ಯಾದಿ ಪ್ರತ್ಯಯಗಳು ಬರುತ್ತವೆ.

೩೧ - ತ ಪ್ರತ್ಯಯವು ಯಾವ ಧಾತುಗಳ ಮೇಲೆ ಬರುತ್ತದೆ.

ಮಣಿ ಮೊದಲಾದ ಧಾತುಗಳ ಮೇಲೆ ತ ಪ್ರತ್ಯಯ ಬರುತ್ತದೆ.

ಮಣಿತ - ಕುಣಿತ - ಇತ್ಯಾದಿ.

ಮಣಿ - ಕುಣಿ - ಬಗಿ - ಸುಗಿ - ಸುಡಿ - ಅಗಿ - ಮುಗಿ - ಅರಿ ಇರಿ - ಮುರಿ - ತಿರಿ - ಉರಿ - ಬಡಿ - ಕಡಿ - ಹಿಡಿ - ಸಿಡಿ - ನಾಡಿ - ಮರೆ - ಮೆರೆ - ಕಾಡೆ - ನೆಗೆ - ಒರೆ - ಕಲೆ - ಅಲೆ - ಈ - ಇತ್ಯಾದಿಗಳು ಮಣ್ಯಾದಿಗಳು.

೩೨ - ಇನ್ನಾವ ತಕಾರ ಪ್ರತ್ಯಯಗಳು ಯಾವವರ ಮೇಲಾದರೂ ಬರುತ್ತವೆಯೋ.

ಈಸು ಮೊದಲಾದ ಧಾತುಗಳ ಮೇಲೆ ಬರುತ್ತವೆ - ಆದರೆ ಧಾತುಗಳ ಕಡೆಯ ಸ್ವರಕ್ಕೆ ಮೊಪಸರ ಬರುತ್ತವೆ.

ಈಸು - ಈಸ್ತ - ಕೊಯ್ಯು - ಕೊಯ್ತ ಇತ್ಯಾದಿ.

ಈಸು - ಕೊಯು - ಒಯು - ಸುಯು - ಹಾಯು - ಹಾಯು ಇತ್ಯಾದಿಗಳು - ಈಸ್ವಾದಿಗಳು.

೩೩ - ಕೆ - ಇಕೆ - ಪ್ರತ್ಯ

ಸ - ಣು - ರು - ಲು - ಅಂತವಾದ ಧಾತುಗಳಿಗೆ - ಕೆ - ಇಕೆ

ಯಗಳು ಯಾವವರ ಮೇಲೆ ಬರುತ್ತವೆ.

ಪ್ರತ್ಯಯಗಳು ಬರುತ್ತವೆ - ಆದರೆ ಆ ಪ್ರತ್ಯಯಗಳು ಪರವಾದಾಗ ಅಂತ್ಯಸ್ವರಕ್ಕೆ ಲೋಪ ಸಹ ಬರುತ್ತದೆ.

ಸೋಸು - ಸೋಸ್ಕೆ - ಸೋಸಿಕೆ - ಮಾಗು - ಮಾಗ್ಗೆ - ಮಾಗಿಕೆ - ಕೊರು ಕೊರ್ಕೆ - ಕೊರಿಕೆ - ನಾಲು - ನಾಲ್ಕೆ - ನಾಲಿಕೆ - ಇತ್ಯಾದಿ.

೩೪ - ಈ ಪ್ರತ್ಯಯಗಳು ಇನ್ನ್ಯಾವವರ ಮೇಲಾದರೂ ಬರುತ್ತವೆಯೋ.

ಆಳ್ವಾದಿಧಾತುಗಳ ಮೇಲೂ - ಈ ಪ್ರತ್ಯಯಗಳು ಬರುತ್ತವೆ - ಆಗಲೂ - ಧಾತುವಿನಂತ್ಯಸ್ವರಕ್ಕೆ ಲೋಪ ಬರುತ್ತದೆ.

ಆಳು - ಆಳ್ಕೆ - ಆಳಿಕೆ - ಇತ್ಯಾದಿ.

ಆಳು - ಬಾಳು - ಉಳು - ಅಳು - ಬೀಳು - ದಾಳು - ಏಳು ಕಾಳು - ಬೇಳು - ನೋಳು - ಕಾಳ್ಪು - ಕೂಳು - ಸೋಳು - ಆಯು ಆರಯು - ಇತ್ಯಾದಿಗಳು - ಆಳ್ವಾದಿಗಳು.

೩೫ - ಕಿ ಪ್ರತ್ಯಯವಿಲ್ಲದೆ ಇಕೆ ಪ್ರತ್ಯಯ ಮಾತ್ರವೆಲ್ಲಿ ಬರುತ್ತದೆ.

ಕೇಯು ಮೊದಲಾದ ಧಾತುಗಳ ಮೇಲೆ ಬರುತ್ತದೆ.

ಕೇಯು - ಕೇಯಿಕೆ - ಒಂದು - ಒಂದಿಕೆ - ಅಂಜು - ಅಂಜಿಕೆ - ಇತ್ಯಾದಿ.

ಕೇಯು - ಒಂದು - ಅಂಜು - ನಂದು - ಕಂದು - ದಾಂದು - ಮೋದು ಓದು - ಉಣ್ಣು - ದೇಸು - ನಾಚು - ನಂಬು - ಕೂಲು - ಕಾರು - ಆದು ನೋಡು - ಓಡು - ಕಾಡು - ಕೂಡು - ಹರಡು - ಕದಡು - ಮುದುಡು - ಅವಡು - ಇತ್ಯಾದಿ ಸಕಲ ಡು ಶಬ್ದಾಂತಗಳೂ - ಆಗಳ್ವಾದಿ ಧಾತುಗಳೂ - ಕೇಯ್ವಾದಿಗಳು.

೩೬ - ಇಗೆ ಪ್ರತ್ಯಯವು ಯಾವವರ ಮೇಲೆ ಬರುತ್ತದೆ.

ನೆಡ್ವಾದಿಧಾತುಗಳ ಮೇಲೆ ಬರುತ್ತದೆ.

ನೆಡು - ನೆಡಿಗೆ - ಉಡು - ಉಡಿಗೆ - ಇತ್ಯಾದಿ.

ನೆಡು - ಉಡು - ಕ್ರಾಡು - ಅಡು - ಬೇಡು - ಮಾಡು - ದಾಯು ನಂಬು - ಪಾರ್ದು - ಆಳ್ದು - ಕಾಳ್ದು - ಕೆಮಳ್ದು - ಮೆಟ್ಟು - ಕೂಲು ಇತ್ಯಾದಿಗಳು ನೆಡ್ವಾದಿಗಳು.

೩೭ - ಗೆ ಪ್ರತ್ಯಯ ಯಾವವರ ಮೇಲೆ ಬರುತ್ತದೆ.

ನಡೆ ಮೊದಲಾದ ಧಾತುಗಳಿಗೆ ಗೆ ಪ್ರತ್ಯಯ ಬರುತ್ತದೆ.

ನಡೆಗೆ - ನೆಡುಗೆ - ಇತ್ಯಾದಿ.

ನಡೆ - ನೆಡು - ಉಡು - ತ್ರಾಡು - ಅಡು - ಇತ್ಯಾದಿಗಳು ನಡೆ ಮೊದಲಾದವು.

೩೮ - ಅಕಾರ ಪ್ರತ್ಯಯ ಎಲ್ಲಿ ಬರುತ್ತದೆ.

ಊಡು ಮೊದಲಾದ ಧಾತುಗಳಿಗೆ ಅಕಾರ ಪ್ರತ್ಯಯ ಬರುತ್ತದೆ - ಹೀಗೆ ಧಾತುವಿನ ಡುವಿಗೆ ಟಕಾರಾದೇಶ ಸಹ ಬರುತ್ತದೆ.

ಊಡು - ಊಟ - ನೋಡು - ನೋಟ - ಇತ್ಯಾದಿ.

ಅಡು - ನೋಡು - ಓಡು - ಕೂಡು - ಕಾಡು - ಇತ್ಯಾದಿಗಳು - ಊಡ್ವಾದಿಗಳು.

೩೯ - ಇನ್ನೂ ಅಕಾರ ಪ್ರತ್ಯಯವು ಯಾವವರ ಮೇಲೆ ಬರುತ್ತದೆ.

ಉಣ್ಣು ಸಾಲು ಧಾತುಗಳ ಮೇಲೆ ಬರುತ್ತದೆ - ಹೀಗೆ ಉಣ್ಣು ಧಾತುವಿಗೆ ಮಾತ್ರ ಆದ್ಯಕ್ಷರ ದೀರ್ಘವೂ ಣ್ಣಕ್ಕೆ ಟಕಾರಾದೇಶವೂ ಬರುತ್ತದೆ.

ಊಟ - ಸಾಲ - ಇತ್ಯಾದಿ.

೪೦ - ಮೆ ಪ್ರತ್ಯಯವು ಯಾವವರ ಮೇಲೆ ಬರುತ್ತದೆ.

ನಲು - ಸೇಯು ಧಾತುಗಳ ಮೇಲೆ ಬರುತ್ತದೆ - ಹೀಗೆ ನಲು ಧಾತುವಿಗೆ ಉಕಾರ ಲೋಪವೂ - ಸೇಯು ಧಾತುವಿಗೆ ಯು ಲೋಪವೂ - ಬರುತ್ತದೆ.

ನಲು - ನಲ್ಮೆ - ಸೇಯು - ಸೇಮೆ.

೪೧ - ಎಕಾರ ಪ್ರತ್ಯಯ ಎಲ್ಲಿ ಬರುತ್ತದೆ.

ಕೊಡ್ವಾದಿ ಧಾತುಗಳಿಗೆ - ಎಕಾರ ಪ್ರತ್ಯಯ ಬರುತ್ತದೆ ಅವುಗಳೊಳಗೆ ಕೊಲ್ಲು ಧಾತುವಿನ ಡುವಿಗೆ ಲೋಪ ಸಹ ಬರುತ್ತದೆ,

ಕೊಡು - ಕೊಡೆ - ಕೊಲ್ಲು - ಕೊಲೆ - ಇತ್ಯಾದಿ.

ಕೊಡು - ಕೊಲ್ಲು - ನಗು - ಹಾರು - ಹರಟು - ಇತ್ಯಾದಿಗಳು ಕೊಡ್ವಾದಿಗಳು.

೪೨ - ವಿಕೆ ಪ್ರತ್ಯಯ ಎಲ್ಲಿ ಬರುತ್ತದೆ.

ಇರು ಮೊದಲಾದ ಧಾತುಗಳಿಗೆ ವಿಕೆ ಪ್ರತ್ಯಯ ಬರುತ್ತದೆ.

ಇರುವಿಕೆ - ತೆರುವಿಕೆ - ಬರುವಿಕೆ - ಇತ್ಯಾದಿ.

ಪ್ರಶ್ನೆ.	ಉತ್ತರವು.
	ಇರು - ಬರು - ಕರು - ಹಾರು - ತಿಳಿ - ಕಲಿ - ತಿರಿ - ಇಳಿ - ತುಳಿ ಬರೆ - ಕೀಳು - ನಿಲ್ಲು - ಗೆಲ್ಲು - ಮರೆ - ಬಳೆ - ನಡೆ - ಸುಲಿ - ಇತ್ಯಾದಿಗಳು - ಇರ್ವಾದಿಗಳು.
೪೩ - ಅವು ಪ್ರತ್ಯಯವೆಲ್ಲಿ ಬರುತ್ತದೆ.	ಕಳ್ವಾದಿಧಾತುಗಳಿಗೆ ಬರುತ್ತದೆ - ಈಗ ಧಾತುವಿನಂತ್ಯಸ್ವರಕ್ಕೆ ಲೋಪಸಹಾ ಬರುತ್ತದೆ.
	ಕಳವು - ನೆರವು - ಇತ್ಯಾದಿ.
	ಕಳು - ನೆರೆ - ಮೆರೆ - ತೆರೆ - ಸೋಲು - ಸೆಳೆ - ಕರೆ - ಬರು - ಇರು ಇತ್ಯಾದಿಗಳು ಕಳ್ವಾದಿಗಳು.
೪೪ - ವು ಪ್ರತ್ಯಯವೆಲ್ಲಿ ಬರುತ್ತದೆ.	ಹಸಿಮೊದಲಾದ ಧಾತುಗಳ ಮೇಲೆ ವು ಪ್ರತ್ಯಯ ಬರುತ್ತದೆ.
	ಹಸಿ - ಹಸಿವು - ಸಾ - ಸಾವು - ಇತ್ಯಾದಿ.
	ಹಸಿ - ಸಾ - ನೋ - ಕೀ - ಈ - ಅಳಿ - ಸುಳಿ - ಮೇ - ಪೊಳಿ - ಅರಿ ಎಳೆ - ಸೆಳೆ - ಇತ್ಯಾದಿಗಳು ಹಸ್ಯಾದಿಗಳು.
೪೫ - ಕೆ ಪ್ರತ್ಯಯವೆಲ್ಲಿ ಬರುತ್ತದೆ.	ಅಗಲ್ವಾದಿಧಾತುಗಳ ಮೇಲೆ ಕೆ ಪ್ರತ್ಯಯ ಬರುತ್ತದೆ - ಈಗ ಧಾತುವಿನಂತ್ಯಸ್ವರಕ್ಕೆ ಲೋಪಸಹಾ ಬರುತ್ತದೆ.
	ಅಗಲು - ಅಗಲ್ಕೆ - ತೆಗಲು - ತೆಗಲ್ಕೆ - ಇತ್ಯಾದಿ.
	ಅಗಲು - ತೆಗಲು - ಹಾಗಲು - ಜಗಲು - ನೆಗಲು - ಮಗಲು ಮಸುಳು - ನುಸುಳು - ಸುಗುಳು - ಬಸುಳು - ಮುಗುಳು - ಸುರುಳು ಉರುಳು - ಹೊರಳು - ತೆಗಳು - ಇತ್ಯಾದಿಗಳು - ಅಗಲ್ವಾದಿಗಳು.
೪೬ - ಇನ್ನಾವ ಅಂತ್ಯಲೋಪವಿಲ್ಲದೆ ಕೆಪ್ರತ್ಯಯವೆಲ್ಲಾದರೂ ಬರುತ್ತದೆಯೋ.	ಹೊಸ ಮೊದಲಾದ ಧಾತುಗಳಿಗೆ ಬರುತ್ತದೆ.
	ಹೊಸ - ಹೊಸಕೆ - ಮಿಸ - ಮಿಸಕೆ - ಇತ್ಯಾದಿ.
	ಹೊಸ - ಮಿಸ - ನಡೆ - ಅಳೆ - ಇತ್ಯಾದಿಗಳು - ಹೊಸ್ವಾದಿಗಳು.

೪೭ - ಪು ಪ್ರತ್ಯಯವೆಲ್ಲಿ ಬರುತ್ತದೆ.

ಹಾಳೆ ಮೊದಲಾದ ಧಾತುಗಳಿಗೆ ಪು ಪ್ರತ್ಯಯ ಬರುತ್ತದೆ.

ಹೊಳೆ - ಹೊಳೆಪು - ನೆನೆ - ನೆನೆಪು - ಇತ್ಯಾದಿ.

ಹೊಳೆ - ನೆನೆ - ಓ - ಕಾ - ಮೇಣಿತ್ಯಾದಿಗಳು - ಹಾಳೆ ಮೊದಲಾದವು.

೪೮ - ಸು ಪ್ರತ್ಯಯವೆಲ್ಲಿ ಬರುತ್ತದೆ.

ಮನಿ ಮೊದಲಾದ ಧಾತುಗಳಿಗೆ ಸು ಪ್ರತ್ಯಯ ಬರುತ್ತದೆ ತಿನ್ನು ಧಾತುವಿನ ನುವಿಗೆ ಇಕಾರಾದೇಶ ಸಹ ಬರುತ್ತದೆ.

ಮನಿ - ಮನಿಸು - ತಿನ್ನು - ತಿನಿಸು - ಕನಿ - ಕನಿಸು - ಮಳೆ - ಮಳೆಸು - ಬೆಳೆ - ಬೆಳೆಸು - ಇತ್ಯಾದಿಗಳು ಮನ್ಯಾದಿಗಳು.

೪೯ - ಪದಿ ಮೊದಲಾದ ಪ್ರತ್ಯಯಗಳೆಲ್ಲಿ ಬರುತ್ತವೆ.

ತಿದ್ದು ಧಾತುವಿಗೆ - ಪದಿ ಪ್ರತ್ಯಯವೂ - ಮೆರೆ - ಬರೆ ಧಾತುಗಳಿಗೆ - ವಣಿಗೆ ಪ್ರತ್ಯಯವೂ - ಮೀ ಧಾತುವಿಗೆ - ಗಾ - ಹ - ಪ್ರತ್ಯಯಗಳೂ - ಬಾ ಧಾತುವಿಗೆ - ಕು - ಹು ಪ್ರತ್ಯಯಗಳೂ - ಗೆಲ್ಲು ಬಳೆ ಧಾತುಗಳಿಗೆ - ವಿ ಪ್ರತ್ಯಯವೂ - ಬಯ್ಯು ಧಾತುವಿಗೆ - ಗುಳು ಪ್ರತ್ಯಯವೂ - ಕೇಳು - ಮರೆ - ಧಾತುಗಳಿಗೆ - ವೆ ಪ್ರತ್ಯಯವೂ ನಡೆ ಧಾತುವಿಗೆ - ವಳಿಕೆ ಪ್ರತ್ಯಯವೂ - ಕಲಿ ಧಾತುವಿಗೆ - ಕೆ ಪ್ರತ್ಯಯವೂ - ಒಪ್ಪು - ತಪ್ಪು ಧಾತುಗಳಿಗೆ - ಇತೆ ಪ್ರತ್ಯಯವೂ ಬರುತ್ತದೆ - ಆಗ ಕೇಳು - ಬಯ ಧಾತುಗಳ ಅಂತ್ಯಸ್ವರಕ್ಕೆ ಲೋಪವೂ - ಗೆಲ್ಲುವಿನ ಪಥಾಲೋಪವೂ ಬರುತ್ತದೆ.

ತಿದ್ದು - ತಿದ್ದುಪದಿ - ಬರೆ - ಬರೆವಣಿಗೆ - ಮೆರೆ - ಮೆರೆವಣಿಗೆ ಮೀ - ಮೀಗಾ - ಮೀಹ - ಬಾ - ಬಾಕು - ಬಾಹು - ಗೆಲ್ಲು - ಗೆಲುವಿ ಬಳೆ - ಬಳೆವಿ - ಬಯ್ಯು - ಬಗ್ಗುಳು - ಕೇಳು - ಕೇಳ್ವೆ - ಮರೆವೆ ನಡೆವಳಿಕೆ - ಕಲಿ - ಕಲಿಕೆ - ಒಪ್ಪು - ಒಪ್ಪಿತೆ - ತಪ್ಪು - ತಪ್ಪಿತೆ ಇತ್ಯಾದಿ.

೫೦ - ಅಕ್ ಪ್ರತ್ಯಯವು ಯಾವವರ ಮೇಲೆ ಬರುತ್ತದೆ.

ಬದುಕು ಮೊದಲಾದ ಧಾತುಗಳ ಮೇಲೆ ಬರುತ್ತದೆ. ಅಕ್ ಪ್ರತ್ಯಯವು ಸವರ್ಣಲೋಪಿಯು - ಬದುಕ - ಬದುಕು - ದಾಟು.

ಬದುಕು - ದಾಟು - ಕಟ್ಟು - ಉರಿ - ನಗು - ಬೆಳೆ - ತಿದ್ದು - ಓದು ಮೊಡು - ನಡೆ - ತಪ್ಪು - ಒಪ್ಪು - ಹರಡು - ಕದಡು - ಮುಡುಡು - ಅವಡು - ಪಳಿ - ಹಸಿ - ಬಿಗಿ - ಕಾಳಿ - ತಿದ್ದು - ನುಸುಳು ಮಗುಳು - ಹೆಚ್ಚು - ತೆಗ್ಗು - ತಗ್ಗು - ಹಿದಿ - ಮುಸುಕು - ಪಿಸುಕು ಮುರುಕು - ಸೊಕು - ನೂಕು - ಉಳುಕು - ಇತ್ಯಾದಿಗಳು ಬದುಕ್ವಾದಿಗಳು - ಕೆಲವರು ಸಕಲಧಾತುಗಳ ಮೇಲೂ ಭಾವಾರ್ಥದಲ್ಲಿ ಅತ್ ಪ್ರತ್ಯಯ ಬರುತ್ತದೆಯೆಂದು ಹೇಳುತ್ತಾರೆ.

೫೧ - ಅತ್ಪ್ರತ್ಯಯ ವಿಷಯದಲ್ಲಿ ಯಾವ ಧಾತುವಿಗಾದರೂ ಪ್ರಕೃತಿವಿಕಾರವುಂಟೊ

ಕೆಡು ಧಾತುವಿನ ಪ್ರಥಮಸ್ವರಕ್ಕೆ ಅತ್ಪ್ರತ್ಯಯ ವಿಷಯದಲ್ಲಿ ದೀರ್ಘ ಬರುತ್ತದೆ - ಮುಳುಗು ಮೊದಲಾದ ಧಾತುಗಳ ಉಪಧಾಗಕಾರಕ್ಕೆ ಕಕಾರಾದೇಶ ಬರುತ್ತದೆ.

ಕೆಡು - ಕೇಡು - ಮುಳುಗು - ಮುಳುಕು - ಬೆಳಗು - ಬೆಳಕು ಇತ್ಯಾದಿ.

೫೨ - ಇಸು ಪ್ರತ್ಯಯಾಂತ ಧಾತುಗಳ ಮೇಲೇನು ಬರುತ್ತದೆ.

ಇಸು ಪ್ರತ್ಯಯಾಂತ ಧಾತುಗಳ ಮೇಲೆ - ಅಟ್ - ಅದು - ವದು ಓಣ ಪ್ರತ್ಯಯಗಳೂ ಇಕೆ ಪ್ರತ್ಯಯವೂ ಬರುತ್ತದೆ.

ಮಾಡಿಸಿದುದು - ಮಾಡಿಸಿದ್ದು - ಮಾಡಿಸೋಣ - ಮಾಡಿಸುವದು ಮಾಡಿಸುವಿಕೆ - ಇತ್ಯಾದಿ.

೫೩ - ಭಾವ ಪ್ರತ್ಯಯಗಳಲ್ಲಿ ಯಾವದಾದರೂ ಯಾವ ಧಾತುವಿ ಮೇಲಾದರೂ ಇತರಾರ್ಥದಲ್ಲಿ ಬರುವದುಂಟೊ.

ಈ ಪ್ರತ್ಯಯಗಳು ಕೆಲಕೆಲ ಧಾತುಗಳ ಮೇಲೆ ಕಾರಕಾರ್ಥದಲ್ಲಿಸಹಾ ಬರುತ್ತದೆ - ಇದುಹೊರ್ತು ಇನ್ನೂ - ಅಲ್ - ಅಣಿಗೆ ಮೊದಲಾದ ಪ್ರತ್ಯಯಗಳೂ ಬರುತ್ತವೆ - ಅವುಗಳನ್ನೆಲ್ಲಾ ಧಾತುಮಂಜರಿಯಲ್ಲಿ ವಿವರವಾಗಿ ಹೇಳುತ್ತೇವೆ.

ಕುಡಿಕೆ - ಒಣಕಲು - ಬೀಸಣಿಗೆ - ಇತ್ಯಾದಿ.

೫೪ - ಅವ್ಯಯಕೃತ್ಪ್ರತ್ಯಯಗಳು ಯಾವವು ಯಾವರ್ಥದಲ್ಲಿ ಬರುತ್ತವೆ.

ಅ - ಅಲು - ಅಲಿಕ್ಕೆ - ಇ - ಉ - ಅದೆ - ಉತ್ತ - ಉತೆ - ಉತ್ತಾ ಉತಾ - ಅಕೆ - ಪ್ರತ್ಯಯಗಳೂ - ಬೇಡಾದಿ ಪ್ರತ್ಯಯಗಳೂ ಭಾವಕರ್ತ್ರರ್ಥಗಳಲ್ಲಿ ಬರುತ್ತವೆ.

ಕರ್ತ್ರರ್ಥದಲ್ಲಿಯೂ - ಭಾವಾರ್ಥದಲ್ಲಿಯೂ - ಪ್ರತ್ಯಯಗಳು ಬರುತ್ತವೆ - ಭೇದಾದಿಗಳನ್ನು ಪ್ರತ್ಯಯವೆಂದು ಹೇಳಿದ್ದ ಕೆಲವರ ಅಭಿಪ್ರಾಯವನ್ನು ಇದಿದು - ೪ನೆಯ ಪ್ರಕರಣದ ೭೭ನೆಯ ಸೂತ್ರದಲ್ಲಿ ಇದನ್ನು ಕುರಿತು ಕೆಲವು ಪ್ರಕಾರಗಳು ಹೇಳಿದ್ದೇವೆ - ಇವು ಕೊರ್ತಕದ ಮೆಕ್ಸ್ತ್ರ ಪ್ರತ್ಯಯಾಂತಗಳು ಮತ್ತಾಂದು ಕ್ರಿಯಾಪದಗಳನ್ನಂತೆ ವಾಗಿ ಮಾಡಿಕ್ಕೊಳ್ಳದೆ - ಇರದು - ಇದು ಅರ್ಥ - ಈ ಪ್ರತ್ಯಯಗಳು ಮಾಡಿದಾಗ ವಿಶೇಷಾರ್ಥಗಳು ಸದಹಾರುತ್ತದೆ.

೭೭ - ಅ - ಅಲು - ಅಲಿಕ್ಕೆ ಪ್ರತ್ಯಯಗಳು - ಯಾವ ಅರ್ಥದಲ್ಲಿ ಬರುತ್ತವೆ.

ಒಂದು ಧಾತ್ವರ್ಥ ವ್ಯಾಪಾರಕ್ಕೆ ಪ್ರಯೋಜನವಾದ ವ್ಯಾಪಾರವನ್ನು ಹೇಳುವ ಧಾತುವಿನ ಮೇಲೆ ಭಾವಾರ್ಥದಲ್ಲಿ ಈ ಮೂರು ಪ್ರತ್ಯಯಗಳೂ ಬರುತ್ತವೆ - ಆಪಾದಿಧಾತುಗಳಿಗೂ ಬೇಕಾದಿಧಾತುಗಳಿಗೂ ಬರುವದಿಲ್ಲ - ಊದರೆ - ಅ ಪ್ರತ್ಯಯ ಸ್ವರಪರವಾದಾಗ ಬರುವದಿಲ್ಲ - ಅಲು - ಅಲಿಕ್ಕೆ ಪ್ರತ್ಯಯಗಳು ಮಾತ್ರ ಬರುತ್ತವೆ.

ನಾನು ಮಾಡ ಬಂದೆನು - ಮಾಡಲು ಬಂದೆನು - ಮಾಡಲಿಕ್ಕೆ ಬಂದೆನು.

೭೮ - ಇನ್ನ್ಯಾವಾರ್ಥದಲ್ಲಿಯಾದರೂ - ಅ - ಅಲು - ಅಲಿಕ್ಕೆ ಪ್ರತ್ಯಯಗಳು ಬರುತ್ತವೆಯೋ.

ಒಂದು ವ್ಯಾಪಾರ ನಡೆಯುವ ಕಾಲವನ್ನು ತೋರಿಸುವ ಮತ್ತೊಂದು ವ್ಯಾಪಾರವ ಹೇಳುವ ಧಾತುವಿನ ಮೇಲೆ - ಅ - ಅಲು - ಅಲಿಕ್ಕೆ ಪ್ರತ್ಯಯಗಳು ಬರುತ್ತವೆ - ಪ್ರತ್ಯಯಕ್ಕೆ ಸಮಾನ ಕಾಲವರ್ಥವು - ಕೆಲವರು ಪ್ರತ್ಯಗಳ ಮೇಲೆ ಊಗಿ ಶಬ್ದವನ್ನು ಸಹ ಸೇರಿಸುತ್ತಾರೆ.

ನಾನು ಹೋಗ ನೀನು ಬಂದೆ.

ನಾನು ಮಾಡಲು - ಅವನು ಬಂದನು.

ನಾನು ಮಾಡಲಿಕ್ಕೆ ಅವನು ಬಂದನು.

ನಾನು ಹೇಳಲಾಗಿ - ಹೇಳಲಿಕ್ಕಾಗಿ ಅವನು ಬಂದನು.

೭೬ - ಇನ್ನು ಯಾವ ಅರ್ಥದಲ್ಲಿಯಾದರೂ ಈ ಪ್ರತ್ಯಯಗಳು ಬರುವದುಂಟೋ.

ಒಂದು ಧಾತ್ವರ್ಥವ್ಯಾಪಾರಕ್ಕೆ ಕಾರಣವಾದ ಮತ್ತೊಂದು ಧಾತ್ವರ್ಥವ್ಯಾಪಾರವ ಹೇಳುವ ಧಾತುವಿನ ಮೇಲೆ ಕಾರಣಾರ್ಥದಲ್ಲಿ ಬರುತ್ತದೆ.

ವಾಸು ಹೇಳಲವನಿಗೆ ತಿಳಿಯಿತು - ಇತ್ಯಾದಿ.

೭೮ - ಶುದ್ಧಭಾವಾರ್ಥದಲ್ಲಿಯೂ ಪ್ರತ್ಯಯಗಳಲ್ಲಿ ಯಾವದಾದರೂ ಬರುವದುಂಟೋ

ನಾಲ್ಕನೆಯ ಪ್ರಕರಣದ - ೭೪ನೇಯ ಸೂತ್ರದಲೂ ಪಾದಿಧಾತುಗಳು ಪರವಾದಾಗಲೂ - ೭೭ನೆಯ ಸೂತ್ರದ ಬೇಕು - ಬೇಡಾದಿಗಳು ಪರವಾದಾಗಲೂ ಕರ್ಮಾಖ್ಯಾತ ಪರವಾದಾಗ ವಿಧಿಸಿದ ಪಡು ಧಾತು ಪರವಾದಾಗಲೂ ಇಲ್ಲ ಧಾತು ಪರವಾದಾಗಲೂ ಬಂದಿರುವ - ಅ - ಅಲು - ಪ್ರತ್ಯಯಗಳು ಶುದ್ಧಭಾವಾರ್ಥದಲ್ಲಿ ಬರುತ್ತವೆ - ಹಳಗನ್ನಡದಲ್ಲಿ ವ್ಯಂಜನಾಂತವಾದ ಶಬ್ದವೆಲ್ಲಾ ಹೊಸಗನ್ನಡದಲ್ಲಿ ಉಕಾರಾಂತವಾಗುವದರಿಂದ ಕರ್ಮಾಖ್ಯಾತವ ಪರವಾಗುಳ್ಳ ಪಡು ಧಾತು ಪರವಾದಾಗ ಬರುವ ಅಲ್ ಪ್ರತ್ಯಯವೂ ಅಲು ಪ್ರತ್ಯಯವೂ ಒಂದೇ ಎಂದು ತಿಳಿದುಕೊಳ್ಳುವದು.

ಮಾಡಲಾಪೆನು - ಮಾಡಬಲ್ಲೆನು - ಮಾಡಬೇಕು - ಮಾಡಲಾಗದು - ಮಾಡಲಿಲ್ಲ - ಮಾಡಲ್ಪಟ್ಟಿತು - ಇತ್ಯಾದಿ.

೭೯ - ಇ - ಉ - ಅದೆ ಪ್ರತ್ಯಯಗಳೂ ಯಾವ ಅರ್ಥದಲ್ಲಿ ಬರುತ್ತವೆ.

ಏಕಕರ್ತೃಕವಾದೆರಡು ಧಾತುಗಳಲ್ಲಿ ಪೂರ್ವಕಾಲದಲ್ಲಿ ಹುಟ್ಟಿದ ಕ್ರಿಯೆಯ ಹೇಳುವ ಧಾತುವಿನ ಮೇಲೆ - ಈ ಪ್ರತ್ಯಯಗಳು ಬರುತ್ತವೆ - ಈ ಪ್ರತ್ಯಯಗಳು ಮೂರಕ್ಕೂ ದು ಪ್ರತ್ಯಯವೆಂದು ಹೆಸರು - ಏಕಾರವನ್ನೈದದ - ಉಕಾರಾಂತ ಧಾತುಗಳ ಮೇಲೆ ಇಕಾರ ಪ್ರತ್ಯಯ ಬರುತ್ತದೆ - ಕದ ಮೆಸ ಕಲ ಧಾತುಗಳ ಮೇಲೂ - ಉಕಾರ ಪ್ರತ್ಯಯ ಬರುತ್ತದೆ - ಅದು ಪರವಾದಾಗ ದಕಾರಾಗಮ ಬರುತ್ತದೆ - ಅದು ಬಂದಾಗ - ೪ನೆಯ ಪ್ರಕರಣದ - ೩೭ನೆಯ ಸೂತ್ರದಾರಭ್ಯ - ೩೪ನೆಯ ಸೂತ್ರ ಮೊದಲು ೭೨ನೆಯ ಸೂತ್ರದವರೆಗೂ - ಧಾತುಗಳಿಗೆ - ದಕಾರಾಗಮ

ಪರವಾದಾಗ ಏನು ವಿಕಾರಗಳು ವಿಧಿಸಿಅವೆಯೊ - ಅವಿಲ್ಲ - ಉ ಪ್ರತ್ಯಯ ಪರವಾದಾಗ ಬಂದಿರುವ ದಕಾರಾಗಮ ಬಂದಾಗ ಸಹ ಬರುತ್ತದೆ - ಆಸ ಹೊಸ - ಗಳಿಗೆ ಇಕಾರ ಪ್ರತ್ಯಯವೇ ಬರುತ್ತದೆ ಅದೆ ಪ್ರತ್ಯಯವು - ಧಾತ್ವರ್ಥ ವ್ಯಾಪಾರಾಭಾವ ಹೊರುವಾಗ ಬರುತ್ತದೆ - ತೆರು ಬರು ಧಾತುಗಳಿಗೆ ಅದೆ ಪ್ರತ್ಯಯ ಪರವಾದಾಗ ಆದ್ಯಕ್ಷರಕ್ಕೆ ದೀರ್ಘ ಸಹ ಬರುತ್ತದೆ.

ಮಾಡಿ - ಬಾಳಿ - ಆಗಿ - ಹೋಗಿ - ಇಳಿದು - ಹಾಡಿದು - ಕರೆದು - ನಕ್ಕು - ಬಿಟ್ಟು - ಹಾಕಟು - ಬಿಸುಟು - ಬಿಸುದಿ - ಕಣ್ಡು - ಉಂಡು - ಕದ್ದು - ಮೆದ್ದು - ಗೆದ್ದು - ಎದ್ದು - ಬಿದ್ದು - ತೆತ್ತು - ಹೊತ್ತು - ಉತ್ತು ಅತ್ತು - ಇತ್ತು - ಕಿತ್ತು - ಸೇತು - ಊತು - ಮಿಳ್ತು - ಈನ್ತು - ಮುನಿತು - ಮುನಿದು - ಹದ್ದು - ಹದಿದು - ಕೊಂಡು - ಸಂದು - ನಿಂತು - ತಿಂದು ಎಂದು - ತಂದು - ಇದ್ದು - ಬಾತು - ಇತ್ತು - ಸತ್ತು - ಮಿಂದು - ಬೆಂದು - ನೊಂದು - ನೆದ್ದು - ಮಾಡದೆ - ಹೋಗದೆ - ತಾರದೆ - ಬಾರದೆ - ಇತ್ಯಾದಿ - ಈ ಮೇಲೆ ಹೇಳಿದ ಧಾತುಗಳ ಸ್ವರೂಪವ ತಿಳಿಕೊಳ್ಳುವದು.

೭೦. ಈದು ಪ್ರತ್ಯಯವು ಸಮಾನಕರ್ತೃಕವಲ್ಲದಾಗ ಸಹ ಬರುವದುಂಟೊ.

ಉತ್ತರಕಾಲ ಕ್ರಿಯೆಗೆ ಪೂರ್ವಕಾಲ ಕ್ರಿಯೆ ಹೇತುವಾದಾಗ ಎರಡೂ ಭಿನ್ನ ಕರ್ತೃಕವಾಗಿದ್ದಾಗ್ಯೂ ಪೂರ್ವಕಾಲ ಕ್ರಿಯೆಗೆ ಈದು ಪ್ರತ್ಯಯ ಬರುತ್ತದೆ.

ಕಾಲ ಮುರಿದು ಬಿದ್ದನು - ಹಣ ಹೋಗಿ ಬಡವನಾದನು - ಹುಡುಗ ನೋಡದೆ ಕೆಟ್ಟನು - ಇತ್ಯಾದಿ.

೭೧. ಇನ್ನು ಭಿನ್ನಕರ್ತೃಕತ್ವ ಲಕ್ಷಣವಿಲ್ಲದಾಗ್ಯೂ ಈದು ಪ್ರತ್ಯಯ ಬರುವದುಂಟೊ.

ಇತರ ಕಾರಕಗಳು ಸ್ವಕರ್ತೃವಾಗಿ ಹೇಳಿಕೊಂಡಾಗಲೂ ಈದು ಪ್ರತ್ಯಯ ಬರುತ್ತದೆ.

ಅನ್ನ ತಿಂದು ಮುಗಿಯಿತು - ಬಳಪ ಬರೆದು ಸವೆಯಿತು - ಮನೆ ಮೊಕ್ಕಳಿದ್ದು - ಸಾಗ ಸಾಯಿತು - ಇತ್ಯಾದಿ.

೭೨ - ಪೂರ್ವಕಾಲವಲ್ಲದೇ ಸಮಾನಕಾಲದಲ್ಲಿ ಸಹ ಈದು ಪ್ರತ್ಯಯ ಬರುವದುಂಟೋ.

ಪ್ರತ್ಯಾಂದು ಕ್ರಿಯೆಗೆ ಸಾಧನವಾದ ಕ್ರಿಯಾವಾಚಕ ಧಾತುವಿನ ಮೇಲೆ ಸಮಾನಕಾಲದಲ್ಲಿ ಸಹ ಈದು ಪ್ರತ್ಯಯ ಬರುತ್ತದೆ.

ನಡೆದು ಬಂದನು - ಹಾರಿಹೋಯಿತು.

೭೩ - ಈಯರ್ಥಗಳಾದೂ ಹೊರತು ಈದು ಪ್ರತ್ಯಯವೆಲ್ಲಾದರೂ ಬರುವದುಂಟೋ.

೪ನೆಯ ಪ್ರಕರಣದ ೭೫ನೇ ಸೂತ್ರದಲ್ಲಿ ಹೇಳಿದ ಕೊಳ್ಳು ಆದಿ ಧಾತುಗಳು ಪರವಾದಾಗ ಅವು ಯಾವ ಧಾತುವಿಗೆ ಸೇರಿಸಲ್ಪಡುತ್ತವೆಯೋ ಆ ಧಾತುಗಳ ಮೇಲೆ - ಮೇಲೆ ಹೇಳಿದ ಒಂದರ್ಥವೂ ಇಲ್ಲದೇ ಈದು ಪ್ರತ್ಯಯ ಬರುತ್ತದೆ - ಆಗ ಈದು ಪ್ರತ್ಯಯಕ್ಕೆ ಕೊಳ್ಳು ಆದಿ ಧಾತುಗಳ ಮೇಲೆ ಬಂದಿರುವ ಕೃದಾಖ್ಯಾತ ಪ್ರತ್ಯಯಗಳಿಗೆ ಯಾವದರ್ಥವೋ - ಅದೇ - ಈದು ಪ್ರತ್ಯಯಕ್ಕೂ ಅರ್ಥವಾಗುತ್ತದೆ.

ಬರೆದುಕೊಳ್ಳುತ್ತಾನೆ - ಬರೆದುಕೊಟ್ಟನು - ಬರೆದುಬಿಟ್ಟನು ಇತ್ಯಾದಿ.

೭೪ - ಪ್ರತ್ಯಾಂದು ಧಾತುವಿನ ಸಮಾನಕಾಲದಲ್ಲಿ ದು ಪ್ರತ್ಯಯವೆಲ್ಲಾದರೂ ಬರುವದುಂಟೋ.

ನಾಲ್ಕನೆಯ ಪ್ರಕರಣದ ೭೫ನೇ ಸೂತ್ರ ಪ್ರಕಾರ ಸೇರಿಸಲ್ಪಡುವ ಕೊಳ್ಳು ಧಾತುವು ಸಮಾನಕಾಲದ್ಯೋತಕವಾದಾಗ ಆ ಧಾತುವಿನ ಮೇಲೆ ಬರುವ ದು ಪ್ರತ್ಯಯವೂ ಸಮಾನಕಾಲವನ್ನೇ ಹೇಳುತ್ತದೆ.

ನಡೆದುಕೊಂಡು ಹೋದನು - ನಡೆಯುತ್ತಾ ಹೋದನು - ಹೇಳಿಕೊಂಡು ಬಂದನು - ಹೇಳುತ್ತಾ ಬಂದನು - ಇತ್ಯಾದಿ.

೭೫ - ಉತ್ತ - ಉತ - ಉತ್ತಾ - ಉತಾ - ಈ ಪ್ರತ್ಯಗಳು ಯಾವರ್ಥದಲ್ಲಿ ಬರುತ್ತವೆ.

ಸಮಾನಕರ್ತೃಗಳಾದ ಇರಡು ಧಾತುಗಳಲ್ಲಿ ಪ್ರಧಾನಧಾತುವಿಗೆ ಸಮಾನಕಾಲಿಕವಾದ ಅಪ್ರಧಾನಧಾತುವಿನ ಮೇಲೆ ಈ ನಾಲ್ಕು ಪ್ರತ್ಯಯಗಳೂ ಬರುತ್ತವೆ.

ಮಾಡುತ್ತ - ಮಾಡುತ - ಮಾಡುತ್ತಾ - ಮಾಡುತಾ - ಇತ್ಯಾದಿ.

೭೬ - ಉತ್ತಾದಿ ಪ್ರತ್ಯಯಗಳು ಪರವಾದಾಗ ಯಾವ ಧಾತುವಿಗಾದರೂ ವಿಕಾರವುಂಟೋ.

ತಿನ್ನು - ಎನ್ನು - ಧಾತುಗಳಿಗೆ - ಉತ್ತಾದಿ ಪ್ರತ್ಯಯಗಳು ಪರವಾದಾಗ ಧಾತುವಿನ ದುವಿಗೂ ಈ ಪ್ರತ್ಯಯಗಳ ಉಕಾರಕ್ಕೂ ಲೋಪವು ವಿಕಲ್ಪವಾಗಿ ಬರುತ್ತದೆ.

ಕಿಮ್ಮನಿತ್ತು - ಕಿನ್ತು - ಎಮ್ಮನಿತ್ತು - ಎಂತು - ಇತ್ಯಾದಿ.

೭೭ - ಅತಿಪ್ರತ್ಯಯವು ಯಾವರ್ಥದಲ್ಲಿ ಬರುತ್ತದೆ.

ವರ್ತಮಾನಧಾತುವಿಶೇಷಣವಾಗಿಯೂ - ಅದಕ್ಕೆ ಪೂರ್ವಕಾಲದಲ್ಲಿರುತ್ತಿದ್ದವನಾಗಿಯೂ ಇರುವ ಧಾತುವಿನ ಮೇಲೆ ಕರ್ತ್ರರ್ಥದಲ್ಲಿ ಅತಿ ಪ್ರತ್ಯಯ ಬರುತ್ತದೆ.

ಅತಿಪ್ರತ್ಯಯಕ್ಕೆ ದಕಾರಾಗಮವೂ - ದಕಾರಾಗಮಪರವಾದಾಗ ವಿಕಾರವಿಲ್ಲದ ಉಕಾರಾಂತ ಧಾತುವಿನ ಕಡೆಯಕಾರಕ್ಕೆ ಇಕಾರಾದೇಶವೂ - ಇದು ಹಾಗೆ - ಈ ಪ್ರಕರಣದ - ೬೪ನೇ ಸೂತ್ರ ಮೊದಲು - ೭೧ನೆಯ ಸೂತ್ರದ ವರೆಗೂ - ಧಾತುವಿಗೂ - ದಕಾರಾಗಮಕ್ಕೂ - ವಿಧಿಸಿರುವ ಹೊಪಾಗಮಾದೇಶಗಳೂ ಬರುತ್ತವೆ.

ಮಾಡಿದತಿ - ಸುಡಿದತಿ - ನಕ್ಕತಿ - ಊದತಿ - ಕೊಡತಿ - ಬಿಟ್ಟತಿ - ಹಾರಟತಿ - ಇತ್ಯಾದಿಗಳ ಕಡೆಗೂ ಹೇಳಿಕೊಳ್ಳುವದು.

ನೀನು ಬಂದತಿ ನಾನು ಕಾಡುತ್ತೇನೆ - ಇತ್ಯಾದಿ.

೭೮ - ಬೇಡಾದಿ ಪ್ರತ್ಯಯಗಳು ಯಾವರ್ಥದಲ್ಲಿ ಬರುತ್ತದೆ.

ಇವುಗಳನ್ನು ಪ್ರತ್ಯಯವೆಂದು ಹೇಳಿದ್ದು ಕೆಲವರ ಮತವನ್ನು ಅನುಸರಿಸಿ - ಇವುಗಳ ಪ್ರಯೋಗಗಳು ಈ ಪ್ರಕರಣದ ೭೭ನೇ ಸೂತ್ರದಲ್ಲಿ ವಿಸ್ತಾರವಾಗಿ ಹೇಳಿದೆ - ಅಲ್ಲಿ ಹೇಳಿದ ವಿಧಿಗಳನ್ನೆಲ್ಲಾ ನೋಡಿಕೊಳ್ಳುವದು.

ಇಂತು - ೭ನೆಯ ಕೃತ್ಪ್ರಕರಣಮಾಯಿತು.

ಪ್ರಶ್ನೆ:	ಉತ್ತರವು.
೧. ತದ್ಧಿತ ಪ್ರಕರಣದಲ್ಲೇನು ಹೇಳಲ್ಪಡುತ್ತದೆ.	ತದ್ಧಿತ ಪ್ರತ್ಯಯಗಳೂ - ಅವುಗಳ ಅರ್ಥಗಳೂ - ಅವುಗಳು ಬರುವಾಗ ಪ್ರಕೃತಿ ಪ್ರತ್ಯಯಗಳಿಗೆ ಬರುವ ವಿಕಾರಗಳೂ ಆದೇಶಗಳೂ ಹೇಳಲ್ಪಡುತ್ತವೆ.
೨. ತದ್ಧಿತ ಪ್ರತ್ಯಯಗಳು ಯಾವದರ ಮೇಲೆ ಯಾವರ್ಥದಲ್ಲಿ ಬರುತ್ತವೆ.	ಸುಬಂತ ಶಬ್ದಗಳ ಮೇಲೆ ಅವುಗಳನ್ನು ಸಂಬಂಧಿಸಿದ ಮತ್ತೊಂದು ವಸ್ತುವನ್ನು ಹೇಳುವಾಗ ತದ್ಧಿತ ಪ್ರತ್ಯಯಗಳು ಬರುತ್ತವೆ.
೩. ತದ್ಧಿತ ಪ್ರತ್ಯಯಪರವಾದಾಗ ಸುಪ್ರತ್ಯಯವೇನಾಗುತ್ತದೆ.	ಆಗ ಸುಪ್ರತ್ಯಯವು ಲೋಪಿಸುತ್ತದೆ.
೪. ಅವುಗಳು ಯಾವವು.	ವಂತ - ಇಕ - ಆಳಿ - ಇಗ - ಗಾರ - ಉಳಿಗ - ರ - ಆರ - ಸಳಿ - ವಳಿಗ - ಗ - ವಡಿಗ - ಅಣ - ಇಚ - ದ - ಕಾರ - ಆಯ್ತವಳಿ - ಇದು ಮೊದಲಾದ ಪ್ರತ್ಯಯಗಳೂ - ಭಾವ ಪ್ರತ್ಯಯಗಳೂ - ಕಾಲ ಪ್ರತ್ಯಯಗಳೂ - ದೇಶ ಪ್ರತ್ಯಯಗಳೂ ಪ್ರಕಾರ ಪ್ರತ್ಯಯಗಳೂ - ಪರಿಮಾಣ ಪ್ರತ್ಯಯಗಳೂ ಸ್ತ್ರೀ ಪ್ರತ್ಯಯಗಳೂ - ಸ್ವಾರ್ಥ ಪ್ರತ್ಯಯಗಳೂ - ತದ್ಧಿತ ಪ್ರತ್ಯಯಗಳೂ.
೫. ವಂತ ಪ್ರತ್ಯಯವು ಯಾವರ್ಥದಲ್ಲಿ ಬರುತ್ತದೆ.	ಪ್ರಥಮಾವಿಭಕ್ತ್ಯಂತದ ಮೇಲೆ ಪ್ರಥಮಾಂತಾರ್ಥವು ಅವನಿಗೆ - ಅಲ್ಲವೆ - ಅವನಲ್ಲಿ ಅದೆಯೆಂಬರ್ಥದಲ್ಲಿ ವಂತ ಪ್ರತ್ಯಯ ಬರುತ್ತದೆ.
೬. ವಂತ ಪ್ರತ್ಯಯ ಬಂದಾಗ ಮೇಲೆ ಹೇಳಿದ ಅರ್ಥಕ್ಕಿಂತ ಹೆಚ್ಚೇನಾದರೂ ತೋರುತ್ತದೆಯೋ. Sansk. वत् Nom. वान्	ಬಹಳವೆಂಬರ್ಥವೂ - ನಿಂದೆಯೂ - ಪ್ರಶಂಸೆಯೂ - ನಿತ್ಯಸಂಬಂಧವೂ - ಅತಿಶಯವೂ - ಬರೀಸಂಬಂಧವೂ - ಅಲ್ಲಲ್ಲಿ ಪ್ರಯೋಗಾನುಸಾರವಾಗಿ ಬಹುತರವಾಗಿ ತೋರುತ್ತದೆ. ಬಹಳ ಧನವುಳ್ಳವನು - ಧನವಂತನು. ಜಗಳವಂತನು - ಇಲ್ಲಿ ನಿಂದೆ ತೋರುತ್ತದೆ. ಗುಣವಂತನು - ಇಲ್ಲಿ ಒಳ್ಳೆ ಗುಣವುಳ್ಳವನೆಂಬರ್ಥವು. ವಿಷವಂತನು - ಶೇಷನು - ಇಲ್ಲಿ ನಿತ್ಯವಾಗುಳ್ಳವನೆಂದು ತೋರುತ್ತದೆ.

ಹೊಟ್ಟೆವಂತನು - ಇಲ್ಲಿ ದೊಡ್ಡ ಹೊಟ್ಟೆಯುಳ್ಳವನು.
ದಂಡವಂತನು - ಇಲ್ಲಿ ಕೇವಲ ಸಂಬಂಧಮಾತ್ರ ತೋರುತ್ತದೆ.

೭ - ವಂತ ಪ್ರತ್ಯಯಾಂತದ ಮೇಲೆ ಇನ್ನೂ ವಂತ ಪ್ರತ್ಯಯ ಬರುತ್ತದೆಯೋ.

ವಂತ ಪ್ರತ್ಯಯಾಂತದ ಮೇಲೆ ವಂತ ಪ್ರತ್ಯಯ ಬರುವದಿಲ್ಲ - ಅಲ್ಲಿ ವಾಕ್ಯವಾಗಿ ಹೇಳಬೇಕು.

ಬುದ್ಧಿವಂತನುಳ್ಳವನು - ಇತ್ಯಾದಿ. *where [illegible] is joined to a formed Sanscrit Noun*

೮ - ವಂತ ಪ್ರತ್ಯಯವ ಮಾಡುವಾಗ ಪ್ರಕೃತಿ ವಿಕಾರವೆಲ್ಲಾದರೂ ಉಂಟಾ.

ಸಂಸ್ಕೃತ ಶಬ್ದಗಳ ಮೇಲೆ ವಂತ ಪ್ರತ್ಯಯವ ಮಾಡುವಾಗ ಆ ಶಬ್ದಗಳು ಸಂಸ್ಕೃತದಲ್ಲಿ ಯಾವ ರೀತಿ ಇರುವವೋ ಅದೇ ರೀತಿಯಾಗಿ ವಂತ ಪ್ರತ್ಯಯವ ಮಾಡುವಾಗಲಾಗುತ್ತವೆ.
ವಿದ್ಯೆಯುಳ್ಳವನು - ವಿದ್ಯಾವಂತನು.

ಇದನ್ನು ಕೆಲವರು - ಸಂಸ್ಕೃತ ಮತು ಪ್ರತ್ಯಯಾಂತವನ್ನು ಕನ್ನಡದಲ್ಲಿ ತತ್ಸಮವ ಮಾಡಿದ್ದರಿಂದಾದ ರೂಪವೆಂದು ಹೇಳುತ್ತಾರೆ. ಆದರೆ ಒಂದು ವೇಳೆ ಸಂಸ್ಕೃತ ಶಬ್ದಗಳ ಮೇಲೆ ಬರುವಾಗ ಮಾತ್ರವಾದರೆ ಹೀಗೆ ಹೇಳಿದಾಗ್ಯೂ ದೇಶ್ಯ ತದ್ಭವ ಶಬ್ದಗಳ ಮೇಲೆ ಸಹ ವಂತ ಪ್ರತ್ಯಯ ಬಂದಿರುವದ್ದರಿಂದ ಕನ್ನಡದಲ್ಲಿ ಸಹ - ಆ ಅರ್ಥದಲ್ಲಿ ಬೇರೆ ಒಂದು ಪ್ರತ್ಯಯವಿರುವದಾಗಿ ಹೇಳಬೇಕು. *Sanscr. but transferred to Deshya freely.*

ಹೊಸವಂತ - ಹೆಂಡತಿವಂತ - ಇತ್ಯಾದಿ.

೯ - ಈ ವಂತ ಪ್ರತ್ಯಯಕ್ಕೆ ಇನ್ನಾ ನಿಷೇಧವೆಲ್ಲಾದರೂ ಉಂಟಾ.

ಕರ್ಮಧಾರಯ ಸಮಾಸದ ಮೇಲೆ ವಂತ ಪ್ರತ್ಯಯ ಬರುವದಿಲ್ಲ - ಅಲ್ಲಿ ವಂತ ಪ್ರತ್ಯಯಾರ್ಥದಲ್ಲಿ ಬಹುವ್ರೀಹಿಯ ಮಾಡಿಕ್ಕೊಳ್ಳುವದು.
ಅಲರ್ಗಣ್ಣುಳ್ಳವನು - ಅಲರ್ಗಣ್ಣನು.

ಕೆಲವರು ಅಪೂರ್ವವಾಗುಂಟೆಂದು ಸಹ ಹೇಳುತ್ತಾರೆ - ಅಲರ್ಗಣ್ಣುವಂತನು - ಇತ್ಯಾದಿ. *By [illegible] pedant.*

೧೦ - ಕ ಪ್ರತ್ಯಯವೆಲ್ಲಿ ಬರುತ್ತದೆ.

Tamil [illegible] Mal. [illegible] in Verbs rather than Quality nouns

ಕರಿದು ಮೊದಲಾದ - ತು - ದು ಅಂತವಾದ ಗುಣವಾಚಕ ಶಬ್ದಗಳಿಗೆ - ವಂತ ಪ್ರತ್ಯಯಾರ್ಥದಲ್ಲಿ ಕ ಪ್ರತ್ಯಯ ಬರುತ್ತದೆ ಆಗ ಪ್ರಕೃತಿಯ ದು ವಿಕಲ್ಪ ಸಹ ಬರುತ್ತದೆ.

ಕರಿದುಳ್ಳವ - ಕರಿಕ - ಬಿಳಿದುಳ್ಳವ ಬಿಳಿಕ - ಇತ್ಯಾದಿ.

೧೧ - ಆಳಿ ಪ್ರತ್ಯಯವು ಯಾವರ್ಥದಲ್ಲಿ ಬರುತ್ತದೆ.

ಪ್ರಕೃತ್ಯರ್ಥವನ್ನು ತೋರಿದ ವ್ಯಾಪಾರವು - ಅವನಿಗೆ ಸ್ವಭಾವವೆಂಬರ್ಥದಲ್ಲಿ - ಆಳಿ ಪ್ರತ್ಯಯ ಬರುತ್ತದೆ - ಇಲ್ಲಿ ಪ್ರಕರಣದ - ೭ ನೇ ಸೂತ್ರದಲ್ಲಿ ವಂತ ಪ್ರತ್ಯಯಕ್ಕೆ ಹೇಳಿದ ಬಹಳಾದ್ಯರ್ಥವೆಲ್ಲಾ ಬರುತ್ತದೆ.

ಬಹಳ ಮಾತನ್ನಾಡುವವನು - ಅವನಿಗೆ ಸ್ವಭಾವ - ಮಾತಾಳಿ.

ಬಹಳ ಸಿಗ್ಗಪಡುವವನು - ಅವನಿಗೆ ಸ್ವಭಾವ - ಸಿಗ್ಗಾಳಿ.

ಜೂಜಾಡುವವನು ಸ್ವಭಾವ - ಜೂಜಾಳಿ - ಇತ್ಯಾದಿ.

೧೨ - ಇಗ ಪ್ರತ್ಯಯವು ಯಾವರ್ಥದಲ್ಲಿ ಯಾವವರ ಮೇಲೆ ಬರುತ್ತದೆ:

ಪ್ರಥಮಾಂತದ ಮೇಲೆ ಅದವನಿಗೆ - ಪಣ್ಯವೆಂಬರ್ಥದಲ್ಲಿಯೂ - ಶಿಲ್ಪವೆಂಬರ್ಥದಲ್ಲಿಯೂ - ಇಗ ಪ್ರತ್ಯಯ ಬರುತ್ತದೆ ಪಣ್ಯವೆಂದರೆ ಮಾರತಕ್ಕ ವಸ್ತುವು - ಶಿಲ್ಪವೆಂದರೆ ಜೀವನೋಪಾಯವಾದ ಕೆಲಸವು - ಶಿಲ್ಪಾರ್ಥದಲ್ಲಿ ಪ್ರಕೃತಿಗೆ ಅದನ್ನು ತೋರಿದ ಕ್ರಿಯೆಯಲ್ಲಿ ಲಕ್ಷಣೆ ಇಗ ಪ್ರತ್ಯಯ ಪರವಾದಾಗ ಪ್ರಕೃತಿಯ ಕಡೇ ಸ್ವರಕ್ಕೆ ಲೋಪ ಸರ್ವತ್ರ ಬರುತ್ತದೆ.

Sanscr.
ತತ್ Tadbh.
(1) Nominativ

or only = k, g – i the joining Shva

ತಾಂಬೂಲವವನಿಗೆ - ಪಣ್ಯವು - ತಾಂಬೂಲಿಗನು - ಮಾಂಸಿಗನು - ಕಾಯಿಗನು - ಹಣ್ಣಿಗನು - ಇತ್ಯಾದಿಗಳನ್ನು ಪ್ರಕರಣಾನುಸಾರವಾಗಿ ಪಣ್ಯಾರ್ಥಕ ಪ್ರತ್ಯಯಾಂತಗಳೆಂದು ತಿಳಿದುಕೊಳ್ಳುವದು.

ಮದ್ದಳೆಯ ಬಾರಿಸುವದು - ಶಿಲ್ಪವಿವನಿಗೆ - ಮದ್ದಳಿಗನು ಇಲ್ಲಿ ಮದ್ದಳೆಯೆಂಬ ಪದಕ್ಕೆ - ಮದ್ದಳೆಯ ಬಾರಿಸುವದರಲ್ಲಿ ಲಕ್ಷಣೆ.

ಹೇಂಗೆ - ಬಣ್ಣಹಾಕುವದು - ಶಿಲ್ಪವಿವನಿಗೆ - ಬಣ್ಣಿಗನು - ಗಾಣವಾಡಿಸುವದು - ಶಿಲ್ಪವಿವನಿಗೆ - ಗಾಣಿಗನು - ಇತ್ಯಾದಿ.

೧೩ - ದ್ವಿತೀಯಾಂತದ ಮೇಲಿ ಇಗ ಪ್ರತ್ಯಯ ಬರುವದುಂಟೋ.
2) Acc.

ದ್ವಿತೀಯಾಂತ ಪದದ ಮೇಲಿ - ಅದನ್ನು ಮಾಡುತ್ತಾನೆಯೆಂಬರ್ಥದಲ್ಲಿಯೂ - ಬಲ್ಲನೆಂಬರ್ಥದಲ್ಲಿಯೂ - ಓದುತ್ತಾನೆಯೆಂಬರ್ಥದಲ್ಲಿಯೂ - ಕೊಳ್ಳುತ್ತಾನೆಯೆಂಬರ್ಥದಲ್ಲಿಯೂ - ಇಗ ಪ್ರತ್ಯಯ ಬರುತ್ತದೆ.

ಉಪವಾಸವ ಮಾಡುವವನು - ಉಪವಾಸಿಗನು - ಹೀಂಗೆ ನಿಯಮಿಗನು - ವ್ರತಿಗನು - ಅಟಿಮಟಿಗನು - ಇತ್ಯಾದಿ.

ಜ್ಯೋಯಿಸವನ್ನು ಬಲ್ಲವನಾಗಲಿ - ಓದುವವನಾಗಲಿ - ಜ್ಯೋಯಿಸಿಗನು - ಹೀಂಗೆ - ಸಿದ್ಧಾಂತಿಗನು - ಲೆಕ್ಕಿಗನು - ಶಾಸ್ತ್ರಿಗನು ಬಾಗರಣೆಗನು - ಇತ್ಯಾದಿ.

ತಾಂಬೂಲವನ್ನು - ಮಾರುವವನಾಗಲಿ - ಕಟ್ಟುವವನಾಗಲಿ - ತಾಂಬೂಲಿಗನು - ಹೀಂಗೆ - ಗಂಧಿಗನು - ಮೆಣಸಿಗನು ಹಿಪ್ಪಲಿಗನು - ಇತ್ಯಾದಿ.

೧೪ - ಮಾಡುವವನೆಂಬರ್ಥದಲ್ಲಿ ಮತ್ತೇನಾದರೂ ಪ್ರತ್ಯಯ ಬರುತ್ತದೆಯೋ.

ಕಬ್ಬಾದಿಶಬ್ದಗಳ ಮೇಲಿ ಮಾಡುವವನೆಂಬರ್ಥದಲ್ಲಿ - ಉಳಿಗ ಪ್ರತ್ಯಯವೂ - ಇಗ ಪ್ರತ್ಯಯವೂ ಸಹಾ ಬರುತ್ತದೆ.

ಕಬ್ಬವ ಮಾಡುವವನು - ಕಬ್ಬುಳಿಗನು - ಕಬ್ಬಿಗನು - ಪಾಕವ ಮಾಡುವವನು - ಪಾಕುಳಿಗನು - ಪಾಕಿಗನು - ಅಡಿಗೆಯ ಮಾಡುವವನು - ಅಡಿಗುಳಿಗನು - ಅಡಿಗಿಗನು - ದೇವುಳಿಗ - ದೇವಿಗ - ಚೌಪದುಳಿಗ - ಚೌಪದಿಗ - ಇತ್ಯಾದಿ.

ಕಬ್ಬಾದಿಗಳನ್ನು ಪ್ರಯೋಗಾನುಸಾರವಾಗಿ ನೋಡಿಕೊಳ್ಳುವದು.

೧೫ - ಇನ್ನ್ಯಾವ ವಿಭಕ್ತ್ಯಂತದ ಮೇಲಾದರೂ ಇಗ ಪ್ರತ್ಯಯ ಬರುತ್ತದೆಯೋ.
3) Loc. Oblig.

ಸಪ್ತಮ್ಯಂತದ ಮೇಲಿ - ಅದರಲ್ಲಿ - ನಿಯುಕ್ತನೆಂಬರ್ಥದಲ್ಲಿಯೂ ಇರುವವನೆಂಬರ್ಥದಲ್ಲಿಯೂ - ಹುಟ್ಟಿದವನೆಂಬರ್ಥದಲ್ಲಿಯೂ ಇಗ ಪ್ರತ್ಯಯ ಬರುತ್ತದೆ - ನಿಯುಕ್ತನೆಂದರೆ - ಒಂದು ಕೆಲಸದಲ್ಲಿ ಒಬ್ಬಧಿಕಾರಿಯಿಂದ ನಿಯಮಿಸಲ್ಪಡುವನು ಆಗ ಅದನ್ನು ಸೇರಿದ ಕ್ರಿಯೆಯಲ್ಲಿ ಲಕ್ಷಣೆ - ಸುಂಕದಲ್ಲಿ ನಿಯುಕ್ತನು ಸುಂಕಿಗನು - ಇಲ್ಲಿ ಸುಂಕದ ವಿಚಾರಣೆಯಲ್ಲಿ ನಿಯುಕ್ತನೆಂದು ತೋರುತ್ತದೆ.

ಬಾಗಿಲಿಗನು - ದ್ವಾರಿಗನು - ಬಂಡಾರಿಗನು - ಇತ್ಯಾದಿಶಬ್ದಗಳಲ್ಲಿ - ಅವುಗಳ ಕಾಯುವದರಲ್ಲಿನಿಯುಕ್ತನೆಂದರ್ಥವು ಈಮೇಲೆಹೇಳಿರುವ ಶಬ್ದಾನುಸಾರವಾಗಿನಿಯುಕ್ತಾರ್ಥಕವಾದಿಗ ಪ್ರತ್ಯಯಾಂತಕ್ಕೆಅರ್ಥವಹೇಳಿಕೊಳ್ಳುವದು.

ಪಟ್ಟಣದಲ್ಲಿ - ಇರುವವನಾಗಲಿ - ಹುಟ್ಟಿದವನಾಗಲಿ - ಪಟ್ಟಣಿಗನು - ಬಳ್ಳಾರಲ್ಲಿಇರುವವನಾಗಲಿ - ಹುಟ್ಟಿದವನಾಗಲಿ - ಬಳ್ಳಾರಿಗನು - ಇತ್ಯಾದಿ.

Kāra ೧೬ - ಗಾರ ಪ್ರತ್ಯಯವು ಯಾವರ್ಥದಲ್ಲಿಬರುತ್ತದೆ. 1) Acc

ದ್ವಿತೀಯಾಂತದ ಮೇಲೆಮಾಡುವವನೆಂಬರ್ಥದಲ್ಲಿಅದೊಂದುಜಾತಿಯೆಂದುತೋರಿದಪಕ್ಷದಲ್ಲಿಗಾರ ಪ್ರತ್ಯಯಬರುತ್ತದೆ.

ಮಾಲೆಯನ್ನು - ಮಾಡುವವನು - ಮಾಲೆಗಾರನು.
ಬಳೆಯನ್ನು - ಮಾರುವವನು - ಬಳೆಗಾರನು.
ಮಣಿಗಾರನು - ಕಂಚಗಾರನು - ಬಣ್ಣಗಾರನು - ಇತ್ಯಾದಿ.

೧೭ - ಗಾರ ಪ್ರತ್ಯಯವಿನ್ನಾಯಾವರ್ಥದಲ್ಲಿಯಾದರೂ ಬರುತ್ತದೆಯೋ. 2 Nom

ಪ್ರಥಮಾಂತದ ಮೇಲೆವಂತ ಪ್ರತ್ಯಯದರ್ಥದಲ್ಲಿಗಾರ ಪ್ರತ್ಯಯಬರುತ್ತದೆ.

ಹಣವುಳ್ಳವನು - ಹಣಗಾರನು - ಇತ್ಯಾದಿ.

೧೮ - ಇನ್ನಾಯಾವರ್ಥದಲ್ಲಿಯಾದರೂ ಗಾರ ಪ್ರತ್ಯಯಬರುತ್ತದೆಯೋ, 3) etc

ಕೆಲವುದ್ವಿತೀಯಾಂತಗಳ ಮೇಲೆ - ಮಾಡುವವನೆಂಬರ್ಥದಲ್ಲಿಯೂ - ಕೆಲವುದ್ವಿತೀಯಾಂತಗಳ ಮೇಲೆಕಾಡುವವನೆಂಬರ್ಥದಲ್ಲಿಯೂ - ಕೆಲವುದ್ವಿತೀಯಾಂತಗಳ ಮೇಲೆ - ಆಡುವವನೆಂಬರ್ಥದಲ್ಲಿಯೂ - ಕೆಲವುದ್ವಿತೀಯಾಂತಗಳ ಮೇಲೆ - ತೆಗೆಯುವವನೆಂಬರ್ಥದಲ್ಲಿಯೂ - ಕೆಲವುದ್ವಿತೀಯಾಂತಗಳ ಮೇಲೆ - ಹೇಳುವವನೆಂಬರ್ಥದಲ್ಲಿಯೂ - ಈಮೇಲೆ - ಇನ್ನೂದ್ವಿತೀಯಾಂತಗಳ ಮೇಲೆ - ಹೇಳಿದಧಾತ್ವರ್ಥಗಳಲ್ಲದೆಅನೇಕಧಾತ್ವರ್ಥಗಳಲ್ಲಿಗಾರ ಪ್ರತ್ಯಯಬರುತ್ತದೆ.

ಮೋಸವಮಾಡುವವನು - ಮೋಸಗಾರನು.
ಸಾಲವಕಾಡುವವನು - ಸಾಲಗಾರನು.

ಜೂಜಾಡುವವನು - ಜೂಜುಗಾರನು.
ಜೀತವರ್ತಿಗೆಯುವವನು - ಜೀತಗಾರನು.
ಸುಳ್ಳು ಹೇಳುವವನು - ಸುಳ್ಳುಗಾರನು - ಇತ್ಯಾದಿಗಳನ್ನು ಪ್ರಯೋಗಾನುಸಾರವಾಗಿ ಹೇಳಿಕೊಳ್ಳುವದು.

೧೯ - ರ - ಆರ ಪ್ರತ್ಯಯಗಳು ಯಾವ ಅರ್ಥದಲ್ಲಿ ಯಾವ ಶಬ್ದಗಳ ಮೇಲೆ ಬರುತ್ತದೆ. (Old, New)

ದ್ವಿತೀಯಾಂತವಾದ ಕಮ್ಮ - ಕುಂಬ - ಶಬ್ದಗಳ ಮೇಲೆ - ಅದನ್ನು ಮಾಡುವವನೆಂಬರ್ಥದಲ್ಲಿ - ಜಾತಿತೋರುವಾಗ ಈ ಪ್ರತ್ಯಯಗಳಿರಡೂ ಬರುತ್ತವೆ.

Tamil

ಕಮ್ಮವನ್ನು - ಮಾಡುವವನು - ಕಮ್ಮರನು - ಕಮ್ಮಾರನು ಅದೊಂದು ಜಾತಿಗೆ ಹೆಸರು - ಕುಂಬವನ್ನು - ಮಾಡುವವನು - ಕುಂಬರನು - ಕುಂಬಾರನು - ಅದೊಂದು ಜಾತಿಗೆ ಹೆಸರು.

ಇವುಗಳಲ್ಲಿ ರ ಪ್ರತ್ಯಯಾಂತಗಳು ಹಳಗನ್ನಡ ಶಬ್ದಗಳು - ಆರ ಪ್ರತ್ಯಯಾಂತಗಳು - ಹೊಸಗನ್ನಡ ಶಬ್ದಗಳು.

೨೦ - ಅಡಿಗ ಪ್ರತ್ಯಯವು ಯಾವ ಅರ್ಥದಲ್ಲಿ ಯಾವ ಶಬ್ದದ ಮೇಲೆ ಬರುತ್ತದೆ. (Servant)

ದ್ವಿತೀಯಾಂತವಾದ ದೇವ ಶಬ್ದದ ಮೇಲೆ - ಅದನ್ನು ಪೂಜಿಸುವವನೆಂಬರ್ಥದಲ್ಲಿ ಅಡಿಗ ಪ್ರತ್ಯಯವು ಬರುತ್ತದೆ.

ದೇವರನ್ನು - ಪೂಜಿಸುವವನು - ದೇವಡಿಗನು.

೨೧ - ಗುಳಿ ಪ್ರತ್ಯಯವು ಯಾವ ಅರ್ಥದಲ್ಲಿ ಬರುತ್ತದೆ.

ದ್ವಿತೀಯಾಂತದ ಮೇಲೆ ಕೊಳ್ಳುವವನೆಂಬರ್ಥದಲ್ಲಿ - ಗುಳಿ ಪ್ರತ್ಯಯ ಬರುತ್ತದೆ.

ಸಾಲವನ್ನು ಕೊಳ್ಳುವವ - ಸಾಲಗುಳಿ - ಲಂಚವನ್ನು ಕೊಳ್ಳುವವ - ಲಂಚಗುಳಿ - ಹಣ್ಣು ಕೊಳ್ಳುವವ - ಹಣ್ಣುಗುಳಿ - ಇತ್ಯಾದಿ.

೨೨ - ಗ - ವಳಿಗ ಪ್ರತ್ಯಯಗಳು ಯಾವ ಅರ್ಥದಲ್ಲಿ ಯಾವಂತದಲ್ಲಿ ಬರುತ್ತದೆ. (Instr)

ತೃತೀಯಾಂತದ ಮೇಲೆ - ಅದರಿಂದ ಬದುಕುತ್ತಾನೆಂಬರ್ಥದಲ್ಲಿ - ಗ - ವಳಿಗ ಪ್ರತ್ಯಯಗಳು ಬರುತ್ತವೆ.

ಲಂಚದಿಂದ ಬದುಕುವವನು - ಲಂಚವಳಿಗನು - ಲಂಚಗನು - ಈ ಮೇರೆಗೆ - ಮಾರುವಳಿಗನು - ಮಾರುಗನು - ಬೀರುವಳಿಗನು - ಬೀರುಗನು - ಇತ್ಯಾದಿ.

ಪ್ರಶ್ನೆ.	ಉತ್ತರವು.
೨೩ - ವದಿಗ ಪ್ರತ್ಯಯವೆಲ್ಲಿ ಬರುತ್ತದೆ.	ತೃತೀಯಾಂತದ ಮೇಲೆ ಅದರಿಂದ ಬದುಕುತ್ತಾನೆಂಬರ್ಥದಲ್ಲಿ ಆ ಬದುಕೊಂದು ಜಾತಿಧರ್ಮವೆಂದು ತೋರುವಾಗ ವದಿಗ ಪ್ರತ್ಯಯ ಬರುತ್ತದೆ - ಆದರೆ ಹಾವು ಶಬ್ದದ ಮೇಲೆ ವದಿಗ ಪ್ರತ್ಯಯ ಪರವಾದಾಗ ಪ್ರಕೃತಿಯ ವುವಿಗೆ ಲೋಪ ಬರುತ್ತದೆ. ಮಾಲೆಯಿಂದ ಜೀವಿಸುವವ - ಮಾಲೆವದಿಗನು - ಹೂವದಿಗನು - ಹಾವದಿಗನು - ಇತ್ಯಾದಿ.
೨೪ - ಅಣ ಪ್ರತ್ಯಯವು ಯಾವ ಅರ್ಥದಲ್ಲಿ ಯಾತರ ಮೇಲೆ ಬರುತ್ತದೆ.	ಸಪ್ತಮ್ಯಂತವಾದ ಮೂಡಾದಿ ದಿಗ್ವಾಚಕವಾದ ದೇಶ್ಯಶಬ್ದಗಳ ಮೇಲೂ - ಅತ್ತಾದಿ ಶಬ್ದಗಳ ಮೇಲೂ - ಅದರಲ್ಲಿರುವವ - ಅದರಲ್ಲಿ ಹುಟ್ಟಿದವನೆಂಬರ್ಥದಲ್ಲಿ - ಅಣ ಪ್ರತ್ಯಯ ಬರುತ್ತದೆ. ಮೂಡಲಲ್ಲಿ - ಇರುವವನು - ಹುಟ್ಟಿದವನು - ಮೂಡಣನು ತೆಂಕೆ - ತೆಂಕಣನು - ಪಡುವಣನು - ಬಡಗಣನು - ಅತ್ತಣನು ಇತ್ತಣನು - ಇತ್ಯಾದಿ.
೨೫ - ಇಚ ಪ್ರತ್ಯಯವು ಯಾವ ಅರ್ಥದಲ್ಲಿ ಯಾತರ ಮೇಲೆ ಬರುತ್ತದೆ.	ಸಪ್ತಮ್ಯಂತವಾದ ದೇಶ್ಯಶಬ್ದದ ಮೇಲೆ ಅದರಲ್ಲಿ ಹುಟ್ಟಿದವ ಇರುವವನೆಂಬರ್ಥದಲ್ಲಿ ಇಚ ಪ್ರತ್ಯಯ ಬರುತ್ತದೆ - ಊಗದುವಿನಯಿಂದಳ ಸ್ವರ ದೀರ್ಘವಾಗಿದ್ದರೆ ಅದಕ್ಕೆ ಹ್ರಸ್ವ ಸಹಾ ಬರುತ್ತದೆ. ಕಾಲೂರಲ್ಲಿ ಹುಟ್ಟಿದವನು - ಕಾಲುರಿಚನು - ಬಳ್ಳುರಿಚನು ಅಲರಿಚನು - ಇತ್ಯಾದಿ.
೨೬ - ದ ಪ್ರತ್ಯಯವೆಲ್ಲಿ ಬರುತ್ತದೆ.	ಸಪ್ತಮ್ಯಂತವಾದಲಿ ಪ್ರತ್ಯಯಾಂತದ ಮೇಲೆ ಅದರಲ್ಲಿರುವವನು - ಹುಟ್ಟಿದವನೆಂಬರ್ಥದಲ್ಲಿ - ದ ಪ್ರತ್ಯಯ ವಿಕಲ್ಪವಾಗಿ ಬರುತ್ತದೆ - ಅದು ಬಾರದಾಗ ಅಣ ಪ್ರತ್ಯಯ ಬರುತ್ತದೆ. ಅಲ್ಲಿ ಇರುವವ - ಹುಟ್ಟಿದವ - ಅಲ್ಲಿದನು - ಅಲ್ಲಿಯಣನು - ಇಲ್ಲಿದನು - ಇಲ್ಲಿಯಣನು - ಎಲ್ಲಿದನು - ಎಲ್ಲಿಯಣನು - ಇತ್ಯಾದಿ.
೨೭ - ಕಾರ ಪ್ರತ್ಯಯವು ಯಾವದರ ಮೇಲೆ ಯಾವರ್ಥದಲ್ಲಿ ಬರುತ್ತದೆ.	ಸಪ್ತಮ್ಯಂತದ ಮೇಲೆ ಅದರಲ್ಲಿ ಪ್ರವಣನೆಂಬರ್ಥದಲ್ಲಿಯೂ ವ್ಯಾಪೃತನೆಂಬರ್ಥದಲ್ಲಿಯೂ ಕಾರ ಪ್ರತ್ಯಯ ಬರುತ್ತದೆ - ಪ್ರ

ವಣನೆಂದರೆ - ಆಸಕ್ತಿಯುಳ್ಳವನು - ವ್ಯಾಪೃತನೆಂದರೆ - ಅದರಲ್ಲಿ ಯತ್ನಮಾಡುವವನು.

ನಗೆಯಲ್ಲಿ - ಪ್ರವಣನಾಗಲಿ - ವ್ಯಾಪೃತನಾಗಲಿ - ನಗೆಕಾರನು - ಇತ್ಯಾದಿ.

೨೮ - ಕಾರ ಪ್ರತ್ಯಯಕ್ಕೆ ಅಪವಾದವುಂಟೋ.

ಹಳಗನ್ನಡದಲ್ಲಿ ವ್ಯಂಜನಾಂತವಾಗಿದ್ದು - ಹೊಸಗನ್ನಡದಲ್ಲಿ ಉಕಾರಾಂತವಾಗುವ ಸಪ್ತಮ್ಯಂತ ಶಬ್ದಗಳ ಮೇಲೆ ಅದರಲ್ಲಿ ಪ್ರವಣನೆಂಬರ್ಥದಲ್ಲಿಯೂ - ವ್ಯಾಪೃತನೆಂಬರ್ಥದಲ್ಲಿಯೂ ಗ ಪ್ರತ್ಯಯ ಬರುತ್ತದೆ - ಇಲ್ಲಿ - ಉಗ ಪ್ರತ್ಯಯವೆಂದು ಶಬ್ದಾನುಶಾಸನದಲ್ಲಿ ಹೇಳಿಯಿದೆ.

ಹೆಣ್ಣಲ್ಲಿ ಪ್ರವಣನಾಗಲಿ - ವ್ಯಾಪೃತನಾಗಲಿ - ಹೆಣ್ಣುಗನು - ಹೊನ್ನುಗನು - ಮಣ್ಣುಗನು - ಪಾಲುಗನು - ಹರಲುಗನು ಇತ್ಯಾದಿ.

೨೯ - ಇನ್ನಾ ಕಾರ ಪ್ರತ್ಯಯವೆಲ್ಲಿ ಬರುತ್ತದೆ.

ಬಂಡಿ ಮೊದಲಾದ ದ್ವಿತೀಯಾಂತ ಶಬ್ದಗಳ ಮೇಲೆ - ಅದನ್ನು ಸೇರಿದ ಕೆಲವು ಧಾತ್ವರ್ಥ ಕರ್ತನರ್ಥವಾಗುವಾಗ ಕಾರ ಪ್ರತ್ಯಯ ಬರುತ್ತದೆ.

ಬಂಡಿಯನಡಿಸುವವನು - ಬಂಡಿಕಾರನು - ಒಲೆಯನ್ನು - ಒಯ್ಯುವವನು - ಒಲೇಕಾರನು - ಇಲ್ಲಿ ಪ್ರಕೃತಿಯ ಕಡೇಸ್ವರಕ್ಕೆ ದೀರ್ಘ ಸಹ ಬಂದದೆ - ಕೋಲಹಿಡಿಯುವವನು - ಕೋಲುಕಾರನು ಇತ್ಯಾದಿಗಳ ಪ್ರಯೋಗಾನುಸಾರವಾಗಿ ನೋಡಿಕೊಳ್ಳುವದು.

೩೦ - ಇನ್ನಾಕಾರ ಪ್ರತ್ಯಯವೆಲ್ಲಿ ಬರುತ್ತದೆ.

ಅಕಾರಾದಿ ವರ್ಣಗಳ ಮೇಲೆ ಕಾರ ಪ್ರತ್ಯಯ ಬರುತ್ತದೆ ರ - ಕೆ - ಇಫ ಪ್ರತ್ಯಯ - ಅಕ್ಕೆ - ಅ ಪ್ರತ್ಯಯವೂ ಬರುತ್ತದೆ - ಆದರೆ ವ್ಯಂಜನಗಳ ಮೇಲೆ ಕಾರಾದಿ ಪ್ರತ್ಯಯ ಪರವಾದಾಗ ನಡುವೆ ಅಕಾರ ಬರುತ್ತದೆ - ಅ ಪ್ರತ್ಯಯ ಹಾರ್ದಕದ ಮೆ ಪ್ರತ್ಯಯಗಳು ಸಂಸ್ಕೃತ ವ್ಯಾಕರಣದಲ್ಲಿ ವಿಧಿಸಲ್ಪಟ್ಟಿವೆ.

೪೧ - ಆಯ್ತ ಪ್ರತ್ಯಯವೆಲ್ಲಿ ಬರುತ್ತದೆ.

ಸಪ್ತಮ್ಯಂತದ ಮೇಲೆ ಅದರಲ್ಲಧಿಕೃತನೆಂಬರ್ಥದಲ್ಲಿ ಆಯ್ತ ಪ್ರತ್ಯಯವು ಬರುತ್ತದೆ - ಆಗ ಪ್ರಕೃತಿಯ ಕಡೇ ಸ್ವರಕ್ಕೆ ಲೋಪ ಬರುತ್ತದೆ - ಅಧಿಕೃತನೆಂದರೆ - ಅಧಿಕಾರಿಯೆಂದರ್ಥವು ಸೂಳೆಯಲ್ಲಧಿಕೃತನು ಸೂಳಾಯ್ತನು ಇತ್ಯಾದಿ.

೪೨ - ವಳ ಪ್ರತ್ಯಯವು ಯಾವರ್ಥದಲ್ಲಿ ಬರುತ್ತದೆ.

ಸಪ್ತಮ್ಯಂತದ ಮೇಲೆ ಅದರಲ್ಲಧಿಕೃತನೆಂಬರ್ಥದಲ್ಲಿ ವಳ ಪ್ರತ್ಯಯ ಬರುತ್ತದೆ - ಮಡಿಶಬ್ದದ ಮೇಲೆ ಈ ವಳ ಪ್ರತ್ಯಯ ಬಂದರೆ ಅದೊಂದು ಜಾತಿಯೆಂದು ಸಹಾ ತೋರುತ್ತದೆ - ಶಬ್ದಾನುಶಾಸನದಲ್ಲಿ ವಳ ಪ್ರತ್ಯಯಸ್ಥಾನದಲ್ಲಿ ವಳ್ಳ ಪ್ರತ್ಯಯವೆಂದು ಮತ್ತೊಂದು ಸಹಾ ಬರುತ್ತದೆಯೆಂದು ಹೇಳಿಯದೆ.

ಸೇನೆಯಲ್ಲಿ ಅಧಿಕೃತನು - ಸೇನೆವಳನು - ಸೇನೆವಳ್ಳನು - ಸೆಜ್ಜೆವಳನು - ಅಡಪವಳನು - ಪಡಿವಳನು - ಇತ್ಯಾದಿ.

ಮಡಿವಳನು - ಅಗಸನು.

೪೩ - ಅದು ಪ್ರತ್ಯಯವು ಯಾವರ್ಥದಲ್ಲಿ ಯಾವದರ ಮೇಲೆ ಬರುತ್ತದೆ.

ಷಷ್ಠ್ಯಂತದ ಮೇಲೆ - ಅದನ್ನು ಸೇರಿದ ಸಕಲಾರ್ಥದಲ್ಲಿಯೂ ಅದು ಪ್ರತ್ಯಯ ಬರುತ್ತದೆ - ಈ ಪ್ರಕರಣದ - ೫ನೆಯ ಸೂತ್ರ ಮೊದಲು - ೪೨ನೆಯ ಸೂತ್ರದವರಿಗೂ - ೧೦ - ೧೧ನೇ ಸೂತ್ರಗಳು ಹೊರ್ತು ಯಾವ ಯಾವ ವಿಭಕ್ತ್ಯಂತದ ಮೇಲೇನೇನು ಪ್ರತ್ಯಯಗಳು ಯಾವ ಯಾವರ್ಥಗಳಲ್ಲಿ ವಿಧಿಸಲ್ಪಟ್ಟವೆಯೊ - ಆ ವಿಭಕ್ತಿಗಳೆಲ್ಲಾ ಷಷ್ಠಿಯೂ - ಆ ಪ್ರತ್ಯಯಗಳೆಲ್ಲಾ ಅದು ಪ್ರತ್ಯಯವೂ - ಆ ಅರ್ಥಗಳಲ್ಲೆಲ್ಲಾ ಬರುತ್ತದೆ - ಆದರೆ - ಅದು ಪ್ರತ್ಯಯ ಪರವಾದಾಗ ಷಷ್ಠಿಗೆ ಲೋಪ ಬರುವದಿಲ್ಲ - ಕೆಲವರು ಇಕಾರಾಂತವಾಗಿಯೂ - ಎಕಾರಾಂತವಾಗಿಯೂ - ಇರುವ ಪ್ರಕೃತಿಗಳ ಕಡೆಯ ಸ್ವರಕ್ಕೆ ದೀರ್ಘವೂ - ವಿಭಕ್ತಿಗೂ - ಅದು ಪ್ರತ್ಯಯದ ಅಕಾರಕ್ಕೂ - ಲೋಪ ಬರುತ್ತದೆಯೆಂದು ಹೇಳುತ್ತಾರೆ - ಮೇಲೆ ಹೇಳಿದ ಅರ್ಥಗಳು ಹೊರ್ತು ಇನ್ನು ಯಾವರ್ಥವನ್ನು ವಿವಕ್ಷಿಸಿದಾಗ್ಯೂ - ಅದೆಲ್ಲಾ ಅದು ಪ್ರತ್ಯಯಕ್ಕರ್ಥವಾಗುತ್ತದೆ - ಅದು ಪ್ರತ್ಯಯಾಂತದ ಮೇಲೆ ವಿಭಕ್ತಿಯ ಮಾಡುವಾಗ - ೪ನೇ ಪ್ರಕರಣದ

೪೯ - ೫೦ ನೆಯ ಸೂತ್ರಗಳಲ್ಲಿ ಅದು ಶಬ್ದಕ್ಕೆ ಏನೇನು ಲೋಪಾಗಮಾದೇಶಗಳು ಹೇಳಿವೆಯೋ ಅವು ಅಷ್ಟೂ ಅದು ಪ್ರತ್ಯಯಕ್ಕೆ ಸಹಾ ಬರುತ್ತದೆ - ಮತ್ತು ಅಕಾರಾಂತ ನಪುಂಸಕ ಪ್ರಕೃತಿಯ ಮೇಗಳ ದಕಾರಾಗಮದ ಮೇಗಳ ಅಕಾರಕ್ಕೂ - ನಪುಂಸಕೈಕವಚನದ ಅದು ಪ್ರತ್ಯಯದ ಅಕಾರಕ್ಕೂ ಲೋಪಬಂದು ಎರಡು ದಕಾರವೂ ಸಂಯುಕ್ತವಾಗುತ್ತದೆ.

ಧನವಂತನು - ಧನದವನು - ಜಗಳವಂತನು - ಜಗಳದವನು - ವಿಷವಂತನು - ವಿಷದವನು - ಅಲಗಣ್ಣಾನು - ಅಲಗಣ್ಣೆನವನು - ಮಾತಾಳಿ - ಮಾತಿನವನು - ತಾಂಬೂಲಿಗನು - ತಾಂಬೂಲದವನು - ಮದ್ದಳಿಗನು - ಮದ್ದಳೆಯವನು - ಬಣ್ಣಿಗನು - ಬಣ್ಣಾದವನು - ಉಪವಾಸಿಗನು - ಉಪವಾಸದವನು - ಅಡಿಸಳಿಗನು - ಅಡಿಗೆಯವನು - ಬಾಗಿಲಿಗನು - ಬಾಗಿಲವನು - ಪಟ್ಟಣಿಗನು - ಪಟ್ಟಣದವನು - ಮಾಲೆಗಾರನು - ಮಾಲೆಯವನು - ಹಣಗಾರನು - ಹಣದವನು - ಸಾಲಗಾರನು - ಸಾಲಸಳಿ - ಸಾಲದವನು - ಲಂಚವಣಿಗನು - ಲಂಚದವನು - ಮೂಡಲವನು - ಕಾಲುರಿಚನು - ಕಾಲೂರವನು - ಅಲ್ಲಿದನು - ಅಲ್ಲಿಯವನು - ನಗೆಕಾರನು - ನಗೆಯವನು - ಹೆಣ್ಣುಗನು - ಹೆಣ್ಣಿನವನು - ಬಂಡಿಕಾರನು - ಬಂಡಿಯವನು - ಸೆಜ್ಜೆವಳನು - ಸೆಜ್ಜೆಯವನು - ಮಡಿವಳನು - ಮಡಿಯವನು - ಇತ್ಯಾದಿಗಳ ನೋಡಿಕೊಳ್ಳುವದು - ಇದುಹಾರ್ಯಮನೆಯಲ್ಲಿರುವವನು - ಮನೆಯವನು - ಮನೇವನು - ಹಳ್ಳಿಯವನು - ಹಳ್ಳೀವನು - ಇತ್ಯಾದಿ.

ಪಟ್ಟಣದವನು - ಪಟ್ಟಣದವಳು - ಪಟ್ಟಣದವರು - ಪಟ್ಟಣದ್ದು - ಪಟ್ಟಣದವುಗಳು - ಪಟ್ಟಣದಾತನು - ಪಟ್ಟಣದಾಕೆಯು - ಇತ್ಯಾದಿ.

೫೪ - ಕರಿದು ಮೊದಲಾದ ಟು - ಡು - ಅಂತವಾದದರ ಮೇಲಿ ಅದು ಪ್ರತ್ಯಯ ಬರುತ್ತದೆಯೋ.

ಈ ಶಬ್ದಗಳಿಗೆ ಷಷ್ಠ್ಯಂತದ ಮೇಲಿ ಅದು ಪ್ರತ್ಯಯ ಬರುವದಿಲ್ಲವು - ಪ್ರಥಮಾಂತದ ಮೇಲಿ ಸ್ವಾರ್ಥದಲ್ಲಿ ಅದು ಪ್ರತ್ಯಯ ಬರುತ್ತದೆ - ಆಗ ಪ್ರಕೃತಿಯ ದುವಿಗೆ ಲೋಪ ಬರುತ್ತದೆ - ಡು ಲೋಪ

ಬಂದ ಮೇಲೆ ಪ್ರಕೃತಿಯು ಇಕಾರಾಂತವಾಗಿಯಾಗಲಿ - ಎಕಾರಾಂತವಾಗಿಯಾಗಲಿ ಇದ್ದ ಪಕ್ಷದಲ್ಲಿ - ಕೆಲವರು ಅದು ಪ್ರತ್ಯಯದ ಅಕಾರಕ್ಕೆ ಲೋಪವೂ - ಪ್ರಕೃತಿಯ ಎಕಾರಕ್ಕೂ - ಇಕಾರಕ್ಕೂ - ದೀರ್ಘವೂ ಸಹಾ ಬರುತ್ತದೆಯೆಂದು ಹೇಳುತ್ತಾರೆ. ಈ ಅದು ಪ್ರತ್ಯಯಕ್ಕೂ - ೩ನೇ ಪ್ರಕರಣದ - ೪೯ - ೫೦ - ಸೂತ್ರಗಳಲ್ಲಿ ಹೇಳಿದ ವಿಧಿಗಳೆಲ್ಲಾ ಬರುತ್ತವೆ.

ದೊಡ್ಡವನು - ಚಿಕ್ಕವನು - ಒಳ್ಳೆಯವನು - ಒಳ್ಳೇವನು ಇತ್ಯಾದಿ.

೩೭ - ಳು - ದು ಅಂತವಾದ ಶಬ್ದಗಳಿಗೆಲ್ಲಾದರೂ ವಿಶೇಷವುಂಟಾ.

ಹಳದು ಶಬ್ದಕ್ಕೆ - ಪುಂಸ್ತ್ರೀಲಿಂಗಗಳಲ್ಲಿ - ೩ನೇ ಪ್ರಕರಣದ - ೪೪ - ನೇ ಸೂತ್ರ ಪ್ರಕಾರ ಬಶಬ್ದಾದೇಶ ಬಂದ ಮೇಲೆ - ಅದು ಪ್ರತ್ಯಯ ಬರುವದಿಲ್ಲ - ನಪುಂಸಕಲಿಂಗದಲ್ಲಿ ಪ್ರಕೃತಿಯ ದುವಿಗೆ ಎಯಾದೇಶ ಬರುತ್ತದೆ - ಕೆಲವರು - ಏಕಾರಾದೇಶವೂ - ಪ್ರತ್ಯಯಾಕಾರಕ್ಕೆ ಲೋಪವೂ ಬರುತ್ತದೆಯೆಂದು ಹೇಳುತ್ತಾರೆ.

ಎಳದು ಶಬ್ದದ ದುವಿಗೆ ಎಲ್ಲಾ ಲಿಂಗದಲ್ಲಿಯೂ ಎಯಾದೇಶ ಬರುತ್ತದೆ - ಕೆಲವರು - ದುವಿಗೆ - ಏಕಾರವನ್ನೂ - ಪ್ರತ್ಯಯಾಕಾರಕ್ಕೆ ಲೋಪವನ್ನೂ ಹೇಳುತ್ತಾರೆ.

ಹಾಸದು ಶಬ್ದಕ್ಕೆ - ೩ನೇ ಪ್ರಕರಣದ - ೪೬ನೇ ಸೂತ್ರ ಪ್ರಕಾರ ಬಶಬ್ದಾದೇಶ ಬಂದ ಮೇಲೆ - ಅದು ಪ್ರತ್ಯಯ ಬರುವದಿಲ್ಲ ನಪುಂಸಕದಲ್ಲಿ ಮಾತ್ರ ಬರುತ್ತದೆ - ಕೆಲವರು ನಪುಂಸ್ಕೈಕವಚನದಲ್ಲಿಯೂ - ಅದು ಪ್ರತ್ಯಯ ಬರುವದಿಲ್ಲವೆಂತಲೂ - ದುವಿನ ಹಿಂದಣ ಅಕಾರಕ್ಕೆ ಲೋಪವನ್ನು ಸಹಾ ಹೇಳುತ್ತಾರೆ.

ಹಳಬನು - ಹಳಬಳು - ಹಳಬರು - ಹಳೆಯದು - ಹಳೇದು - ಹಳೆಯವು - ಹಳೇವು - ಇತ್ಯಾದಿ.

ಎಳೆಯವನು - ಎಳೇವನು - ಎಳೆಯದು - ಎಳೇದು - ಇತ್ಯಾದಿ.

ಹಾಸಬನು - ಹಾಸಬಳು - ಹಾಸಬರು - ಹಾಸದು - ಹಾಸ್ತು - ಹಾಸವು - ಇತ್ಯಾದಿ.

೪೬ - ಟು - ದು - ಅಂತವಲ್ಲದ ಗುಣವಾಚಕಗಳ ಮೇಲೆ ಅದು ಪ್ರತ್ಯಯ ಬರುವದುಂಟಾ

ಟು - ದು - ಅಂತವಲ್ಲದ ಷಷ್ಠ್ಯಂತ ಗುಣವಾಚಕಗಳ ಮೇಲೆ ಅದು ಪ್ರತ್ಯಯ ಬರುತ್ತದೆ - ಈಗ ಪ್ರಕೃತಿಗಿನ ಪುಂಸಕ ಷಷ್ಠ್ಯೇಕವಚನದ ಹಾಂಗೆ ರೂಪ ಬರುತ್ತದೆ - ಕೆಲವರು - ಅದು ಪ್ರತ್ಯಯ ಬರುವದಿಲ್ಲವೆಂತಲೂ - ಅದು ಪ್ರತ್ಯಯಾಂತವಾದಾಗ ಧಾತುವ ಸೇರಿಸಬೇಕೆಂತಲೂ - ಹೇಳುತ್ತಾರೆ.

ಅಗಲದವನು - ಅಗಲವಾದವನು - ಡೊಂಕಿನವನು - ಇತ್ಯಾದಿ.

೪೭ - ಈ ಪ್ರಕರಣದ ೪ನೇ ಸೂತ್ರದಲ್ಲಿ ಹೇಳಿದ ಮೊದಲಾದ ಪ್ರತ್ಯಯಗಳು ಯಾವವು.

ಈ ಪ್ರತ್ಯಯಗಳೂ - ಅವುಗಳ ಅರ್ಥಗಳೂ - ಈಗ ಪ್ರಕೃತಿಪ್ರತ್ಯಯಗಳಿಗೆ ಬರುವ ರೂಪಾಗಮಾದೇಶಗಳೂ ಶಬ್ದಮಂಜರಿಯಲ್ಲಿ ವಿವರವಾಗಿ ಹೇಳಲ್ಪಡುತ್ತವೆ.

೪೮ - ಭಾವ ಪ್ರತ್ಯಯಗಳು ಯಾವವು ಯಾವ ಅರ್ಥದಲ್ಲಿ ಯಾವ ವಿಭಕ್ತ್ಯಂತದ ಮೇಲೆ ಬರುತ್ತವೆ.

ತನ - ಇಕೆ - ಪು - ಇವು ಮೂರು ಭಾವ ಪ್ರತ್ಯಯಗಳು - ಇವು ಷಷ್ಠ್ಯಂತದ ಮೇಲೆ ಅದರ ಭಾವವೆಂಬರ್ಥದಲ್ಲಿ ಬರುತ್ತವೆ.

೪೯ - ತದ್ಧಿತದಲ್ಲಿ ಭಾವವೆಂದರೇನು.

ಪ್ರವೃತ್ತಿನಿಮಿತ್ತವು - ಪ್ರವೃತ್ತಿನಿಮಿತ್ತವೆಂದರೆ - ಒಂದು ಶಬ್ದವು ಒಂದು ವಸ್ತುವನ್ನು ಯಾವ ನಿಮಿತ್ತದಿಂದ ಹೇಳುತ್ತದೆಯೋ ಆ ಶಬ್ದಕ್ಕೆ ಅದು ಪ್ರವೃತ್ತಿನಿಮಿತ್ತವು - ಆದ್ದರಿಂದ ಆ ಶಬ್ದಾರ್ಥಕ್ಕೆ ಆ ನಿಮಿತ್ತವು ಭಾವವು.

೫೦ - ಆ ಪ್ರವೃತ್ತಿನಿಮಿತ್ತವೆಷ್ಟು ವಿಧವು.

ಜಾತಿಯೆಂತಲೂ - ಗುಣವೆಂತಲೂ - ಕ್ರಿಯೆಯೆಂತಲೂ - ಸಂಜ್ಞೆಯೆಂತಲೂ - ನಾಲ್ಕು ವಿಧವಾಗಿರುವದು.

೫೧ - ಜಾತಿ ಮೊದಲಾದವುಗಳ ಅರ್ಥವೇನು.

ಒಂದು ವಸ್ತುವ ಅರಿತದ್ದರಿಂದ ಅಂಥಾ ಆಕಾರವುಳ್ಳ ಸಕಲ ವಸ್ತುಗಳ ಸಂಬೋಧ ಬರುವ ಹಾಂಗೆ ಅಷ್ಟು ವಸ್ತುಗಳಲ್ಲಿಯೂ ಏಕರೀತಿಯಾಗಿರುವಂಥಾ ಆ ವಸ್ತುಗಳ ಅಸಾಧಾರಣಾಕಾರಕ್ಕೆ ಜಾತಿಯೆಂದು ಹೆಸರು - ಗುಣವೆಂದರೆ - ಜಾತಿಯೂ ಅಲ್ಲದೆ ಕ್ರಿಯೆಯೂ ಅಲ್ಲದೆ - ಒಂದು ದ್ರವ್ಯವ ಬಿಟ್ಟು - ಬೇರೆಯಿರದಂಥಾ - ಕಪ್ಪು - ಬಿಳುಪು ಮೊದಲಾದ ಧರ್ಮವು.

೧೧೮ ಪ್ರಶ್ನೆ: ಉತ್ತರವು.

ಕ್ರಿಯೆಯೆಂದರೆ - ಧಾತ್ವರ್ಥವು - ಸಂಜ್ಞೆಯೆಂದರೆ ಹೆಸರು ಆ ಹೆಸರು ಇಟ್ಟಹೆಸರೆಂತಲೂ - ಇದ್ದ ಹೆಸರೆಂತಲೂ - ಎರಡು ವಿಧವು - ತಿಮ್ಮ - ಬೊಮ್ಮ ಮೊದಲಾದ ಹೆಸರು - ಇಟ್ಟ ಹೆಸರು ಇಂದ್ರ ಮೊದಲಾದ ಹೆಸರು - ಇದ್ದ ಹೆಸರು - ಆದ್ದರಿಂದ ಜಾತಿವಾಚಕದ ಮೇಲೆ ಬಂದಿರುವ ಭಾವಪ್ರತ್ಯಯಕ್ಕೆ ಜಾತಿಯರ್ಥವು - ಗುಣವಾಚಕದ ಮೇಲೆ ಬಂದ ಭಾವಪ್ರತ್ಯಯಕ್ಕೆ ಗುಣವರ್ಥವು ಕ್ರಿಯಾವಾಚಕದ ಮೇಲೆ ಬಂದ ಭಾವಪ್ರತ್ಯಯಕ್ಕೂ ಕ್ರಿಯಾವಿಶಿಷ್ಟವಾಚಕದ ಮೇಗಳ ಭಾವಪ್ರತ್ಯಯಕ್ಕೂ - ಕ್ರಿಯೆಯರ್ಥವು - ಸಂಜ್ಞಾವಾಚಕದ ಮೇಲೆ ಬಂದ ಭಾವಪ್ರತ್ಯಯಕ್ಕೆ - ಆ ಸಂಜ್ಞೆಯುಳ್ಳವನಲ್ಲಿರುವ ಅಸಾಧಾರಣಧರ್ಮವರ್ಥವು.

ಜಾತಿ - ಬ್ರಾಹ್ಮಣತನ - ಕ್ಷತ್ರಿಯತನ - ಇಲ್ಲಿ ತನಪ್ರತ್ಯಯಕ್ಕೆ ಜಾತಿಯರ್ಥವು.

ವೀರತನ - ಶೂರತನ - ಇಲ್ಲಿ ತನಪ್ರತ್ಯಯಕ್ಕೆ ವೀರ್ಯಶೌರ್ಯವೆಂಬ ಗುಣವರ್ಥವು - ಪಾಚಕತನ - ಯಾಚಕತನ - ಇಲ್ಲಿ ತನಪ್ರತ್ಯಯಕ್ಕೆ - ಪಚನವು - ಯಾಜ್ಞೆಯೆಂಬ ಕ್ರಿಯೆಯರ್ಥವು - ಚೋರತನ - ಕರಣೀಕತನ - ಇತ್ಯಾದಿಗಳಲ್ಲಿ ಪ್ರಕೃತಿಗಳು ಕ್ರಿಯಾವಿಶಿಷ್ಟವಾಚಕವಾದ್ದರಿಂದ ಪ್ರಕೃತ್ಯರ್ಥದ ಕೆಲಸವಾದ ಉದ್ಯೋಗವರ್ಥವು - ದೇವದತ್ತತನ - ಯಜ್ಞದತ್ತತನ - ಇಲ್ಲಿ ದೇವದತ್ತಯಜ್ಞದತ್ತರ - ಅಸಾಧಾರಣಧರ್ಮವು ತನಪ್ರತ್ಯಯಾರ್ಥವು - ಆ ಧರ್ಮವು ಅವರ ಶರೀರವೆಂದು ಕೆಲವರು ಹೇಳುತ್ತಾರೆ - ಇವು ಪುರುಷಸಂಕೇತಿತ ಸಂಜ್ಞಾಶಬ್ದಗಳು ಇಂದ್ರತನ - ಅಗ್ನಿತನ - ದೇವತನ - ಇಲ್ಲಿ ಅವರವರ ಶರೀರವರ್ಥ - ಇವು ಈಶ್ವರಸಂಕೇತಿತ ಸಂಜ್ಞಾಶಬ್ದಗಳು.

೪೨ - ತನಪ್ರತ್ಯಯಪರವಾದಾಗ ಯಾವ ಪ್ರಕೃತಿಗಾದರೂ ವಿಕಾರವುಂಟೋ.

ಋ - ದು ಅಂತವಾದ ಗುಣವಚನಗಳಿಗೆ ತನಪ್ರತ್ಯಯಪರವಾದಾಗ ಪ್ರಕೃತಿಯ ದು ವಿಕಲ್ಪವಾಗಿ ಲೋಪಸಹಾ ಬರುತ್ತದೆ - ಹಳದು

ಎಳೆದು ಶಬ್ದಗಳಿಗೆ ತನ ಪ್ರತ್ಯಯ ಪರವಾದಾಗ ಎಯಾದೇಶವಾಗಲಿ - ಏಕಾರಾದೇಶವಾಗಲಿ ಬರುತ್ತದೆ - ದುಲೋಪ ಬಂದ ಮೇಲೆ ಇ ಎ ಅಂತವಾಗಿನಂಥ ಪ್ರಕೃತಿಗಳಿಗೆ ತನ ಪ್ರತ್ಯಯ ಪರವಾದಾಗ ದೀರ್ಘಸಹಾ ಬರುತ್ತದೆ - ಕೆಲವರು ಇಕಾರ ಪೂರ್ವಕವಾದದು ವಿಗೆ ಯ ಶಬ್ದಾದೇಶವನ್ನು ಹೇಳುತ್ತಾರೆ.

ದೊಡ್ಡದು - ದೊಡ್ಡತನ - ಚಿಕ್ಕದು - ಚಿಕ್ಕತನ - ಒಳ್ಳೆದು - ಒಳ್ಳೇತನ - ಒಳ್ಳೆಯತನ - ಹಳೆದು - ಹಳೆಯತನ - ಹಳೇತನ ಎಳೆದು - ಎಳೆಯತನ - ಎಳೇತನ - ಇತ್ಯಾದಿ.

೪೩ - ಇಕೆ ಪ್ರತ್ಯಯವು ಯಾವ ಶಬ್ದಗಳ ಮೇಲೆ ಬರುತ್ತವೆ.

ಉನ್ನತಾದಿ ಶಬ್ದಗಳ ಮೇಲೆ - ಇಕೆ ಪ್ರತ್ಯಯ ಬರುತ್ತದೆ.

ಉನ್ನತ - ಉನ್ನತಿಕೆ - ಪನ್ನತ - ಪನ್ನತಿಕೆ - ಆಯತ - ಆಯತಿಕೆ - ಸರು - ಸರುವಿಕೆ - ಇತ್ಯಾದಿಗಳನ್ನು ಪ್ರಯೋಗಗಳಿಂದ ತಿಳಿದುಕೊಳ್ಳುವದು.

೪೪ - ಪು ಪ್ರತ್ಯಯವು ಯಾವದರ ಮೇಲೆ ಬರುತ್ತದೆ.

ಕರಿದು ಮೊದಲಾದ ಶಬ್ದಗಳ ಮೇಲೆ ಪು ಪ್ರತ್ಯಯ ಬರುತ್ತದೆ ಆಗ ಕರಿದು ಶಬ್ದಕ್ಕೆ - ಕಪ್ - ಎಂಬಾದೇಶವೂ - ಬಿಳಿದು ಕೆಂಪು ಶಬ್ದಗಳಿಗೆ ದುಲೋಪವೂ - ಕಡೇ ಶಬ್ದಗಳ ತ್ರಿಕಕ್ಕೆ ಲೋಪವೂ - ಇನ್ನೂ ಆಯಾ ಶಬ್ದಗಳಲ್ಲಿ ಪ್ರಯೋಗಾನುಸಾರವಾಗಿ ವಿಕಾರಗಳು ಬರುತ್ತವೆ.

ಕರಿದು - ಕಪ್ಪು - ಬಿಳಿದು - ಬಿಳಿಪು - ಕೆಂದು - ಕೆಂಪು - ನುಣ್ಣಿತು - ನುಣ್ಪು - ಇನಿತು - ಇಂಪು - ಕುರಿತು - ಕುಪ್ಪು - ಇತ್ಯಾದಿಗಳು ಶಬ್ದಮಂಜರಿಯಲ್ಲಿ ವಿಸ್ತಾರವಾಗಿ ಹೇಳಲ್ಪಡುತ್ತವೆ.

೪೫ - ಇನ್ನಾಪು ಪ್ರತ್ಯಯವು ಯಾವವರ ಮೇಲಾದರೂ ಬರುವದುಂಟಾ.

ಥಳಥಳ ಮೊದಲಾದ ಅನುಕರಣಾ ಶಬ್ದಗಳ ಮೇಲೆ ಭಾವಾರ್ಥದಲ್ಲಿ ಪು ಪ್ರತ್ಯಯ ಬರುತ್ತದೆ.

ಥಳಥಳಪು - ಮಿರಿಮಿರಿಪು - ಇತ್ಯಾದಿ.

೪೭ - ಕಾಲಪ್ರತ್ಯಯವು ಯಾವದು ಅದು ಯಾವ ಶಬ್ದಗಳ ಮೇಲೆ ಬರುತ್ತವೆ.

ಪ್ರಥಮಾಂತವಾದ - ಅದು - ಇದು - ಉದು - ಯಾವದು ಶಬ್ದಗಳ ಮೇಲೂ - ಅಧಿಕರಣಾರ್ಥದಲ್ಲಿ ಬಂದಿರುವ ಅದು - ಎಂಬ ಕೃತ್ಪ್ರತ್ಯಯಾಂತದ ಮೇಲೂ - ಕಾಲಾರ್ಥದಲ್ಲಿ - ಗ ಪ್ರತ್ಯಯ ಬರುತ್ತದೆ - ಪ್ರಕೃತ್ಯರ್ಥವು - ಪ್ರತ್ಯಯಾರ್ಥದೊಂದಿಗೆ ಅಭೇದ ಸಂಬಂಧದಿಂದ ಅನ್ವಯಿಸುತ್ತದೆ - ಗಲು ಪ್ರತ್ಯಯವೆಂದು - ಮತ್ತೊಂದು ಪ್ರತ್ಯಯ ಸಹಾ ಉಂಟೆಂದು ಕೆಲವರು ಹೇಳುತ್ತಾರೆ - ಲಕಾರಾಗಮವೆಂದು - ೩ನೇ ಪ್ರಕರಣದ - ೭೭ ನೇ ಸೂತ್ರದಲ್ಲಿ ನಾವು ಹೇಳಿದ್ದೇವೆ - ಚತುರ್ಥಿಯಲ್ಲಿ ಬಂದಿರುವ ಗೆಯನ್ನು - ಅದನ್ನೇ - ಗೈ ಯೆಂದು ಸಹಾ ಹೇಳಿಕೊಂಡು ಅದನ್ನು - ಪ್ರತ್ಯಯಗಳಾಗಿಯೂ ಗ - ಗಲು - ಗೆ - ಗೈ - ಈ ನಾಲ್ಕು ಪ್ರತ್ಯಯಗಳನ್ನು - ತದ್ಧಿತಾವ್ಯಯ ಪ್ರತ್ಯಯಗಳೆಂತಲೂ ಹೇಳುತ್ತಾರೆ - ಈ ಗ ಪ್ರತ್ಯಯ ಪರವಾದಾಗ ಪ್ರಕೃತಿಯ ದುವಿಗೆ ಲೋಪವೂ - ಅದರ ಹಿಂದಣ ಸ್ವರಕ್ಕೆ ದೀರ್ಘವೂ ಬರುತ್ತದೆ - ಕಾಲಾರ್ಥಕ ಪ್ರತ್ಯಯವಾದ್ದರಿಂದ ಕಾಲಪ್ರತ್ಯಯವೆಂದು ಇದಕ್ಕೆ ಹೆಸರಾಯಿತು.

ಅದು ಕಾಲ - ಆಗ - ಇದು ಕಾಲ - ಈಗ - ಉದು ಕಾಲ - ಊಗ ಯಾವದು ಕಾಲ - ಯಾವಾಗ - ಮಾಡುವದು ಕಾಲ - ಮಾಡುವಾಗ. ಆಗಲು - ಆಗ್ಗೆ - ಆಗ್ಗೈ - ಇತ್ಯಾದಿ.

೪೮ - ಇನ್ನೂ ಕಾಲಪ್ರತ್ಯಯವುಂಟಾ.

ಮೇಗಳ ಸೂತ್ರದಲ್ಲಿ ಹೇಳಿದ ಪ್ರಕೃತಿಗಳ ಮೇಲೆ ದಿನವೆಂಬರ್ಥದಲ್ಲಿ ದು ಪ್ರತ್ಯಯ ಬರುತ್ತದೆ - ಆಗ ಪ್ರಕೃತಿಯ ದುವಿಗೆ ನಕಾರಾದೇಶ ಬರುತ್ತದೆ - ಯಾವದು ಶಬ್ದವಿಶಿಷ್ಟಕ್ಕೆ - ಎ - ಎಂಬಾದೇಶ ಬರುತ್ತದೆ.

ಅದು ದಿನ - ಅಂದು - ಇಂದು - ಎಂದು - ಮಾಡುವಂದು - ಇಲ್ಲಿ ೨ನೇ ಪ್ರಕರಣದ - ೭೮ ನೇ ಸೂತ್ರ ಪ್ರಕಾರ ಬಂದನುಸ್ವಾರವು.

೪೮ - ದೇಶ ಪ್ರತ್ಯಯವು ಯಾವದು - ಯಾವವರ ಮೇಲೆ ಬರುತ್ತದೆ.

ತ ಪ್ರತ್ಯಯವೂ - ಲಿ ಪ್ರತ್ಯಯವೂ - ದೇಶ ಪ್ರತ್ಯಯಗಳು ಇವು ಯೆರಡೂ ಮೇಲೆ ಹೇಳಿದ ಪ್ರಕೃತಿಗಳ ಮೇಲೆ ಬರುತ್ತವೆ - ತ ಪ್ರತ್ಯಯ ಪರವಾದಾಗ ಪ್ರಕೃತಿಯ ದುವಿಗೆ ತಕಾರಾದೇಶ ಬರುತ್ತದೆ - ಯಾವದು ಶಬ್ದವಿಶಿಷ್ಟಕ್ಕೆ - ಎತ್ - ಎಂಬಾದೇಶ ಬರುತ್ತದೆ ಲಿ ಪ್ರತ್ಯಯ ಪರವಾದಾಗ ಪ್ರಕೃತಿಯ ದುವಿಗೆ ಲಕಾರಾದೇಶವು ಯಾವದು ಶಬ್ದವಿಶಿಷ್ಟಕ್ಕೆ - ಎಲ್ - ಎಂಬಾದೇಶವು ಬರುತ್ತದೆ ದೇಶಾರ್ಥದಲ್ಲಿ ಬಂದ ಪ್ರತ್ಯಯವಾದ್ದರಿಂದ ದೇಶ ಪ್ರತ್ಯಯವೆಂದು ಹೆಸರಾಯಿತು - ದೇಶವೆಂದರೆ ಸ್ಥಳವು.

ಅದು - ಅತ್ತ - ಇತ್ತ - ಎತ್ತ - ಮಾಡುತ್ತ - ಅಲ್ಲಿ - ಇಲ್ಲಿ - ಎಲ್ಲಿ ಮಾಡುವಲ್ಲಿ - ಇತ್ಯಾದಿ.

೪೯ - ಪ್ರಕಾರ ಪ್ರತ್ಯಯಗಳು ಯಾವವು ಯಾವವರ ಮೇಲೆ ಬರುತ್ತವೆ.

ತು - ತೆ - ಥಾ ಪ್ರತ್ಯಯಗಳು ಪ್ರಕಾರ ಪ್ರತ್ಯಯಗಳು - ಮೇಲೆ ಹೇಳಿದ ಪ್ರಕೃತಿಗಳ ಮೇಲೂ - ಈ ಪ್ರಕರಣದ - ೩೩ ನೆಯ ಸೂತ್ರದಲ್ಲಿ ಹೇಳಿದ ಪ್ರಕಾರ ಸಂಬಂಧಾರ್ಥದಲ್ಲಿ ಬಂದ ತದ್ಧಿತಾದು ಪ್ರತ್ಯಯದ ಮೇಲೆಯೂ ಬರುತ್ತವೆ - ಪ್ರಕಾರಾರ್ಥಕ ಪ್ರತ್ಯಯವಾದ್ದರಿಂದ ಪ್ರಕಾರ ಪ್ರತ್ಯಯವೆಂದು ಹೆಸರಾಯಿತು - ಈ ಪ್ರತ್ಯಯಗಳು ಪರವಾದಾಗ ಪ್ರಕೃತಿಯ ದುವಿಗೆ ನಕಾರಾದೇಶವು ಯಾವದು ಶಬ್ದವಿಶಿಷ್ಟಕ್ಕೆ - ಎನ್ - ಎಂಬಾದೇಶವು ಬರುತ್ತದೆ - ಆದರೆ - ತು - ತೆ - ಪ್ರತ್ಯಯಗಳು ಕ್ರಿಯಾವಿಶೇಷಣವಾದಾಗಲೂ ಥಾ ಪ್ರತ್ಯಯವು ಸುಬಂತ ವಿಶೇಷಣವಾದಾಗಲೂ ಬರುತ್ತವೆ ಈ ಪ್ರತ್ಯಯಗಳು ಮೂರೂ ತದ್ಧಿತಾವ್ಯಯ ಪ್ರತ್ಯಯಗಳು.

ಅಂತು - ಇಂತು - ಎಂತು - ಮಾಡುವಂತು - ಚೆಟ್ಟಿದಂತು - ಅಂತೆ ಇಂತೆ - ಎಂತೆ - ಚೆಟ್ಟಿದಂತೆ - ಮಾತನಾಡಿದನು - ಇತ್ಯಾದಿ.

ಅಂಥಾ - ಇಂಥಾ - ಎಂಥಾ - ಮಾಡುವಂಥಾ - ಚೆಟ್ಟಿದಂಥಾ - ಮನುಷ್ಯನು.

ಪ್ರಶ್ನೆ:	ಉತ್ತರವು.
೫೦ - ಇನ್ನಾ ಪ್ರಕಾರ ಪ್ರತ್ಯಯ ಯಾವದಾದರೂ ಉಂಟಾ.	ಮೇಲೆಹೇಳಿದ ಪ್ರಕೃತಿಗಳ ಮೇಲೆ ಕ್ರಿಯಾವಿಶೇಷಣವಾದಾಗ ಪ್ರಕಾರಾರ್ಥದಲ್ಲಿ - ಗೆ ಪ್ರತ್ಯಯ ಬರುತ್ತದೆ - ಅದು ಶಬ್ದಕ್ಕೂ ಕೃತ್ತದ್ಧಿತಾದಿ ಪ್ರತ್ಯಯಗಳಿಗೂ - ಹಾಂ - ಎಂತಲೂ - ಇದು ಶಬ್ದಕ್ಕೆ - ಹೀಂ - ಎಂತಲೂ - ಯಾವದು ಶಬ್ದಕ್ಕೆ - ಹ್ಯಾಂ - ಎಂತಲೂ ಪ್ರಕೃತಿವಿಶಿಷ್ಟಕ್ಕೆ - ಆದೇಶ ಬರುತ್ತದೆ - ಇದೂ ತದ್ಧಿತಾವ್ಯಯ ಪ್ರತ್ಯಯವು. ಅದು - ಹಾಂಗೆ - ಇದು - ಹೀಂಗೆ - ಯಾವದು - ಹ್ಯಾಂಗೆ - ಮಾಡುವ ಹಾಂಗೆ - ಬಿಟ್ಟಿದ ಹಾಂಗೆ ಮಾಡಿದನು.
೫೧ - ಪರಿಮಾಣ ಪ್ರತ್ಯಯಗಳು ಯಾವವು.	ಷ್ಟು - ಸು - ನಿತು - ಪ್ರತ್ಯಯಗಳು ಪರಿಮಾಣ ಪ್ರತ್ಯಯಗಳು ಪರಿಮಾಣವೆಂದ ತಿಳಕೆ.
೫೨ - ಅವು ಯಾವದರ ಮೇಲೆ ಬರುತ್ತವೆ.	ಪ್ರಥಮಾಂತವಾದ - ಅದು - ಇದು - ಯಾವದು ಶಬ್ದಗಳ ಮೇಲೂ - ಕೃತ್ತದ್ಧಿತಾದಿ ಪ್ರತ್ಯಯಗಳ ಮೇಲೂ - ಈ ಪ್ರತ್ಯಯಗಳು ಬರುತ್ತವೆ - ಅವುಗಳಲ್ಲಿ - ಷ್ಟು ಪ್ರತ್ಯಯವು - ಶ್ರೀರಂಗಪಟ್ಟಣದ ಪ್ರಾಂತದಲ್ಲಿಯೂ - ಸು ಪ್ರತ್ಯಯವು ಬೇಲೂರು ಪ್ರಾಂತದಲ್ಲಿಯೂ - ವ್ಯವಹರಿಸಲ್ಪಡುತ್ತದೆ - ನಿತು ಪ್ರತ್ಯಯವು ಗ್ರಂಥದಲ್ಲಿ ಪ್ರಯೋಗಿಸಲ್ಪಡುತ್ತದೆ - ಇದೇ ಶಬ್ದಾನುಶಾಸನದಲ್ಲಿಯೇ ಹೇಳಲ್ಪಟ್ಟಿದೆ - ಷ್ಟು - ನಿತು - ಇವುಗಳು ಪರವಾದಾಗ - ಅದು - ಇದು ಶಬ್ದಗಳಿಗೆ ದುಲೋಪ ಬರುತ್ತದೆ - ಯಾವದು ಶಬ್ದವಿಶಿಷ್ಟಕ್ಕೆ - ಎ - ಯೆಂಬಾದೇಶ ಬರುತ್ತದೆ - ಸು ಪ್ರತ್ಯಯ ಪರವಾದಾಗ - ಅದು ಶಬ್ದಕ್ಕೆ ಆ - ಎಂತಲೂ - ಇದು ಶಬ್ದಕ್ಕೆ - ಈ - ಎಂತಲೂ - ಯಾವದು ಶಬ್ದಕ್ಕೆ - ಏ - ಎಂತಲೂ - ಆದೇಶ ಬರುತ್ತದೆ. ಅಷ್ಟು - ಇಷ್ಟು - ಎಷ್ಟು - ಮಾಡುವಷ್ಟು - ಬಿಟ್ಟಿದಷ್ಟು - ಆಸು ಈಸು - ಏಸು - ಮಾಡುವಾಸು - ಬಿಟ್ಟಿದಾಸು - ಅನಿತು - ಇನಿತು ಎನಿತು - ಮಾಡುವನಿತು - ಬಿಟ್ಟಿದನಿತು.

ಇಲ್ಲಿ ಪ್ರಕೃತಿಯು ಪ್ರತ್ಯಯದೊಂದಿಗೆ ಅಭೇದ ಸಂಬಂಧದಿಂದನ್ವಯಿಸುತ್ತದೆ - ಎಂದರೆ - ಕೃತ್ತಾದ ಅದು ಪ್ರತ್ಯಯಸ್ಥಳದಲ್ಲಿಯೂ ಅದು ಪ್ರತ್ಯಯಕ್ಕೆ ಯಾವದರ್ಥವೋ - ಅದರ ಪರಿಮಾಣಕ್ಕೆ ಸದೃಶದಲ್ಲಿ ಲಕ್ಷಣೆಯ ಮಾಡಿಕೊಂಡು - ಪರಿಮಾಣ ಪ್ರತ್ಯಯದೊಂದಿಗೆ ಅಭೇದ ಸಂಬಂಧದಿಂದ ಅನ್ವಯವ ಮಾಡಿಕೊಳ್ಳುವದು - ತದ್ಧಿತಾದು ಪ್ರತ್ಯಯಸ್ಥಳದಲ್ಲಿ - ಯೂ ಅದು ಪ್ರತ್ಯಯಕ್ಕೆ ಪ್ರಕೃತಿ ಪರಿಮಾಣವರ್ಥವು - ಅದರ ಸದೃಶದಲ್ಲಿ ಲಕ್ಷಣೆ ಪರಿಮಾಣ ಪ್ರತ್ಯಯದೊಂದಿಗೆ ಅಭೇದದಿಂದನ್ವಯಿಸುತ್ತದೆ.

೭೫ - ಕ್ರಿಯಾ ಪರಿಮಾಣಾರ್ಥದಲ್ಲಿ ಯಾವ ಪ್ರತ್ಯಯ ಬರುತ್ತದೆ ಯಾವದರ ಮೇಲೆ ಬರುತ್ತದೆ.

ಪ್ರಥಮಾಂತವಾದ ಸಂಖ್ಯಾವಾಚಕದ ಮೇಲೆ - ಕ್ರಿಯಾ ಪರಿಮಾಣವಾದ ಆವೃತ್ತಿ ತೋರುವಾಗ - ಮೆ ಪ್ರತ್ಯಯ ಬರುತ್ತದೆ ಆಗ ಪ್ರಕೃತಿಗೆ ಸಮಾಸ ಪ್ರಕರಣದಲ್ಲಿ ಕರ್ಮಧಾರಯದಲ್ಲಿ ಪೂರ್ವಪದಕ್ಕೆ ವಿಧಿಸಿರುವ ವಿಕಾರಗಳೆಲ್ಲಾ ಬರುತ್ತದೆ.

ಒಂದು ಆವೃತ್ತಿ - ಒಮ್ಮೆ - ಎರಡಾವೃತ್ತಿ - ಇಮ್ಮೆ - ಮೂರಾವೃತ್ತಿ - ಮುಮ್ಮೆ - ಇತ್ಯಾದಿ.

೭೬ - ಈ ಪರಿಮಾಣ ಪ್ರತ್ಯಯಾಂತಗಳ ಮೇಲೇನಾದರೂ ಪ್ರತ್ಯಯ ವುಂಟಾ.

ಪರಿಮಾಣ ಪ್ರತ್ಯಯಾಂತದ ಮೇಲೆ ಪೂರಣಾರ್ಥದಲ್ಲಿ ಅನೆಯ ಪ್ರತ್ಯಯ ಬರುತ್ತದೆ - ಅದರ ಮೇಲೆ ಅದು ಪ್ರತ್ಯಯವ ಮಾಡಿ ಅದರ ಮೇಲೆ ವಿಭಕ್ತಿಯ ಮಾಡಬೇಕು - ಕೆಲವರು ಅನೆಯ ಪ್ರತ್ಯಯದ ಯಕಾರಕ್ಕೂ - ಅದು ಪ್ರತ್ಯಯದ ಅಕಾರಕ್ಕೂ ಲೋಪವನ್ನು - ಯಕಾರದ ಹಿಂದಣ ಸ್ವರಕ್ಕೆ ದೀರ್ಘವನ್ನು ಸಹಾ ಹೇಳುತ್ತಾರೆ.

ಅಷ್ಟನೆಯವನು - ಅಷ್ಟನೇವನು - ಇತ್ಯಾದಿ.

ಇಲ್ಲಿ - ಪೂರಣವೆಂದರೆ ಸಂಖ್ಯಾಪೂರಕವಾದ್ದರಿಂದ - ಪರಿಮಾಣ ಪ್ರಕೃತಿಗೆ ಸಂಖ್ಯೆಯರ್ಥವು.

೭೭ - ಆದರೆ ಸಂಖ್ಯಾವಾಚಕದ ಮೇಲೆ ಪೂರಣ ಪ್ರತ್ಯಯ ವುಂಟಾ.

ಸಂಖ್ಯಾವಾಚಕದ ಮೇಲೆ ಪೂರಣ ಪ್ರತ್ಯಯವಾದ ಅನೆಯ ಪ್ರತ್ಯಯವೂ ಅದರ ಮೇಲೆ - ವಿಭಕ್ತಿಯ ಮಾಡುವಾಗ ಅದು ಪ್ರ

ತ್ಯಯವೂ ಬರುತ್ತದೆ - ಇಲ್ಲಿ ಕೆಲವರು ಮೇಗಳ ಸೂತ್ರದಲ್ಲಿ ಹೇಳಿದಹಾಂಗೆಯೇ ಹೇಳುತ್ತಾರೆ.

ಒಂದನೆಯವನು - ನಾಲ್ಕನೆಯವನು - ನಾಲ್ಕನೇವನು ಇತ್ಯಾದಿ.

೭೬ - ಸ್ತ್ರೀಪ್ರತ್ಯಯವೆಂದರೇನು.

ಸ್ತ್ರೀಲಿಂಗಕ್ಕೂ - ಪುಲ್ಲಿಂಗಕ್ಕೂ - ಸಾಧಾರಣವಾದ ಶಬ್ದಗಳು ಪುಲ್ಲಿಂಗದಹಾಂಗೆ ಸ್ವಭಾವವಾಗಿರುತ್ತದೆ - ಆದಕಾರಣ - ಅಂಥಾ ಶಬ್ದಗಳಿಂದ ಸ್ತ್ರೀಯನ್ನು ಹೇಳಬೇಕಾದ ಪಕ್ಷದಲ್ಲಿ ಅದಕ್ಕೆ ಸೂಚಕವಾದ ಪ್ರತ್ಯಯವು ಸ್ತ್ರೀಪ್ರತ್ಯಯವು - ಮತ್ತು - ಅಂಥಾ ಶಬ್ದಗಳಿಂದ ಪುರುಷನ ಹೇಳುವಾಗ ಅವನ ಹೆಂಡತಿಯೆಂಬರ್ಥದಲ್ಲಿ ಸಹ ಸ್ತ್ರೀಪ್ರತ್ಯಯ ಬರುತ್ತದೆ - ಇನ್ನು ಲಿಂಗತ್ರಯ ಸಾಧಾರಣವಾಗಿರುವ ಶಬ್ದಗಳಲ್ಲಿ ಸ್ತ್ರೀಯ ಹೇಳುವಾಗ ಬರುವ ಪ್ರತ್ಯಯಗಳೂ ಸ್ತ್ರೀಪ್ರತ್ಯಯಗಳು.

೭೭ - ಸ್ತ್ರೀಪ್ರತ್ಯಯಗಳು ಯಾವವು.

ಇತಿ - ಇ - ಎ - ತಿ - ಇವು ಸ್ತ್ರೀಪ್ರತ್ಯಯಗಳು.

೭೮ - ಅವು ಯಾವದರ ಮೇಲೆ ಬರುತ್ತದೆ.

ಲಿಂಗದ ಮೇಲೆ ಬರುತ್ತದೆ - ತದ್ಧಿತವೆಲ್ಲಾ ಸುಬಂತದ ಮೇಲೆ ಬರುತ್ತದೆಂದು ಈ ಪ್ರಕರಣದ - ೩ನೇ ಸೂತ್ರದಲ್ಲಿ ಹೇಳಿಯದೆ ಆದರೂ - ಪದಗಳಿಗೆ ಕ್ರಮವಾಗಿ ತೋರುವ - ಸ್ವಾರ್ಥ - ದ್ರವ್ಯ - ಲಿಂಗ - ಸಂಖ್ಯಾ - ಕಾರಕಗಳೆಂಬ - ಐದರ್ಥಗಳಿಗೂ ಅಪೇಕ್ಷಿತ ತದ್ಧಿತಾರ್ಥ ತೋರುವದ್ದರಿಂದ - ಆ ಪ್ರತ್ಯಯಗಳು ಸುಪ್ಪುಬಂದ ಮೇಲೆ ಬರುತ್ತವೆ - ಲಿಂಗವು ಸು ಪ್ರತ್ಯಯಾರ್ಥವಾದ ಸಂಖ್ಯಾಕಾರಕಗಳಿಗೆ ಪೂರ್ವದಲ್ಲಿ ತೋರುವದ್ದರಿಂದ - ಸುಪ್ರತ್ಯಯಕ್ಕೆ ಪೂರ್ವದಲ್ಲಿ ಬರುತ್ತದೆ - ಆದ್ದರಿಂದ ಶಬ್ದಾನುಶಾಸನದಲ್ಲಿ ಈ ಪ್ರತ್ಯಯಗಳು ತದ್ಧಿತಪ್ರಕರಣದಲ್ಲಿತ್ತಿಲ್ಲ ಆದ್ದರಿಂದಲೇ ನಾವು ಪ್ರಥಮ ಪ್ರಕರಣದ - ೪೬ನೆಯ ಸೂತ್ರದಲ್ಲೂ - ಮೂರನೇ ಪ್ರಕರಣದ - ೧ನೆಯ ಸೂತ್ರದಲ್ಲೂ ತದ್ಧಿತಪ್ರತ್ಯಯವನ್ನು ಬೇರೆ - ಸ್ತ್ರೀಪ್ರತ್ಯಯವನ್ನು ಬೇರೆ - ಯೆತ್ತಿದ್ದು - ಆದರೆ - ಸಂಸ್ಕೃತ ವ್ಯಾಕರಣದಲ್ಲಿ - ತಿಯೆಂಬ ಸ್ತ್ರೀಪ್ರ

ತ್ಯಯವನ್ನ ತದ್ಧಿತ ಪ್ರಕರಣದಲ್ಲಿ ಸೇರಿಸಿದ್ದರಿಂದಲೂ - ಅದರ ಸಜಾತಿಯವಾಗಿ ಇತಿ - ತಿ - ಎಂಬ ಪ್ರತ್ಯಯಗಳು ಇರುವದ್ದಿಂದಲೂ ಈ ಪ್ರತ್ಯಯಗಳು ಬೇರೆ ಪ್ರಕರಣವಾಗಿಯೇಳ ಕೂಡದ್ದರಿಂದಲೂ - ಈ ಪ್ರಕರಣಕ್ಕಿಂತ ಯುಕ್ತವಾದ ಪ್ರಕರಣ ಕಾಣಬರದ್ದರಿಂದಲೂ ಯೀ ಪ್ರಕರಣದಲ್ಲಿ ಸೇರಿಸಲಾಯಿತು.

೫೯ - ಇತಿ ಪ್ರತ್ಯಯವು ಯಾವ ಶಬ್ದಗಳ ಮೇಲೆ ಬರುತ್ತದೆ.

ಅಕಾರಾಂತವಾದ ಜಾತಿವಾಚಕ ಶಬ್ದದ ಮೇಲೆ - ಆ ಜಾತಿ ಸ್ತ್ರೀಯೆಂಬರ್ಥದಲ್ಲೂ - ಅವನ ಹೆಂಡತಿಯೆಂಬರ್ಥದಲ್ಲೂ - ವದಿಗ - ಇಗ - ಉಳಿಗ - ಪ್ರತ್ಯಯಾಂತಗಳ ಮೇಲೆ ಅಂಥಾ ಸ್ತ್ರೀಯೆಂಬರ್ಥದಲ್ಲೂ ಇತಿ ಪ್ರತ್ಯಯ ಬರುತ್ತದೆ.

ಬ್ರಾಹ್ಮಣಿತಿ - ಪಾರ್ವಿತಿ - ಕ್ಷತ್ರಿಯಿತಿ - ಅರಸಿತಿ - ದೂತವದಿಗಿತಿ - ಗಂಡಿಗಿತಿ - ಚೇವುಳಿಗಿತಿ - ಇತ್ಯಾದಿ.

೬೦ - ಇ ಪ್ರತ್ಯಯವು ಯಾವದರ ಮೇಲೆ ಬರುತ್ತದೆ.

ಸಮಾಸದಲ್ಲಿಹೇಳುವ - ಅ ಪ್ರತ್ಯಯಾಂತದ ಮೇಲೂ - ಕ ಪ್ರತ್ಯಯಾಂತದ ಮೇಲೂ - ಇ ಪ್ರತ್ಯಯ ಬರುತ್ತದೆ.

ನಿಡುಗಣ್ಣಿ - ನಿಡುಪೆರಲಿ - ಕರಿಕಿ - ಬಿಳಿಕಿ - ಇತ್ಯಾದಿ.

೬೧ - ಇತಿ - ಇ - ಪ್ರತ್ಯಯಗಳೆರಡೂ ಯಾವದರ ಮೇಲಾದರೂ ಬರುವದುಂಟಾ.

ಗ - ಉಗ - ಪ್ರತ್ಯಯಾಂತಗಳ ಮೇಲೆ - ಇ - ಇತಿ ಪ್ರತ್ಯಯಗಳೆರಡೂ ಬರುತ್ತವೆ.

ಮಾಡುಗಿ - ಮಾಡುಗಿತಿ - ಮಣ್ಣುಗಿ - ಮಣ್ಣುಗಿತಿ - ಇತ್ಯಾದಿ.

೬೨ - ಇ ಪ್ರತ್ಯಯವಿನ್ನಾವಲ್ಲಿ ಬರುತ್ತದೆ.

ಅಕಾರಾಂತವಾದ ಇಟ್ಟ ಹೆಸರುಗಳ ಮೇಲೆ - ಸ್ತ್ರೀಯ ಹೇಳುವಾಗ ಇಕಾರ ಪ್ರತ್ಯಯ ಬರುತ್ತದೆ.

ರಂಗಿ - ವೆಂಕಟಿ - ತಿಮ್ಮಿ - ಇತ್ಯಾದಿ.

೬೩ - ಎಕಾರ ಪ್ರತ್ಯಯವು ಯಾವವರ ಮೇಲೆ ಬರುತ್ತದೆ.

ವಣಿಗ - ವಂತ - ಇಚ - ಪ್ರತ್ಯಯಾಂತಗಳ ಮೇಲೂ - ಸಿತಗಾದಿ ಶಬ್ದಗಳ ಮೇಲೂ - ಎಕಾರ ಪ್ರತ್ಯಯ ಬರುತ್ತದೆ.

ಲಂಚವಣಿಗೆ - ಗುಣವಂತೆ - ಕಾಲುರಿಚೆ - ಇತ್ಯಾದಿ.

ಪ್ರಶ್ನೆ:	ಉತ್ತರವು.
	ಸಿಕ್ಕಗೆ - ಚಮಕಿ - ಪ್ಯಾಕ್ಸಿ - ಜ್ಯಾಡಿ - ಕಳ್ಳಿ - ಬೆಳ್ಳಿ - ಹಿಡ್ಡಿ - ಎಗ್ಗಿ ಬಂಡಿ - ಮುಂಡಿ - ಅಂಡಿ - ಠಾಂಡಿ - ಕುಂಟಿ - ಘುಂಟಿ - ಇತ್ಯಾದಿ - ಸಿಕ್ಕಗಾದಿಗಳ ಸ್ವಪ್ರಯೋಗದಿಂದ ತಿಳಿದುಕೊಳ್ಳುವದು.
೭೪ - ಏಕಾರ ಪ್ರತ್ಯಯವು - ಇಕಾರ ಪ್ರತ್ಯಯವು - ಯಾವವರ ಮೇಲಾದರೂ ಬರುತ್ತವೆಯೋ.	ಊನ್ಯಪ್ರತ್ಯಯಾಂತದ ಮೇಲೆ ಏಕಾರ ಪ್ರತ್ಯಯವೂ - ಇಕಾರ ಪ್ರತ್ಯಯವೂ ಸಹಾ ಬರುತ್ತದೆ - ಕೆಲವರು ವಣಿಗಾದಿ ಪ್ರತ್ಯಯಗಳ ಮೇಲೆ ಸಹ ಇಕಾರ ಪ್ರತ್ಯಯ ಬರುತ್ತದೆಯೆಂದು ಹೇಳಿದರು. ಸೂಳಾಯ್ತೆ - ಸೂಳಾಯ್ತ್ರಿ - ಲಂಚವಣಿಗಿ - ಸುಣಾವಂತಿ - ಕಾಲುರಿಚೆ - ಇತ್ಯಾದಿ.
೭೫ - ತಿ ಪ್ರತ್ಯಯವು ಯಾವವರ ಮೇಲೆ ಬರುತ್ತದೆ.	ವಳ - ವಳ್ಳ - ಕಾರ - ಗಾರ - ಪ್ರತ್ಯಯಾಂತಗಳ ಮೇಲೆ ಬರುತ್ತದೆ - ಆಗ - ಅವುಗಳ - ಕಾರ - ಗಾರ - ಪ್ರತ್ಯಯಗಳ ಕಡೇಸ್ವರಕ್ಕೆ ಲೋಪ ಬರುತ್ತದೆ - ಕೆಲವರು ದು ಲೋಪ ಬರುತ್ತದೆಯೆಂದು ಹೇಳುತ್ತಾರೆ. ಮಡಿವಳ - ಮಡಿವಳ್ಳ - ಮಡಿವಳ್ತಿ - ಬಂಡಿಕಾರ - ಬಂಡಿಕಾರ್ತಿ - ಬಂಡಿಕಾತಿ - ಊಟಗಾರ - ಊಟಗಾರ್ತಿ - ಊಟಗಾತಿ - ಇತ್ಯಾದಿ.
೭೬ - ತಿ - ಇತಿ ಪ್ರತ್ಯಯಗಳೆರಡೂ ಯಾವವರ ಮೇಲೆ ಬರುತ್ತವೆ.	ರ - ಆರ - ಪ್ರತ್ಯಯಾಂತಗಳ ಮೇಲೆ - ತಿ - ಇತಿ ಪ್ರತ್ಯಯಗಳು ಬರುತ್ತವೆ - ರ - ಆರ - ಪ್ರತ್ಯಯಗಳ ಕಡೇಸ್ವರಕ್ಕೆ ತಿಪ್ರತ್ಯಯ ಪರವಾದಾಗ ಲೋಪಸಹಾ ಬರುತ್ತದೆ. ಕುಂಬರಿತಿ - ಕುಂಬರ್ತಿ - ಕುಂಬಾರಿತಿ - ಕುಂಬಾರ್ತಿ - ಇತ್ಯಾದಿ.
೭೭ - ತಿ ಪ್ರತ್ಯಯವಿನ್ನಾವಲ್ಲಾದರೂ ಬರುವದುಂಟಾ.	ಪಾರ್ವಾದಿಶಬ್ದಗಳ ಮೇಲೆ ತಿ ಪ್ರತ್ಯಯ ಬರುತ್ತದೆ. ಪಾರ್ವತಿ - ಒಕ್ಕಲತಿ - ಇತ್ಯಾದಿಗಳು ಪ್ರಯೋಗಗಮ್ಯಗಳು.
೭೮ - ಇತಿ - ತಿ - ಇ - ಈ ಮೂರು ಪ್ರತ್ಯಯಗಳೂ ಯಾವದರ ಮೇಲೆ ಬರುತ್ತದೆ.	ಅರಸಾದಿಶಬ್ದಗಳ ಮೇಲೆ ಬರುತ್ತವೆ - ತಿ ಪ್ರತ್ಯಯ ಪರವಾದಾಗ ಪ್ರಕೃತಿಯ ಕಡೇಸ್ವರಕ್ಕೆ ಲೋಪಸಹಾ ಬರುತ್ತದೆ.

ಅರಸ - ಅರಸಿತಿ - ಅರಸ್ತ್ರಿ - ಅರಸಿ - ಇತ್ಯಾದಿ ಪ್ರಯೋಗವೇದ್ಯಗಳು.

೭೯ - ಸ್ತ್ರೀಪ್ರತ್ಯಯವು ಬಾರದಂಥಾ ಶಬ್ದಗಳುಂಟೇ.

ಹ್ರಸ್ವಾಕಾರವುಳ್ಳ ಕರ್ಮಧಾರಯಾಂತಗಳ ಮೇಲೆ ಸ್ತ್ರೀಪ್ರತ್ಯಯವೆಂದೂ ಬರುವದಿಲ್ಲವು - ವಿಶೇಷಣಪದಕ್ಕೆ ವಿಶೇಷ್ಯಪದದಿಂದಲೂ - ವಿಶೇಷ್ಯಕ್ಕೆ ಕ್ರಿಯಾಪದದಿಂದಲೂ - ಪ್ರಕರಣದಿಂದಲೂ - ಲಿಂಗವರಿಯಲ್ಪಡಬೇಕು.

ಅಂಜುಕುಳಿಹೆಂಗಸು - ಆಟಗುಳಿಬಂದಳು - ಇತ್ಯಾದಿ.

೮೦ - ಸ್ತ್ರೀಪ್ರತ್ಯಯಗಳಲ್ಲದೆ ಸ್ತ್ರೀದ್ಯೋತಕಾಗಮಗಳೇನಾದರೂ ಉಂಟೇ - ಯಾವದರ ಮೇಲೆ ಬರುತ್ತದೆ.

ಮೇಲೆ ಬರೆದ ಸ್ತ್ರೀಪ್ರತ್ಯಯ ಪ್ರಕೃತಿಗಳನ್ನಾದರೂ ಅಕಾರಾಂತವಾದ ತ್ರಿಲಿಂಗವಾದ ದೇಶ್ಯಶಬ್ದಗಳಲ್ಲಿ - ೩ನೆಯ ಪ್ರಕರಣದ - ೩೮ - ೪೨ - ೪೩ - ೪೪ - ೪೫ - ೪೬ - ೪೭ - ೪೮ - ೪೯ - ೫೧ - ೫೨ - ೫೩ - ೫೪ - ನೇ ಸೂತ್ರಗಳಲ್ಲಿ ನಿಷ್ಪನ್ನವಾದ ಪ್ರಕೃತಿಗಳಿಗೆ - ೩೦ನೆಯ ಸೂತ್ರ ಪ್ರಕಾರ - ಸ್ತ್ರೀಲಿಂಗೈಕವಚನದಲ್ಲಿ - ಳಕಾರಾಗಮ ಬರುತ್ತದೆ - ಇದು ಅನ್ನಾದರೂ - ದ - ಅನ - ಅನೆಯ - ಯೆಂಬ - ತದ್ಧಿತಾಂತಗಳಿಗೂ - ಅಟ್ಟೆಂಬ ಸಮಾಸಾಂತ ಪ್ರತ್ಯಯಾಂತಕ್ಕೂ - ಸ್ವರಾದಿವಿಭಕ್ತಿಪರವಾದಾಗ - ಸ್ತ್ರೀಲಿಂಗೈಕವಚನದಲ್ಲಿ ಳಕಾರಾಗಮ ಬರುತ್ತದೆ.

ಮಗಳು - ಕರಿಯಳು - ಎಳೆಯಳು - ಹಳಬಳು - ಒಳ್ಳಿದಳು - ಹೊಸಬಳು - ಮಾಡಿದಳು - ಮಾಡುವಳು - ಅವಳು - ಯಾವಳು - ಹೆರಳು - ಒಬ್ಬಳು - ಅಲ್ಲಿದಳು - ಅಲ್ಲಿಯವಳು - ಮೂರನೆಯಳು - ಮುದ್ದೊಡೆಯಳು - ಇತ್ಯಾದಿ.

೮೧ - ಅಂಥಾ ಸಂಸ್ಕೃತ ಶಬ್ದಗಳಿಗೇನು ಬರುತ್ತವೆ.

ಆ ವಿವರವು - ತತ್ಸಮ ಪ್ರಕರಣದಲ್ಲಿ ಹೇಳಲ್ಪಡುತ್ತದೆ.

೮೨ - ಸ್ವಾರ್ಥ ಪ್ರತ್ಯಯಗಳೆಂದರೇನು.

ಸ್ತ್ರೀಪ್ರತ್ಯಯವಲ್ಲದೆಯೂ - ಪ್ರಕೃತ್ಯರ್ಥವಲ್ಲದೆಯೂ ಅದರಲ್ಲಿ ವಿಶೇಷವ ಹೇಳುವಾಗ ಬರುವ ಪ್ರತ್ಯಯವು ಸ್ವಾರ್ಥಪ್ರತ್ಯಯವು.

೮೩ - ಅವು ಯಾವವು ಯಾವವರ ಮೇಲೆ ಬರುತ್ತವೆ.

ಡ - ಸು - ಉಸು - ಡಿ - ಅ - ಆಚಿ - ಅಣ್ಣೆ - ಉ - ಇತ್ಯಾದಿಗಳು ಸ್ವಾರ್ಥಪ್ರತ್ಯಯಗಳು - ಲಿಂಗದ ಮೇಲೆ ಬರುತ್ತವೆ.

೭೪ - ಅವು ಯಾವರ್ಥದಲ್ಲಿಬರುತ್ತದೆ.

ಪಶುಪಕ್ಷಿಮನುಷ್ಯಸಾಧಾರಣವಾದಹೆಣ್ಣುಶಬ್ದದಮೇಲೆಮನುಷ್ಯಸ್ತ್ರೀಯಹೇಳುವಾಗ - ಗಸು ಪ್ರತ್ಯಯವೂ - ಅಂಥಾಗಂಡುಶಬ್ದದಮೇಲೆಮನುಷ್ಯನಹೇಳುವಾಗ ಉಸುಪ್ರತ್ಯಯವೂ. ಅಂಥಾಹೆಣ್ಣುಶಬ್ದದಮೇಲೆಮದುವೆಯಾದತನ್ನಸ್ತ್ರೀಯೆಂಬರ್ಥದಲ್ಲಿದರಿ ಪ್ರತ್ಯಯವೂ - ಅಂಥಾಗಂಡುಶಬ್ದದಮೇಲೆಮದುವೆಯಾದಪುರುಷನೆಂಬರ್ಥದಲ್ಲಿಅ ಪ್ರತ್ಯಯವೂ - ಬಂಧುವಾಚಕದೇಶ್ಯಶಬ್ದಗಳಮೇಲೆಗೌರವತೋರುವಾಗಆಜಿಪ್ರತ್ಯಯವೂ ಅಮ್ಮಅಕ್ಕಶಬ್ದಗಳ ಮೇಲೆಪ್ರೀತಿತೋರುವಾಗಅಣ್ಣಿಪ್ರತ್ಯಯವೂ - ಇಟ್ಟಹೆಸರುಗಳಮೇಲೂ - ಬಂಧುವಾಚಕಶಬ್ದಗಳಮೇಲೂ - ಅತಿಪ್ರೀತಿತೋರುವಾಗ ಸ್ತ್ರೀಯನ್ನಹೇಳಿದರೂ - ಪುರುಷನಹೇಳಿದರೂ - ಉಕಾರ ಪ್ರತ್ಯಯವೂಬರುತ್ತದೆ.

ಹೆಂಗಸು - ಗಂಡುಸು - ಹೆಂಡರಿ - ಗಂಡ - ಅಪ್ಪಾಜಿ - ಅಯ್ಯಾಜಿ - ಅಣ್ಣಾಜಿ - ಅಮ್ಮಾಜಿ - ಅಕ್ಕಾಜಿ - ಅಮ್ಮಣ್ಣಿ - ತಿಂಗು - ರಂಗು ಅಪ್ಪು - ಇತ್ಯಾದಿ.

೭೫ - ಉಕಾರಪ್ರತ್ಯಯವಿನ್ನಾವೆಲ್ಲಿಬರುತ್ತದೆ.

ಗುಣವೈಕಲ್ಯವನ್ನಾಗಲಿ - ಅಂಗವೈಕಲ್ಯವನ್ನಾಗಲಿ - ಹೇಳುವಅಕಾರಾಂತವಾದಹೆಡ್ಡಾದಿಶಬ್ದಗಳಮೇಲೂ - ಮಗಶಬ್ದದ ಮೇಲೂ - ಸ್ತ್ರೀಪುರುಷವಿಶೇಷತೋರದೆ - ಸಾಮಾನ್ಯವಾಗಿಹೇಳಬೇಕಾದರೂ - ನಪುಂಸಕಲಿಂಗವಾದವಸ್ತುವಹೇಳಬೇಕಾದರೂ ಉಪ್ರತ್ಯಯಬರುತ್ತದೆ - ಸ್ತ್ರೀಯಹೇಳುವಾಗ ಮೇಲಿಹೇಳಿದವಿಧಿಗಳುಬರುತ್ತವೆ - ಪುರುಷನಹೇಳುವಾಗ ಸ್ವಭಾವವಾಗಿಅಕಾರಾಂತವಾಗಿಯೇನಿಲ್ಲುತ್ತವೆ.

ಪುಂ -	ಹೆಡ್ಡನು -	ಕುಂಟನು -	ಕುರುಡನು -	ಕಿವುಡನು -	ಸೊತ್ತನು -	ಮಗನು.
ಸ್ತ್ರೀ -	ಹೆಡ್ಡಿ -	ಕುಂಟಿ -	ಕುರುಡಿ -	ಕಿವುಡಿ -	ಸೊತ್ತಿ -	ಮಗಳು.
ಸಾ ನಪು - {	ಹೆಡ್ಡು -	ಕುಂಟು -	ಕುರುಡು -	ಕಿವುಡು -	ಸೊತ್ತು -	ಮಗು.

ಇಂತು ೭ನೆಯತದ್ಧಿತಪ್ರಕರಣವು ಆಯಿತು.

ಪ್ರಶ್ನೆ.	ಉತ್ತರವು.
೧. ತತ್ಸಮ ಪ್ರಕರಣದಲ್ಲೇನು ಹೇಳಲ್ಪಡುತ್ತವೆ.	ಸಂಸ್ಕೃತ ಶಬ್ದಗಳೂ - ದ್ರಮಿಡ ಶಬ್ದಗಳೂ - ಕನ್ನಡದಲ್ಲಿ ಬರುವಾಗಲೂ - ಹಳಗನ್ನಡ ಶಬ್ದಗಳು ಹೊಸಗನ್ನಡದಲ್ಲಿ ಬರುವಾಗಲೂ - ಅನ್ಯದೇಶ್ಯ ಶಬ್ದಗಳು ಕನ್ನಡದಲ್ಲಿ ಬರುವಾಗಲೂ - ಬರುವ - ಲೋಪಾಗಮಾದೇಶಗಳು ಹೇಳಲ್ಪಡುತ್ತವೆ.
೨. ತತ್ಸಮವೆಂದರೇನು.	ತತ್ ಎಂದರೆ ಪ್ರಸಿದ್ಧವಾದ ಸಂಸ್ಕೃತ ದ್ರಮಿಡಗಳಿಗೆ ಅರ್ಥವ ಮಾಡಿಕೊಂಡು ಅವುಗಳೊಂದಿಗೆ ಸಮವಾದ ಶಬ್ದಗಳಾದ್ದರಿಂದ ಆ ಭಾಷೆಗಳಲ್ಲಿ ಯಾವ ಮೇರೆಗೆ ಅವೆಯೋ ಅದೇ ಮೇರೆಗೆಯೂ ಕನ್ನಡ ಭಾಷೆಯಲ್ಲಿಯೂ ಇದ್ದರೆ ಅಂಥಾ ಶಬ್ದಗಳು ತತ್ಸಮ ಶಬ್ದಗಳು - ಅಂತ್ಯವ್ಯಂಜನಕ್ಕಾಗಲಿ ಅಂತ್ಯಸ್ವರಕ್ಕಾಗಲಿ ಲೋಪಾಗಮಾದೇಶಗಳು ಬಂದ ಮಾತ್ರದಿಂದ ತತ್ಸಮತ್ವಕ್ಕೆ ಭಂಗವಿಲ್ಲವು.
೩. ಈ ಭಾಷೆಯಲ್ಲಿರುವ ಶಬ್ದವನ್ನು ಮತ್ತೊಂದು ಭಾಷೆಯಿಂದ ಬಂದದ್ದಾಗಿ ಹೇಳಲಿಕ್ಕೆ ಕಾರಣವೇನು.	ಸಂಸ್ಕೃತ ಭಾಷೆಯಲ್ಲಿ - ಅವಯವಾರ್ಥವುಳ್ಳವಾಗಿಯೂ ದ್ರಮಿಡ ಭಾಷೆಯಲ್ಲಿ ಅವಯವಾರ್ಥವುಳ್ಳವಾಗಿಯೂ ಪ್ರಕೃತಿ ಪ್ರತ್ಯಯ ವಿಭಾಗವುಳ್ಳ ಶಬ್ದಗಳು - ಈ ಕನ್ನಡದಲ್ಲಿ ಅಂಥಾ ವಿಭಾಗವಿಲ್ಲದೇ ಪ್ರಯೋಗಿಸಲ್ಪಡುವದ್ದರಿಂದ ಆ ಭಾಷಾ ಶಬ್ದಗಳು ಅಲ್ಲಿಂದ ಇಲ್ಲಿಗೆ ಬಂದದ್ದಾಗಿ ಹೇಳಲಾಯಿತು - ಸಂಸ್ಕೃತವಾರ್ಯ ಭಾಷೆಯಾದ್ದರಿಂದಲೂ ಆರ್ಯಾವರ್ತ ದೇಶವಾದ ವಿಂಧ್ಯಹಿಮವತ್ಪರ್ವತ ಮಧ್ಯದಲ್ಲಿ - ಪೂರ್ವದಲ್ಲಿ ಮಾತನಾಡುತ್ತಿದ್ದರು - ಈಗ ಸ್ವಲ್ಪ ಕೆಟ್ಟು ಪಂಜಾಬ ಗೌಡ ಮೊದಲಾದ ಆ ದೇಶ ಭಾಷೆಗಳು ಸಂಸ್ಕೃತಾಪಭ್ರಂಶವಾಗಿವೆ - ಮತ್ತೂ ಆ ಭಾಷೆಯಲ್ಲಿ ವೇದವಿದೆ - ಆ ಭಾಷೆಗೆ - ವ್ಯಾಕರಣ ಶಾಸ್ತ್ರವ ಮಾಡಿದವರು ಪಾಣಿನಿ ಕಾತ್ಯಾಯನ ಪತಂಜಲಿ ಮೊದಲಾದ ಋಷಿಗಳು ಆದ್ದರಿಂದ ಸಂಸ್ಕೃತ ಭಾಷೆ ಪೂರ್ವ ಭಾಷೆಯಾಯಿತು. ತಿಗುಳೂ - ಆ ಮೇರೆಗೆ - ದಕ್ಷಿಣ ಸಮುದ್ರ ತೀರದಲ್ಲಿ ಪ್ರಸಿದ್ಧವಾದ್ದರಿಂದಲೂ ಈ ಭಾಷೆಯಲ್ಲಿ ಸಹಾ ವೇದವಿರುವದ್ದರಿಂದಲೂ ಈ ಭಾಷೆಗೂ ವ್ಯಾಕರಣ ಶಾಸ್ತ್ರ ಪ್ರವರ್ತಕರು

ಅಗಸ್ತ್ಯಋಷಿಯಾದ್ದರಿಂದಲೂ - ಇದರಲ್ಲಾ - ಸಕಲಶಬ್ದಗಳಿಗೂ - ಅವಯವಾರ್ಥವಿರುವದ್ದರಿಂದ - ಈ ದ್ರಮಿಡಭಾಷೆಯೂ ಅನಾದಿಭಾಷೆಯೆ - ಆರ್ಯಾವರ್ತದೇಶಕ್ಕೂ - ದ್ರಮಿಡದೇಶಕ್ಕೂ - ಮಧ್ಯದಲ್ಲಿರುವ - ಆಂಧ್ರ - ಕರ್ಣಾಟಕ - ದ್ರಾವಿಡ - ಕೇರಳದೇಶಗಳಲ್ಲಿ - ಸಂಸ್ಕೃತ ದ್ರಮಿಡಶಬ್ದಗಳು - ಯಥಾವಸ್ಥಿತವಾಗಿಯೂ - ವಿಕಾರವನ್ನು ಹೊಂದಿಸಿಯೂ - ಪ್ರಯೋಗಿಸಲ್ಪಡುತ್ತವೆ - ತುಲುಕ್ಷ ದೊರತನವಾದದ್ದು ಮೊದಲು ಆಭಾಷಾಶಬ್ದಗಳೂ - ಇಂಗ್ಲೀಷು ದೊರತನವಾದದ್ದು ಮೊದಲು ಆ ಶಬ್ದವೂ - ಯಥಾವಸ್ಥಿತವಾಗಿಯೂ - ವಿಕಾರವನ್ನು ಹೊಂದಿಸಿಯೂ ಸೇರಿಸಲ್ಪಡುತ್ತವೆ - ಆದರೆ - ಶಬ್ದಾನುಶಾಸನ - ಶಬ್ದಮಣಿದರ್ಪಣ - ಮುಂತಾದ ಕರ್ಣಾಟಕವ್ಯಾಕರಣವ ಮಾಡಿದವರಿಗೆ - ಸಂಸ್ಕೃತದಲ್ಲಿ ಮಾತ್ರ ಪರಿಚಯವಿದ್ದು - ದ್ರಮಿಡದಲ್ಲಿ ಪರಿಚಯವಿಲ್ಲದ್ದರಿಂದ ಸಂಸ್ಕೃತದಿಂದ ಬಂದಂಥಾ ತತ್ಸಮ ತದ್ಭವಗಳಿಗೆ ಮಾತ್ರ ವಿಧಿಗಳನ್ನು ಹೇಳಿದರು - ಇದರಲ್ಲಿ ದ್ರಮಿಡದಿಂದ ಬಂದಿರುವ ಶಬ್ದಗಳಿಗೂ - ತಿಳಿದಮಟ್ಟಿಗೂ ವಿಧಿಗಳು ಹೇಳಲ್ಪಡುತ್ತವೆ ಪ್ರಾಯಿಕವಾಗಿ ಸಂಸ್ಕೃತಕ್ಕೆ ಹೇಳಿದ ತದ್ಭವ ತತ್ಸಮ ಸೂತ್ರಗಳೇ ದ್ರಮಿಡಕ್ಕೂ ಉಪಯೋಗಿಸುತ್ತವೆ - ತತ್ಸಮಸೂತ್ರಗಳು ಕೆಲವು - ಅನ್ಯದೇಶ್ಯಕ್ಕೂ - ಉಪಯೋಗಿಸುತ್ತವೆ.

೪ - ಸಂಸ್ಕೃತದಿಂದ ಯಾವಯಾವ ಶಬ್ದಗಳು ಕನ್ನಡಕ್ಕೆ ಬರುವದಿಲ್ಲವು.

ಕೃತ್ತದ್ಧಿತಾವ್ಯಯ ಪ್ರತ್ಯಯಾಂತಗಳೂ - ಸ್ವರಾದಿನಿಪಾತಾವ್ಯಯಗಳೂ - ತತ್ಪ್ರತ್ಯಯಾಂತಗಳೂ - ತ್ಯದಾದಿಶಬ್ದಗಳೂ - ಅವ್ಯಯೀಭಾವಸಮಾಸಾವ್ಯಯಗಳೂ - ದ್ವಿಶಬ್ದ ಮೊದಲು ದಶಬ್ದದವರಿಗೂ ಸಂಖ್ಯಾವಾಚಕಗಳೂ - ಸುಪ್ಪ್ರತ್ಯಯಾಂತಗಳೂ - ಆಖ್ಯಾತಪ್ರತ್ಯಯಾಂತಗಳೂ - ವ್ಯಾಕರಣಸೂತ್ರದಲ್ಲಿ ಹೇಳಿರುವ ವಿಧಿಗಳಿಂದ ಕಷ್ಟಪಟ್ಟು ನಿಷ್ಪತ್ತಿಮಾಡಿದ ಅಪ್ರಸಿದ್ಧಶಬ್ದಗಳೂ - ಕನ್ನಡದಲ್ಲಿ ಬರುವದಿಲ್ಲವು.

೫ - ಕೃದಂತಾವ್ಯಯಗಳು ಯಾವವು.

ತುಮರ್ಥ ಪ್ರತ್ಯಯಾಂತವೂ - ಕ್ತ್ವಾ ಪ್ರತ್ಯಯಾಂತವೂ

అది క్త్వాదేశమైన ల్యప్ప్రత్యయాంతము - ణముల్ ప్రత్యయాంతము - కృదంతావ్యయములు.

తుమున్ కర్తుం - భోక్తుం - గంతుం - క్త్వా - గత్వా - భుక్త్వా - కృత్వా - ల్యప్ - ప్రాప్య - నిధాయ - సంభూయ - ణముల్ భోజంభోజం - కారంకారం - ఇత్యాది.

౬ - తద్ధితావ్యయములు యేవవి.

తసిల్ - త్రల్ - హ - అత్ - దా - ర్హిల్ - అధునా - దానీం ద్యస్ - ఉత్ - ఆరి - సమసణ్ - ద్యుస్ - ద్య - థాల్ - థము - అస్తాతి - అసి - రిల్ - రిష్టాతి - ఆతి - ఏనప్ - ఆచ్ - ఆహి - ధా - ధముఞ్ - శస్ - తసి - ఆమ్ - తసి - వతి - నా - నాఞ్ - కృత్వోర్థ ప్రత్యయములు తద్ధితావ్యయ ప్రత్యయములు.

తసిల్ - కుతః - తతః - యతః - ఇత్యాది - త్రల్ - తత్ర - యత్ర - ఇత్యాది - హ - ఇహ - అత్ - క్వ - దా - కదా - యదా - ర్హిల్ - తర్హి - కర్హి - అధునా - అధునా - దానీం - ఇదానీం - తదానీం - ద్యస్ - సద్యః - ఉత్ - పరుత్ - ఆరి - పరారి - సమసణ్ - ఐషమః - ద్యుస్ - పరేద్యుః - పూర్వేద్యుః - ద్య - అద్య - థా - యథా - తథా - థముల్ - కథం - ఇత్థం - అస్తాతి - పురస్తాత్ - అధస్తాత్ - అసి - పురః - అధః - రిల్ - ఉపరి - రిష్టాత్ - ఉపరిష్టాత్ - ఆతి - పశ్చాత్ - ఉత్తరాత్ - ఏన - ఉత్తరేణ - అధరేణ - ఆచ్ - దక్షిణా - ఆహి - దక్షిణాహి - ధా - చతుర్ధా - పంచధా - ధముఞ్ - ద్వైధం - త్రైధం - శస్ - క్రమశః - బహుశః - వత్ - ఘటవత్ - నా - వినా - నాఞ్ - నానా - కృత్వోర్థములు - పంచకృత్వః - సప్తకృత్వః - ద్విః - త్రిః - సకృత్ - ఆమ్ - సుతరాం - నితరాం - ఇత్యాది.

೭ - ಸ್ವರಾದ್ಯವ್ಯಯಗಳು ಯಾವವು.

ಸ್ವಃ - ಅಂತಃ - ಪ್ರಾತಃ - ಪುನಃ - ಸನುತಃ - ಉಚ್ಚೈಃ - ನೀಚೈಃ - ಶನೈಃ - ಋಧಕ್ - ಋತೆ - ಯುಗಪತ್ - ಆರಾತ್ - ಪೃಥಕ್ - ಹ್ಯಃ - ಶ್ವಃ - ದಿವಾ - ರಾತ್ರೌ - ಸಾಯಂ - ಚಿರಂ - ಮನಾಕ್ - ಈಷತ್ - ಜೋಷಂ - ತೂಷ್ಣೀಂ - ಬಹಿಃ - ಅವಃ - ಸಮಯಾ - ನಿಕಷಾ - ಸ್ವಯಂ - ವೃಥಾ - ನಕ್ತಂ - ನ - ಹೇತೌ - ಇದ್ಧಾ - ಅದ್ಧಾ - ಸಾಮಿವತ್ - ಬ್ರಾಹ್ಮಣವತ್ - ಕ್ಷತ್ರಿಯವತ್ - ಸನಾ - ಉಪಧಾ - ಸನತ್ - ಸನಾತ್ - ತಿರಃ - ಅಂತರಾ - ಅಂತರೇಣ - ಜ್ಯೋಕ್ - ಕಂ - ಶಂ - ಸಹಸಾ - ವಿನಾ - ನಾನಾ - ಸ್ವಸ್ತಿ - ಸ್ವಧಾ - ಅಲಂ - ವಷಟ್ - ಶ್ರೌಷಟ್ - ವೌಷಟ್ - ಅನ್ಯತ್ - ಅಸ್ತಿ - ಉಪಾಂಶು - ಕ್ಷಮಾ - ವಿಹಾಯಸಾ - ದೋಷಾ - ಮೃಷಾ - ಮಿಥ್ಯಾ - ಮುಧಾ - ಪುರಾ - ಮಿಥೋ - ಮಿಥಃ - ಪ್ರಾಯಃ - ಮುಹುಃ - ಪ್ರವಾಹುಕಂ - ಪ್ರವಾಹಿಕಾ - ಆರ್ಯಹಲಂ - ಅಭೀಕ್ಷ್ಣಂ - ಸಾಕಂ - ಸಾರ್ಧಂ - ನಮಃ - ಹಿರುಕ್ - ಧಿಕ್ - ಅಥ - ಅಂ - ಆಂ - ಪ್ರತಾಂ - ಪ್ರಶಾನ್ - ಪ್ರತಾನ್ - ಇತ್ಯಾದಿಗಳು - ಸ್ವರಾದಿಗಳು.

೮ - ನಿಪಾತಾವ್ಯಯಗಳು ಯಾವವು.

ಚಾದಿಗಳೂ - ಪ್ರಾದಿಗಳೂ - ನಿಪಾತಾವ್ಯಯಗಳು.

ಚ - ವಾ - ಹ - ಅಹ - ಏವ - ಏವಂ - ನೂನಂ - ಶಶ್ವತ್ - ಯುಗಪತ್ - ಭೂಯಃ - ಕೂಪತ್ - ಕುವಿತ್ - ನೂಪತ್ - ಚೇತ್ - ಚಣ್ - ಕಚ್ಚಿತ್ - ಯತ್ರ - ತತ್ರ - ನಹ - ಹಂತ - ಮಾಕಿಂ - ಮಾಕೀಂ - ನಕಿಂ - ನಕೀಂ - ಆಕೀಂ - ಮಾ - ನ - ಯಾವತ್ - ತಾವತ್ - ತ್ವೈ - ದ್ವೈ - ರೈ - ಶ್ರೌಷಟ್ - ವೌಷಟ್ - ಸ್ವಾಹಾ - ಸ್ವಧಾ - ವಷಟ್ - ಓಂ - ತಥಾಹಿ - ಖಲು - ಕಿಲ - ಅಥ - ಸುಷ್ಠು - ಸ್ಮ - ಉಪಸರ್ಗದಹಾಂಗೂ - ಸ್ವರದಹಾಂಗೂ - ವಿಭಕ್ತ್ಯಂತದಹಾಂಗ್ಯ - ಇರುವ ಶಬ್ದಗಳೂ - ಪ್ಯಾಟ್ ಪಾಟ್ - ಅಂಗ - ಹೆ - ಹೈ - ಭೋಃ - ಅಯೆ - ಇತ್ಯಾದಿಗಳು - ಚಾದ್ಯವ್ಯಯಗಳು.

ಪ್ರ - ಪರಾ - ಅಪ - ಸಂ - ಅನು - ಅವ - ನಿಸ್ - ನಿರ್ - ದುಸ್ - ದುರ್ - ವಿ - ಆ - ನಿ - ಅಧಿ - ಅಪಿ - ಅತಿ - ಸು - ಉತ್ - ಅಭಿ - ಪ್ರತಿ - ಪರಿ - ಉಪ ಇವು - ಪ್ರಾದಿಗಳು - ಇವುಗಳಿಗೆ - ಗತಿಯೆಂತಲೂ - ಉಪಸರ್ಗವೆಂತಲೂ - ಒಂದು ಕ್ರಿಯೆಯೊಂದಿಗೆ ಸೇರುವಾಗ ಹೆಸರು ಬರುತ್ತದೆ.

೯ - ಶತೃಪ್ರತ್ಯಯಾಂತಗಳು ಯಾವವು.

ಸಂಸ್ಕೃತ ಪರಸ್ಮೈಪದ ಧಾತುಗಳ ಮೇಲೆ - ಕನ್ನಡದ - ಉತ್ತಪ್ರತ್ಯಯಕ್ಕೆ ಯಾವದರ್ಥವೋ ಆಯರ್ಥದಲ್ಲಿ ಬರುವ ಶತೃ ಎಂಬ ಪ್ರತ್ಯಯಾಂತಗಳು ಕನ್ನಡದಲ್ಲಿ ಬರುವದಿಲ್ಲ - ಆ ಶತೃ ಪ್ರತ್ಯಯಾಂತವು ಸ್ತ್ರೀಯದ್ದಾಗುವಾಗ ಅದರ ಮೇಲೆ ಬಂದಿರುವ ಸ್ತ್ರೀಪ್ರತ್ಯಯವಾದ ಈಕಾರಾಂತಗಳೂ ಕನ್ನಡದಲ್ಲಿ ಬರುವದಿಲ್ಲವು - ಅದರ ವಿವರವೆಲ್ಲಾ ಬರೆಯಲಿಕ್ಕೆ ಗ್ರಂಥವಿಸ್ತಾರವಾಗುತ್ತದೆಯೆಂದು ಬರೆಯಲಿಲ್ಲವು.

ಭವತ್ - ನಟತ್ - ಸ್ತುವತ್ - ಯತ್ - ಜುಹ್ವತ್ - ದದತ್ - ದೀವ್ಯತ್ - ಬಿಭ್ಯತ್ - ಸುನ್ವತ್ - ತೃಣ್ವತ್ - ರುದತ್ - ಸುದತ್ - ರುಂಧತ್ - ಛಿಂದತ್ - ತನ್ವತ್ - ಕುರ್ವತ್ - ಕ್ರೀಣತ್ - ಬಧ್ನತ್ - ಚೋರಯತ್ - ಇತ್ಯಾದಿ.

ಭವಂತೀ - ಜುಹ್ವತೀ - ದಧತೀ - ಇತ್ಯಾದಿ.

೧೦ - ತ್ಯದಾದಿಗಳು ಯಾವವು.

ತ್ಯದ್ - ತದ್ - ಯದ್ - ಏತದ್ - ಇದಮ್ - ಅದಸ್ - ಏಕ - ದ್ವಿ - ಯುಷ್ಮದ್ - ಅಸ್ಮದ್ - ಭವತ್ - ಕಿಮ್ - ಇವು ತ್ಯದಾದಿಗಳು.

೧೧ - ಅವ್ಯಯೀಭಾವ ಸಮಾಸ ಹೇಂದರೇನು.

ಸಂಸ್ಕೃತಾವ್ಯಯಗಳ ಸಂಸ್ಕೃತ ಸುಬಂತದೊಂದಿಗೆ ವಿಭಕ್ತ್ಯಾದ್ಯರ್ಥದಲ್ಲಿ ಹಿಂದಾಗಲಿ - ಮುಂದಾಗಲಿ - ಸೇರಿಸಿ ಸಮಾಸ ಮಾಡಿದರೆ ಅದಕ್ಕೆ ಅವ್ಯಯೀಭಾವವೆಂದು ಹೆಸರು.

ಅಧಿಹರಿ - ಹರಿಯಲ್ಲಿ - ಉಪಕೃಷ್ಣಂ - ಕೃಷ್ಣನ ಹತ್ರ - ಸುಮದ್ರಂ - ಮದ್ರರ ಸಮೃದ್ಧಿ - ದುರ್ಯವನಂ - ಯವನರ ಕ್ಷಯವು - ನಿರ್ಮಕ್ಷಿಕಂ - ನೊಣವಿಲ್ಲ - ಅತಿಹಿಮಂ - ಹಿಮನಾಶವು

ಅತಿನಿದ್ರಂ - ನಿದ್ರೆಯೀಗ ಕೂಡದು - ಇತಿಹರಿ - ಹರಿಶಬ್ದಪ್ರಕಾಶ - ಅನುವಿಷ್ಣು - ವಿಷ್ಣುವಿನ ಹಿಂದೆ - ಅನುರೂಪಂ - ರೂಪಕ್ಕೆ ತಕ್ಕಹಾಂಗೆ - ಪ್ರತಿದಿನಂ - ಪ್ರತಿದಿನವು - ಯಥಾಶಕ್ತಿ - ಶಕ್ತಿಯ ಮೀರದೆ - ಸಹರಿ - ಹರಿಗೆ ಸರಿಯಾಗಿ - ಅನುಜ್ಯೇಷ್ಠಂ - ಜ್ಯೇಷ್ಠಕ್ರಮವಾಗಿ - ಸತೃಣಂ - ಕಡ್ಡಿಸಹಾ ಬಿಡದೆ - ಸಾಗ್ನಿ - ಅಗ್ನಿಗ್ರಂಥದವರಿಗೂ - ಯಾವಚ್ಛ್ಲೋಕಂ - ಶ್ಲೋಕದಷ್ಟು - ಶಾಕಪ್ರತಿ - ತುಸ ಮೆಲೊಗರ - ಅಕ್ಷಪರಿ - ದಾಳದಿಂದ ಸೋತಿತು - ಅಪವಿಷ್ಣು - ಪರಿವಿಷ್ಣು ವಿಷ್ಣುವ ಬಿಟ್ಟು - ಬಹಿರ್ವನಂ - ವನಕ್ಕೆ ಹೊರಗೆ - ಆಬಾಲಂ ಹುಡುಗರು ಸಮೇತವಾಗಿ - ಆಸಮುದ್ರಂ - ಸಮುದ್ರದವರಿಗೂ - ಅತ್ಯಗ್ನಿ - ಪ್ರತ್ಯಗ್ನಿ - ಅಗ್ನಿಗೆದುರಾಗಿ - ಅನುಗಂಗಂ - ಗಂಗೆಯಷ್ಟದ್ದ - ಪಾರೇಸಮುದ್ರಂ - ಸಮುದ್ರದಾಚೇದಡಲ್ಲಿ - ಮಧ್ಯೇಸಮುದ್ರಂ - ಸಮುದ್ರಮಧ್ಯದಲ್ಲಿ - ತಿಷ್ಠದ್ಗು - ಹಸುವ ಕರೆಯುವಾಗ ಇತ್ಯಾದಿಗಳು ಅವ್ಯಯೀಭಾವಸಮಾಸ ವುಣ್ಣವುಗಳೆಲ್ಲಾ ಕನ್ನಡದಲ್ಲಿ ಬರುವದಿಲ್ಲ - ಈ ಅವ್ಯಯೀಭಾವಸಮಾಸವೂ ಅವ್ಯಯವು.

೧೨ - ದ್ವಿಶಬ್ದ ಮೊದಲು ದಶಶಬ್ದದ ವರಿಗೂ ಯಾವವು.

ದ್ವಿ - ತ್ರಿ - ಚತುಃ - ಪಂಚ - ಷಟ್ - ಸಪ್ತ - ಅಷ್ಟ - ನವ - ದಶ - ಏಕಾದಶ - ಇತ್ಯಾದಿ.

೧೩ - ಸುಬಂತಗಳು ಯಾವವು.

ರಾಮಃ - ರಾಮೌ - ರಾಮಸ್ಯ - ರಾಮೇ - ರಾಮೇಷು - ಇತ್ಯಾದಿ.

೧೪ - ಆಖ್ಯಾತಾಂತಗಳು ಯಾವವು.

ಭವತಿ - ಭವತಃ - ಭವಂತಿ - ಇತ್ಯಾದಿ.

೧೫ - ಧಾತುಗಳು ಯಾವವು.

ಭೂ - ಏಧ ಮೊದಲಾದ ಸಂಸ್ಕೃತ ಧಾತುಗಳು.

೧೬ - ಕ್ಲಿಷ್ಟಕಲ್ಪನೆಯಾವದು.

ಅಮುಮುಯಙ್ - ಅದದ್ರ್ಯಙ್ - ಇತ್ಯಾದಿ.

೧೭ - ಇದಕ್ಕಪವಾದವುಂಟಾ.

ತದ್ಧಿತಾವ್ಯಯದಲ್ಲಿ ಇಹಾದಿಶಬ್ದಗಳು ಅರ್ಥವಿಶೇಷದಲ್ಲಿ ಬರುತ್ತವೆ - ಅವುಗಳಿಗೆ ಕನ್ನಡ ವಿಭಕ್ತಿ ಸಹ ಬರುತ್ತದೆ - ಶತೃ ಪ್ರತ್ಯಯಾಂತಗಳಿಗೆ ಅಸ ಧಾತುವ ಸೇರಿಸಿ ಕನ್ನಡದಲ್ಲಿ ಪ್ರಯೋ

ಗಿಸಬಹುದು - ಅವ್ಯಯೀಭಾವದಲ್ಲಿ ಮೀರದೆಯೆಂಬರ್ಥದಲ್ಲಿ ಬಂದ ಯಥಾಶಕ್ತ್ಯಾದಿಪದಗಳು ಅವ್ಯಯವಾಗಿಯೂ - ವೀಪ್ಸಾರ್ಥದಲ್ಲಿ ಬಂದ ಪ್ರತಿದಿನಾದಿಪದಗಳೂ - ಅಷ್ಟು ಯೆಂಬರ್ಥದಲ್ಲಿ ಬಂದ ಯಾವಚ್ಛ್ಲೋಕಾದಿಗಳೂ - ಸುಬಂತವಾಗಿಯೂ ಕನ್ನಡದಲ್ಲಿ ಬರುತ್ತವೆ - ಸ್ವರಾದ್ಯವ್ಯಯಗಳಲ್ಲಿ ಸಹಾದಿಶಬ್ದಗಳು ಕನ್ನಡದಲ್ಲವ್ಯಯವಾಗಿಯೇ ಬರುತ್ತವೆ.

ಇಹವು - ಋಮೋಕವು - ಉಭಯತ್ರರು - ಎರಡುಕಕ್ಷಿಯವರು - ಸರ್ವತ್ರರು - ಎಲ್ಲರು - ಇತ್ಯಾದಿ - ಸ್ವರತ್ತಾಗಿ ಜ್ವಲತ್ತಾಗಿ - ಯಥಾಶಕ್ತಿ ಪ್ರತಿದಿನವೂ - ಯಾವಜ್ಜೀವವು - ಸಹ ಪುನಃ - ಇತ್ಯಾದಿಗಳ ಸ್ವಪ್ರಯೋಗದಮೇಲೆ ನೋಡಿಕೊಳ್ಳುವದು.

೧೮ - ದ್ರಮಿಡಶಬ್ದಗಳಲ್ಲಿಯಾವಯಾವದು ಬರುವದಿಲ್ಲವು.

ದ್ರಮಿಡಧಾತುಗಳೂ - ದ್ರಮಿಡಲಿಂಗಗಳೂ - ಮಾತ್ರಬರುತ್ತದೆಯೇ ಹೊರ್ತು ದ್ರಮಿಡಸುಪ್ಪ್ರತ್ಯಯಾಂತಗಳೂ - ದ್ರಮಿಡಾಖ್ಯಾತಪ್ರತ್ಯಯಾಂತಗಳೂ - ತದ್ಧಿತಪ್ರಕರಣದಲ್ಲಿ ಹೇಳುವವಿಧಿಗೆ ಸೇರುವ ಶಬ್ದಗಳೂ ಕನ್ನಡದಲ್ಲಿ ಬರುವದಿಲ್ಲವು - ಇದು ಹೊರ್ತು ಶಿಷ್ಟಪ್ರಯೋಗವಿಲ್ಲದಿದ್ದರೆ ಅಂಥಾ ದ್ರಮಿಡಶಬ್ದಗಳನ್ನು ಕನ್ನಡದಲ್ಲಿ ಪ್ರಯೋಗಿಸಕೂಡದು.

ಅವನ್ನೈ - ಅವನಾಲ್ - ಕಾಡುಕ್ಕರದು - ಇತ್ಯಾದಿಗಳು.

೧೯ - ಅನ್ಯದೇಶ್ಯಶಬ್ದಗಳಲ್ಲಿಯಾವದು ಬರುವದಿಲ್ಲವು.

ಅವರಲ್ಲಿಯೂ - ಸುಬಂತಗಳೂ - ಆಖ್ಯಾತಾಂತಗಳೂ ಬರುವದಿಲ್ಲ - ಇಂಗ್ಲೀಷುಭಾಷೆಯಿಂದ ಧಾತುಗಳು ಸಹಾ ಬರುತ್ತದೆ - ಆ ಧಾತುಗಳಿಗೆ ಭಾವಾರ್ಥಸಹ ತೋರುತ್ತದೆ - ಮ್ಲೇಚ್ಛಭಾಷೆಯಿಂದ ಧಾತುಗಳು ಬರುವದಿಲ್ಲವು.

ರಿಕ್ಕಮೆಂಡುಮಾಡು - ಯಗ್ಜಾಮಿನ್‌ಮಾಡು - ಇತ್ಯಾದಿ.

೨೦ - ಸಂಸ್ಕೃತದಲ್ಲಿಯಾವಯಾವ ಸ್ವರಾಂತಕ್ಕೆ ಕನ್ನಡದಲ್ಲಿ ವಿಕಾರ ಬರುತ್ತದೆ.

ಅ - ಆ - ಉ - ಏ - ಐ - ಓ - ಔ - ಇವುಗಳುಳಿದಂಥಾ ಸ್ವರಾಂತಕ್ಕೆ ಕನ್ನಡದಲ್ಲಿ ವಿಕಾರ ಬರುತ್ತದೆ - ಅವುಗಳಲ್ಲಿಯೂ - ಏಕಾಕ್ಷರವಾದ ದೀರ್ಘಾಂತಶಬ್ದಗಳಿಗೂ ವಿಕಾರ ಬರುವದಿಲ್ಲವು.

ರಾಮನು - ಗಜವು - ಹರಿಯು - ಗುರುವು - ವಾಯು - ಶ್ರೀಯು ಭ್ರೂವು - ಗೋವು - ಗ್ಲಾವು - ಇತ್ಯಾದಿ.

೧೧ - ಅನೇಕಸ್ವರವುಳ್ಳ ದೀರ್ಘಾಂತ ಶಬ್ದಗಳಿಗೇನು ಬರುತ್ತದೆ.

ಅನೇಕಸ್ವರವುಳ್ಳ ದೀರ್ಘಾಂತ ಶಬ್ದಗಳಿಗೆ - ಊಯಾ ದೀರ್ಘದ ಹ್ರಸ್ವ ಬರುತ್ತದೆ.

ವಿಶ್ವಪಾ - ವಿಶ್ವಪನು - ಲಕ್ಷ್ಮೀ - ಲಕ್ಷ್ಮಿಯು - ನಾರೀ - ನಾರಿಯು ವಧೂ - ವಧುವು - ಇತ್ಯಾದಿ.

೧೨ - ಆಕಾರಾಂತಕ್ಕೆ ಏನಾದರುಂಟಾ.

ಆಕಾರಾಂತ ಸ್ತ್ರೀಲಿಂಗ ಶಬ್ದಗಳಿಗೆ ಹ್ರಸ್ವ - ಎಕಾರಾದೇಶ ಬರುತ್ತದೆ.

ಗಂಗಾ - ಗಂಗೆ - ವೀಣಾ - ವೀಣೆ - ಇತ್ಯಾದಿ.

೧೩ - ಇದಕ್ಕೆ ಏನಾದರುಂಟಾ.

ಆಕಾರಾಂತ ಸ್ತ್ರೀಲಿಂಗವಾದ ಕರುಣಾದಿ ಶಬ್ದಗಳಿಗೆ ಅದರ ಕಸ ವರ್ಣವಾದ ಹ್ರಸ್ವ ಬರುತ್ತದೆ.

ಕರುಣಾ - ಕರುಣವು - ಉಪತ್ಯಕಾ - ಉಪತ್ಯಕವು - ಇತ್ಯಾದಿ - ಕರುಣಾ - ಖಟ್ವಾ - ಉಪತ್ಯಕಾ - ಅಧಿತ್ಯಕಾ - ದಂಷ್ಟ್ರಾ - ವಾಲುಕಾ - ಕಂದರಾ - ಮೋಚಾ - ರಂಭಾ - ಇತ್ಯಾದಿ - ರಂಭಾಶಬ್ದಕ್ಕೆ ಬಾಳೆಯರ್ಥವಾದಾಗ ಹ್ರಸ್ವ ಬರುತ್ತದೆ - ಅಪ್ಸರಸ್ಸು ಅರ್ಥವಾದಾಗ - ರಂಭೆಯೆಂದಾಗುತ್ತದೆ.

೧೪ - ಎಕಾರಾದೇಶವಿನ್ನಾವುದರ ಮೇಲಾದರೂ ಬರುತ್ತದೆಯೊ.

ಊಷ್ಮಾದಿ ಶಬ್ದಗಳಿಗೆ ವಿಕಲ್ಪವಾಗಿ - ಎಕಾರಾದೇಶ ಬರುತ್ತದೆ ಎಕಾರಾದೇಶ ಬಾರದಾಗ - ಊಯಾ ಶಬ್ದಗಳಿಗೆ ಬೇರೆ ಸೂತ್ರಗಳಲ್ಲಿ ಹೇಳುವ ವಿಧಿಗಳು ಬರುತ್ತವೆ.

ಊಷ್ಮಾ - ಊಷ್ಮೆ - ಊಷ್ಮವು - ಗ್ರೀವಾ - ಗ್ರೀವೆ - ಗ್ರೀವವು ದರ್ಶಾ - ದರ್ಶೆ - ದರ್ಶವು - ಮಾತ್ರಾ - ಮಾತ್ರೆ - ಮಾತ್ರವು ಇತ್ಯಾದಿ - ಊಷ್ಮಾ - ದರ್ಶಾ - ಅಷ್ಟತ - ಶಾಣಾ - ಫಲಕಾ - ಘಟಿಕಾ ಶಾಕ - ಕ್ಷುರಿಕ - ಪ್ರಹರಣಾ - ಚಿಂತಾ - ಅಂಬಕ - ಅಳಕ - ಕಳಮ - ಊರು - ಪ್ರಶ್ನ - ಉದಾಹರಣಾ - ಕೋಣಾ - ವಧ - ಅಕ್ಷಿ

ಲಾಸ್ಯ - ಕಂದರಾ - ಗ್ರೀವಾ - ಶಿಕ್ಷಾ - ಅನ್ವೀಕ್ಷಾ - ಕುಂತೀ - ಊಷ್ಯ ಊಢ್ವಾ - ನಾಸಿಕಾ - ಉತ್ಕಂಠಾ - ಉತ್ಕಲಿಕಾ - ಅಮುತ್ರ - ಸರ್ವತ್ರ - ಉಭಯತ್ರ - ಪರತ್ರ - ಪಾತ್ರ - ಇತ್ಯಾದಿಗಳು - ಉಷ್ಣಾದಿಗಳು - ಆದರೆ - ಪಾತ್ರಶಬ್ದಮಾತ್ರವು - ಮಡಕೆ ಮೊದಲಾದ ಪಾತ್ರವನ್ನು ಹೇಳುವಾಗ - ಏಕಾರಾದೇಶ ವಿಕಲ್ಪವಾಗಿ ಬರುತ್ತದೆ - ಯೋಗ್ಯನಾಗಿರುವವನಾಗಲಿ ಅರ್ಥವಾದಾಗ ಏಕಾರಾದೇಶ ಬರುವದಿಲ್ಲವು.

೨೫ - ಆಕಾರಾಂತದಲ್ಲಿ ಯಾವ ಶಬ್ದಕ್ಕಾದರೂ ವಿಶೇಷವುಂಟೋ.

ರೂಪಶಬ್ದದ ಕಡೇ ಸ್ವರಕ್ಕೆ ಉಕಾರಾದೇಶ ವಿಕಲ್ಪವಾಗಿ ಬರುತ್ತದೆ - ರೂಪು - ರೂಪವು.

೨೬ - ಇಕಾರಾಂತದಲ್ಲಿ ಯಾವದಕ್ಕಾದರೂ ವಿಕಾರ ಬರುತ್ತದೆಯೋ.

ಸಖಿಶಬ್ದಕ್ಕೆ ವಿಕಲ್ಪವಾಗಿ ಪ್ರಥಮಾ ಬಹುವಚನದ ಹಾಂಗೆ ರೂಪ ಬರುತ್ತದೆ - ಆಗ ಸಖಿಶಬ್ದದ ಇಕಾರಕ್ಕೆ ಆಯ್ ಎಂಬಾದೇಶ ಬರುತ್ತದೆ - ಆ ರೂಪ ಬಾರದಾಗ ಇಕಾರಕ್ಕೆ ಅಕಾರಾದೇಶ ಬರುತ್ತದೆ.

ಸಖಾ - ಸಖಾಯನು - ಸಖನು - ಇತ್ಯಾದಿ.

೨೭ - ಋಕಾರಾಂತಕ್ಕೇನು ಬರುತ್ತದೆ.

ಧಾತೃ - ವಿಧಾತೃ - ಮಾಂಧಾತೃ ಶಬ್ದಗಳನ್ನುಳಿದ ಕಡಮೆ ಋಕಾರಾಂತಗಳಿಗೆಲ್ಲಾ ವಿಕಲ್ಪವಾಗಿ ಸಂಸ್ಕೃತದಲ್ಲಿ ಪ್ರಥಮಾ ಬಹುವಚನದ ಹಾಂಗೆ ರೂಪವ ಮಾಡಿಕೊಂಡು ಅವುಗಳ ಕಡೆಯ ವಿಸರ್ಗಕ್ಕೆ ಲೋಪವ ಮಾಡಿದರೆ - ಕನ್ನಡಕ್ಕೆ ಲಿಂಗವಾಗುತ್ತವೆ - ಇಲ್ಲದ ಪಕ್ಷದಲ್ಲಿ ಆ ಋಕಾರಾಂತವೇ ಲಿಂಗವಾಗುತ್ತದೆ - ಧಾತೃಶಬ್ದದ ಋಕಾರಕ್ಕೆ ಅಕಾರಾದೇಶಸಹಾ ಒಂದು ರೂಪವೂ - ಮಾಂಧಾತೃಶಬ್ದದ ಋಕಾರಕ್ಕೆ ಕಡಮೆ ಒಂದೂ ಇಲ್ಲದೆ ಅಕಾರಾದೇಶ ಮಾತ್ರವೂ - ವಿಧಾತೃಶಬ್ದಕ್ಕೆ ಚತುರ್ಮುಖನ ಅರ್ಥವಾದಾಗ ಋಕಾರಕ್ಕೆ ರ ಶಬ್ದಾದೇಶವೂ - ಒಂದು ವೇಳೆ ಋಕಾರಾಂತವಾಗಿಯೂ ರೂಪ ಸಹ ಬರುತ್ತದೆ.

೨೮ - ಋಕಾರಾಂತಶಬ್ದಗಳಲ್ಲಿ ಯಾವಯಾವವುಗಳಿಗೆ ಪ್ರಥಮಾಬಹುವಚನದಲ್ಲಿ ಹ್ಯಾಂಗೆ ಹ್ಯಾಂಗೆ ರೂಪವಾಗುತ್ತದೆ.

ಪಿತೃಮೊದಲಾದ ಶಬ್ದಗಳನ್ನುಳಿದ ಋಕಾರಾಂತಶಬ್ದಗಳ ಋಕಾರಕ್ಕೆ ಆರಾದೇಶ ಬರುತ್ತದೆ - ಪಿತ್ರಾದಿಶಬ್ದಗಳ ಋಕಾರಕ್ಕೆ ಅರಾದೇಶ ಬರುತ್ತದೆ - ಅಃ ಎಂದು ಸಂಸ್ಕೃತ ಪ್ರಥಮಾಬಹುವಚನ ಪ್ರತ್ಯಯವು.

ಕರ್ತೃ - ಕರ್ತಾರಸು - ಹೋತೃ - ಹೋತಾರಸು - ನೇಷ್ಟೃ - ನೇಷ್ಟಾರಸು - ಸ್ವಸೃ - ಸ್ವಸಾರಸು - ನಪ್ತೃ - ನಪ್ತಾರಸು - ಇತ್ಯಾದಿ.

ಪಿತೃ - ಪಿತರಸು - ಮಾತೃ - ಮಾತರಸು - ಭ್ರಾತೃ - ಭ್ರಾತರಸು - ಇತ್ಯಾದಿ.

ಪಿತೃ - ಮಾತೃ - ಭ್ರಾತೃ - ದುಹಿತೃ - ಶಂಸ್ತೃ - ಯಂತೃ - ಹಂತೃ - ಜಾಮಾತೃ - ಯಾತೃ - ನನಾಂದೃ - ನೃ - ದೇವೃ - ಸವ್ಯೇಷ್ಠೃ ಇತ್ಯಾದಿಗಳು ಪಿತ್ರಾದಿಗಳು - ಊದರೆ ಪಿತೃಶಬ್ದಕ್ಕೆ ಪಿತನೆಂದು ಸಹಾರೂಪವಾಗುತ್ತದೆ - ಮಾತೃಶಬ್ದಕ್ಕೆ - ಮಾತೆಯೆಂದು ಸಹಾರೂಪ ಬರುವದಾಗಿಯೂ ಪ್ರಕರಣದ - ೨೪ನೇ ಸೂತ್ರದಲ್ಲಿ ಹೇಳಲ್ಪಟ್ಟಿತು - ಧಾತಸು - ಮಾಂಧಾತಸು - ವಿಧಾತ್ರಸು.

೨೯ - ವ್ಯಂಜನಾಂತಗಳಿಗೆ ಹ್ಯಾಂಗೆ ರೂಪವಾಗುತ್ತದೆ.

ನಕಾರಾಂತಶಬ್ದಗಳೂ - ಸಕಾರಾಂತಶಬ್ದಗಳೂ - ಅಬಾದಿ - ವಾಗಾದಿ - ಮರುದಾದಿ - ಶಬ್ದಗಳೂ - ಇವುಗಳನ್ನುಳಿದ ವ್ಯಂಜನಾಂತ ಸಂಸ್ಕೃತಶಬ್ದಗಳಿಗೆ ಪುಲ್ಲಿಂಗ ಪ್ರಥಮಾಬಹುವಚನಾಮಾಡಿಕೊಂಡು ಕಡೆಯಲ್ಲಿರುವ ಸಕಾರಕ್ಕೆ ಲೋಪವ ಮಾಡಿದರೆ ಕನ್ನಡದಲ್ಲಿ ಲಿಂಗವಾಗುತ್ತದೆ.

ಗುಣಭಾಜ್ - ಗುಣಭಾಜಸು - ಮರುತ್ - ಮರುತಸು - ಕಕುಭ್ - ಕಕುಭವು - ಇತ್ಯಾದಿ.

೩೦ - ಸಂಸ್ಕೃತವ್ಯಂಜನಾಂ

ಹಿಂದಲ ಸೂತ್ರಗಳಿಂದ ಹೇಳಿದ ದಂಥಾ ಶಬ್ದಗಳಲ್ಲಿ ಅ

ತಗಳಿಗೆ ಪ್ರಥಮಾಬಹುವಚನದಲ್ಲಿ ಪ್ರಕೃತಿವಿಕಾರವುಂಟಾ.

ತ್-ಅಂತವಾದ ಶಬ್ದಗಳ ತಕಾರದ ಹಿಂದೆ ನಕಾರಾಗಮ ಬರುತ್ತದೆ-ಮಹಚ್ಛಬ್ದದ ಉಪಧೆಗೆ ದೀರ್ಘ ಸಹಾ ಬರುತ್ತದೆ.

ಅತ್ - ಬುದ್ಧಿಮತ್ - ಬುದ್ಧಿಮಂತನು - ಗುಣವಂತನು - ಮಹತ್ - ಮಹಾಂತನು - ಇತ್ಯಾದಿ.

೫೩ - ನಕಾರಾಂತಕ್ಕೇನು ಬರುತ್ತದೆ.

ಶ್ವನ್ - ಪಥಿನ್ - ಮಥಿನ್ - ಶಬ್ದಗಳುಳಿದ ನಕಾರಾಂತಗಳ ನಕಾರಕ್ಕೆ ಲೋಪ ಬರುತ್ತದೆ - ಆ ಮೂರು ಶಬ್ದಗಳಿಗೆ ಪ್ರಥಮಾಬಹುವಚನದ ಹಾಂಗೆ ರೂಪ ಬಂದು ಶ್ವಾನವು - ಪಂಥಾನವು ಮಂಥಾನವು - ಎಂದಾಗುತ್ತದೆ.

ರಾಜನ್ - ರಾಜನು - ಮೂರ್ಧನ್ - ಮೂರ್ಧವು - ಕರಿನ್ - ಕರಿಯು - ದಂಡಿನ್ - ದಂಡಿಯು - ಇತ್ಯಾದಿ.

೫೪ - ಇನ್ನಾನಕಾರಾಂತಗಳಲ್ಲಿಯಾವದಕ್ಕಾದರೂ ನಕಾರಲೋಪವೂ ಪ್ರಥಮಾಬಹುವಚನದ ಹಾಂಗೆ ರೂಪವೂ ಬರುತ್ತದೆಯೋ.

ಋಭುಕ್ಷಿನ್ - ಯುವನ್ - ಅಧ್ವನ್ - ಮಘವನ್ - ಈ ನಾಲ್ಕು ಶಬ್ದಗಳಿಗೂ ನಕಾರಲೋಪವೂ - ಅದು ಬಾರದಾಗ - ಪ್ರಥಮಾಬಹುವಚನದ ಹಾಂಗೆ ರೂಪವೂ ಬರುತ್ತದೆ - ಪ್ರಥಮಾಬಹುವಚನದಲ್ಲಿ - ಪ್ರಕೃತಿಯ ಉಪಧೆಗೆ ಆಕಾರಾದೇಶ ಬರುತ್ತದೆ.

ಋಭುಕ್ಷಿಯು - ಋಭುಕ್ಷಾಣನು - ಯುವನು - ಯುವಾನನು - ಅಧ್ವವು - ಅಧ್ವಾನವು - ಮಘವನು - ಮಘವಾನನು ಇತ್ಯಾದಿ.

೫೫ - ಸಕಾರಾಂತಶಬ್ದಗಳಿಗೇನು ಬರುತ್ತದೆ.

ವಸು - ಈಯಸ್ ಪ್ರತ್ಯಯಾಂತಗಳನ್ನುಳಿದ ಸಕಾರಾಂತಗಳ ಸಕಾರಕ್ಕೆ ವಿಕಲ್ಪವಾಗಿ ಲೋಪ ಬರುತ್ತದೆ - ಲೋಪ ಬಾರದಾಗ ಸಕಾರಕ್ಕೆ ದ್ವಿತ್ವವೂ - ಪ್ರಕೃತಿಗೆ ಉಕಾರಾಗಮವೂ ಬರುತ್ತದೆ.

ಪುರೂರವಸ್ - ಪುರೂರವನು - ಪುರೂರವಸ್ಸು - ರಜಸ್ - ರಜವು - ರಜಸ್ಸು - ಅಂಗಿರಸ್ - ಅಂಗಿರನು - ಅಂಗಿರಸ್ಸು ಯಶಸ್ - ಯಶವು - ಯಶಸ್ಸು ಇತ್ಯಾದಿ.

೩೪-ವಸುಪ್ರತ್ಯಯಾಂತಕ್ಕೇನು ಬರುತ್ತದೆ.

ವಸುಪ್ರತ್ಯಯಾಂತಕ್ಕೆ ಪ್ರಥಮಾಬಹುವಚನದ ಹಾಂಗೆ ರೂಪ ಬರುತ್ತದೆ - ಆಗ - ಉಪಧೆಗೆ ದೀರ್ಘವು - ಸಕಾರದ ಹಿಂದಿನ ನಕಾರಾಗಮವೂ ಬರುತ್ತದೆ.

ವಿದ್ವಸ್ - ವಿದ್ವಾಂಸನು - ಪೇಚಿವಸ್ - ಪೇಚಿವಾಂಸನು - ಇತ್ಯಾದಿ.

೩೫-ಈಯಸ್ಪ್ರತ್ಯಯಾಂತಕ್ಕೇನು ಬರುತ್ತದೆ.

ಪ್ರಥಮಾಬಹುವಚನದ ಹಾಂಗೊಂದು ರೂಪ ಬರುತ್ತದೆ ಆಗ ಉಪಧೆಗೆ ದೀರ್ಘವೂ - ಸಕಾರದ ಹಿಂದಿನ ನಕಾರಾಗಮವೂ ಬರುತ್ತದೆ - ಅದು ಬಾರದಾಗ ಸಕಾರಕ್ಕೆ ದ್ವಿತ್ವವೂ - ಉಕಾರಾಗಮವೂ ಬರುತ್ತದೆ - ಅದೂ ಬಾರದಾಗ ಸಕಾರಕ್ಕೆ ಲೋಪ ಬರುತ್ತದೆ.

ಯವೀಯಸ್ - ಯವೀಯಾಂಸನು - ಯವೀಯಸ್ಸು - ಯವೀಯನು - ಜ್ಯಾಯಸ್ - ಜ್ಯಾಯಾಂಸನು - ಜ್ಯಾಯಸ್ಸು - ಜ್ಯಾಯನು ಇತ್ಯಾದಿ.

೩೬-ಅಬಾದಿಶಬ್ದಗಳಿಗೇನು ಬರುತ್ತದೆ.

ಅಪ್ ಮೊದಲಾದ ಶಬ್ದಗಳಿಗೆ ಉಕಾರಾಗಮ ಬರುತ್ತದೆ - ಆಗ ಆ ಶಬ್ದಗಳ ಕಡೆಯ ವ್ಯಂಜನಕ್ಕೆ ದ್ವಿತ್ವ ಬರುತ್ತದೆ.

ಅಪ್ - ಅಪ್ಪು - ವಿಯತ್ - ವಿಯತ್ತು - ಇತ್ಯಾದಿ.

ಅಪ್ - ವಿಯತ್ - ಸಂಯತ್ - ವಿದ್ಯುತ್ - ಪುರೀತತ್ - ಅಗ್ನಿಚಿತ್ - ಇಂದ್ರಜಿತ್ - ತಟಿತ್ - ಜಗತ್ - ಇತ್ಯಾದಿಗಳು ಅಬಾದಿಗಳು - ಜಗಚ್ಛಬ್ದದ ತಕಾರಕ್ಕೊಂದು ವೇಳೆ ಲೋಪವ ಮಾಡಿ ಜಗವೆಂದು ಸಹಾ ಹೇಳುವದುಂಟು.

೩೭ - ವಾಗಾದಿಗಳಿಗೇನು ಬರುತ್ತದೆ.

ವಾಗಾದಿಗಳಿಗೆ ಉಕಾರಾಗಮವೂ - ಆ ಶಬ್ದಗಳ ಕಡೆಯ ವ್ಯಂಜನಕ್ಕೆ ದ್ವಿತ್ವವೂ ಬರುತ್ತದೆ.

ಮಾತ್ರ - ಈ ಗಣಾಪಠಿತ ಶಬ್ದಗಳ ಕಡೆಯ ವ್ಯಂಜನವು ವರ್ಗಪಂಚಮವುಳಿದ ವರ್ಗಾಕ್ಷರವಾಗಿದ್ದರೆ - ವರ್ಗಪ್ರಥಮಾದೇಶ ಬರುತ್ತದೆ - ಅದು ಚವರ್ಗವಾಗಿದ್ದರೆ ಕಕಾರ ಬ

ಹುತ್ತದೆ - ಇಷ್ವಾದಿಶಾದಿಶಬ್ದಗಳ ಶಕಾರ ಹಕಾರಗಳಿಗೆ ಕಕಾರವೂ - ವಿಶಾದಿಶಬ್ದಗಳ ಶಕಾರ ಹಕಾರಗಳಿಗೆ ಟಕಾರವೂ ಬರುತ್ತದೆ.

ವಾಚ್ - ವಾಕ್ಕು - ದಿಶ್ - ದಿಕ್ಕು - ಉಷ್ಣಿಹ್ - ಉಷ್ಣಿಕ್ಕು - ವಿಶ್ - ವಿಟ್ಟು ಅಂಬುರುಹ್ - ಅಂಬುರುಟ್ಟು - ಇತ್ಯಾದಿ.

ವಾಚ್ - ತ್ವಚ್ - ಋಚ್ - ದಿಶ್ - ಉಷ್ಣಿಹ್ - ಇತ್ಯಾದಿಗಳಿಗೆ ಕಕಾರ - ವಿಶ್ - ಅಂಬುರುಹ್ - ಇತ್ಯಾದಿಗಳಿಗೆ ಟಕಾರ - ಕ್ಷುಧ್ - ಸಮಿಧ್ - ವೀರುಧ್ - ಸಂಪದ್ - ವಿಪದ್ - ಪ್ರತಿಪದ್ - ಪರಿಷದ್ - ಇತ್ಯಾದಿಗಳಿಗೆ ವರ್ಗಪ್ರಥಮಾದೇಶ ಬರುತ್ತದೆ - ಇತ್ಯಾದಿ ವಾಗಾದಿಗಳನ್ನು - ಪ್ರಯೋಗದಮೇಲೆ ಕಂಡುಕೊಳ್ಳುವದು - ಕೆಲವರು ಈ ಗಣಾಪಠಿತವಾದ ವಾಕ್ಯಬ್ದವನುಳ್ಳದ ಶಬ್ದಗಳಿಗೆ ಪ್ರಥಮಾಬಹುವಚನಾಂತದ ಹಾಂಗಿಸಹ ಒಂದು ರೂಪವ ಹೇಳಿದರು - ಹಾಂಗೆ ಶಬ್ದಾನುಶಾಸನದಲ್ಲಿ ಹೇಳದ್ದರಿಂದ ಇಲ್ಲಿ ಬರೆಯಲಿಲ್ಲವು.

೩೮೦ - ಮಹದಾದಿಶಬ್ದಗಳಿಗೇನು ಬರುತ್ತದೆ.

ಅವು ಲಿಂಗತ್ರಯವಾಚಕವಾಗಿಯಿರುವದ್ದರಿಂದ - ನಪುಂಸಕವ ಹೇಳುವಾಗ ಮಾತ್ರ - ಉಕಾರಾಗಮಪೂರ್ವಕದೇ ವ್ಯಂಜನಕ್ಕೆ ದ್ವಿತ್ವವು ಬರುತ್ತದೆ - ಚಕಾರವಾಗಿದ್ದರೆ ಕಕಾರಸಹಾ ಬರುತ್ತದೆ.

ಮಹತ್ - ಮಹತ್ತು - ಪ್ರಾಚ್ - ಪ್ರಾಕ್ಕು - ಇತ್ಯಾದಿ.

ಮಹತ್ - ಬೃಹತ್ - ಪ್ರಾಚ್ - ಅವಾಚ್ - ಪ್ರತ್ಯಚ್ - ಉದಚ್ - ತಿರ್ಯಚ್ - ಸಮ್ಯಚ್ - ಇತ್ಯಾದಿಗಳು ಮಹದಾದಿಗಳು.

೩೮೧ - ಮಹದಾದಿಶಬ್ದಗಳು ತ್ರಿಲಿಂಗಸಾಧಾರಣವಾದ್ದರಿಂದ ಸ್ತ್ರೀಲಿಂಗದಲ್ಲೇನು ಬರುತ್ತದೆ.

ಮಹದಾದಿಶಬ್ದಗಳು ಸ್ತ್ರೀಯ ಹೇಳುವಾಗ ಅವುಗಳಿಗೆ ಈಕಾರ ಪ್ರತ್ಯಯ ಬರುತ್ತದೆ - ಆದರೆ ಕೆಲವು ಶಬ್ದಗಳ ಪ್ರಕೃತಿಗೆ ಉದಾಹರಣದಲ್ಲಿ ತೋರಿಸುವ ವಿಕಾರಸಹ ಬರುತ್ತದೆ ಈಕಾರಕ್ಕೆ ಯೀ ಪ್ರಕರಣದ - ೨೧ನೇ ಸೂತ್ರ ಪ್ರಕಾರ ಹ್ರಸ್ವಸಹ ಬರುತ್ತದೆ.

ಮಹತಿ - ಬೃಹತಿ - ಪ್ರಾಚೀ - ಅವಾಚೀ - ಪ್ರತೀಚೀ - ಉದೀಚೀ - ತಿರಶ್ಚೀ - ಸಮೀಚೀ - ಇತ್ಯಾದಿಗಳು.

೪೦ - ಇದು ಹೊರ್ತು ದ್ವಿಲಿಂಗವಾಗಿಯೂ - ತ್ರಿಲಿಂಗವಾಗಿಯೂ - ಇರುವ ಸಂಸ್ಕೃತಶಬ್ದಗಳು ಸ್ತ್ರೀಯಹೇಳುವಾಗವುಗಳಿಗೇನು ಬರುತ್ತದೆ.

ಗೌರಾದಿಶಬ್ದಗಳನ್ನುಳಿದ ಅಕಾರಾಂತಗಳು ಸ್ತ್ರೀಯಹೇಳುವಾಗ ಆಕಾರ ಪ್ರತ್ಯಯ ಬಂದು ಅವುಗಳಿಗೆ - ಯಾಪ್ರಕರಣದ - ೨೧ನೆಯ ಸೂತ್ರಪ್ರಕಾರ - ಏಕಾರಾದೇಶಸಹ ಬರುತ್ತದೆ - ಗೌರಾದಿಗಳಿಗೆ ಈಕಾರ ಪ್ರತ್ಯಯ ಬರುತ್ತದೆ.

ಕೃತ - ಕೃತೆ - ಜಾತ - ಜಾತೆ - ಇತ್ಯಾದಿ.

ಗೌರ - ಗೌರಿ - ಮತ್ಸ್ಯ ಮತ್ಸ್ಯಿ - ಇತ್ಯಾದಿ.

ಗೌರ - ಮತ್ಸ್ಯ - ಮನುಷ್ಯ - ಪಿಂಗಲ - ಹಯ - ಗವಯ ಹರಿಣ - ನಟ - ಸುಂದರ - ಮಾತಾಮಹ - ಪಿತಾಮಹ - ಕುಮಾರ ಕಿಶೋರ - ಇತ್ಯಾದಿಗಳು ಗೌರಾದಿಗಳು.

೪೧ - ಇನ್ನು ಯಾವ ಅಕಾರಾಂತಕ್ಕಾದರೂ ಈಕಾರ ಬರುತ್ತದೆಯೋ.

ಅಕಾರಾಂತವಾದ ಜಾತಿವಾಚಕ ಶಬ್ದಗಳು - ಆ ಜಾತಿಸ್ತ್ರೀಯಹೇಳದಕೆ - ಅವುಗಳಿಗೆ - ಈಕಾರ ಪ್ರತ್ಯಯ ಬರುತ್ತದೆ ಆದರೆ ಅಜಾದಿಶಬ್ದಗಳಿಗೆ ಮಾತ್ರ ಬರುವದಿಲ್ಲವು - ಇವುಗಳಿಗೆ ಆಕಾರ ಪ್ರತ್ಯಯವೇ ಬರುತ್ತದೆ.

ಬ್ರಾಹ್ಮಣ - ಬ್ರಾಹ್ಮಣಿ - ಮೃಗ - ಮೃಗಿ - ವ್ಯಾಘ್ರ - ವ್ಯಾಘ್ರಿ - ಇತ್ಯಾದಿ.

ಅಜ - ಅಜೆ - ಏಡಕ - ಏಡಕಿ - ಇತ್ಯಾದಿ - ಅಜ - ಏಡಕ - ಕೋಕಿಲ - ಚಟಕ - ಅಶ್ವ - ಮೂಷಕ - ಬಾಲ - ಹೋಡ - ಪಾಕ - ವತ್ಸ ಮಂದಾ - ಇತ್ಯಾದಿಗಳು ಅಜಾದಿಗಳು.

೪೨ - ಯಾವ ಸಮಾಸದಲ್ಲಿಯಾದರೂ ಅಕಾರಾಂತಕ್ಕೆ ಈಕಾರ ಬರುತ್ತದೆಯೋ.

ಕ್ರೋಡಾದಿಗಳನ್ನುಳಿದ ಸಂಯೋಗೋಪಧವಲ್ಲದ ದೇಹಾವಯವವಾಚಕವು ಬಹುವ್ರೀಹಿಯಲ್ಲಿಯಾಗಲಿ ತತ್ಪುರುಷನಲ್ಲಿಯಾಗಲಿ ಉಪಸರ್ಜನವಾಗಿದ್ದು - ಅದನ್ನಂತವಾಗುಳ್ಳ ಎರಡಕ್ಷರಕ್ಕಧಿಕವಿಲ್ಲದ ಅಕಾರಾಂತಶಬ್ದಗಳಿಗೆ ಈಕಾರ ವಿಕಲ್ಪವಾಗಿ

ಬರುತ್ತದೆ - ನಾಸಿಕಾದಿಶಬ್ದಾಂತಗಳಿಗೂ ವಿಕಲ್ಪವಾಗೀಕಾರ ಪ್ರತ್ಯಯ ಬರುತ್ತದೆ - ನಾಸಿಕಾದಿಶಬ್ದಗಳಲ್ಲಿ ಕೆಲವು ಯೆರಡಕ್ಷರಕ್ಕಿಂತ ಅಧಿಕವಾದ್ದರಿಂದಲೂ ಕೆಲವು ಸಂಯೋಗೋಪಧವಾದ್ದರಿಂದಲೂ ಬೇರೆಹೇಳಲ್ಪಟ್ಟಿರು.

ಚಂದ್ರಮುಖಿ - ಚಂದ್ರಮುಖೀ - ಅತಿಕೇಶಿ - ಅತಿಕೇಶೀ ಇತ್ಯಾದಿ.

ನಾಸಿಕಾ - ಉದರ - ಓಷ್ಠ - ಜಂಘಾ - ದಂತ - ಕರ್ಣ - ಶೃಂಗ ಅಂಗ - ಗಾತ್ರ - ಕಂಠ - ಪುಚ್ಛ - ಇತ್ಯಾದಿಗಳು ನಾಸಿಕಾದಿಗಳು.

೪೩ - ಈಕಾರ ಪ್ರತ್ಯಯದಿಂದ ವಿಶೇಷಾರ್ಥ ತೋರುತ್ತದೆಯೋ.

ಪುರುಷವಾಚಕವಾದ ಅಕಾರಾಂತ ಶಬ್ದಗಳ ಮೇಲೆ - ಈಕಾರ ಪ್ರತ್ಯಯವ ಮಾಡಿದರೆ ಅವನ ಸ್ತ್ರೀಯೆಂಬರ್ಥವನ್ನು ತೋರುತ್ತದೆ.

ಗೋಪನಸ್ತ್ರೀ - ಗೋಪೀ - ಇತ್ಯಾದಿ.

೪೪ - ಇಕಾರೋಕಾರಾಂತಗಳಿಗೀಕಾರ ಪ್ರತ್ಯಯವುಂಟಾ.

ಮನುಷ್ಯಜಾತಿಯನ್ನು ಹೇಳುವ ಇಕಾರಾಂತ ಶಬ್ದಗಳಿಗೆ ಈಕಾರ ಪ್ರತ್ಯಯ ಬರುತ್ತದೆ - ಉಕಾರಾಂತವಾದ ಗುಣವಾಚಕಗಳಿಗೆ ವಿಕಲ್ಪವಾಗೀಕಾರ ಪ್ರತ್ಯಯ ಬರುತ್ತದೆ.

ದ್ರಾಕ್ಷಿ - ಮೃದ್ವೀ - ಮೃದು - ಇತ್ಯಾದಿ.

೪೫ - ಋಕಾರಾಂತಕ್ಕೀಮ ಬರುತ್ತದೆ.

ಋಕಾರಾಂತಕ್ಕೀಕಾರ ಪ್ರತ್ಯಯ ಬರುತ್ತದೆ.

ಕರ್ತ್ರೀ - ಕ್ರೋಷ್ಟ್ರೀ - ಧಾತ್ರೀ - ಇತ್ಯಾದಿ.

೪೬ - ವ್ಯಂಜನಾಂತಗಳಲ್ಲಿಯಾವದಕ್ಕಾದರೂ ಈಕಾರ ಪ್ರತ್ಯಯ ಬರುತ್ತದೆಯೋ.

ಯುವನ್ ಶಬ್ದವನ್ನುಳಿದ ನಕಾರಾಂತಗಳಿಗೂ - ಮತ್ತೂ - ಈಯಸ್ ಪ್ರತ್ಯಯಾಂತಗಳಿಗೂ - ಈಕಾರ ಪ್ರತ್ಯಯ ಬರುತ್ತದೆ ಯುವನ್ ಶಬ್ದ ಯುವತಿಯೆಂದಾಗುತ್ತದೆ.

ದಂಡಿನ್ - ದಂಡಿನಿ - ಹಸ್ತಿನ್ - ಹಸ್ತಿನಿ - ಬುದ್ಧಿಮತ್ - ಬುದ್ಧಿಮತಿ ಕನೀಯಸಿ ಇತ್ಯಾದಿ.

ಶ್ವನ್ ಶಬ್ದವು ಶುನಿಯೆಂದಾಗುತ್ತದೆ.

೪೭ - ಇದಲ್ಲದೆ ಸ್ತ್ರೀಪ್ರತ್ಯಯದಲ್ಲಿನ್ನೇನಾದರೂ ವಿಶೇಷವುಂಟೋ.

ಇನ್ನೂ ಬಹಳ ವಿಶೇಷಗಳು ವಿಷಯದಲ್ಲುಂಟು - ಆದರೆ ಅವುಗಳೆಲ್ಲಾ ಸಂಸ್ಕೃತ ವ್ಯಾಕರಣಾವಿಶಿಷ್ಟ ತಿಳಿಯದೆ ಅವಗಾಹನವಾಗದಾದ್ದರಿಂದಲೂ - ಕೆಲವು ವಿಶೇಷಗಳು ಅಮರಕೋಶ ಮೊದಲಾದ ನಿಘಂಟುಗಳಲ್ಲಿ ಸ್ಪಷ್ಟವಾಗಿ ಹೇಳಿರುವದ್ದರಿಂದಲೂ ಏಕಲಿಂಗಕ ಶಬ್ದಗಳಿಗೆ ಹೇಳಿರುವ ವಿಧಿಗಳೂ ನಿಘಂಟುವಿನಿಂದ ತಿಳಿಯುವದ್ದರಿಂದಲೂ ನಿಘಂಟುಗಳಿಂದ ತಿಳಿಯುಕ್ಕಾಗಕೂಡದವುಗಳು ಮಾತ್ರ ಇಲ್ಲಿ ಬರೆಯಲ್ಪಟ್ಟಿವೆ.

೪೮ - ದ್ರಮಿಡ ಶಬ್ದಗಳು ಕನ್ನಡದಲ್ಲಿ ಬರುವಾಗ ಏನಾದರೂ ಆಗಮಾದೇಶಗಳುಂಟೋ.

ಐಕಾರವನ್ನುಳಿದ ಕಡೆಯ ಸ್ವರಾಂತಗಳು ದ್ರಮಿಡ ಭಾಷೆಯಲ್ಲಿ ಯಾವಂತವಾಗಿರುತ್ತವೆಯೋ ಅಂತವಾಗಿಯೇ ಕನ್ನಡದಲ್ಲಿಯೂ ಇರುತ್ತವೆ - ಐಕಾರಾಂತಗಳಿಗೆ ಮಾತ್ರ - ಎಕಾರಾದೇಶ ಬರುತ್ತದೆ.

ಮನೈ - ಮನೆ - ಕೊಡೈ - ಕೊಡೆ - ಆನೈ - ಆನೆ - ಕುದಿರೈ ಕುದಿರೆ - ಇತ್ಯಾದಿ.

೪೯ - ದ್ರಮಿಡ ವ್ಯಂಜನಾಂತಗಳಿಗೇನು ಬರುತ್ತದೆ.

ದ್ರಮಿಡ ಶಬ್ದಗಳು - ಞ - ಣ - ನ - ಮ - ನ಼ - ಯ - ರ - ಲ - ವ - ಳ - ೞ - ಈ ಹನ್ನೊಂದು ವ್ಯಂಜನಾಂತಗಳಾಗಿರುತ್ತವೆ.

ಇವುಗಳಲ್ಲಿ - ಞ ನ ವಕಾರಾಂತಗಳಿಗೆ ಕನ್ನಡದಲ್ಲಿ ಪ್ರಯೋಗವಿಲ್ಲ - ಮಕಾರಾಂತದ ಕಡೆಯ ಮಕಾರಕ್ಕೆ ಕನ್ನಡದಲ್ಲಿ ಲೋಪ ಬರುತ್ತದೆ - ನ಼ಕಾರಾಂತದ ಕಡೆಯ ನ಼ಕಾರಕ್ಕೆ ನಕಾರಾದೇಶವೂ - ೞಕಾರಕ್ಕೆ ಳಕಾರಾದೇಶವೂ ಬರುತ್ತದೆ - ಆದೇಶಗಳನ್ನು ಹೊಂದಿದ ನ಼ - ೞಕಾರಾಂತಗಳೂ - ಮತ್ತೂ - ರ - ಣ - ಳ - ಯ - ಲ - ಈ ಐದು ವರ್ಣಾಂತಗಳೂ - ಒಂದಾಗಮವನ್ನೂ ಹೊಂದದೆ - ಹಳಗನ್ನಡದಲ್ಲಿ ಪ್ರಯೋಗಿಸಲ್ಪಡುತ್ತವೆ ಅವು ಹೊಸಗನ್ನಡದಲ್ಲಿ ಬರುವಾಗ ಅವುಗಳಿಗೆ - ಉಕಾರಾಗಮ ಬರುತ್ತದೆ - ೞಕಾರಕ್ಕೆ ಬಂದ - ಳಿ ಕೆಲವು ಕಡೆಯಲ್ಲಿ ಶೇಷವಾಗಿ

ಯೂ - ಕೆಲವು ಕಡೆಯಲ್ಲಿ ಳಕಾರವಾಗಿಯೂ - ಪ್ರಯೋಗಿಸಲ್ಪಡುತ್ತದೆ.

ಏಕಲಘ್ವಕ್ಷರ ಪೂರ್ವಕವಾದ-ಣ-ನ-ಯ-ಲ-ಳ-ಇವುಗಳಿಗೆ-ಉಕಾರಾಗಮ ಪರವಾದರೆ-೨ನೆಯ ಪ್ರಕರಣದ-೬-ನೆಯ ಸೂತ್ರದಲ್ಲಿ ಹೇಳಿದ ಪ್ರಕಾರ-ಆ ವರ್ಣಗಳಿಗೆ ದ್ವಿತ್ವ ಬರುತ್ತದೆ-ಮೇಲೆ ಹೇಳಿದ ಅಯಿದು ವ್ಯಂಜನಗಳೂ-ದೀರ್ಘಾಕ್ಷರ ಪೂರ್ವಕವಾಗಿದ್ದರೂ-ಅನೇಕಾಕ್ಷರ ಪೂರ್ವಕವಾಗಿದ್ದರೂ ಉಕಾರಾಗಮ ಮಾತ್ರ ಬರುತ್ತದೆಯೇ ಹೊರ್ತು ದ್ವಿತ್ವ ಬರುವದಿಲ್ಲವು.

ದ್ರ - மண் - காண் - மரம் - தின் - ஈன்.
ಹ - ಮಣ್ - ಕಾಣ್ - ಮರ - ತಿನ್ - ಈನ್.
ಹೊ - ಮಣ್ಣು - ಕಾಣು - ಮರ - ತಿನ್ನು - ಈನು.

ದ್ರ கய் - தாய் - ஊர் - கல் - கால் - ஆள் - தாழ் - முள்.
ಹ ಕಯ್ - ತಾಯ್ - ಊರ್ - ಕಲ್ - ಕಾಲ್ - ಆಳ್ - ತಾೞ್ - ಮುಳ್.
ಹೊ ಕಯ್ಯು - ತಾಯು - ಊರು - ಕಲ್ಲು - ಕಾಲು - ಆಳು - ತಾೞು - ಮುಳ್ಳು.

ಇತ್ಯಾದಿ - ಇವುಗಳಿಗೆ ಬೇಕಾದಷ್ಟು ದಾಹರಣೆಗಳು ಶಬ್ದಮಂಜರಿ - ಧಾತುಮಂಜರಿಗಳಲ್ಲಿ ದೊರಕುವವು.

೫೦ - ಯಕಾರಕ್ಕೆ ಮತ್ತೇನಾದರೂ ಆಗಮ ಬರುತ್ತದೆಯೋ.

ಯಕಾರಕ್ಕೆ-ಉಕಾರ ಹೊರತು ಮತ್ತೇನು ಆಗಮವೂ ಬರುವದಿಲ್ಲ - ಯಕಾರ ತಾಲವ್ಯವಾದ್ದರಿಂದ ಹಳಗನ್ನಡದಲ್ಲಿ ಯಕಾರಾಂತ ಶಬ್ದಗಳು ಕಿವಿಗೆ ತಾಲವ್ಯವಾದ ಇಕಾರಾಂತದ ಹಾಂಗೆ ಕೇಳ ಬರುತ್ತದೆ - ಅದರಿಂದ ಪ್ರಥಮೈಕವಚನದಲ್ಲಿ ಇಕಾರಾಂತವಾಗಿ ಬರೆಯುತ್ತಾರೆಯೇ ಹೊರ್ತು ಇಕಾರಾಗಮ ಬರುವದಿಲ್ಲ - ಷಷ್ಠ್ಯಾದಿ ವಿಭಕ್ತಿಗಳಲ್ಲಿ ತಾಯ - ತಾಯಿನ - ಎಂದು ರೂಪವಡೆಯೇ ಹೊರ್ತು - ತಾಯಿಯ ಎಂದು ರೂಪವಿಲ್ಲದ್ದರಿಂದಲೂ ಈ ಮೇರೆಗೆ ಹೇಳಬೇಕಾಯಿತು.

೭.೧ - ಸಂಸ್ಕೃತ ದ್ರಮಿಡ ಶಬ್ದಗಳನ್ನೆಲ್ಲಾ ಕನ್ನಡದಲ್ಲಿ ತತ್ಸಮವಾಗಿ ಹೇಳಬಹುದೋ.

ಸಂಸ್ಕೃತ ಶಬ್ದಗಳನ್ನು ತತ್ಸಮವಾಗಿಯೂ ಹೇಳಬಹುದು ಅವುಗಳನ್ನು ತದ್ಭವವಾಗಿಯೂ ಹೇಳಬಹುದು - ಆದ್ದರಿಂದ ಪ್ರಯೋಗಿಸುವವರ ಇಷ್ಟಾನುಸಾರವಾಗಿ ಪ್ರಯೋಗಿಸಬಹುದು ದ್ರಮಿಡ ಶಬ್ದಗಳಲ್ಲಿ ಕೆಲವ ತತ್ಸಮವಾಗಿಯೇ ಹೇಳಬೇಕು - ಕೆಲವನ್ನು ತದ್ಭವವಾಗಿಯೇ ಹೇಳಬೇಕು - ಅವುಗಳ ವಿವರವು ಧಾತುಶಬ್ದಮಂಜರಿಗಳಲ್ಲಿ ಹೇಳಲ್ಪಡುತ್ತದೆ.

೭.೨ - ತತ್ಸಮ ಶಬ್ದಗಳೆರಡಕ್ಕೆ ಸಮಾಸವಮಾಡಿದರೆ ಅವೆರಡಕ್ಕೂ ತತ್ಸಮ ವಿಧಿಗಳು ಬರುತ್ತವೆಯೋ.

ದ್ರಮಿಡ ಸಮಶಬ್ದಗಳೆರಡಕ್ಕೂ - ಅವುಗಳಿಗೆ ಹೇಳಿದ ವಿಧಿಗಳು ಬರುತ್ತವೆ - ಸಂಸ್ಕೃತ ಸಮಗಳಲ್ಲಿ ಸಮಾಸದ ಕಡೆಯಲ್ಲಿರುವ ಒಂದು ಶಬ್ದಕ್ಕೆ ಮಾತ್ರವೇ ಅವುಗಳಿಗೆ ಹೇಳಿದ ವಿಧಿಗಳು ಬರುತ್ತವೆ - ಕಡಮೆಯೆಲ್ಲಾ - ಸಂಸ್ಕೃತದ ಹಾಂಗೇ ಬರುತ್ತದೆ.

೭.೩ - ಅನ್ಯದೇಶ್ಯ ಶಬ್ದಗಳಿಗೇನು ಬರುತ್ತದೆ.

ಆ - ಈ - ಊ - ಇವುಗಳನ್ನುಳಿದ ಕಡಮೆ ಸ್ವರಾಂತಗಳಿಗೇನೊಂದಾಗಮವೂ ಬರುವದಿಲ್ಲವು - ಆಕಾರಾಂತದ ಕಡೆಯಾಕಾರಕ್ಕೆ ಎಕಾರವೂ - ಈಕಾರಾಂತ - ಊಕಾರಾಂತಗಳ ಕಡೆಯ ಈಕಾರ - ಊಕಾರಗಳಿಗೆ ಹ್ರಸ್ವವೂ ಬರುತ್ತದೆ - ಸಮಸ್ತವ್ಯಂಜನಾಂತಗಳಿಗೂ ಉಕಾರಾಗಮ ಬರುತ್ತದೆ - ಉಕಾರಾಗಮ ಬಂದಾಗ ಹ್ರಸ್ವೈಕಾಕ್ಷರ ಪೂರ್ವಕವಾದಂತ್ಯವ್ಯಂಜನಕ್ಕೆ ದ್ವಿತ್ವ ಬರುತ್ತದೆ ಅನೇಕಾಕ್ಷರ ಪೂರ್ವಕವಾದಾಗ್ಯೂ ವರ್ಗಪಂಚಮವುಳಿದ ವರ್ಗಾಕ್ಷರಗಳು ಹ್ರಸ್ವಪೂರ್ವವಾಗಿದ್ದರೆ ದ್ವಿತ್ವ ಬರುತ್ತದೆ - ಕಡಮೆ ವ್ಯಂಜನಗಳಿಗೆ ಉಕಾರಾಗಮ ಮಾತ್ರ ಬರುತ್ತದೆ - ದ್ವಿತ್ವ ಬರುವದಿಲ್ಲವು.

ಫರವಾನಾ - ಫರವಾನೆ - ಚಾಕರೀ - ಚಾಕರಿ - ಷಾಲೂ - ಷಾಲು ಸಲಾಮ್ - ಸಲಾಮು - ದವಲತ್ - ದವಲತ್ತು - ಖುಲ್ - ಖುಲ್ಲು ಇತ್ಯಾದಿ.

೭.೪ - ಮೇಲೆ ಹೇಳಿದ ವಿಧಿ

ಇಂಗ್ಲೀಷು ಭಾಷೆಗೂ - ಇನ್ನ್ಯಾವ ದ್ವೀಪಾಂತರ ಭಾಷೆ

ಇಂಗ್ಲೀಷು ಭಾಷೆಗೆಸೂದಾ ಉಪಯೋಗಿಸುತ್ತದೆಯೊ.

ಯನ್ನಾಗಲಿ ಕನ್ನಡದಲ್ಲಿ ಪ್ರಯೋಗಿಸಬೇಕಾದರೆ ಅವುಗಳಿಗೂ ಮೇಲೆ ಹೇಳಿದ ವಿಧಿಯು ಪಯೋಗಿಸುತ್ತದೆ.

೭೭. ಆಂಧ್ರ ಶಬ್ದಗಳ ಕನ್ನಡದಲ್ಲಿ ಪ್ರಯೋಗಿಸಬೇಕಾದರೇನು ವಿಕಾರ ಬರುತ್ತದೆ.

ಆಂಧ್ರದ ಮಶಬ್ದವಂತ್ಯದಲ್ಲಿ ಬರದಂಥಾ ಸ್ತ್ರೀಸಮವೆಂಬ ಶಬ್ದಗಳ ಕನ್ನಡದಲ್ಲಿ ಪ್ರಯೋಗಿಸುವಾಗ ಆ ಅಕಾರಕ್ಕೆ ಏಕಾರಾದೇಶ ಬರುತ್ತದೆ- ಮಶಬ್ದಾಂತಗಳ ಮಶಬ್ದಕ್ಕೆ ಲೋಪ ಬರುತ್ತದೆ- ಕಡಮೆಯೆಲ್ಲಾ ಆಂಧ್ರದಲ್ಲಿ ಯಾವ ಮೇರೆಗೆ ಪ್ರಯೋಗಿಸಲ್ಪಡುತ್ತದೆಯೊ ಆ ಮೇರೆಗೆಯೂ ಕನ್ನಡ ಭಾಷೆಯಲ್ಲಾ ಪ್ರಯೋಗಿಸಲ್ಪಡುತ್ತವೆ.

ಇಂತು - ಏಳನೆಯ ತತ್ಸಮ ಪ್ರಕರಣ ಮುಗಿಯಿತು.

ಎಂಟನೆಯ ತದ್ಭವ ಪ್ರಕರಣವು.

ಪ್ರಶ್ನೆ.	ಉತ್ತರವು.
೧ - ತದ್ಭವ ಪ್ರಕರಣದಲ್ಲೇನು ಹೇಳಲ್ಪಡುತ್ತದೆ.	ಸಂಸ್ಕೃತ ಶಬ್ದಗಳಾಗಲಿ - ದ್ರಮಿಡ ಶಬ್ದಗಳಾಗಲಿ - ಹಳಗನ್ನಡಕ್ಕೆ ಬರುವಾಗಲೂ - ಹೊಸಗನ್ನಡಕ್ಕೆ ಬರುವಾಗಲೂ ಯಾವ ಯಾವ ವರ್ಣಕ್ಕೆ ಏನೇನು ವಿಕಾರಗಳು ಬರುತ್ತವೆಯೊ ಅವುಗಳು ಈ ಪ್ರಕರಣದಲ್ಲಿ ಹೇಳಲ್ಪಡುತ್ತವೆ - ಸಮಸ್ತವಾದ ಕನ್ನಡ ಶಬ್ದಗಳೂ - ಈ ಎರಡು ಭಾಷೆಯಿಂದಲೇ ಬಂದದ್ದಾದ್ದರಿಂದ ವಿಶೇಷಕ್ಕೂ - ಈ ಗ್ರಂಥದಲ್ಲಿ ಹೇಳಿದರೆ ಗ್ರಂಥ ವಿಸ್ತಾರವಾಗುತ್ತದೆಯಾದ್ದರಿಂದ ಉದಾಹರಿಯ ಮಾತ್ರವಿಲ್ಲಿ ತೋರಿಸಿ ಚನ್ನಾಗಿ ಶಬ್ದಮಂಜರಿ ಧಾತುಮಂಜರಿಗಳಲ್ಲಿ ವಿವರಿಸಲ್ಪಡುತ್ತದೆ.
೨ - ತದ್ಭವವೆಂಬ ಹೆಸರು ಹ್ಯಾಗೆ ಹುಟ್ಟಿತು.	ತತ್ - ಎಂದರೆ ಪ್ರಸಿದ್ಧವಾಗಿಯೂ ಉದ್ದಿಷ್ಟವಾಗಿಯೂ ಇರುವ ಸಂಸ್ಕೃತ ದ್ರಾಮಿಡಗಳಿಗೆ ಅರ್ಥವ ಮಾಡಿಕ್ಕೊಂಡು ಭವವೆಂದರೆ ಹುಟ್ಟಿದ್ದು ಅವುಗಳಿಗಿಲ್ಲಿ ವಿಕಾರ ಬಂದಿರುವದ್ದರಿಂದ ತದ್ಭವವೆಂದು ಹೆಸರಾಯಿತು.
೩ - ಯಾವ ಯಾವ ವರ್ಣಕ್ಕೆ ಯಾವ ಯಾವ ವರ್ಣವಾದೇಶವಾಗಿ ಬರುತ್ತದೆ.	ಶಕಾರ - ಷಕಾರಗಳಿಗೆ - ಸಕಾರವೂ - ಲಕಾರಕ್ಕೆ ಳಕಾರವೂ - ಡಕಾರಕ್ಕೆ ಳಕಾರವೂ - ಯಕಾರಕ್ಕೆ ಜಕಾರವೂ - ವರ್ಗದ್ವಿತೀಯಕ್ಕೆ ವರ್ಗಪ್ರಥಮವೂ - ವರ್ಗಪ್ರಥಮ ವರ್ಗಚತುರ್ಥಗಳಿಗೆ ವರ್ಗತೃತೀಯವೂ - ಬಕಾರ ಮಕಾರಗಳಿಗೆ ವಕಾರವೂ ಪಕಾರಕ್ಕೆ ಕೆಲವು ಕಡೆಯಲ್ಲಿ ಹಕಾರವೂ - ಕೆಲವು ಕಡೆಯಲ್ಲಿ ವಕಾರವೂ - ವಕಾರಕ್ಕೆ ಬಕಾರವೂ - ಫಕಾರಕ್ಕೆ ಹಕಾರವೂ ಪ್ರಯೋಗಾನುಸಾರವಾಗಿ ಬರುತ್ತದೆ.

ಶಕಾರಕ್ಕೆ - ಸಕಾರ.

ಶಶಿ - ಸಸಿ - ಶಿಶು - ಸಿಸು - ಶಂಕೆ - ಸಂಕೆ - ಸಂಶಯ - ಸಂಸಯ - ಶಂಬರ - ಸಂಬರ - ಇತ್ಯಾದಿ.

ಷಕಾರಕ್ಕೆ ಸಕಾರ.

ವೇಷ - ವೇಸ - ದೋಷ - ದೋಸ - ಕೋಷ - ಕೋಸ - ದೂಷಣಾ ದೂಸಣಾ - ಅನಿಮಿಷ - ಅನಿಮಿಸ - ಕಷಾಯ - ಕಸಾಯ - ಇತ್ಯಾದಿ.

ಲಕಾರಕ್ಕೆ ಳಕಾರ.

ಜಲ - ಜಳ - ಕುಲ - ಕುಳ - ಶಿಲ - ಶಿಳ - ಅಲಿ - ಅಳಿ - ಸಲಿಲ - ಸಳಿಳ - ಇತ್ಯಾದಿ.

ಡಕಾರಕ್ಕೆ ಳಕಾರ.

ಗುಡ - ಗುಳ - ವಿಡಂಗ - ವಿಳಂಗ - ಗಾಡಿ - ಗಾಳಿ - ನಾಡಿ ನಾಳಿಇತ್ಯಾದಿ.

ಯಕಾರಕ್ಕೆ ಜಕಾರ.

ಯೋಗ - ಜ್ಯೋಗ - ಯೋಗಿ - ಜ್ಯೋಗಿ - ಯಾವಕ - ಜಾವಕ - ಯವೆ - ಜವೆ - ಇತ್ಯಾದಿ.

ವರ್ಗದ್ವಿತೀಯಕ್ಕೆ ಪ್ರಥಮ.

ಖದಿರ - ಕದಿರ - ಖಲ - ಕಲ - ಖಂಡ - ಕಂಡ - ಖಾಸ - ಕಾಸ ನಖ - ನಕ - ಛಂದ - ಚಂದ - ಛಿನ್ನ - ಚಿನ್ನ - ಛವಿ - ಚವಿ - ಕಂಠಿಕೆ ಕಂಟಿಕೆ - ಶುಂಠಿ - ಸುಂಟಿ - ಮಠ - ಮಟ - ಕುಂಠ - ಕುಂಟ - ಕಂಠ ಕಂಟ - ಕಥೆ - ಕತೆ - ಮಿಥಿಲೆ - ಮಿತಿಳೆ - ಪಥ - ಪತ - ಫಲ - ಪಳ ಫಾಲ - ಪಾಳ - ಫಣೆ - ಪಣೆ - ಕಫ - ಕಪ - ಇತ್ಯಾದಿ.

ವರ್ಗಪ್ರಥಮಕ್ಕೆ ವರ್ಗತೃತೀಯ.

ವಾಸುಕಿ - ವಾಸುಗಿ - ಡಮರುಕ - ಡಮರುಗ - ಮಲ್ಲಿಕೆ - ಮಲ್ಲಿಗೆ - ಸೂಚಿ - ಸೂಜಿ - ಅಟವಿ - ಅಡವಿ - ಜಾತಿ - ಜಾದಿ - ಚತುರ ಚದುರ - ಇತ್ಯಾದಿ.

ವರ್ಗಚತುರ್ಥಕ್ಕೆ ವರ್ಗತೃತೀಯ.

ಘಂಟೆ - ಗಂಟೆ - ಘಟಿಕೆ - ಗಡಿಗೆ - ಝುಕಟ - ಜಗಳ - ಢಕ್ಕಾ ಡಕ್ಕೆ - ಧನ - ದನ - ಭೋಗಿ - ಬೋಗಿ - ಇತ್ಯಾದಿ.

೧೭೦ ಪ್ರಶ್ನೆ.

೪ - ಸಂಸ್ಕೃತ ಶಬ್ದಗಳಿಗೇನಾದರೂ ಆಗಮಗಳು ಬರುವದುಂಟೊ.

ಉತ್ತರವು.

ಬಕಾರಕ್ಕೆ ವಕಾರ.

ಕಬಳ - ಕವಳ - ಶಿಬಿಕೆ - ಸಿವಿಗೆ - ಬಂಧನ - ವಂದನ - ಇತ್ಯಾದಿ.

ಮಕಾರಕ್ಕೆ ವಕಾರ.

ಕಾಮ - ಕಾವ - ಯಾಮ - ಜಾವ - ಭಾಮೆ - ಬಾವೆ - ಇತ್ಯಾದಿ.

ಪಕಾರಕ್ಕೆ ಹಕಾರ.

ಪಲ - ಹಲ - ಪಟ್ಟಿಕಾ - ಹಟ್ಟಿಗೆ - ಪದ - ಹದ - ಪಶು - ಹಸು ಇತ್ಯಾದಿ.

ಪಕಾರಕ್ಕೆ ವಕಾರ.

ಕಪಿ - ಕವಿ - ದೀಪಿಕೆ - ದೀವಿಗೆ - ರೂಪ - ರೂವ - ಸೂಪ - ಸೂವ - ಚಾಪಲ - ಜಾವಳ - ಕಪಿಲೆ - ಕವಿಲೆ - ಇತ್ಯಾದಿ.

ವಕಾರಕ್ಕೆ ಬಕಾರ.

ವೇಗ - ಬೇಗ - ವಾಲ - ಬಾಲ - ವೀಣೆ - ಬೀಣೆ - ವೀಧಿ - ಬೀದಿ ವಿಧಿ - ಬಿದಿ - ಇತ್ಯಾದಿ.

ಫಕಾರಕ್ಕೆ ಹಕಾರ.

ಫಲಕೆ - ಹಲಗೆ - ಫಲ - ಹಲ - ಫಣಾ - ಹಣೆ - ಇತ್ಯಾದಿ:

ಯತ್ನಾದಿಶಬ್ದಗಳಲ್ಲಿ ಸಂಯುಕ್ತಾಕ್ಷರ ಮಧ್ಯದಲ್ಲಿ ಅಕಾರಾಗಮವೂ - ವರ್ಷಾದಿಶಬ್ದಗಳಲ್ಲಿ ಸಂಯುಕ್ತಾಕ್ಷರ ಮಧ್ಯದಲ್ಲಿ ಇಕಾರಾಗಮವೂ - ಮುಕ್ತ್ಯಾದಿಶಬ್ದಗಳಲ್ಲಿ ಸಂಯುಕ್ತಾಕ್ಷರ ಮಧ್ಯದಲ್ಲಿ ಉಕಾರಾಗಮವೂ - ಬರುತ್ತದೆ - ಆಯಾ ಶಬ್ದಗಳಲ್ಲಿರುವ ವರ್ಣಗಳಿಗೆ ಈ ಪ್ರಕರಣದ ಮೂರನೆಯ ಸೂತ್ರದಲ್ಲಿ ಹೇಳಿರುವ ಆದೇಶಗಳು ಪ್ರಯೋಗಾನುಸಾರವಾಗಿ ಬರುತ್ತವೆ.

ಯತ್ನ - ಜತನ - ಇಂದ್ರ - ಇಂದರ - ಪ್ರಶ್ನ - ಪರಸನ - ವ್ರತ - ಬರತ - ಶ್ರಮ - ಸರಮ - ಇತ್ಯಾದಿಗಳು ಯತ್ನಾದಿಗಳು.

ವರ್ಷ - ಬರಿಸ - ಚಂದ್ರ - ಚಂದಿರ - ಮಂದ್ರ - ಮಂದಿರ ಶ್ರೀ - ಸಿರಿ - ಹ್ರೀ - ಹಿರಿ - ಇತ್ಯಾದಿಗಳು ವರ್ಷಾದಿಗಳು.

ಮುಕ್ತಿ - ಮುಕುತಿ - ಯುಕ್ತಿ - ಜುಕುತಿ - ಯುಗ್ಮ - ಜುಗುಮ - ಅಲ್ಪ ಅಲುಪ - ಇತ್ಯಾದಿಗಳು - ಮುಕ್ತ್ಯಾದಿಗಳು.

೫ - ಯಾವ ವರ್ಣಕ್ಕಾದರೂ ಲೋಪ ಬರುತ್ತದೆಯೊ.

ಕೀಲಾದಿಶಬ್ದಗಳ ಕಡೆಯ ಅಕಾರಕ್ಕೆ ಹಳಗನ್ನಡದಲ್ಲಿ ಲೋಪ ಬರುತ್ತದೆ - ಹೊಸಗನ್ನಡದಲ್ಲಿ ಅಕಾರಕ್ಕೆ ಉಕಾರಾದೇಶ ಬರುತ್ತದೆ - ಇದನ್ನು ತತ್ಸಮದಲ್ಲಿ ಸೇರಿಸಬಹುದು - ಶಬ್ದಾನುಶಾಸನದಲ್ಲೀ ಪ್ರಕರಣದಲ್ಲಿ ಹೇಳಿದ್ದರಿಂದ ಇಲ್ಲಿ ಹೇಳಲಾಯಿತು.

ಕೀಲ - ಕೀಲ್ - ಕೀಲು - ಮೀನ - ಮೀನ್ - ಮೀನು - ಕೀರ - ಕೀರ್ ಕೀರು - ಕೂರ - ಕೂರ್ - ಕೂರು - ಕೂಲ - ಕೂಲ್ - ಕೂಲು - ನೀರ ನೀರ್ - ನೀರು - ಇತ್ಯಾದಿ.

೬ - ಯಾವ ವ್ಯಂಜನಕ್ಕಾದರೂ ಲೋಪ ಬರುತ್ತದೆಯೊ.

ಸಂಯೋಗಾದಿಯಾದ ಸಕಾರಕ್ಕೆ ಲೋಪ ಬರುತ್ತದೆ - ಪ್ರಯೋಗಾನುಸಾರವಾಗಿ ಮೇಲೆ ಹೇಳಿದ ಆಗಮಾದೇಶಗಳೂ ಬರುತ್ತವೆ.

ಸಂಸ್ಥೆ - ಸಂತೆ - ಸ್ಥಾನ - ತಾನ - ಸ್ಥಿತಿ - ತಿತಿ - ಸ್ತುತಿ - ತುತಿ - ಅವಸ್ಥೆ - ಅವತೆ - ಸ್ಪರ್ಶ - ಪರುಸ - ಸ್ಫಟಿಕ - ಪಟಿಕ - ಸ್ಠಿಕ್ಕಾ - ಠಿಕ್ಕಾ - ಸ್ಕಂದ - ಕಂದ - ಇತ್ಯಾದಿ.

೭ - ಸಂಯುಕ್ತಾಕ್ಷರದಲ್ಲಿ ಯಾವ ಪರವರ್ಣಕ್ಕಾದರೂ ಲೋಪ ಬರುತ್ತದೆಯೊ.

ಶಕಾರ ಷಕಾರ ಸಕಾರಗಳಿಗಿಂತ ಪರವಾದ ವಕಾರಕ್ಕೆ ಲೋಪ ಬರುತ್ತದೆ - ಶಕಾರ ಷಕಾರಗಳಿಗೆ ಸಕಾರಾದೇಶ ಸಹ ಬರುತ್ತದೆ - ಆ ಪದಗಳಲ್ಲಿರುವ ಇತರ ವರ್ಣಗಳಿಗೆ ಮೇಲೆ ಹೇಳಿದ ಆದೇಶಗಳೂ ಬರುತ್ತವೆ.

ಸ್ವಾಮಿ - ಸಾಮಿ - ಸ್ವಯಂಭು - ಸಯಂಬು - ಸ್ವಭು - ಸಬು ಸ್ವರ - ಸರ - ತಪಸ್ವಿ - ತಪಸಿ - ಶ್ವಾನ - ಸಾನ - ಶ್ವೇತ - ಸೇತ ಶಾಶ್ವತ - ಸಾಸತ - ಈಶ್ವರ - ಈಸರ - ಪರಿಷ್ವಂಗ - ಪರಿಸಂಗ - ಅಭಿಷ್ವಂಗ - ಅಭಿಸಂಗ ಇತ್ಯಾದಿ.

೮ - ಸಂಯುಕ್ತಾಕ್ಷರದಲ್ಲಿ ಪೂರ್ವವರ್ಣಕ್ಕೆ ಲೋಪವೂ ಪರವರ್ಣಕ್ಕಾದೇಶವೂ ಸಹ ಬರುವದುಂಟೋ.

ಯಕಾರಪರವಾದ ಧಕಾರಕ್ಕೆ ಲೋಪವೂ - ಯಕಾರಕ್ಕೆ ಜಕಾರಾದೇಶವೂ ಬರುತ್ತದೆ - ಕೆಲವು ವರ್ಣಗಳಿಗೂ ಪ್ರಯೋಗಾನುಸಾರವಾಗಿ ಮೇಗಳ ವಿಧಗಳೂ ಬರುತ್ತವೆ.

ವಿಂಧ್ಯ - ಬಿಂಜ - ವಂಧ್ಯೆ - ಬಂಜೆ - ಸಂಧ್ಯೆ - ಸಂಜೆ - ಧ್ಯಾನ - ಜಾನ - ಇತ್ಯಾದಿ.

೯ - ಯಾವ ವ್ಯಂಜನವಾದರೂ ಸಂಯುಕ್ತಾಕ್ಷರದಲ್ಲಿ ಹಿಂದಿದ್ದರೂ ಮುಂದಿದ್ದರೂ ಲೋಪವನ್ನು ಹೊಂದುತ್ತದೆಯೋ.

ರೇಫವು - ಸಂಯುಕ್ತಾಕ್ಷರದಲ್ಲಿ - ಹಿಂದಿದ್ದರೂ - ಮುಂದಿದ್ದರೂ - ಲೋಪವನ್ನು ಹೊಂದುತ್ತದೆ - ರೇಫಕ್ಕೆ ಲೋಪ ಬಂದ ಬಳಿಕ ಸಂಯುಕ್ತದಲ್ಲುಳಿದ ವ್ಯಂಜನಕ್ಕೆ ದ್ವಿತ್ವ ಬರುತ್ತದೆ - ಈ ಸಂಯುಕ್ತ ಪದಾದಿಯಾಗಿದ್ದರೆ ಮಾತ್ರ ದ್ವಿತ್ವ ಬರುವದಿಲ್ಲವು - ಪದಾದಿಯಲ್ಲದುಳಿದ ವ್ಯಂಜನವು ಅನುಸ್ವಾರಕ್ಕೆ ಪರವಾಗಿದ್ದರೂ ದ್ವಿತ್ವ ಬರುವದಿಲ್ಲವು - ಕೆಲವು ವ್ಯಂಜನಗಳಿಗೆ ಮೇಲೆ ಹೇಳಿದ ಆದೇಶಗಳೂ ಬರುತ್ತವೆ.

ವರ್ಗ - ಬಗ್ಗ - ಸರ್ಗ - ಸಗ್ಗ - ಸ್ವರ್ಗ - ಸಗ್ಗ - ದುರ್ಗ - ದುಗ್ಗ - ವರ್ತಿ - ಬತ್ತಿ - ಕರ್ತರಿ - ಕತ್ತರಿ - ಮರ್ಕಟ - ಮಕ್ಕಡ - ದ್ರೋಣಿ - ದೋಣಿ - ಶ್ರೇಣಿ - ಸೇಣಿ - ಚಂದ್ರ - ಚಂದ - ಪ್ರಭು - ಹಬು - ಪ್ರಸರ - ಹಸರ - ಮುದ್ರಿಕೆ - ಮುದ್ದಿಗೆ - ನಿದ್ರೆ - ನಿದ್ದೆ - ಪತ್ರಿಕೆ - ಹತ್ತಿಗೆ - ವಪ್ರ - ಬಪ್ಪ - ಇತ್ಯಾದಿ.

೧೦ - ಇನ್ನು ಯಾವ ಸಂಯುಕ್ತದಲ್ಲಿಯಾದರೂ ಒಂದಕ್ಕೆ ಲೋಪ ಬಂದು ಮತ್ತೊಂದು ದ್ವಿತ್ವವನ್ನೈದುತ್ತದೆಯೋ.

ಪದಾದಿಯಲ್ಲದ ಕ್ಷಕಾರದಲ್ಲಿರುವ ಷಕಾರಕ್ಕೆ ಲೋಪ ಬಂದುಳಿದ ಕಕಾರಕ್ಕೆ ದ್ವಿತ್ವ ಸಹ ಬರುತ್ತದೆ - ಪದಾದಿಯಾದ ಕ್ಷಕಾರದಲ್ಲಿರುವ ಷಕಾರಕ್ಕೆ ಲೋಪ ಮಾತ್ರ ಬರುತ್ತದೆ - ದ್ವಿತ್ವ ಬರುವದಿಲ್ಲವು.

ಅಕ್ಷರ - ಅಕ್ಕರ - ಲಕ್ಷಣ - ಲಕ್ಕಣ - ಕ್ಷಾರ - ಕಾರ - ಕ್ಷೀರ - ಕೀರ - ಇತ್ಯಾದಿ.

೧೧ - ಸ್ವರಗಳಿಗೇನಾದರೂ ವಿಕಾರವುಂಟೋ.

ಪದಾಂತ್ಯವಾದ ಸ್ವರಕ್ಕೆ ತತ್ಸಮ ಪ್ರಕರಣದಲ್ಲಿ ಹೇಳಿದ ವಿಧಿಗಳೆಲ್ಲಾ ಬರುತ್ತವೆ - ಪದಾಂತವಲ್ಲದ ಸ್ವರಗಳಲ್ಲಿ ದೀರ್ಘ

ಗಳಿಗೆ ಅವವರ ಸವರ್ಣವಾದ ಹ್ರಸ್ವ ಬರುತ್ತದೆ - ಐಕಾರಕ್ಕೆ ಎಕಾರವೂ - ಔಕಾರಕ್ಕೆ ಒಕಾರವೂ ಬರುತ್ತದೆ - ಆಗ ಐಕಾರ ಔಕಾರಗಳ ಮೇಗಳ ವರ್ಣಕ್ಕೆ ದ್ವಿತ್ವಸಹ ಬರುತ್ತದೆ - ದ್ವಿತ್ವವಿಲ್ಲದೇ ಏಕಾರವೂ - ಓಕಾರವೂ ಕೆಲವು ಕಡೆಯಲ್ಲಿ ಬರುತ್ತದೆ ಕೆಲವು ಕಡೆಯಲ್ಲಿ ಇಕಾರಕ್ಕೆ ಎಕಾರವೂ - ಉಕಾರಕ್ಕೆ ಒಕಾರವೂ ಅಕಾರಕ್ಕೆ ಎಕಾರವೂ - ಊಕಾರಕ್ಕೆ ಓಕಾರವೂ - ಪದಾದಿಯಲ್ಲದ ಋಕಾರಕ್ಕೆ ಇಕಾರವೂ - ಪದಾದಿಯಾದ ಋಕಾರಕ್ಕೆ ರಿಶಬ್ದಾದೇಶವೂ - ಕೆಲವು ಕಡೆಯಲ್ಲಿ ಅಕಾರಾದೇಶವೂ - ಪ್ರಯೋಗಾನುಸಾರವಾಗಿ ಬರುತ್ತದೆ - ವ್ಯಂಜನಗಳಿಗೆ ಮೇಲಿಹೇಳಿದ ವಿಧಿಗಳೂ ಬರುತ್ತವೆ.

ಸಾಕ್ಷಿ - ಸಕ್ಕಿ - ಕಾಂಚೆ - ಕಂಚೆ - ರಾಕ್ಷಸ - ರಕ್ಕಸ - ಕಾರ್ಯ - ಕಜ್ಜ - ಕಸ್ತೂರಿ - ಕತ್ತುರಿ - ಕೂರ್ಪಾಸ - ಕುಪ್ಪಸ - ಬಂಧೂಕ - ಬಂದುಗೆ - ಪ್ರೇಕ್ಷಣ - ಪೆಕ್ಕಣ - ಪ್ರೋಕ್ಷಣ - ಪೊಕ್ಕಣ - ದೈವ - ದೆವ್ವ - ಕ್ರೌಂಚ - ಕೊಂಚೆ - ಸೈಂಧವ - ಸೆಂದವ - ವೈಶಾಖ - ಬೇಸಗೆ - ವೈರ - ಬೇರ - ಸೌರಾಷ್ಟ್ರ - ಸೋರಟೆ - ದಿವಸ - ದೆವಸ - ದಿಶೆ - ದೆಸೆ - ತುಲಸಿ - ತೊಳಸಿ - ಶಯ್ಯಾ - ಸೆಜ್ಜೆ - ಜಟಾ - ಜೆಡೆ - ಮೂಢ - ಮೋಡ - ಮೃಗ - ಮಿಗ - ದೃಢ - ದಿಡ - ತೃಣ - ತಿಣ - ಭೃಂಗ - ಬಿಂಗ - ಶೃಂಗ - ಸಿಂಗ - ಋಣ - ರಿಣ - ಋತು - ರಿತು - ಋಷಿ - ರಿಸಿ - ಪ್ರಾಕೃತ - ಪಾಗದ - ಸಂಸ್ಕೃತ - ಸಕ್ಕದ - ಇತ್ಯಾದಿ.

೧೨ - ಅಕ್ಷರಲೋಪವೆಲ್ಲಾದರೂ ಬರುವದುಂಟಾ.

ಕೆಲವು ಶಬ್ದಗಳಲ್ಲಿ ಅಕಾರವಿಶಿಷ್ಟ ಹಕಾರಕ್ಕೆ ಲೋಪ ಬರುತ್ತದೆ - ಕೆಲವು ಶಬ್ದಗಳಲ್ಲಿ - ಅಕಾರವಿಶಿಷ್ಟ ಯಕಾರಕ್ಕೆ ಲೋಪ ಬರುತ್ತದೆ - ಮೇಲಿಹೇಳಿದ ವಿಧಿಗಳೂ ಬರುತ್ತವೆ.

ಪ್ರಗ್ರಹ - ಹಗ್ಗ - ಸಾಹಸ - ಸಾಸ - ಸಹಜ - ಸಾಜ - ನಿಯಮ - ನೇಮ - ಪಲ್ಯಯನ - ಪಲ್ಲಣ - ವಿನಾಯಕ - ಬೆನಕ - ಇತ್ಯಾದಿ.

೧೩ - ಮೇಲಿಹೇಳಿದ ವಿಧಿಗಳು ಹೊರ್ತು ಇನ್ನು ವಿಕಾ

ಕದಂಬಾದಿ ಶಬ್ದಗಳಿಗೆ ಕರಂಬಾದಿ ಶಬ್ದಗಳು ಆದೇಶವಾಗಿ ಬರುತ್ತವೆ - ಅವುಗಳಲ್ಲಿ ಕೆಲವು ಶಬ್ದಗಳಲ್ಲಿ ಸ್ವರ ವ್ಯಂಜನ

೧೭೭೪ ಪ್ರಶ್ನೆ. ರಗಳು ಬರುವದುಂಟಾ.

ಉತ್ತರವು.

ಗಳಿಗೆ ಮೇಲೆ ಹೇಳಿದ ಆದೇಶಗಳು ಹೊರ್ತಣನ್ನೂ ಅನೇಕ ವಿಧವಾದ ಆದೇಶಗಳು ಬರುತ್ತವೆ- ಕೆಲವು ಶಬ್ದಗಳಲ್ಲಿ ವರ್ಣಗಳಿಗೆ ಲೋಪ ಬರುತ್ತದೆ- ಕೆಲವು ಶಬ್ದಗಳಲ್ಲಿ ಸ್ವರಾಗಮವೂ- ಕೆಲವು ಶಬ್ದಗಳಲ್ಲಿ ವ್ಯಂಜನಾಗಮವೂ- ಕೆಲವು ಶಬ್ದಗಳಲ್ಲಿ- ಅಕ್ಷರಾಗಮವೂ ಬರುತ್ತದೆ- ಆದಕೆ ಆ ವಿಕಾರಗಳು ವಿಸ್ತಾರವಾದ್ದರಿಂದಲೂ- ಒಂದು ನಿಬಂಧನೆಗೊಳಗಾಗದ್ದರಿಂದಲೂ- ಪೂರ್ವ ಸೂತ್ರವಿಧಿಗಳ ಹಾಂಗೆಯೂ ಸೂತ್ರದಲ್ಲಿ ಹೇಳಿದ ವಿಧಿಗಳು ಸಾರ್ವತ್ರಿಕವಲ್ಲದ್ದರಿಂದಲೂ- ಕೆಲ ಶಬ್ದಗಳಿಗೊಂದೊಂದು ಸೂತ್ರಗಳ ಮಾಡಿದ ಪಕ್ಷದಲ್ಲಿ ಗ್ರಂಥ ವಿಸ್ತಾರವಾಗುತ್ತದೆಯೆಂತಲೂ- ಉದಾಹರಣೆಗಳಾದ ಪದಗಳ ಮಾತ್ರವನ್ನು ಯೆತ್ತಲಾಯಿತು- ಇದರ ಮೇಲೆ ಸೂತ್ರಗಳ ಕಲ್ಪಿಸಿಕ್ಕೊಳ್ಳುವದು- ಈ ಗಣದಲ್ಲಿ ಯೆತ್ತಲ್ಪಟ್ಟ ಪದಗಳು ಹೊರ್ತಣದರಲ್ಲಿ ಯಾವ ವರ್ಣಗಳಿಗೇನು ವಿಕಾರ ಬಂದದೆಯೋ ಅಂಥಾ ಪದಗಳೂ ಈ ಗಣದಲ್ಲಿ ಸೇರುತ್ತವೆ- ಹಿಂದಲ ಸೂತ್ರದಲ್ಲಿ ವಿಧಿಸಿದ ವಿಧಿಗಳೂ- ಈ ಸೂತ್ರದ ಉದಾಹರಣೆಗಳಿಂದ ಕಲ್ಪಿಸಿದ ವಿಧಿಗಳೂ- ಹೊರ್ತಣನ್ನೂ ಅನೇಕ ವಿಕಾರಗಳುಂಟು- ಅಂಥಾ ವಿಕಾರವನ್ನು ಹೊಂದಿದ ಶಬ್ದಗಳೂ ಈ ಗಣದಲ್ಲಿ ಸೇರುತ್ತವೆ- ವಿಸ್ತಾರವಾಗ್ಯೇ ಗಣದಲ್ಲಿ ಸೇರತಕ್ಕ ಪದಗಳೆಲ್ಲಾ ಶಬ್ದಮಂಜರಿಯಲ್ಲಿ ಹೇಳಲ್ಪಡುತ್ತದೆ.

ಕದಂಬ- ಕರಂಬ- ಅಪ್ಸರಸ್- ಅಚ್ಚರೆ- ಅಚ್ಚರಸೆ- ಗಹನ- ಗಾನ- ಕಾಂಸ್ಯ- ಕಂಚು- ನರ್ತನ- ನಚ್ಚಣಾ- ನರ್ತಕಿ- ನಚ್ಚಣೆ- ನಿಶ್ರೇಣೆ- ನಿಚ್ಚಣೆ- ವತ್ಸಲಾ- ಬಚ್ಚಳೆ- ನಿತ್ಯ- ನಿಚ್ಚ- ಅಕ್ಷ- ಅಚ್ಚು- ಮತ್ಸ್ಯ- ಮಚ್ಚ- ನಿಶ್ಚಿಂತೆ- ನಿಚ್ಚಿಂತೆ- ನಿಶ್ಚಯ- ನಿಚ್ಚಯ- ಸ್ವಚ್ಛ- ಸೊಚ್ಚ- ಕುಹಕ- ಕುಯಕ- ಸಿಂಹ- ಸಿಂಗ- ಸನ್ನಾಹ- ಸನ್ನಣಾ- ಶುಕ್ತಿ- ಸುತ್ತಿ- ಯುಕ್ತಿ- ಜುತ್ತಿ- ಪುಸ್ತಕ- ಹೊತ್ತಿಗೆ- ಕುಸ್ತುಂಬರು- ಕೊತ್ತುಂಬರಿ- ಗುಪ್ತ- ಗುತ್ತ- ಜಿಂಹ- ಜಿ

ಪ್ನ - ಚಿಹ್ನ - ಚಿನ್ನ - ವಹ್ನಿ - ಬನ್ನಿ - ರತ್ನ - ರನ್ನ - ಕರ್ನಾ
ಟಕ - ಕನ್ನಡ - ವಿಜ್ಞಾನ - ಬಿನ್ನಾಣ - ವಿಜ್ಞಾಪನ - ಬಿನ್ನಹ - ಕನ್ಯ
ಕಾ - ಕನ್ನಿಕೆ - ಸಂಜ್ಞಾ - ಸನ್ನೆ - ಶೂನ್ಯ - ಸೊನ್ನೆ - ಯಜ್ಞ - ಜನ್ನ
ಜ್ಯೋತ್ಸ್ನ - ಜೊನ್ನ - ಪುಷ್ಕರಣಿ - ಹೊಕ್ಕರಣೆ - ಷಷ್ಕುಲಿ
ಚಕ್ಕುಲಿ - ಉತ್ಪಟಿ - ಉತ್ತಡ - ಉನ್ಮತ್ತ - ಉಮ್ಮತ್ತ - ಉಜ್ವಲ - ಉಜ್ಜ
ಳ - ಪ್ರಜ್ವಲ - ಪಜ್ಜಳ - ಬಿಲ್ವಪತ್ರ - ಬೆಲ್ಲವತ್ತ - ಸತ್ವಕ - ಸ
ತ್ತುಗ - ಆನ್ಯಾಯ - ಅನ್ನೆಯ - ಪಲ್ಯಯನ - ಪಲ್ಲಣ - ಹಲ್ಲಣ
ಮೃತ್ಯು - ಮಿತ್ತು - ಮಿಱ್ತು - ಮಿಯ್ತು - ಕಾವ್ಯ - ಕಬ್ಬ - ತೇಪ - ತಿಪ್ಪ
ಅಗ್ನಿ - ಅಗ್ಗಿ - ಲಾಗ್ನಿಕ - ಲಿಗ್ಗಿಗ - ಪಾದುಕೆ - ಹಾವುಗೆ - ಗದಾ
ಗಜೆ - ಪದ - ಪಯ - ಯಶೋದಾ - ಜಸೋಯೆ - ಅಮರಿ - ಅವಶಿ
ದಂಷ್ಟ್ರಾ - ದಾಡೆ - ಕಾಹಳೆ - ಕಾಳೆ - ಹೃಷ್ಟ - ಹಿಟ್ಟ - ಹೃದಯ - ಹಿ
ದಯ - ಎರ್ದೆ - ಎದೆ - ಶೃಂಖಲ - ಸಂಕಳೆ - ಸಂಕೋಲೆ - ಶೃತಕ - ಗ
ತಕ - ಕೃಕಚ - ಗರಗಸ - ವ್ಯಾಕರಣ - ಬಾಗರಣ - ಕುದ್ಯ
ಗೋಡೆ - ಪ್ರಾಕಾರ - ಪಾಗರ - ಪಾಗಲು - ಅಮೃತ - ಅಮರ್ದು - ಮೃ
ದ್ವೀಕಾ - ಮಿದ್ದಿಗೆ - ಅಂಗುಷ್ಠ - ಉಂಗುಟ್ಟ - ಅಂಗುಡ - ತ್ವರಿತ - ತುರಿಹ
ಆಜ್ಞಾ - ಆಣೆ - ಬೋಂಗಾರ್ - ಸುಣ್ಣ - ಕುಕ್ಕುಟ - ಕೋಳಿ - ಕುಮಾರ
ಕೊರ - ಕುವರ - ಮಯೂರ - ಮೋರ - ಕುರಂಟಿ - ಗೋರಂಟೆ
ಕೂಟ - ಕೂಡು - ಕೌಪೀನ - ಕೋವಣ - ವ್ಯಾಘ್ರ - ಬಗ್ಗ - ತಾ
ತ - ತಂದೆ - ಜ್ವರ - ಜ್ವಾರ - ಚೇಲ - ಸೇಲೆ - ಸೀರೆ - ಚೇರ - ಸೇರಿ
ವ್ಯಂಜನ - ಬೆಂಜನ - ವ್ಯತಿರೇಕ - ಬೆತಿರೇಕ - ವೃಥಾ - ಬೆತ್ತೆ - ವ್ಯವ
ಹಾರ - ಬೇಹಾರ - ಸೈಂಧವ - ಸೆಂದವ - ವೈದ್ಯ - ಬೆಜ್ಜ - ವೈಶಾಖ
ಬೇಸಗೆ - ವೈರ - ಬೇರ - ಹಂಸ - ಅಂಸ - ಶಲಾಕ - ಸಲಿಗೆ - ತಾಂ
ಬೂಲ - ತಂಬಲ - ತಂಬುಲ - ಆರಾಮ - ಆರವೆ - ಬಬ್ಬೂರ
ಬೊಬ್ಬುಲಿ - ಸ್ಮಶಾನ - ಮಸಣ - ಕ್ಷಪಣ - ಸವಣ - ಅಶೋಕ
ಅಸುಗೆ - ಕಠೋರ - ಕಟುರ - ಉದ್ಯೋಗ - ಉಜ್ಜುಗ - ಉದ್ಯಾಪನ

ಪ್ರಶ್ನೆ: ಉತ್ತರವು.

ಉಜ್ಜವಣೆ - ಆಯುಷ್ಯ - ಆಯುಸ - ಜ್ಯೋತಿಷ - ಜೋಯಿಸ
ಮನುಷ್ಯ - ಮಾನಿಸ - ಅಲಿಕ - ಅಳಕ - ಸಹಜ - ಸಾಜ - ವಾಹಳಿ
ವಾಳಿ - ಮಹಿಮ - ಮೈಮೆ - ಮಹಿಷ - ಮೈಸ - ವಾಹ್ಯಾಳಿ - ವೈ
ಯಾಳಿ - ಯಮುನಾ - ಜಮುನೆ - ಜಲೂಕಾ - ಜಿಗಳೆ - ಶೇಖರ - ಸೇ
ಖರ - ಅಧ್ಯಕ್ಷ - ಅದ್ದಿಕ - ಅದ್ದಿಗ - ಉತ್ಕಟ - ಉಗ್ಗಡ - ಆಗಸ್ತ್ಯ
ಅಗಸೆ - ಸಂಘಾತ - ಸಂಗಾತ - ಸಂಗಡ - ಖನಿ - ಕಣಿ - ಸ್ಥಾನ
ಠಾಣಾ - ಪಿಶುನ - ಪಿಸುಣಾ - ಶುನಕ - ಸೊಣಗ - ಕುಸುಂಭ - ಕು
ಸುಬೆ - ಧೂಮ - ಧೂವೆ - ಕಂಬಲ - ಕಂಬಳಿ - ಘರ್ಮ - ಕಾವು - ಪಾ
ಟಲ - ಪಾದರಿ - ಅರ್ಗಳ - ಅಗುಳಿ - ಕುದ್ದಾಲ - ಗುದ್ದಲಿ - ಕಾಚ
ಗಾಜು - ಲಕ್ಷ್ಮಿ - ಲಚ್ಚೆ - ಲಕುಮಿ - ದ್ಯೂತ - ಜೂಜು - ಜೂದು - ಪಿ
ಷ್ಟ - ಹಿಟ್ಟು - ಆಶ್ಚರ್ಯ - ಅಚ್ಚರಿ - ಕಪಿಂಜಲ - ಕವಿಂಜು - ಗ್ರಹ
ಣ - ಗರಣ - ಗ್ರಾಮಣಿ - ಗಾವಿಲ - ದ್ವೀಪ - ದೀಪ - ದೀವು - ದೀ
ವಿ - ದ್ವಾರಪಟ್ಟ - ದಾರವದ್ದ - ಧ್ವನಿ - ದನಿ - ಧನಿ - ದಣಿ - ಸ್ವರ
ಸೊರ - ಸ್ನುಷಾ - ಸೊಸೆ - ನಸ್ಯ - ನಸಿ - ಮಾಣಿಕ್ಯ - ಮಾಣಿ
ಕ - ನ್ಯೂನ - ನೂನ - ನ್ಯಾಯ - ನಾಯ - ಕಾರ್ಯ - ಕಾಯ - ಕುಟ
ಜ - ಕೊಡಸಿಗೆ - ಲಾಮಂಜ - ಲಾಮಂಚ - ಮುಂಜ - ನೊದೆ - ವಲ್ಲಕಿ
ಬಲ್ಲಹ - ಕುಠಾರ - ಕೊಡಲಿ - ಕೊಡಳಿ - ವರ್ಧಕಿ - ಬಡಗಿ - ವಿದ್ಯಾ
ಬಿಜ್ಜೆ - ಕಾಷ್ಠ - ಕಡ್ಡಿ - ನಿಷ್ಠಾ - ನಿಟ್ಟೆ - ಗೋಷ್ಠ - ಕೊಟ್ಟಿಗೆ - ಕೋಷ್ಠ
ಕೊಟ್ಟ - ಮಂಜಿಷ್ಠಾ - ಮಂಜಿಟಿಗೆ - ಪ್ರತಿಷ್ಠಾ - ಹದಿಟೆ - ಜ್ಯೇಷ್ಠಾ
ಜೆಟ್ಟೆ - ಸೃಷ್ಟಿ - ಸುಟ್ಟಿ - ಮುಷ್ಟಿ - ಮುಟ್ಟಿಗೆ - ಕಷ್ಟ - ಕಟ್ಟ - ಗೃಷ್ಟಕಾ
ಗೃಟ್ಟಿಗೆ - ದಾಡಿಮ - ದಾಳಿಂಬ - ದಾಳಿಂಬಿ - ಕೂಷ್ಮಾಂಡ - ಕುಂಬಳ
ಮರ್ಕಟ - ಮಂಕಡ - ಕ್ರಮುಕ - ಕವುಂಗು - ಲಾಂಛನ - ಲಚ್ಚಣ
ನಿರೂಪ - ನಿರವ - ಮರುವಕ - ಮರುಗ - ಖದಿರ - ಕೈರ - ವಕ್ರ
ವಂಕ - ಪ್ರಾಣ - ಪರಣ - ಹರಣ - ಪ್ರಾಯ - ಪರಯ - ಹ
ರಯ - ಪ್ರಸಾದನ - ಹಸದನ - ಉತ್ತರೀಯ - ಉತ್ತರಿಗೆ - ವ
ರ್ಧಮಾನ - ಬದ್ಧವಣ - ಆಟರೂಷ - ಆಡಸೋಗೆ - ಕ್ಷುರಿಕಾ

ಸುರಿಗೆ - ಚೂರಿ - ಘಟಿಕಾ - ಗಳಿಗೆ - ವೀಟಿಕಾ - ವೀಳೆಯ - ಘುಟಿ
ಕಾ - ಗುಳಿಗೆ - ಪೇಟಿಕಾ - ಪೆಳಿಗೆ - ಸಂಧಿ - ಸಂದು - ಗ್ರಂಥಿ - ಗಂಟು
ಮಾನ್ಯತಾ - ಮನ್ನಣೆ - ಸ್ಫೋಟಕ - ಹೋಳಿಗೆ - ಹೋಳಕ - ಹೋ
ಳಿಗೆ - ಸ್ಫಟಿಕ - ಪಟಿಕ - ಪಳುಕು - ಪಳುಂಗು - ರಘಟಾ - ರಗಳೆ
ಲಂಪಟ - ಲಂಬಳಿಗೆ - ಬ್ರಹ್ಮ - ಬೊಮ್ಮ - ಬರ್ಮ - ಪ್ರಮಾಣ
ಪವಣ್ - ಹವಣು - ಮುಕುಲ - ಮುಗುಳ್ - ಮೊಗುಳು - ಶುಲ್ವ
ಸುಳ್ - ಸುಳು - ಸುಲ್ಕ - ಸುಳು - ಕ್ರೂರ - ಕೂರ್ - ಕೂರು - ಪ್ರ
ತಿಪದ್ - ಪಾಡವ - ಪಾಡ್ಯ - ದ್ವಿತೀಯಾ - ಬಿದಿಗೆ - ತೃತೀಯಾ - ತದಿಗೆ
ಚತುರ್ಥೀ - ಚೌತಿ - ಪಂಚಮಿ - ಪಂಚವೆ - ಷಷ್ಠಿ - ಚಟ್ಟಿ - ಸಪ್ತಮಿ
ಸತ್ತವೆ - ಅಷ್ಟಮಿ - ಅಟ್ಟವೆ - ನವಮಿ - ನಾವಿ - ನಾಮಿ - ದಶಮಿ
ದಶವೆ - ಏಕಾದಶೀ - ಏಯೊದಸಿ - ಏಕಾಶಿ - ದ್ವಾದಶೀ - ಬಾದಸಿ
ತ್ರಯೋದಶೀ - ತೇರಸಿ - ಚತುರ್ದಶೀ - ಚೌದಸಿ - ಪೌರ್ಣಮಿ - ಹು
ಣ್ಣಿವೆ - ಅಮಾವಾಸ್ಯಾ - ಅವಸೆ - ಅಮಾಸೆ - ಲಕ್ಷ್ಮಿ - ಲಕುಮಿ - ಲಚ್ಚಿ
ಲಕ್ಷ್ಮಣಾ - ಲಕ್ಕುಮಣಾ - ತ್ರಾಣಾ - ತರಣಾ - ತ್ರಾಸ - ತರಸ
ಪ್ರಾಣಾ - ಹರಣಾ - ವ್ಯಾಧಿ - ಬಿಯದಿ - ವ್ಯಾಸ - ಬಿಯಸ - ವ್ಯಾಧ
ಬಿಯದ - ವ್ಯಾಳ - ಬಿಯಳ - ವ್ಯಾಸಂಗ - ಬಿಯಸಂಗ - ಪೈತೃಕ
ಪೈತಿಕ - ವಾಸಿ - ಬಾಚಿ - ಘೂಕ - ಗೂಗೆ - ಗೂಬೆ - ಛತ್ರಿಕೆ
ಸತ್ತಿಗೆ - ಗಾಥಾ - ಗಾಹೆ - ವಾಪಿ - ಬಾವಿ - ತ್ರಿಪಥಾ - ತಿವದಿ - ಕೂ
ಪಸ್ತಂಭ - ಕೂವಕಂಬ - ಚರ್ಯೆ - ಚರಿಗೆ - ಯುಗ - ನೊಗ - ಯೌ
ವನ - ಜವ್ವನ - ಯವ್ವನ - ಯುಗ - ಜುಗ - ಚಕ್ರಪಕ್ಷಿ - ಜಕ್ಕ
ವಕ್ಕಿ - ಪುತ್ರಿಕೆ - ಪುತ್ತಳಿ - ತೀಖ - ತಿಕ್ಕ - ಮಕ್ಷಿ - ಮಚ್ಚು - ಪ್ರ
ಕ್ಷಾಳ - ಪಖ್ಖಾಳ - ತೀಕ್ಷ್ಣ - ತಿಕ್ಕ - ಮರಿಚ - ಮೆಳಸು - ಮೆಣಸು
ಕ್ಷೌರ - ಚವುರ - ಚಾಮರ - ಚವುಲ - ಶಿಲ್ಪಕ - ಚಿಪ್ಪಿಗ - ವಂಶ
ಬಂಚ - ಸನ್ನಾಹ - ಸನ್ನಣಾ - ಊಷ್ಮ - ಉಮ್ಮ - ವಿಷ್ಕಿರ - ವಿಕ್ಕಿರ
ಜೀರ್ಣ - ಜಿನ್ನ - ಕರ್ಣ - ಕನ್ನ - ಅಂಗಾರ - ಇಂಗಳ - ಕಾಷ್ಠ

ಪ್ರಶ್ನೆ: | ಉತ್ತರವು:

ಕಟ್ಟಿಗೆ - ಸಮಿಧ್ - ಸಾದಿ - ಸ್ವಾದು - ಸೊದು - ಊರ್ಧ್ವ - ಉದ್ದ
ಸೂತ್ರಿಕೆ - ಸುತ್ತಿಗೆ - ಅಯೋಗ್ರ - ಅಯೋಗ - ಗೋಪಾಲ - ಗೋವಳ
ಅಲೀಕ - ಅಳಕ - ರಸಾಯನ - ರಸಿಯಣ - ಖಾರಿಗೆ - ಗಾರಿಗೆ
ಪತ್ತನ - ಪಟ್ಟಣ - ಉತ್ಕಟ - ಉಗ್ಗಡ - ಅತಸಿ - ಅಗಸೆ - ಸ್ಥಾನ
ಠಾಣ - ಫಲ್ಗುನ - ಪಲುಗುಣ - ಅಂದುಕ - ಅಂದುಗೆ - ಕಲಮ - ಕ
ೞವೆ - ಕಳವೆ - ಕೞನಿ - ಕಳನಿ - ಅರ್ಕ - ಎಕ್ಕ - ಎಕ್ಕೆ - ಬಾ
ಢ - ಬಾಡು - ತರಂಗ - ತರಂಗು - ಖರ್ಜೂ - ಕಜ್ಜಿ - ಮಂತ್ರಿ - ಮಂ
ತಿ - ಪಕ್ಷಿ - ಪಕ್ಕಿ - ಸಸ್ಯ - ಸಸಿ - ಆಲಸ್ಯ - ಅಲಸುಗೆ - ಭಿಂ
ದಿಪಾಲ - ಬಿಂದಿವಾಲ - ವೃಷಭ - ಬಸವ - ಪದ್ಧತಿ - ಪಜ್ಜೆ - ಹಜ್ಜೆ
ಧಾತು - ಜಾತು - ಉಜ್ಜಯನಿ - ಉಜ್ಜೆಣಿ - ಹಿಂಗುಲಕ - ಇಂಗಲೀಕ
ವರ್ಧಮಾನಕ - ಬದ್ದವಣ - ಸುರಪರ್ಣೆ - ಸುರಹೊನ್ನೆ - ವ್ಯ
ವಹಾರ - ಬೇಹಾರ - ನಾ - ನಾವೆ - ರೂಪು - ರೂಹು - ಶ್ರೈ - ರೂವು
ಆರ್ದ್ರ - ಒದ್ದೆ - ಇತ್ಯಾದಿಗಳು - ಪ್ರಯೋಗಗಮ್ಯಗಳು.

೧೭೯ - ಸಂಸ್ಕೃತಶಬ್ದಗಳಲ್ಲಿಯಾವಕ್ಷರಕ್ಕಾದರೂ ೞ ೞಾದೇಶವಾಗಿಬರುವದುಂಟಾ.

ಶಬ್ದಮಣಿದರ್ಪಣದಲ್ಲಿಕುಕ್ಕುಟಾದಿಶಬ್ದಗಳಲ್ಲಿರುವ ಟ - ಠ - ಳ - ರ - ಇವುಗಳಿಗೆ - ೞಬರುತ್ತದೆಯೆಂದುಹೇಳಿಯದೆ - ಇನ್ನ್ಯಾಕನ್ನಡದಲ್ಲಿರುವಶಬ್ದಗಳಿಗೆೞಬರುವರೀತಿಸುಲಭವಾಗಿಕ್ರಮದಕ್ಷವಗಳಬರೆಯುವಾಗಹೇಳಲ್ಪಡುತ್ತದೆ ಈೞವುಹಳಗನ್ನಡದಲ್ಲಿಯೋರ್ದ - ಹೊಸಗನ್ನಡದಲ್ಲಿ ಳಕಾರವೇಬರುತ್ತದೆ - ಶಬ್ದಾನುಶಾಸನಪ್ರಕಾರಹಳಗನ್ನಡದಲ್ಲೂ - ಳಕಾರವೇಬರುತ್ತದೆ.

ಕುಕ್ಕುಟ - ಕೋೞಿ - ಕೋಳಿ - ಮಠಿಕೆ - ಮೞಿಗೆ - ಮಳಿಗೆ - ಪೀ
ಠಿಕೆ - ಪೀೞಿಗೆ - ಪೀಳಿಗೆ - ಕಳಮ - ಕೞವೆ - ಕಳವೆ - ಅರ್ಗಳ
ಅಗೞಿ - ಅಗಳಿ - ಕ್ರೂರ - ಕೂೞ್ - ಕೂಳು - ಮೃತ್ಯು - ಮಿೞ್ತು
ಮಿತ್ತು - ಇತ್ಯಾದಿಗಳು ಕುಕ್ಕುಟಾದಿಗಳು.

೧೭ - ದ್ರಮಿಡ ಶಬ್ದಗಳನ್ನು ಕನ್ನಡದಲ್ಲಿ ಪ್ರಯೋಗಿಸುವಾಗ ಯಾವ ಯಾವ ವರ್ಣಕ್ಕೆ ಏನಾದೇಶ ಬರುತ್ತದೆ.

ಪದಾಂತದಲ್ಲಿರುವ ಸ್ವರವ್ಯಂಜನಗಳಿಗೆ ತತ್ಸಮ ಪ್ರಕರಣದಲ್ಲಿ ಹೇಳಿದ ಲೋಪಾಗಮಾದೇಶಗಳೆಲ್ಲಾ ಬರುತ್ತವೆ ಪದಾದಿಯಲ್ಲಿರುವ ಸ್ವರಗಳಿಗೆ ವಿಕಾರವೇ ಬರುವದಿಲ್ಲ - ತಮಿಳಿನಲ್ಲಿ ಪದಾದಿಯಲ್ಲಿರತಕ್ಕ ವ್ಯಂಜನಗಳು - க - ச - த - ந - ப ம - ய - வ - ஞ - ಈಯೆಂಟು - ಇವುಗಳಲ್ಲಿ - க ಕಾರಕ್ಕೆ ಕ ಕಾರವೂ - ச ಕಾರಕ್ಕೆ ಸ ಕಾರವೂ - த ಕಾರಕ್ಕೆ ತ ಕಾರವೂ - ப ಕಾರಕ್ಕೆ ಹ ಕಾರವೂ - வ ಕಾರಕ್ಕೆ ಬ ಕಾರವೂ - ಬರುತ್ತದೆ - ஞ ಕಾರಾದಿಗಳು ಕನ್ನಡದಲ್ಲಿ ಬರುವದಿಲ್ಲ - ந - ம - ய - ವರ್ಣಗಳಿಗೆ ಏನೂ ವಿಕಾರವಿಲ್ಲ:

ದ್ರಮಿಡ ಪದಮಧ್ಯದಲ್ಲಿ ಬರುವ ಸ್ವರಗಳಿಗೂ - ಬಹುತರವಾಗಿ ಏನೂ ವಿಕಾರವಿಲ್ಲ - ದ್ರಮಿಡ ಭಾಷೆಯಲ್ಲಿ க - ச - ட - த - ப - ற ಈ ಯಾರೂ ಪರುಷಾಕ್ಷರಗಳು - ங - ஞ - ண - ந - ம - ன ಈ ಯಾರೂ ಸರಳಾಕ್ಷರಗಳು - ய - ர - ல - வ - ழ - ள ಈ ಯಾರೂ ಮಧ್ಯಾಕ್ಷರಗಳೂ - ಅಂತೂ - ೧೮ ವ್ಯಂಜನಗಳೇ ಉಂಟಾದವು - ಅವಷ್ಟೂ ಕನ್ನಡದಲ್ಲಿ ಪದಮಧ್ಯದಲ್ಲಿ ಕೆಲವು ವಿಕಾರವನ್ನು ಹೊಂದಿಯೂ ಕೆಲವು ಹೊಂದದೇಯು ಬರುತ್ತದೆ - ಅವುಗಳಲ್ಲಿ ಅಸಂಯುಕ್ತವಾದ - க ಕಾರಕ್ಕೆ ಗ ಕಾರವೂ - ச ಕಾರಕ್ಕೆ ಸ ಕಾರವೂ - ட ಕಾರಕ್ಕೆ ಡ ಕಾರವೂ - த ಕಾರಕ್ಕೆ ದ ಕಾರವೂ - ற ಕಾರಕ್ಕೆ ಱ ಕಾರವೂ - ன ಕಾರಕ್ಕೆ ನ ಕಾರವೂ - ழ ಕಾರಕ್ಕೆ ೞ ಕಾರವೂ - ಬರುತ್ತದೆ - ಅಚ್ಚ ತಮಿಳಿನಲ್ಲೇ ಅಸಂಯುಕ್ತವಾದ - ங - ஞ - ಗಳುಳ್ಳ ಶಬ್ದಗಳಿಲ್ಲ - ಸಂಸ್ಕೃತ ಶಬ್ದಗಳು ಹೊರತು - ಅಚ್ಚ ತಮಿಳಿನಲ್ಲಿ - ಅಸಂಯುಕ್ತ ப ಕಾರವುಳ್ಳ ಶಬ್ದಗಳಿರುವದಾಗಿ ಕಾಣಬರದ್ದರಿಂದ ಅವುಗಳನ್ನಿಲ್ಲಿ ಬರೆಯಲಿಲ್ಲ ಅಂಥಾ ಸಂಸ್ಕೃತ ಶಬ್ದಗಳಿಗೆ ತಮಿಳಿನಲ್ಲಿ ಪ್ರಯೋಗವವೆ - ಅವುಗಳನ್ನೂ ಪ್ರಕರಣದಲ್ಲಿ ಬರದಿರುವದ್ದರಿಂದಿಲ್ಲಿ ಬರೆಯಲಿಲ್ಲ

ಣ-ನ-ಮ-ಯ-ರ-ಲ-ವ-ಳ - ಈ ಯೆಂಟು ವರ್ಣಗಳೂ ಯಾವದೊಂದು ವಿಕಾರವನ್ನಾಗಲಿ ಹೊಂದದೆಯೇ ಕನ್ನಡದಲ್ಲಿ ಪ್ರಯೋಗಿಸಲ್ಪಡುತ್ತವೆ - ಖ - ಛ - ಠ - ಥ - ಫ - ಗಳು ದ್ವಿತ್ವವನ್ನೈದಿದವಾಗಿದ್ದರೆ - ಅವುಗಳಿಗೆ ದ್ವಿತ್ವವನ್ನೈದಿದ - ಕ - ಚ - ಟ - ತ - ಪ - ಗಳಾದೇಶವಾಗಿ ಬರುತ್ತವೆ - ಘಕಾರ ದ್ವಿತ್ವಕ್ಕೆ ಗಕಾರ ದ್ವಿತ್ವ ಬರುತ್ತದೆ - ಝ - ಢ - ಧ - ಭ - ಇವುಗಳು ಶಿಥಿಲಗಳಲ್ಲಿಯೇ ದ್ವಿತ್ವವನ್ನೈದುವದಿಲ್ಲವಾದ್ದರಿಂದ ಕನ್ನಡದಲ್ಲುಂಟಾಗಲ್ಲ - ದ್ವಿತ್ವವನ್ನೈದಿದ - ಞಕಾರವುಳ್ಳ ಶಬ್ದಗಳಿಗೆ ಕನ್ನಡದಲ್ಲಿ ಪ್ರಯೋಗವಿಲ್ಲ ದ್ವಿತ್ವಬಂದಿರುವ - ಣ - ನ - ಮ - ಯ - ಲ - ಳ - ಈ ಯಾರು ವ್ಯಂಜನಗಳೂ ವಿಕಾರವಿಲ್ಲದೇ ಕನ್ನಡದಲ್ಲಿ ಬರುತ್ತವೆ - ಞಕಾರ ದ್ವಿತ್ವಕ್ಕೆ ನಕಾರ ದ್ವಿತ್ವ ಬರುತ್ತದೆ - ಙ - ಞ - ಣ - ನ - ಮ - ಱ - ಈ ಆರು ಸರಳಾಕ್ಷರಗಳು - ಪೂರ್ವದಲ್ಲಿಯೂ - ಉತ್ತರದಲ್ಲಿ - ಕ - ಚ - ಟ - ತ - ಪ - ಱ - ಈ ಯಾರು ಪರುಷಾಕ್ಷರಗಳೂ ಕ್ರಮವಾಗಿ ಶೇರುತ್ತವೆ - ಅವುಗಳಲ್ಲಿ - ಙಕ - ಂಗ - ಎಂತಲೂ - ಞಚ - ಂಜ - ಎಂತಲೂ - ಣಟ - ಂಡ - ಎಂತಲೂ - ನತ - ಂದ - ಎಂತಲೂ - ಮಪ - ಂಬ - ಎಂತಲೂ - ಱಱ - ಂದ - ಎಂತಲೂ - ಕನ್ನಡದಲ್ಲಿ ಬರೆಯಲ್ಪಡುತ್ತವೆ - ಉಚ್ಚಾರಣೆಯಲ್ಲಿ ಅದರದರ ವರ್ಗ ಪಂಚಮ ಪೂರ್ವಕ ವರ್ಗ ತೃತೀಯವಾಗ ಉಚ್ಚರಿಸಲ್ಪಡುತ್ತವೆ - ಪರುಷಾಕ್ಷರಗಳಲ್ಲಿಯೂ - ಮಧ್ಯಾಕ್ಷರಗಳಲ್ಲಿಯೂ - ಸರಳಾಕ್ಷರಗಳಲ್ಲಿಯೂ - ಕೆಲವು ವರ್ಣಗಳಿಗೆ ಪರಸ್ಪರ ಸಂಯೋಗವುಂಟು - ಆದರೆ - ಅಂಥಾ ಸಂಯೋಗವುಳ್ಳ ಶಬ್ದಗಳಿಗೆ ಕನ್ನಡದಲ್ಲಿ ಬಹುತರ ಪ್ರಯೋಗವಿಲ್ಲ - ಕೆಲವು ಶಬ್ದಗಳಿಗೆ ಪ್ರಯೋಗವುಂಟು - ಅವುಗಳು ಈ ಸೂತ್ರದಲ್ಲಿ ಹೇಳಿದ ಸಾಧಾರಣ ವಿಧಿಗೆ ಸೇರದ್ದರಿಂದ ಮುಂದಣ ಸೂತ್ರದಲ್ಲಿ ವಿಶೇಷ ವಿಧಿ ಹೇಳಲ್ಪಡುತ್ತದೆ - ಒಂದು ಪದದಲ್ಲಿರುವ ಅಕ್ಷರಗಳೊಳಗೊಂದಕ್ಕೂ ವಿಕಾರವಿಲ್ಲದಿದ್ದರೆ ಅವು

ಗಳಾ ಅಂತ್ಯವರ್ಣಕ್ಕೆ ಮಾತ್ರ ವಿಕಾರವುಳ್ಳ ಶಬ್ದಗಳಾ ತತ್ಸಮದಲ್ಲಿ ಸೇರುತ್ತವೆಯಾದ್ದರಿಂದ ವುಗಳಿಗೀ ಪ್ರಕರಣದಲ್ಲುದಾಹರಣೆ ಬರೆಯುವದಿಲ್ಲ - ಆದ್ಯಕ್ಷರಕ್ಕಾಗಲಿ ಮಧ್ಯಾಕ್ಷರಕ್ಕಾಗಲಿ ವಿಕಾರ ಬಂದಿರುವವುಗಳು ಮಾತ್ರ ಈ ಪ್ರಕರಣದಲ್ಲಿ ಸೇರುತ್ತವೆಯಾದ್ದರಿಂದ ಅವುಗಳಲ್ಲಿ ಕೆಲವು ಶಬ್ದಗಳಿಗೆ ಮಾತ್ರ ಇಲ್ಲುದಾಹರಣೆ ಬರೆಯಲ್ಪಡುತ್ತದೆ - ಹೊಸಗನ್ನಡದಲ್ಲಿ ಱಕಾರಕ್ಕೆ ರೇಫವು ೞಕ್ಕೆ ಳಕಾರವೂ ಬರುತ್ತದೆ - ವ್ಯಂಜನಾಂತಗಳಿಗೆ - ೭ನೇ ಪ್ರಕರಣದ - ೪೯ನೇ ಸೂತ್ರದಲ್ಲಿಯೇಳಿದ ಪ್ರಕಾರ ಹೊಸಗನ್ನಡಕ್ಕುಕಾರಾಗಮದ್ವಿತ್ವಗಳು ಬರುತ್ತವೆ - ಹಳಗನ್ನಡದಲ್ಲಿ ವಿಕಲ್ಪವಾಗಿ ಬರುತ್ತವೆ.

கறு - ಕಱು - கண் - ಕಣ್ಣು - கரை - ಕರೆ - சாவு - ಸಾವು சுருள் - ಸುರುಳು - சுளை - ಸೂಳೆ - சேர் - ಸೇರು - சொல் - ಸೊಲ್ಲು - சோர் - ಸೋರು - தரு - ತರು - தலை - ತಲೆ - தளிர் - ತಳಿರು தள் - ತಳ್ಳು - தாய் - ತಾಯು - தாழி - ತಾೞಿ - தாள் - ತಾಳು - திரி ತಿರಿ - தீர் - ತೀರು - துளி - ತುಳಿ - தூர் - ತೂರು - தேர் - ತೇರು தோல் - ತೊಲು - தோள் - ತೊಳು - பரி - ಹರಿ - பல - ಹಲ - பல் ಹಲ್ಲು - பல்லி - ಹಲ್ಲಿ - பள்ளி - ಹಳ್ಳಿ - பாய் - ಹಾಯು - பால் ಹಾಲು - பிரி - ಹಿರಿ - பீர் - ಹೀರು - பீலி - ಹೀಲಿ - புண் - ಹುಣ್ಣು புரி - ಹುರಿ - புலி - ಹುಲಿ - புல் - ಹುಲ್ಲು - புளி - ಹುಳಿ - பூ - ಹೂ பொரு - ಹೊರು - பேல் - ಹೇಲು - போல் - ಹೋಲು - வயல் - ಬಯಲು - வரு - ಬರು - வரை - ಬರೆ - வல - ಬಲ - வலை - ಬಲೆ - வாய் ಬಾಯು - வார் - ಬಾರು - விரி - ಬಿರಿ - வில் - ಬಿಲ್ಲು - வீ - ಬೀ வெல்லம் - ಬೆಲ್ಲ - வெள்ளி - ಬೆಳ್ಳಿ - வேர் - ಬೇರು - வேலி - ಬೇಲಿ ಇತ್ಯಾದಿ.

ಅಸಂಯುಕ್ತಪದಮಧ್ಯಾಕ್ಷರಗಳಿಗುದಾಹರಣೆ.

தகடு - ತಗಡು - தகரம் - ತಗರ - தகர் - ತಗರು - அகல் - ಅ

౧౮౨ ప్రశ్న. ఉత్తరము.

గలు - அகலம் - అగల - உகிர் - ఉగిరు - முகில் - మొగిలు - ந
கை - నగె - வகை - బగె - பாகல் - పాగలు - ஆகு - ఆగు - சோகை
సోగె - வாகை - బాగె - வீசு - బీసు - வசி - బసి - கசி - కసి - கடல் - క
డలు - கடி - కడి - நடை - నడె - தொடர் - తొడరు - அடி
అడి - கொடி - కొడి - தொடு - తొడు - பிடி - పిడి - மடி - మడి
முடி - ముడి - சுடு - సుడు - ஒடி - ఒడి - உடு - ఉడు - நடு - నడు
மடு - మడు - அடு - అడు - விடு - విడు - கெடு - కెడు - அடை
అడె - கடை - కడె - நடை - నడె - தொடை - తొడె - வேடர் - వే
డరు - ஆடு - ఆడు - ஈடு - ఈడు - ஓடு - ఓడు - காடு - కాడు - கூடு
కూడు - சேடு - సేడు - நாடு - నాడు - நீடு - నీడు - பாடு - పా
డు - வாடு - బాడు - வீடு - బీడు - ஓடை - ఓడె - மிதி - మిది - உதி
ఉది - குதிரை - కుదిరె - அதிர் - అదిరు - கதிர் - కదిరు - குதிர்
కుదిరు - முதிர் - ముదిరు - உதிர் - ఉదిరు - எதிர் - ఎదిరు - அ
று - అఱు - இறு - ఇఱు - உறு - ఉఱు - ஊறு - ఊఱు - ஓறு
ఓఱు - காறு - కాఱు - தேறி - తేఱి - மாதிரி - మాదిరి - மூதேவி
మూదేవి - கறடு - కఱడు - కరడు - பெறு - పెఱు - పెరు
கறவை - కఱవె - కరవె - உறி - ఉఱి - ఉరి - பறி - పఱి - ప
ఱి - పరి - முறி - ముఱి - మురి - அறி - అఱి - అరి - தறி - త
తఱి - తరి - மறு - మఱు - మరు - மறுகு - మఱుగు - మరుగు
முறுக்கு - ముఱుక్కు - మురుక్కు - அறுதி - అఱుది - అరుది
உறுதி - ఉఱుది - ఉరుది - அறை - అఱె - అరె - உறை - ఉఱె
ఉరె - கறை - కఱె - కరె - பொறை - పొఱె - బొఱె - బొ
రె - முறை - ముఱె - మురె - வறை - బఱె - బరె - ஆறு - ఆ
ఱు - ఆరు - ஈறு - ఈఱు - ఈరు - ஊறு - ఊఱు - ఊరు
ஏறு - ఏఱు - ఏరు - காறு - కాఱు - కారు - கூறு - కూఱు - కూ

ರು - சாறு - ಸಾಲು - ಸಾರು - சேறு - ಸೇಲು - ಸೇರು - ஏறு - ಏ
ಲು - ಏರು - தேறு - ತೇಲು - ತೇರು - நாறு - ನಾಲು - ನಾರು - நூ
று - ನೂಲು - ನೂರು - பாறு - ಪಾಲು - ಹಾಲು - ಹಾರು - வேறு
ಬೇಲು - ಬೇರು - சூறை - ಸೂಱೆ - ಸೂರೆ - பாறை - ಪಾಱೆ - ಹಾ
ಱೆ - ಹಾರೆ - அனல் - ಅನಲು - கனல் - ಕನಲು - இனி - ಇನಿ
கனி - ಕನಿ - பனி - ಪನಿ - ಹನಿ - முனி - ಮುನಿ - அனு - ಅನು
நனை - ನನೆ - நினை - ನಿನೆ - மனை - ಮನೆ - ஊனை - ಊನೆ - கூ
னு - ಕೂನು - சோனை - ಸೋನೆ - வான் - ಬಾನ್ - ஏனு - ಏನು
அழல் - ಅಲಲ್ - ಅಳಲು - உழு - ಉಲುವ - ಉಳು - கழல் - ಕಲ
ಲ್ - ಕಳಲು - தோழல் - ತೋಲಲ್ - ತೋಳಲು - அழி - ಅಲಿ
ಅಳಿ - சுழி - ಸುಲಿ - ಸುಳಿ - இழி - ಇಲಿ - ಇಳಿ - பிழி - ಪಿಲಿ
ಪಿಳಿ - வழி - ಬಲಿ - ಬಳಿ - புழு - ಪುಲುವ - ಹುಲುವ - ಹುಳು
நழுவு - ನಲುವು - ನಳುವು - மழை - ಮಲೆ - ಮಳೆ - பழையது - ಪ
ಲದು - ಹಳೇದು - கோழி - ಕೋಲಿ - ಕೋಳಿ - மூழி - ಮೂಲಿ
ಮೂಳಿ - மேழி - ಮೇಲಿ - ಮೇಳಿ - கோழை - ಕೋಲೆ - ಕೋಳೆ - தா
ழை - ತಾಲೆ - ತಾಳೆ - மூழை - ಮೂಲೆ - ಮೂಳೆ - மோழை - ಮೋ
ಲೆ - ಮೋಳೆ - வாழை - ಬಾಲೆ - ಬಾಳೆ - ஏழ் - ಏಲ್ - ಏಳು - காழ்
ಕಾಲ್ - ಕಾಳು - கீழ் - ಕೀಲ್ - ಕೀಳು - கூழ் - ಕೂಲ್ - ಕೂಳು - தா
ழ் - ತಾಲ್ - ತಾಳು - பாழ் - ಪಾಲ್ - ಹಾಲ್ - ಹಾಳು - வீழ் - ಬೀಲ್
ಬೀಳು - வாழ் - ಬಾಲ್ - ಬಾಳು - மாழ் - ಮಾಲ್ - ಮಾಳು - தொ
ழு - ತೊಲುವ - ತೊಳು - முழுகு - ಮುಲುಗು - ಮುಳುಗು - ಇತ್ಯಾ
ದಿಗಳ ಪ್ರಯೋಗಗಳ್ಯಗಳು.

ಪದಮಧ್ಯದಲ್ಲಿರುವ ದ್ವಿತ್ವಾಕ್ಷರಗಳಿಗುದಾಹರಣೆ.

எக்கு - ಎಕ್ಕು - ஒக்கு - ಒಕ್ಕು - சக்கு - ಸಕ್ಕು - சிக்கு - ಸಿಕ್ಕು - முக்கு
ಮುಕ್ಕು - விக்கு - ಬಿಕ್ಕು - உக்கு - ಉಕ್ಕು - கொக்கு - ಕೊಕ್ಕು - சொக்கு

ಪ್ರಶ್ನೆ: ಉತ್ತರವು:

ಸೊಜ್ಜು - இச்சகம் - ಇಜ್ಜಗ - நச்சு - ನಜ್ಜು - மெச்சு - ಮೆಜ್ಜು
உச்சி - ಉಜ್ಜೆ - நொச்சி - ನೊಜ್ಜೆ - முச்சில் - ಮುಜ್ಜೆಲು - அச்சு - ಅ
ಜ್ಜು - கச்சு - ಕಜ್ಜು - கிச்சு - ಕಿಜ್ಜು - குச்சு - ಕುಜ್ಜು - மச்சு - ಮಜ್ಜು
கொச்சை - ಕೊಜ್ಜೆ - பசசை - ಪಜ್ಜೆ - ಹಜ್ಜೆ - மட்டம் - ಮಟ್ಟೆ
வட்டம் - ಬಟ್ಟೆ - எட்டி - ಎಟ್ಟಿ - கட்டி - ಕಟ್ಟಿ - கிட்டி - ಕಿಟ್ಟಿ
தட்டி - ತೆಟ್ಟಿ - தொட்டி - ತೊಟ್ಟಿ - தொட்டில் - ತೊಟ್ಟಿಲು - வ
ட்டில் - ಬಟ್ಟಿಲು - எடு - ಎಟ್ಟು - ஒட்டு - ಒಟ್ಟು - கட்டு - ಕಟ್ಟು
தட்டு - ತೆಟ್ಟು - திட்டு - ತಿಟ್ಟು - பெட்டு - ಪೆಟ್ಟು - பொட்டு - ಪೊ
ಟ್ಟು - மட்டு - ಮಟ್ಟು - முட்டு - ಮುಟ್ಟು - மொட்டு - ಮೊಟ್ಟು - ந
ட்டு - ನಟ್ಟು - தட்டை - ತೆಟ್ಟೆ - அட்டை - ಅಟ್ಟೆ - மட்டை
ಮಟ್ಟೆ - மொட்டை - ಮೊಟ್ಟೆ - வட்டை - ಬಟ್ಟೆ - வெட்டை - ಬೆ
ಟ್ಟೆ - மொததம் - ಮೊತ್ತ - ஒத்து - ಒತ್ತು - கத்து - ಕತ್ತು - குத்து
ಕುತ್ತು - அத்தி - ಅತ್ತಿ - கத்தி - ಕತ್ತಿ - துத்தி - ತುತ್ತಿ - ஒத்து - ಒ
ತ್ತು - கத்து - ಕತ್ತು - குத்து - ಕುತ್ತು - பத்து - ಪತ್ತು - ಹತ್ತು
மெத்து - ಮೆತ್ತು - வித்து - ಬಿತ್ತು - தொத்து - ತೊತ್ತು - அத்தை
ಅತ್ತೆ - கத்தை - ಕತ್ತೆ - அபபம - ಅಪ್ಪ - ஒபபம - ಒಪ್ಪ - கபபம
ಕಪ್ಪ - தெப்பம - ತೆಪ್ಪ - குப்பி - ಕುಪ್ಪಿ - திப்பி - ತಿಪ್ಪಿ - அப்பு
ಅಪ್ಪು - ஒப்பு - ಒಪ್ಪು - உப்பு - ಉಪ್ಪು - கப்பு - ಕಪ್ಪು - கொப்பு
ಕೊಪ್ಪು - தப்பு - ತೆಪ್ಪು - துப்பு - ತುಪ್ಪು - தொப்பை - ತೊಪ್ಪೆ
ஒற்றி - ಒತ್ತಿ - நெற்றி - ನೆತ್ತಿ - எற்று - ಎತ್ತು - ஒற்று - ಒತ್ತು
சுற்று - ಸುತ್ತು - துற்று - ತುತ್ತು - பற்று - ಹತ್ತು - புற்று - ಹು
ತ್ತು - மற்று - ಮತ್ತು - கணம - ಕನ್ನ - பன்னு - ಹನ್ನು - மின்னு
ಮಿನ್ನು - வன்னி - ಬನ್ನಿ - முன்னீர் - ಮುನ್ನೀರು - ಇತ್ಯಾದಿಗಳು
ಪ್ರಯೋಗಗಸ್ಯಗಳು.

ಸರಳಪರುಷಸಂಯುಕ್ತಗಳಿಗುದಾಹರಣೆ.

தங்கு - ತೆಂಗು - துங்கு - ಸುಂಗು - தெங்கு - ತೆಂಗು - எஞ்சல்

ఎంజలు - நஞ்சு - నంజు - சுண்டல் - సుండలు - வண்டல் - బండలు மிண்டன் - మిండసు - வண்டன் - బండసు - திண்டி - తిండి தண்டு - తండు - வண்டு - బండు - அண்டை - అండె - உண்டை ఉండె - குண்டை - కుండె - கொண்டை - కొండె - தண்டை - తండె தொண்டை - తొండె - மண்டை - మండె - முண்டை - ముండె அந்தம் - అంద - கந்து - కందు - கந்தன் - కందసు - தொந்தி తొంది - கம்பம் - కంబ - சம்பளம் - సంబళ - அம்பு - అంబు கம்பு - కంబు - கொம்பு - కొంబు - தும்பு - తుంబు - நம்பு - నం బు - தும்பை - తుంబె - சொம்பு - చొంబు - பன்றி - హంది - அன் று - అందు - இன்று - ఇందు - முன்று - ముందు - பின்று - పిం దు - హిందు - ஒன்று - ఒందు - என்று - ఎందు - கன்று - కందు ఇత్యాది.

౧౬ - ద్రావిడ శబ్దగళల్లిరువ స్వరగళిగె కన్నడదల్లి ప్రయోగిసువాగెల్లా వికార బరువదిల్లవొ.

ఇడర్ - మొదలాద శబ్దగళల్లిరువ స్వరగళల్లి ప్రథమస్వరవాద ఇకారక్కె ఎకారవూ - ఉడల్ - మొదలాద శబ్దగళల్లిరువ స్వరగళల్లి ప్రథమస్వరవాద - ఉకారక్కె ఒకారవూ - బరుత్తదె - కదమ్యేవర్ణగళిగిదక్కె పూర్వసూత్రగళల్లి హేళిద విధిగళెల్లా బరుత్తవె.

இடர் - ఎదరు - இடை - ఎడె - இணை - ఎణె - இதழ் - ఎ దలు - ఎదళు - இட்டி - ఎట్టి - இளை - ఎళె - இலவம் - ఎలవ இலை - ఎలె - இழை - ఎఴె - ఎళె - இவளை - ఎళె - சிலை - సెలె சிறகு - సెలక - சிறை - సెఱె - సెరె - சிரம் - శెర - சிரள் - శెర ళు - திணை - తెణె - திறை - తెఱె - తెరె - தினை - తెనె - நிகழ் - నె గలు - నెగళు - நிசம் - నెజ - நிணம் - నెణ - நிலம் - నెల - நிலை నెలె - நிழல் - నెఴలు - నెళలు - நிறை - నెఱె - నెరె - நினை - నెనె

பிணம் - పీను - பிஞ்சு - పిన్జె - பிறகு - పిఱుద - పెరస - வி
ளா - వెలి - விளக்கு - వెళ్కు - விழா - వెళ్లి - உடல் - ఒడలు
உடை - ఒడె - உதறு - ఒదలు - ఒదరు - உதை - ఒదె - உரல்
ఒరలు - உரா - ఒరి - உளா - ఒలి - உறை - ఒఱె - ఒరి - கு
டை - కొడె - குரல் - కొరలు - குளா - కొలి - குழல் - కొలిల్
కొళ్లు - குழை - కొలి - కొళ్లి - குளகம் - కొళ్గ - குளம்
కొళ్ - குறடு - కొఱడు - కొరడు - சடர் - సొడరు - சு
ண்டல் - సొండలు - சுண்டன் - సొండ - சுண்டை - సొండె - நு
டை - నొడి - நுவா - నొళ్లె - நுகம் - నొగ - நுதல் - నొదలు
நுனா - నొరి - நுழை - నొలి - నొళ్లి - புகர் - పొగరు - புகழ்
పొగలి - పొగళు - புகை - పొగె - புங்கம் - పొంగె - புடை
పొడె - புணா - పొణ్లి - புரா - పొరి - புலம் - పొల - புளா
పొలి - புழல் - పొలిల్ - పొలిల్ - పొళ్లు - புனல் - పొ
నలు - புன்னா - పొన్నె - முகடு - మొగడు - முகை - మొగె - மு
தல் - మొదలు - முளா - మొలి - முப்ளா - మొల్లె - முழை - మొ
లి - మొళ్లి - முளா - మొళ్లి - முறம் - మొఱ - మొర - முறை
మొఱె - మొరి - முனா - మొనె - ఇత్యాదిగళు ప్రయోగగ
ళ్యగళు.

౧౭ - పదాదివ్యంజనగళిగె విశేష విధియేనాదరూ ఉంటో.

கசி మొదలాద శబ్దగళాది - క కారక్కె గ కారవూ - ச
க்கை మొదలాద శబ్దగళాది - చ కారక్కె జ కారవూ - சோடு
మొదలాద శబ్దగళాది - చ కారక్కె జకారవూ - தணி మొద
లాద పుగళాది - త కారక్కె ద కార వూ - படி మొదలాదవు
గళాది - ప కారక్కె హ కారాదేశవిల్లదె ప కారమాత్రవూ
பண்டு మొదలాదవుగళాది - ప కారక్కె బకారవూ - బరు

ತ್ರದೆ - ಊದಿವರ್ಣಾವನ್ನುಳ್ಳದವರ್ಣಾಗಳಿಗೆ - ಪೂರ್ವಸೂತ್ರಗಳಲ್ಲಿಹೇಳಿದವಿಧಿಗಳೂಬರುತ್ತವೆ.

கசி - ಗಸಿ - கஞ்சி - ಗಂಜಿ - கடு - ಗಡು - கவர் - ಗವರು - கவி - ಗವಿ - கவ்வை - ಗವ್ವೆ - கறை - ಗಱೆ - ಗರೆ - காரிகை - ಗಾರಿಗೆ - காவதம் - ಗಾವದ - கிளி - ಗಿಳಿ - கிள்ளு - ಗಿಳ್ಳು - கீறு - ಗೀಱು ಗೀರು - குடி - ಗುಡಿ - குடில் - ಗುಡಿಲು - குடிசை - ಗುಡಿಸೆ - குட்டம் ಗುಡ್ಡ - குண்டு - ಗುಂಡು - குதி - ಗುದಿ - குப்பு - ಗುಪ್ಪು - குழி - ಗುೞಿ - ಗುಳಿ - குறவன் - ಗೊಱವ - ಗೊರವ - குறி - ಗುಱಿ - ಗುರಿ குனி - ಗುನಿ - கொற்று - ಗೊಱ್ಱು - கூடு - ಗೂಡು - கூடை - ಗೂಡೆ கூனன் - ಗೂನ - கோள் - ಗೊಳು - ಇತ್ಯಾದಿಗಳು - கசி ಮೊದಲಾದವುಗಳು.

சக்கை - ಚಕ್ಕೆ - சட்டம் - ಚಟ್ಟ - சட்டை - ಚಟ್ಟೆ - சந்தம் ಚಂದ - சாடி - ಚಾಡಿ - சாவடி - ಚಾವಡಿ - சிப்பி - ಚಿಪ್ಪಿ - சில் - ಚಿಳ್ಳು சுட்டி - ಚುಟ್ಟಿ - சுள்ளி - ಚುಳ್ಳಿ - செண்டு - ಚೆಂಡು - சென்னை ಚೆನ್ನ - சேறு - ಚೇಱು - சொக்கம் - ಚೊಕ್ಕ - ಇತ್ಯಾದಿಗಳು - சக்கை ಮೊದಲಾದವುಗಳು.

சோடு - ಜೋಡು - சாடி - ಜಾಡಿ - சோழம் - ಜೋಳ - சல்லடை - ಜಲ್ಲಡಿ - சவளி - ಜವಳಿ - சாண் - ಜಾಣು - சாய் - ಜಾಯು - சேடன் - ಜೇಡ - ಇತ್ಯಾದಿಗಳು - சோடு ಮೊದಲಾದವುಗಳು.

தணி - ದಣಿ - தும்பி - ದುಂಬಿ - தாவு - ದಾರವು - துருசு ದುರುಸು - துறை - ದಾಱೆ - ದಾರೆ - தூறு - ದೂಱು - ದೂರು தட்டம் - ದಟ್ಟ - தாரி - ದಾರಿ - தாடி - ದಾಡಿ - திடம் - ದಿಟ - திட்டம் - ದಿಟ್ಟ - திண்ணை - ದಿಣ್ಣೆ - தோசை - ದೋಸೆ ಇತ್ಯಾದಿಗಳು தணி ಮೊದಲಾದವುಗಳು.

೧೭೮ ಪ್ರಶ್ನೆ. ಉತ್ತರವು.

பட்டி - ಪಟ್ಟಿ - பட்டு - ಪಟ್ಟು - பட்டை - ಪಟ್ಟೆ - பெட்டு ಪೆಟ್ಟು - பயிர் - ಪಯಿರು - பஞ்சை - ಪಂಜೆ - பிச்சை - ಪಿಚ್ಚೆ - பாடகம் - ಪಾಡಗ - பங்குனி - ಪಂಗುನಿ - பச்சை - ಪಚ್ಚೆ - படி - ಪಡಿ படை - ಪಡೆ - பிள்ளை - ಪಿಳ್ಳೆ - புடவி - ಪೊಡವಿ - புரட்டாசி ಪುರಟಾದಿ - பெட்டை - ಪೆಟ್ಟೆ - ಇತ್ಯಾದಿಗಳು ಪಟ್ಟಿ ಮೊದಲಾದವುಗಳು - பண்டை - ಬಂಡ - பண்டி - ಬಂಡಿ - பண்டு - ಬಂಡು போனம் - ಬೋನ - ಇತ್ಯಾದಿಗಳು - பண்டை - ಮೊದಲಾದವುಗಳು.

೧೭೯ - ದ್ರಮಿಳ ಶಬ್ದಗಳೊಳ ಕನ್ನಡಕ್ಕೆ ಬರುವಾಗ ಯಾವವರ್ಣಕ್ಕಾವರೂಪ ಬರುತ್ತದೆಯೊ.

அடங்கு ಮೊದಲಾದ ಶಬ್ದಗಳಲ್ಲಿ ಸಂಯೋಗಾದಿವ್ಯಂಜನಕ್ಕೆ ಲೋಪ ಬರುತ್ತದೆ - ಆ ಸಂಯೋಗ ಸರಳ ಪರುಷ ಸಂಯೋಗವಾಗಿದ್ದರೆ ಪರುಷಾಕ್ಷರಗಳಿಗೆ ಆ ಯಾವರ್ಗ ತೃತೀಯವಾದೇಶವಾಗಿ ಬರುತ್ತದೆ - ಪರುಷದ್ವಯ ಸಂಯೋಗವಾಗಿದ್ದರೆ ಆ ಯಾವರ್ಗ ಪ್ರಥಮವಾದೇಶವಾಗಿ ಬರುತ್ತದೆ - அமுங்கு ಮೊದಲಾದವುಗಳಲ್ಲಿ ವರ್ಗ ಪ್ರಥಮವಾದೇಶವಾಗಿ ಬರುತ್ತದೆ அரங்கு ಮೊದಲಾದ ಶಬ್ದಗಳಲ್ಲಿ ಸಂಯೋಗಾದಿವ್ಯಂಜನಕ್ಕೆ ಲೋಪ ಬಂದ ಮೇಲೆ ಆ ಯಾವರ್ಗ ತೃತೀಯವಾದೇಶವಾಗಿ ಬರುತ್ತದೆ ಕಡಮೆ ವರ್ಣಗಳಿಗೆ ಪೂರ್ವಸೂತ್ರಗಳಲ್ಲಿ ಹೇಳಿದ ವಿಧಿಗಳೆಲ್ಲಾ ಬರುತ್ತವೆ.

அடங்கு - ಅಡಗು - தொடங்கு - ತೊಡಗು - மடங்கு - ಮಡಗು - மடந்தை - ಮಡದಿ - ஒடுங்கு - ಒಡುಗು - நடுங்கு - ನಡುಗು உணங்கு - ಒಣಗು - சுணங்கு - ಸುಣಗು - இணங்கு - ಎಣಗು திருங்கு - ತಿರುಗು - அதுங்கு - ಅದುಗು - ஒதுங்கு - ಒದುಗು பதுங்கு - ಹದುಗು - புதுங்கு - ಹುದುಗು - துலங்கு - ತೊಲಗು தூங்கு - ತೂಗು - தூண்டு - ತೂಡು - தூம்பு - ತೂಂಬು - முழங்கு ಮೊಲಗು - ಮೊಳಗು - மைந்தன் - ಮೈದ - அரங்கு - ಅರಗು குரங்கு - ಕೊರಗು - சுரங்கு - ಸುರಗು - முருங்கு - ಮುರುಗು

துரும்பு - తురుము - குரும்பை - కురుబె - மலங்கு - మలగు
புலம்பு - పులుబు - தோண்டு - తొవ్వు - வேண்டு - వేడు - கூண்டு
గూడు - சாந்து - సాదు - சேந்து - సేదు - கூந்தல் - కూదలు
நீந்தல் - నీదు - அழுங்கு - అళుకు - அளுகு - ஒழுங்கு - ఒళు
కు - ఒళుకు - தாண்டு - దాటు - துளும்பு - తుళుపు - வழுங்கு
బళుకు - துணுக்கு - తునుకు - முருக்கு - మురుకు - சுருக்கு
చురుకు - பருக்கை - పరుకె - சுருட்டு - సురుటి - உருட்டு
ఉరుటు - சரக்கு - సరకు - தாக்கு - తాకు - ஆட்டம் - ఆటి
ஊட்டம் - ఊటి - ஓட்டம் - ఓటి - காட்டம் - కాటి - தோ
ட்டம் - తోటి - வாட்டம் - వాటి - சீட்டு - చీటు - கோட்டை
కోటె - பேட்டை - పేటె - வேட்டை - వేటె - மீட்டு - మీటు
மாட்டு - మాటు - கூட்டம் - కూటి - தோப்பு - తోపు - சீப்பு
చీపు - சுருக்கு - జరుకు - அரக்கு - అరగు - மூக்கு - మూగు
வடக்கு - బడగు - தேக்கு - తేగు - பாட்டு - పాడు - ஓத்து - ఓ
డు - ఇత్యాదిగళు ప్రయోగగమ్యగళు.

౧౯ - ద్రమిడదింద కన్నడక్కె తద్భవవాడువాగ ఇల్లాదరూ అక్షరలోపబరువదుంటూ.

ఉరుక్కు మొదలాద శబ్దగళల్లి మధ్యాక్షరవాద - రు - ఇదు గళిగె లోపబరుత్తదె - అంత్యాక్షర సరళ పరుషవాగిద్దరె - సరళపరుషగళిగె దక్కాద్విత్వవన్ను ఇదు ఆయా వర్ణాత్మకయవాదేశవాగి బరుత్తదె.

உருக்கு - ఉక్కు - முருக்கு - ముక్కు - எருக்கு - ఎక్కు - ஒருங்கு
ఒగ్గు - நெருங்கு - నెగ్గు - சுருங்கு - సుగ్గు - கருங்கு - కగ్గు - மருங்
கல் - మగ్గలు - பருத்தி - పత్తి - துருத்தி - తుత్తి - திருந்து - తిద్దు
பொருந்து - పొద్దు - பருந்து - పద్దు - மருந்து - మద్దు - மருப்பு
మబ్బు - இருப்பை - ఇప్పె - கருப்பை - కప్పె - கருப்பு - కప్పు

இருமை - ಇಮ್ಮೆ - எருமை - ಎಮ್ಮೆ - ஒருமை - ಒಮ್ಮೆ - கரும்பு - ಕಬ್ಬು - கழுத்து - ಕತ್ತು - உழுந்து - ಉದ್ದು - அழுந்து - ಅದ್ದು - கொழுப்பு - ಕೊಬ್ಬು - மழுங்கு - ಮಸ್ಗು - ಇತ್ಯಾದಿಗಳು உருக்கு ಮೊದಲಾದವು ಪ್ರಯೋಗಗಳು,

೨೦ - ದ್ರಮಿಡಶಬ್ದಸ್ಥ ಸ್ವರವ್ಯಂಜನಗಳನ್ನು ಅರಿತು ಮೇಲಿ ಹೇಳಿದ ವಿಧಿಗಳು ಹೊರ್ತು ಬ್ಯೇರೆ ವಿಧಿಗಳುಂಟಾ.

பெயர் ಮೊದಲಾದ ಶಬ್ದಗಳು ಪ್ರಯೋಗಗಳು - ಇದರ ಉದಾಹರಣದಲ್ಲಿ ಯಾವ ಯಾವ ವರ್ಣಗಳಿಗೆ ಏನೇನು ಆದೇಶ ಬಂದದ್ದಾಗಿ ಹೇಳಿದೆಯೋ ಅಂಥಾ ಶಬ್ದಗಳು - ಈಗಣದಲ್ಲಿ ಎತ್ತಿದೇ ಇದ್ದಾಗ್ಯೂ ಅವು - ದ್ರಮಿಡ ಶಬ್ದ ಹೊಂದಿಗೆ ಅಲ್ಪಸಾಜಾತ್ಯವುಳ್ಳ ಶಬ್ದಗಳು - பெயர் ಮೊದಲಾದವುಗಳಿಂದ ತಿಳಿಯತಕ್ಕದ್ದು.

பெயர் - ಪೆಸರು - ಹೆಸರು - பயிர் - ಪಸಿರು - ಹಸಿರು - மயிர் - ಮಸಿರು - உயிர் - ಉಸಿರು - வயிறு - ಬಸಿಲು - ಬಸಿರು - முயிர் - ಮುಸಿಱು - வெயில் - ಬಿಸಿಲು - நுதல் - ನೊಸಲು - முதலை - ಮೊಸಳೆ - ಇತ್ಯಾದಿಗಳು - பெயர் ಮೊದಲಾದವು - குடி - ಕುಟಿ - சந்தை - ಸಂತೆ - விந்தை - ವಿಂತೆ - முத்து - ಮುದ್ದು - முத்தை - ಮುದ್ದೆ - மித்தை - ಮಿಡ್ಡೆ - மெத்தை - ಮೊತ್ತೆ - சொத்தை - ಸೊಟ್ಟೆ - செத்தை - ಸೆಡೆ - சட்டி - ಜಡಿ - வட்டித்தில் - ಬಡಿಸು - இரும்பு - ಇರುಗು - துவரை - ತೊಗರಿ - மாமன் - ಮಾವ - ஆமை - ಆವೆ - சாமை - ಸಾವೆ - பாம்பு - ಹಾವು - காம்பு - ಕಾವು - வேம்பு - ಬೇವು - கீழ் - ಕೇವು - செம் - ಕೆಮ್ - சில - ಕೆಲ - செவி - ಕಿವಿ - செவிடு - ಕಿವುಡು - சேரி - ಕೇರಿ - செய் - ಗೇಯು - சாணி - ಗೇಣು - தேன் - ಜೇನು - தொழும் - ಕೊಟ್ಟಿ - தேசி - ಜೇಡಿ - தாமணி - ದಾವಣಿ - தோண்டான் - ಜೊಂಡ - வெண்ணெய் - ಬೆಣ್ಣೆ - கால்வாய் - ಕಾಲುವೆ - முருங்கை - ನುಗ್ಗೆ - மயில் - ನವಿಲು - பம்பரம் - ಬುಗರಿ - வெதிர் - ಬಿದಿರು - மெளகு - ಮೆಣಸು - முழங்கால் - ಮೊಣಕಾಲು - முத்தில் - ಮುಬ್ಬೆಲು - மேற்கு - ಮೇಗ - வலம்புரி - ಬಲಮುರಿ - பால் - ಹಾಲು - பறவி

ಪಲುಬಿ - ಹಲುವಿ - ಹರುಬಿ - நாக்கு - ನಾಲಿಗೆ - இரண்டு - ಎರಡು நாலு - ನಾಲ್ಕು - எட்டு - ಎಂಟು - பாம்பு - ಪಾವು - ಇತ್ಯಾದಿಗಳೂ ಉಯಿರ್ ಮೊದಲಾದವು ಪ್ರಯೋಗಗಮ್ಯಗಳು.

೨೦ - ಹಳಗನ್ನಡಶಬ್ದಗಳು ಹೊಸಗನ್ನಡವಾಗುವಾಗ್ಯೇನಾದರೂ ವಿಶೇಷವುಂಟೇ.

ಹಳಗನ್ನಡ ಪದಗಳಲ್ಲಿರುವ ಸ್ವರಗಳಿಗೆ ವಿಕಾರ ಬರುವದಿಲ್ಲ - ವ್ಯಂಜನಾಂತಗಳಿಗೆಲ್ಲಾ ಉಕಾರಾಗಮ ಬರುತ್ತದೆ - ಮತ್ತು - ೩ನೇ ಪ್ರಕರಣದ ೬ನೇ ಸೂತ್ರ ಪ್ರಕಾರ ಣ - ನ - ಲ - ಯ - ಳ - ಗಳಿಗೆ ದ್ವಿತ್ವ ಸಹ ಬರುತ್ತದೆ - ಪದಾದಿ ಪಕಾರಕ್ಕೆ ಹಕಾರ ಬರುತ್ತದೆ - ಱಕಾರಕ್ಕೆ ರೇಫವೂ - ೞಕ್ಕೆ ಳಕಾರವೂ ಬರುತ್ತದೆ - ಪಿಸುಂಕು ಮೊದಲಾದ ಕೆಲವು ಧಾತುಗಳಲ್ಲಿರುವ ಅನುಸ್ವಾರಕ್ಕೆ ಲೋಪ ಬರುತ್ತದೆ - ಉದಿರ್ಬು ಮೊದಲಾದ ಶಬ್ದಗಳಲ್ಲಿ ಸಂಯೋಗಪರವಾದ ಬು ಶಬ್ದಕ್ಕೆ - ಇಸು - ಎಂಬಾದೇಶ ಬರುತ್ತದೆ - ನಾಣ್ಬು ಧಾತುವಿನಲ್ಲಿರುವ ಣಕಾರಕ್ಕೆ ಲೋಪ ಬರುತ್ತದೆ - ಸೊರ್ಕು - ಮೊದಲಾದ ಶಬ್ದಗಳಲ್ಲಿರುವ ಸಂಯೋಗಾದಿಯಾಗಿರುವ - ರೇಫ - ೞ - ಗಳಿಗೆ - ಪರಸವರ್ಣವಾದೇಶವಾಗುತ್ತದೆ - ಬರ್ದುಕು - ಮೊದಲಾದ ಶಬ್ದಗಳಲ್ಲಿರುವ ಸಂಯೋಗಾದಿ ರೇಫಕ್ಕೆ ಲೋಪ ಬರುತ್ತದೆ - ಇನ್ನೂ ಅನೇಕ ವಿಶೇಷಗಳು - ಈ ವಿಷಯದಲ್ಲಿ ಹೇಳಬೇಕಾಗಿದೆ - ಅವೆಲ್ಲಾ ಹಳಗನ್ನಡ ಕಾಂಡದಲ್ಲಿ ವಿವರವಾಗಿ ಹೇಳಲ್ಪಡುತ್ತದೆ.

ಕಣ್ - ಕಣ್ಣು - ಪೊನ್ - ಹೊನ್ನು - ಮೆಯ್ - ಮೆಯ್ಯು - ಕಲ್ - ಕಲ್ಲು - ಮುಳ್ - ಮುಳ್ಳು - ಊಳ್ - ಊಳು - ನೂಲ್ - ನೂಲು - ಪಾಲ್ - ಹಾಲು - ಪೆಣೆ - ಹೆಣೆ - ಮುಱುಕು - ಮುರುಕು - ಮುೞುಕು - ಮುಳುಕು - ಸೊರ್ಕು - ಸೊಕ್ಕು - ತೆಲ್ಗು - ತೆಗ್ಗು - ಪಿಸುಂಕು - ಪಿಸುಕು - ಉದಿರ್ಬು - ಉದಿರಿಸು - ನಾಣ್ಬು - ನಾಚು - ಬರ್ದುಕು - ಬದುಕು - ಕಡಮೆ ವಿವರವೆಲ್ಲಾ ಶಬ್ದಮಂಜರಿಯಲ್ಲಿ ಹೇಳಲ್ಪಡುತ್ತದೆ.

ಇಂತು - ಎಂಟನೆಯ ತದ್ಭವ ಪ್ರಕರಣ ಮುಗಿಯಿತು.

ಪ್ರಶ್ನೆ.	ಉತ್ತರವು.
೧. ಸಮಾಸ ಪ್ರಕರಣದಲ್ಲೇನು ಹೇಳಲ್ಪಡುತ್ತದೆ.	ಸಮಾಸಗಳ ಸ್ವರೂಪಗಳೂ - ಅವುಗಳ ಭೇದಗಳೂ - ವಿಗ್ರಹವಚನ ವಿಧಿಯೂ - ಆಗ ಬರುವ ಲೋಪಾದೇಶಾಗಮ ಪ್ರತ್ಯಯಗಳೂ ಹೇಳಲ್ಪಡುತ್ತವೆ.
೨. ಸಮಾಸವೆಂದರೇನು.	ಒಂದು ಪದವು ತನ್ನೊಂದಿಗೆ ಸೇರತಕ್ಕ ಮತ್ತೊಂದು ಪದದೊಂದಿಗೆ ಸೇರಿ ಒಂದು ಪದವಾಗಿ ಒಂದೇ ಅರ್ಥವನ್ನು ಹೇಳುವದು ಸಮಾಸಪದವು.
೩. ಆ ಸಮಾಸವೆಷ್ಟು ವಿಧವು.	ಲುಕ್ಸಮಾಸವೆಂತಲೂ - ಅಲುಕ್ಸಮಾಸವೆಂತಲೂ - ಎರಡು ವಿಧವು.
೪. ಲುಕ್ಸಮಾಸವೆಂದರೇನು.	ಎರಡು ಪದಗಳ ವಿಭಕ್ತಿಯೂ ಲೋಪಿಸಿದಾಸ್ತಾಗಿ ಅದಕ್ಕೆ ಲಿಂಗವೆಂಬ ಹೆಸರು ಬಂದು ಬೇರೆ ವಿಭಕ್ತಿಪ್ರತ್ಯಯಗಳು ಬಂದರೆ ಅದು ಲುಕ್ಸಮಾಸವು.
೫. ಅಲುಕ್ಸಮಾಸವೆಂದರೇನು.	ಹಿಂದಣ ಪದದ ವಿಭಕ್ತಿಮಾತ್ರ ಲೋಪಿಸದೆ - ಮುಂದಣ ಪದದ ವಿಭಕ್ತಿಮಾತ್ರ ಲೋಪಿಸಿ ಲಿಂಗಸಂಜ್ಞೆ ಬಂದುದಾಸ್ತಾಗಿ ಬೇರೆ ವಿಭಕ್ತಿ ಹುಟ್ಟಿದರೆ ಅದು ಅಲುಕ್ಸಮಾಸವು.
೬. ಈ ವಿವರವೆಲ್ಲಾ ಎಲ್ಲಿ ಹೇಳಲ್ಪಡುತ್ತದೆ.	ಆಯಾಸ್ಥಳದಲ್ಲಿ ಹೇಳಲ್ಪಡುತ್ತದೆ.
೭. ಈ ಸಮಾಸವು ಬೇರೆ ವಿಧವಾಗಿ ವಿಭಾಗಿಸಲ್ಪಡುತ್ತದೆಯೋ.	ತತ್ಪುರುಷ - ಏಕದೇಶಿ - ಕರ್ಮಧಾರಯ - ಬಹುವ್ರೀಹಿ - ಸಂಖ್ಯಾ - ದ್ವಂದ್ವವೆಂದಾರು ವಿಧವು.
೮. ತತ್ಪುರುಷವೆಂದರೇನು.	ಉತ್ತರಪದಾರ್ಥಪ್ರಧಾನವಾದದ್ದು ತತ್ಪುರುಷವು.
೯. ತತ್ಪುರುಷವೆಷ್ಟು ವಿಧವು.	ತತ್ಪುರುಷವಾರು ವಿಧವು.
೧೦. ಅವುಗಳ ಹೆಸರೇನು.	ದ್ವಿತೀಯೆ - ತೃತೀಯೆ - ಚತುರ್ಥಿ - ಪಂಚಮಿ - ಷಷ್ಠಿ - ಸಪ್ತಮಿ ಇವು ಆರೂ ತತ್ಪುರುಷಗಳು.

೧೧ - ದ್ವಿತೀಯಾತತ್ಪುರುಷವು ಯಾವದು.

ದ್ವಿತೀಯಾಂತವು ಕಾಲ ಸೇರತಕ್ಕ ಕೃದಂತದೊಂದಿಗಾಗಲಿ ತಿಙಂತದೊಂದಿಗಾಗಲಿ ಸೇರಿದರೆ - ಅದು ದ್ವಿತೀಯಾತತ್ಪುರುಷವು ಇಲ್ಲಿ - ಅ - ಇ - ಎ - ಅಂತವಾದ ಪೂರ್ವಪದದ ಕಡೆಗೆ ವಿಕಲ್ಪವಾಗಿ ದೀರ್ಘ ಬರುತ್ತದೆ.

ಕೂಟವ - ಮಾಡಿದನು - ಕೂಟಾಮಾಡಿದನು.
ಕೂಟವ - ಕೂಡುತ್ತಾನೆ - ಕೂಟಾಕೂಡುತ್ತಾನೆ.
ಬಾವಿಯ - ತೋಡಿದನು - ಬಾವೀತೋಡಿದನು.
ಬಾವಿಯ - ತೋಡುತ್ತಾನೆ - ಬಾವೀತೋಡುತ್ತಾನೆ.
ಮನೇಕಟ್ಟಿದನು - ಊರುಕಂಡನು - ಇತ್ಯಾದಿ.

೧೨ - ಊರುಕಂಡನೆಂಬಲ್ಲಿ ಊರು ಶಬ್ದಕ್ಕೆ ದ್ವಿತೀಯೆ ಪರವಾದಾಗ ಲೋಪಿಸಿದ ಉಕಾರವು ಸಮಾಸದಲ್ಲಿ ಹ್ಯಾಂಗೆ ಬಂತು.

ಅಲೌಕಿಕವಿಗ್ರಹವಾಕ್ಯಗಳಿಗೆ ಸಮಾಸವ್ಯವಹಾರ್ಯ ಬೇರೆಯಿಲ್ಲವಾದರಿಂದ ಉಕಾರಕ್ಕೆ ಲೋಪವೇ ಬರುವದಿಲ್ಲವು.

೧೩ - ವಿಗ್ರಹವಾಕ್ಯವೆಂದರೇನು.

ಸಮಾಸವ ಮಾಡಲಿಕ್ಕೋಸ್ಕರ ಹೇಳುವ ವಾಕ್ಯವು ವಿಗ್ರಹವಾಕ್ಯವು.

೧೪ - ಅವುಗಳೆಷ್ಟು ವಿಧವು.

ಲೌಕಿಕವಿಗ್ರಹವಾಕ್ಯವೆಂತಲೂ - ಅಲೌಕಿಕವಿಗ್ರಹವಾಕ್ಯವೆಂತಲೂ ಎರಡು ವಿಧವು.

೧೫ - ಅವುಗಳ ಸ್ವರೂಪವೇನು.

ಅರ್ಥವು ತಿಳಿಯುವದಕ್ಕೋಸ್ಕರ ಸಿದ್ಧವಾದ ರೂಪವ ಹೇಳುವದು ಲೌಕಿಕವಿಗ್ರಹವಾಕ್ಯವು - ಶಬ್ದವು ಸುಲಭವಾಗಿ ಹುಟ್ಟಲಿಕ್ಕೋಸ್ಕರ ಪ್ರಕೃತಿಪ್ರತ್ಯಯಗಳ ಬಿಡಿಸಿ ಹೇಳುವ ವಾಕ್ಯವು ಅಲೌಕಿಕವಿಗ್ರಹವಾಕ್ಯವು.

ಊರನ್ನ - ಕಂಡನು - ಇದು ಲೌಕಿಕವಿಗ್ರಹವಾಕ್ಯವು.
ಊರು - ಅನ್ನ - ಕಂಡನು - ಇತ್ಯಾದಿ ಅಲೌಕಿಕವಿಗ್ರಹವಾಕ್ಯವು.

೧೬ - ತೃತೀಯಾತತ್ಪುರುಷ ಹ್ಯಾಂಗೆ.

ತೃತೀಯಾಂತಗಳು ಕಾಲ ಸೇರತಕ್ಕ ಕೃದಂತ ತಿಙಂತಗಳಾಂದಿಗೆ ಸೇರಿದರೆ - ಅದು ತೃತೀಯಾತತ್ಪುರುಷವು.

ನೀರಿಂದ - ತೊಳೆದನು - ನೀರುತೊಳೆದನು.

ನೀರಿಂದ - ತಾಳೆಯುತ್ತಾನೆ - ನೀರುತಾಳೆಯುತ್ತಾನೆ - ಇತ್ಯಾದಿ.

೧೭ - ಚತುರ್ಥೀತತ್ಪುರುಷವು ಹ್ಯಾಂಗೆ.

ವಿಕಾರವಾಚಕ ಚತುರ್ಥಿಯು ತನ್ನ ವಿಕಾರಿವಾಚಕದೊಂದಿಗೆ ಶೇರಿದರೆ ಚತುರ್ಥೀತತ್ಪುರುಷವು - ಇಲ್ಲಾ ಪೂರ್ವಪದದ ಕಡೆಯ ಇ - ಎ - ಗಳಿಗೆ ದೀರ್ಘ ಬರುತ್ತದೆ.

ಶೇರಿಗೆ - ಮರವು - ಶೇರುಮರವು.

ಬಳೆಗೆ - ಚಿನ್ನವು - ಬಳೇಚಿನ್ನವು.

ಇಲ್ಲಿ ಶೇರು ಮೊದಲಾದ ಚತುರ್ಥ್ಯಂತಗಳು ವಿಕಾರವಾಚಕಗಳು ಮರ ಮೊದಲಾದವು ವಿಕಾರಿವಾಚಕಗಳು - ಈ ವಿವರವೆಲ್ಲಾ ಪ್ರಯೋಗ ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಲ್ಪಡುತ್ತವೆ.

೧೮ - ಪಂಚಮೀತತ್ಪುರುಷವು ಹ್ಯಾಂಗೆ.

ಪಂಚಮ್ಯಂತವು ತಾನು ಶೇರತಕ್ಕ ಭಯಾರ್ಥಕಗಳೊಂದಿಗೆ ಶೇರಿದರೆ ಪಂಚಮೀತತ್ಪುರುಷವು.

ಹುಲಿಯ ದೆಶೆಯಿಂದ ಅಳ್ಕು - ಹುಲಿಯಳ್ಕು - ಇತ್ಯಾದಿ.

೧೯ - ಷಷ್ಠೀತತ್ಪುರುಷವು ಹ್ಯಾಂಗೆ.

ಎಲ್ಲಾ ಷಷ್ಠ್ಯಂತಗಳು ತಾನು ಶೇರತಕ್ಕ ಸುಬಂತಗಳೊಂದಿಗೆ ಶೇರಿದರೆ ಷಷ್ಠೀತತ್ಪುರುಷವು - ಇಲ್ಲಾ ಪೂರ್ವಪದದ ಕಡೆಯ - ಇಕಾರ - ಎಕಾರಗಳಿಗೆ ದೀರ್ಘ ಬರುತ್ತದೆ.

ಮರದ - ಕೊಂಬು - ಮರಗೊಂಬು.

ಬಾಳೆಯ - ಹಣ್ಣು - ಬಾಳೇಹಣ್ಣು - ಇತ್ಯಾದಿ.

೨೦ - ಈ ಸಮಾಸದಲ್ಲಿ ಪೂರ್ವಪದಕ್ಕೇನಾದರೂ ವಿಶೇಷವುಂಟಾ.

ಅರಸು ಶಬ್ದಕ್ಕೆ - ಮನೆ - ಮಗ ಮೊದಲಾದ ಶಬ್ದಗಳು ಪರವಾದಾಗ ಅರಸು ಶಬ್ದದ ಸುವಿಗೆ ಲೋಪ ಬರುತ್ತದೆ.

ಅರಸಿನ - ಮನೆ - ಅರಮನೆ.

ಅರಸಿನ - ಮಗ - ಅರಮಗ - ಇತ್ಯಾದಿ:

೨೧ - ಈ ಷಷ್ಠೀತತ್ಪುರುಷದಲ್ಲಿ ವಿಭಕ್ತಿಲೋಪವೆಲ್ಲಾದರೂ ಇಲ್ಲದೆಯಿರುವದುಂಟಾ.

ಇಕಾರಾಂತ ಎಕಾರಾಂತಗಳನ್ನುಳಿದ ಅಕ್ಷರದ ವಿಕಾರ ಷಷ್ಠಿಗಳಿಗೂ - ಅದು ಶಬ್ದಪರವಾದರೂ ಸಂಜ್ಞೆಯಲ್ಲೂ ಷಷ್ಠಿಗೆ ಲೋಪ ಬರುವದಿಲ್ಲವು - ಇಕಾರಾಂತ ಏಕಾರಾಂತಗಳಿಗೆ ವಿಕಲ್ಪವಾಗಿ ಲೋಪ ಬರುತ್ತದೆ - ಇದಕ್ಕೆ ಅಲುಕ್ಸಮಾಸವೆಂದು ಹೆಸರು.

ಬೇಲದ-ಮರ-ಬೇಲದಮರ-ಹುಣಿಸೆಯ-ಮರ-ಹುಣಿಸೇಮರ.
ಬೇಲದ-ಹಣ್ಣು-ಬೇಲದಹಣ್ಣು.
ಗ್ರಾಮದ-ಅವ-ಗ್ರಾಮದವ-ಬನ್ನಿಯ-ಮರ-ಬನ್ನೀಮರ.
ಕೆಂಚನ-ಹಳ್ಳಿ-ಕೆಂಚನಹಳ್ಳಿ-ಇತ್ಯಾದಿ.

೨೨. ಸಪ್ತಮೀತತ್ಪುರುಷ ಹ್ಯಾಂಗೆ.

ಸಪ್ತಮ್ಯಂತವು ಒಳ್ಳಿತೆಂಬರ್ಥದಲ್ಲೂ-ಜಾಣನೆಂಬರ್ಥದಲ್ಲೂ-ಇರುವ ಪದಗಳೊಂದಿಗೆ ಸೇರುತ್ತದೆ.

ಕಾಯಲ್ಲಿ-ಒಳ್ಳಿದನು-ಕಾಯೊಳ್ಳಿದನು.
ಕೆಲಸದಲ್ಲಿ-ಜಾಣನು-ಕೆಲಸಜಾಣನು-ಇತ್ಯಾದಿ.

೨೩-ಏಕದೇಶಿಯೆಂದರೇನು.

ಪೂರ್ವಪದಾರ್ಥಪ್ರಧಾನವಾದ್ದು ಏಕದೇಶಿಯು-ಇದನ್ನು ಕೆಲವರು ಪ್ರಥಮಾತತ್ಪುರುಷವೆನುತ್ತಾರೆ-ಕೆಲವರು-ಅವ್ಯಯೀಭಾವವೆನುತ್ತಾರೆ.

೨೪-ಅದು ಹ್ಯಾಂಗೆ.

ಏಕದೇಶವ ಹೇಳುವ ಪ್ರಥಮಾಂತ ಶಬ್ದಗಳು ತನ್ನುಳ್ಳ ಷಷ್ಠ್ಯಂತವಾದ ಏಕದೇಶಿಯೊಂದಿಗೆ ಸೇರುತ್ತದೆ-ಆಗ ಅಡಿಶಬ್ದದ ಮುವಿಗೆ ಅನುಸ್ವಾರಾದೇಶ ಬರುತ್ತದೆ-ಮೇಗು ಶಬ್ದದ ಮುವಿಗೆ ಲೋಪವಾಗಲಿ-ಅನುಸ್ವಾರಾದೇಶವಾಗಲಿ ಬರುತ್ತದೆ-ತುದಿಕಡೆಶಬ್ದಗಳನ್ನುಳಿದ ಕಡಿಮೆಶಬ್ದಗಳ ಮುವಿಗೆ ಲೋಪ ಬರುತ್ತದೆ.

ಕಾಲಿನ-ಅಡಿ-ಅಂಗಾಲು-ಕಾಲಿನ ಮೇಗು-ಮೇಗಾಲು-ಮೇಂಗಾಲು.
ಕಾಲಿನ ಮುಂದು-ಮುಂಗಾಲು-ಕಾಲಿನ ಹಿಂದು-ಹಿಂಗಾಲು.
ಕಾಲಿನ ತುದಿ-ತುದಿಗಾಲು-ಕಡೆಗಾಲು-ಇತ್ಯಾದಿ.

೨೫-ಕರ್ಮಧಾರಯವೆಂದರೇನು.

ಒಂದು ವಸ್ತುವ ಹೇಳುವ ಒಂದೇ ವಿಭಕ್ತಿಯುಳ್ಳ ಎರಡು ಸುಬಂತವು ಒಂದಕ್ಕೊಂದಕ್ಕೆ ಸೇರಿದರೆ ಅದು ಕರ್ಮಧಾರಯವು.

೨೬-ಆ ಕರ್ಮಧಾರಯವೆಷ್ಟು ವಿಧವು.

ವಿಶೇಷಣಪೂರ್ವಪದ-ವಿಶೇಷಣೋಭಯಪದ-ಉಪಮಾನಪೂರ್ವಪದ-ಉಪಮಾನೋತ್ತರಪದ-ಉತ್ತರಪದಲೋಪಿ-ರೂಪಕವೆಂದು ಆರುವಿಧವು.

ಪ್ರಶ್ನೆ.	ಉತ್ತರವು.
೨೭ - ವಿಶೇಷಣಪೂರ್ವಪದವು ಯಾವುದು.	ಸಮಾನಾಧಿಕರಣವಾದ ಪದಗಳಾಗಿ ವಿಶೇಷಣವಾಚಕ ವಿಶೇಷ್ಯದೊಂದಿಗೆ ಸೇರಿದರೆ ಅದು ವಿಶೇಷಣಪೂರ್ವಪದ ಕರ್ಮಧಾರಯವು.
೨೮ - ಸಮಾನಾಧಿಕರಣವೆಂದರೇನು.	ಪ್ರವೃತ್ತಿನಿಮಿತ್ತಭೇದವುಳ್ಳ ಎರಡು ಶಬ್ದಗಳು ಒಂದೇ ಅರ್ಥವ ಹೇಳಿದರೆ ಅದು ಸಮಾನಾಧಿಕರಣವು - ಪ್ರವೃತ್ತಿನಿಮಿತ್ತವು ೭ನೆಯ ಪ್ರಕರಣದ - ೩೯ - ೪೦ - ೪೧ನೆಯ ಸೂತ್ರಗಳಲ್ಲಿ ವಿವರಿಸಲ್ಪಟ್ಟಿದೆ.
೨೯ - ಇವರಲ್ಲಿ ವಿಶೇಷಣವಿಶೇಷ್ಯಗಳೆಂಥಾವವು.	ಜಾತಿಪ್ರವೃತ್ತಿನಿಮಿತ್ತವು ಕಡಮೆಯೂ ಸೇರಿದರೆ ಜಾತಿಪ್ರವೃತ್ತಿನಿಮಿತ್ತಕವೇ ವಿಶೇಷ್ಯ - ಕಡಮೆ ವಿಶೇಷಣವು - ಎರಡೂ ಜಾತಿಪ್ರವೃತ್ತಿನಿಮಿತ್ತಕವಾಗಿದ್ದರೂ - ಕಡಮೆಯೂ ಒಂದದಕ್ಕೊಂದಕ್ಕೆ ಸೇರಿದರೂ ವಿಶೇಷಣವಿಶೇಷ್ಯಗಳು ಮನಸ್ಸುಬಂದ ಹಾಂಗೆ ಹೇಳಲ್ಪಡುವದು ಇದಕ್ಕುದಾಹರಣೆ ಕೆಳಗಿನ ಸೂತ್ರದಲ್ಲಿ ಬರುತ್ತದೆ. ಕರಿದಾದ - ಕುದುರೆ - ಕರಿಕುದುರೆ. ಮಾಡಿದ - ಮನುಷ್ಯನು - ಮಾಡಿದ ಮನುಷ್ಯನು. ತಿಮ್ಮನೆಂಬ - ಗೌಡನು - ತಿಮ್ಮೇಗೌಡನು - ಇತ್ಯಾದಿ.
೩೦ - ವಿಶೇಷಣೋಭಯಪದವು ಯಾವುದು.	ಜಾತಿಸಂಜ್ಞೆಗಳನ್ನುಳಿದ ಕಡಮೆಗಳಲ್ಲಿರಡೂ ಏಕಪ್ರವೃತ್ತಿನಿಮಿತ್ತಕವಾಗಿದ್ದರೆ ಅವುಗಳೊಂದಕ್ಕೊಂದಕ್ಕೆ ಸೇರಿದರೆ - ಅದು ವಿಶೇಷಣೋಭಯಪದವು. ಕರಿದಾಗಿಯೂ - ಬಿಳಿದಾಗಿಯೂ ಇರುವದು - ಕರಿಬಿಳಿದು.
೩೧ - ಉಪಮಾನಪೂರ್ವಪದವು ಯಾವುದು.	ಉಪಮಾನವಾಚಕವು ಉಪಮೇಯವಾಚಕದೊಂದಿಗಾಗಲಿ - ಸಾಧಾರಣಧರ್ಮವಾಚಕದೊಂದಿಗಾಗಲಿ ಸೇರಿದರೆ - ಅದು ಉಪಮಾನಪೂರ್ವಪದವು.
೩೨ - ಉಪಮಾನವೆಂದರೇನು.	ವರ್ಣಿಸತಕ್ಕ ವಸ್ತುವಿಗೆ ಭಿನ್ನವಾಗಿಯೂ - ಅದರಲ್ಲಿ ಹೇಳಬಗೆದ ಧರ್ಮವ ಹೆಚ್ಚಾಗುಳ್ಳದಾಗಿಯೂ - ಹೇಳಬಗೆದ ವಸ್ತುವು ಉಪಮಾನವು.

೪೩ - ಉಪಮೇಯವೆಂದರೇನು.

ವರ್ಣಿಸತಕ್ಕ ವಸ್ತುವು ಉಪಮೇಯವು.

ತಾವರೆಯಂತೆ ಕೆಂಪು - ತಾವರೆಗೆಂಪು - ತಾವರೆಯ ಹೋಲುವ ಕಣ್ಣು - ತಾವರೆಗಣ್ಣು - ಇತ್ಯಾದಿ.

ಇಲ್ಲಿ ತಾವರೆಯು ವರ್ಣಿಸತಕ್ಕ ಕಣ್ಣಲ್ಲಿರುವ ಕೆಂಪಿಗಿಂತ ಹೆಚ್ಚಾದ ಕೆಂಪುಳ್ಳದ್ದಾದ್ದರಿಂದ ತಾವರೆಯುಪಮಾನವು - ಕಣ್ಣುಪಮೇಯವು - ತಾವರೆಗೆಂಪೆಂಬಲ್ಲಿ ತಾವರೆಯುಪಮಾನವು ಕೆಂಪು ಸಾಧಾರಣಧರ್ಮವು ಎಂದರೆ ಉಪಮಾನೋಪಮೇಯಗಳೆರಡರಲ್ಲಿಯೂ ಏಕರೀತಿಯಾಗಿರುವದಾಗಿ ಹೇಳಬಗೆದ ಧರ್ಮವು.

೪೪ - ಉಪಮಾನೋತ್ತರಪದವ್ಯಾವುದು.

ಉಪಮೇಯಪದವ ಮುಂದೆ ಹೇಳಿ ಉಪಮಾನಪದವ ಹಿಂದೆ ಹೇಳಿದರೆ ಅದು ಉಪಮಾನೋತ್ತರಪದವು.

ತಾವರೆಯ ಹೋಲುವ ಕಣ್ಣು - ಕಣ್ದಾವರೆ.

೪೫ - ರೂಪಕಸಮಾಸವ್ಯಾವುದು.

ರೂಪ್ಯವು ರೂಪಕದೊಂದಿಗೆ ಸೇರಿದರೆ ಅದು ರೂಪಕವು.

೪೬ - ರೂಪಕರೂಪ್ಯಗಳಾವವು.

ಯಾವ ವಸ್ತುವನ್ನು ಸಾಮ್ಯದಿಂದ ಮತ್ತೊಂದು ವಸ್ತುವಾಗಿ ಅರಿತು ಹೇಳಿದರೆ ಅದು ರೂಪ್ಯವು - ಮತ್ತೊಂದು ರೂಪಕವು.

ಕಾಳ್ಕೆ - ತಾವರೆಯೇ ಕಣ್ಣು - ತಾವರೆಗಣ್ಣು - ಇತ್ಯಾದಿ.

೪೭ - ಉತ್ತರಪದಲೋಪಿ ವ್ಯಾವುದು.

ಕೃತ್ಸಂಜ್ಞೋತ್ತರಪದಸಮಾಸಪದವು ಮತ್ತೊಂದು ಸಮಾನಾಧಿಕರಣವಿಶೇಷ್ಯಪದದೊಂದಿಗೆ ಸೇರಿದರೆ ಆಗ ಉತ್ತರಪದವಾದ ಕೃದಂತಕ್ಕೆ ವಿಕಲ್ಪವಾಗಿ ಲೋಪ ಬರುತ್ತದೆ - ಅದು ಲೋಪ ಬಂದಾಗ ಉತ್ತರಪದಲೋಪಿ ಕರ್ಮಧಾರಯವು.

ಜವ್ವಾಜಿಯ ಮಾರುವ - ಶೆಟ್ಟಿ - ಜವ್ವಾಜಿಶೆಟ್ಟಿ.

ಮನೆಯಲ್ಲಿರುವ - ಮನುಷ್ಯ - ಮನೇಮನುಷ್ಯ.

೪೮ - ಕರ್ಮಧಾರಯದಲ್ಲಿಲ್ಲಾದರೂ ಲೋಪಾಗಮಾದೇಶಗಳುಂಟಾ.

ಪೂರ್ವಪದವಾದ ತಾತಕಾರ್ಥಗಳಲ್ಲಿ ಬಂದಿರುವ ಅದು ಪ್ರತ್ಯಯದ ದುವಿಗೆ ಲೋಪ ಬರುತ್ತದೆ - ಆಗ ಇಕಾರಕ್ಕೂ ಎಕಾರಕ್ಕೂ ದೀರ್ಘ ಬರುತ್ತದೆ.

 ಪ್ರಶ್ನೆ. ಉತ್ತರವು.

ಓಡುವದು - ಕುದುರೆ - ಓಡುವಕುದುರೆ.

ಓಡಿದದು - ಕುದುರೆ - ಓಡಿದಕುದುರೆ - ಇತ್ಯಾದಿ.

೩೯ - ಇದಕ್ಕಪವಾದವುಂಟೋ.

ಉಕಾರಾಂತ ಧಾತುಗಳು - ನಡೆ ಮೊದಲಾದ ಧಾತುಗಳು - ವರ್ತಮಾನ ಭವಿಷ್ಯತ್ತುಗಳಲ್ಲಿ ಬಂದಿರುವ ಉವಾಗಮಕ್ಕೆ ಅದರ ಮೇಗಳ ಪ್ರತ್ಯಯದೊಂದಿಗೆ ವಿಕಲ್ಪವಾಗಿ ಲೋಪ ಬಂದು ಧಾತು ಸ್ವರೂಪ ಮಾತ್ರವುಳಿಯುತ್ತದೆ - ಆದಾಗ್ಯು ವಿನ ಕಡೆಯಕಾರಕ್ಕೆ ದೀರ್ಘಸಹ ಬರುತ್ತದೆ - ಹಾರು ಮೊದಲಾದವುಗಳಿಗೆ ದೀರ್ಘ ವಿಕಲ್ಪವಾಗಿ ಬರುತ್ತದೆ.

ಓಡುವದು - ಕುದುರೆ - ಓಡೂ ಕುದುರೆ - ಓಡುವಕುದುರೆ - ಇತ್ಯಾದಿ.

ಹಾರು - ಓಡು - ಹುಟ್ಟು - ಬೇಸು - ಬಿಡು - ಕೊಡು - ಸುತ್ತು ಬೆಚ್ಚು - ಇತ್ಯಾದಿ.

೪೦ - ಪೂರ್ವಪದವಾದ ಗುಣವಚನಗಳಿಗೇನು ಬರುತ್ತದೆ.

ಪೂರ್ವಪದವಾದ - ಉ - ದು - ಅಂತವಾದ ಗುಣವಚನಗಳ ದುವಿಗೆ ಲೋಪವಾಗಲಿ - ಅಕಾರಾದೇಶವಾಗಲಿ - ಅಕಾರಾದಿಯಲ್ಲದ ತ್ರಿಕಕ್ಕೆ ಲೋಪವಾಗಲಿ ಬರುತ್ತದೆ - ದು ಲೋಪ ಬಂದಾಗ - ಅದರ ಹಿಂದಣ - ಏಕಾರಾಂತ - ಇಕಾರಾಂತಗಳಿಗೆ ದೀರ್ಘ ಬರುತ್ತದೆ - ತ್ರಿಕ ಲೋಪ ಬಂದಾಗ - ಇನಾದಿಗಳನ್ನುಳಿದವರ ಇಕಾರಕ್ಕೆ ಏಕಾರಾದೇಶ ಬರುತ್ತದೆ - ತ್ರಿಕ ಲೋಪ ಬಂದಾಗ ಉ - ಕರ್ ಎಂಬದರ ಅಕಾರಕ್ಕೆ ದೀರ್ಘಸಹ ಬರುತ್ತದೆ - ಹಳದು ಎಳದು ಶಬ್ದಗಳ ದುವಿಗೆ ಮಾತ್ರ ಯಕಾರಾದೇಶವಾಗಲಿ - ಏಯಾದೇಶವಾಗಲಿ ಬರುತ್ತದೆ.

ಬಿಳಿದು - ತಾವರೆ - ಬಿಳೀದಾವರೆ - ಬಿಳಿಯದಾವರೆ - ಬೆಳ್ದಾವರೆ ಹೊಸದು - ಮನೆ - ಹೊಸಮನೆ - ದೊಡ್ಡದು - ಗುಡಿ - ದೊಡ್ಡಗುಡಿ ಕರಿದು - ಆನೆ - ಕರಿಯಾನೆ - ಕರೀಯಾನೆ - ಕಾರಾನೆ - ಹಳದು - ಬಟ್ಟೆ - ಹಳೀಬಟ್ಟೆ - ಹಳಿಯಬಟ್ಟೆ - ಎಳೆಯ - ಎಲೆ - ಎಳೀಯೆಲೆ - ಇನಿದು ಮಾವು - ಇಮ್ಮಾವು - ಇನಿಯ ಮಾವು - ಇತ್ಯಾದಿ.

ಇನ್ - ಬಿಣ್ - ಕಿರ್ - ಬಿರ್ - ಇತ್ಯಾದಿಗಳು ಇನಾದಿಗಳು.

೪೧ - ಕಿರಿದು ಶಬ್ದಕ್ಕೇನು ಬರುತ್ತದೆ.

ಕಿರಿದು ಶಬ್ದದ ತ್ರಿಕಕ್ಕೆ ಲೋಪ ಬಂದಾಗ ವ್ಯಂಜನಾದ್ಯುತ್ತರಪದ ಪರವಾಗಲು ತ್ರಿಕಕ್ಕೊಂದು ವೇಳೆ ಉಕಾರಾಗಮ ಬರುತ್ತದೆ.

ಕಿರಿದು - ಅಡಿ - ಕಿತ್ತಡಿ - ಕಿರಿದು - ಕೋಲು - ಕಿರುಗೋಲು.

೪೨ - ಕಡಿದು ನಿಡಿದು ಶಬ್ದಗಳಿಗೇನು ಬರುತ್ತದೆ.

ತ್ರಿಕಲೋಪ ಬಂದಾಗ ವ್ಯಂಜನಾದ್ಯುತ್ತರಪದ ಪರವಾಗಲು ತ್ರಿಕಕ್ಕೆ ಉಕಾರಾಗಮ ಬರುತ್ತದೆ.

ಕಟ್ಟಡವಿ - ನಿಟ್ಟುಸುರು.
ಕಡುಬಾಗಿ - ನಿಡುಗಣ್ಣು. } ಇತ್ಯಾದಿ.

೪೩ - ನಡು ಶಬ್ದಕ್ಕೇನು ಬರುತ್ತದೆ.

ಸ್ವರಾದ್ಯುತ್ತರಪದ ಪರವಾಗಲು ನಡು ಶಬ್ದದ ಡುವಿಗೆ ಟಕಾರಾದೇಶ ಬರುತ್ತದೆ.

ನಟ್ಟಡವಿ - ಇತ್ಯಾದಿ.

೪೪ - ಕೆಚ್ಚನೆ ಮೊದಲಾದವುಗಳಿಗೇನು ಬರುತ್ತದೆ.

ಕೆಚ್ಚನೆ ಮೊದಲಾದ ಶಬ್ದಗಳ ಮೊದಲ ಚಕಾರಕ್ಕೊಂದು ಮಕಾರಾದೇಶ ಬರುತ್ತದೆ - ಅದರ ಮೇಗಳ ವರ್ಣಕ್ಕೆಲ್ಲಾ ಲೋಪ ಬರುತ್ತದೆ - ಕೆಚ್ಚನೆಯ ಕಕಾರಕ್ಕೆ ಚಕಾರಾದೇಶವು ವಿಕಲ್ಪವಾಗಿ ಬರುತ್ತದೆ - ಕಿಸು ಮೊದಲಾದಾದೇಶಗಳು ಒಂದು ವೇಳೆ ಬರುತ್ತದೆ.

ಕೆಂಚನೆಯಾದ ಕಣ್ಣು - ಕೆಂಗಣ್ಣು - ಚೆಂಗಣ್ಣು - ಕಿಸುಗಣ್ಣು.
ಬೆಚ್ಚನೆ ಬೂದಿ - ಬೆಂಬೂದಿ - ಬಿಸುಬೂದಿ.
ಪಚ್ಚನೆ - ಎಲೆ - ಪಂದಲೆ - ಪಸೀದಲೆ - ಇತ್ಯಾದಿ.

೪೫ - ಸಂಖ್ಯಾವಾಚಕಗಳಾದ ಪೂರ್ವಪದಗಳಿಗೇನು ವಿಕಾರ ಬರುತ್ತದೆ.

ಉತ್ತರಪದ ಸ್ವರಾದಿಯಾಗಿದ್ದ ಪಕ್ಷದಲ್ಲಿ ಒಂದು ಶಬ್ದಕ್ಕೆ ಓರ್ ಎಂತಲೂ - ಎರಡು ಶಬ್ದಕ್ಕೆ - ಈರ್ ಎಂತಲೂ - ಹತ್ತು ಶಬ್ದಕ್ಕೆ ಒಂದು - ಎರಡು ಶಬ್ದಗಳು ಪರವಾದಾಗ - ಅದರ ತ್ರಿಕಕ್ಕೆ ಸಂಯುಕ್ತನಕಾರವೂ - ಐದು - ಆರು - ಏಳು - ಎಂಟು ಶಬ್ದಗಳು ಪರವಾದಾಗ - ತ್ರಿಕಕ್ಕೆ - ದಿನ್ ಆದೇಶವೂ ಬರುತ್ತದೆ.

ಉತ್ತರಪದ ವ್ಯಂಜನಾದಿಯಾಗಿದ್ದರೆ - ಒಂದು ಶಬ್ದಕ್ಕೆ - ಒ - ಎರಡು ಶಬ್ದಕ್ಕೆ - ಇ - ಮೂರು ಶಬ್ದಕ್ಕೆ - ದುಲೋಪವೂ ಬರುತ್ತದೆ ಆದರೆ ಹತ್ತು ಶಬ್ದವನ್ನುಳಿದ ಕಡೆಯ ವ್ಯಂಜನಾದಿಗಳು ಪ

ರವಾದಾಗ ಹ್ರಸ್ವಸಹಾ ಬರುತ್ತದೆ - ಹತ್ತು ಶಬ್ದ ಪರವಾದಾಗ ಮಾತ್ರ ಹ್ರಸ್ವ ಬರುವದಿಲ್ಲ - ನಾಲ್ಕು - ಐದು - ಎಂಟು ಶಬ್ದಗಳಿಗೆ ಡುಲೋಪ ಬರುತ್ತದೆ - ನಾಲ್ಕು ಶಬ್ದಕ್ಕೆ ನೂರು ಶಬ್ದ ಪರವಾದಾಗ ತ್ರಿಕಲೋಪ ಬರುತ್ತದೆ - ಆರು ಶಬ್ದದ ಆಕಾರಕ್ಕೆ ಹ್ರಸ್ವ ಬರುತ್ತದೆ - ಹತ್ತು ಶಬ್ದದ ತ್ರಿಕಕ್ಕೆ ಮೂರು ನಾಲ್ಕು ಶಬ್ದಗಳು ಪರವಾದಾಗ - ದಿ - ಆದೇಶ ಬರುತ್ತದೆ - ಆರು - ಏಳು - ನೂರು ಸಾವಿರ - ಈ ಶಬ್ದಗಳ ಕಡೆಯ ಸ್ವರಕ್ಕೆ ಲೋಪ ಬರುತ್ತದೆ - ಒಂಬತ್ತು ಶಬ್ದಕ್ಕೆ ಪತ್ತು ಶಬ್ದ ಪರವಾದಾಗ - ತೊಮ್ - ಆದೇಶವೂ - ನೂರು ಸಾವಿರ ಪರವಾದಾಗ - ಒಂಬಯ್ - ಆದೇಶವೂ ಬರುತ್ತದೆ.

ಒಂದು - ಆನೆ - ಓರಾನೆ - ಒಂದು - ತಲೆ - ಒತ್ತಲೆ - ಎರಡು ಆನೆ - ಈರಾನೆ - ಎರಡು - ತಲೆ - ಇತ್ತಲೆ - ಮೂರು - ನೂರು ಮುನ್ನೂರು - ಮೂರು - ಪತ್ತು - ಮೂವತ್ತು - ನಾಲ್ಕು - ಮೊಗ - ನಾಲ್ಮೊಗ - ನಾಲ್ಕು - ನೂರು - ನಾನೂರು - ಐದು - ನೂರು - ಐನೂರು ಆರು - ಪತ್ತು - ಅರುವತ್ತು - ಎಂಟು - ಮೊಗ - ಎಣ್ಮೊಗ - ಏಳು ನೂರು - ಏಳ್ನೂರು - ಸಾವಿರ - ಮೊಗ - ಸಾವಿರ್ಮೊಗ - ಹತ್ತು ಮೂರು - ಹದಿಮೂರು - ಹತ್ತುನಾಲ್ಕು - ಹದಿನಾಲ್ಕು - ಒಂಬತ್ತು - ಹತ್ತು - ತೊಂಬತ್ತು - ಒಂಬತ್ತು - ನೂರು - ಒಂಬಯ್ನೂರು.

೪೬ - ಅದು ಮೊದಲಾದವಕ್ಕೇನು ಬರುತ್ತದೆ.

ಅದುವಿಗೆ - ಆ - ಇದುವಿಗೆ - ಈ - ಉದು - ಊ - ಯಾವದು ಯಾವ - ಎಲ್ಲಕ್ಕೆ - ಎಲ್ಲಾ - ಇತ್ಯಾದಿ.

ಆಮನೆ - ಈಮನೆ - ಯಾವಮನೆ - ಎಲ್ಲಾಮನೆ - ಇತ್ಯಾದಿ.

೪೭ - ಬಹುವ್ರೀಹಿಯೆಂದರೇನು.

ಅನೇಕ ಪದಗಳು ಸೇರಿ ಮತ್ತೊಂದು ವಸ್ತುವನ್ನು ಹೇಳಿದರೆ ಅದು ಬಹುವ್ರೀಹಿ ಸಮಾಸವು.

೪೮ - ಆ ಬಹುವ್ರೀಹಿಯೆಷ್ಟು ವಿಧವು.

ಸಮಾನಾಧಿಕರಣವೆಂತಲೂ - ವ್ಯಧಿಕರಣವೆಂತಲೂ - ವ್ಯತಿಹಾರವೆಂತಲೂ ಮೂರು ವಿಧವು.

೪೯ - ಸಮಾನಾಧಿಕರಣಬಹುವ್ರೀಹಿ ಯಾವುದು.

ಸಮಾನಾಧಿಕರಣಗಳಾದ ಪದಗಳು ಸೇರಿ ಮತ್ತೊಂದು ಪದಾರ್ಥವನ್ನು ಹೇಳಿದರೆ ಅದು ಸಮಾನಾಧಿಕರಣಬಹುವ್ರೀಹಿಯು.

ನಿಡಿದಾದ ತೋಳು ಯಾವನಿಗೋ - ಅವನು ನಿಡುದೋಳನು ಇತ್ಯಾದಿ.

೫೦ - ವ್ಯಧಿಕರಣಬಹುವ್ರೀಹಿ ಯಾವದು.

ಪ್ರಥಮಾಂತವು ಸಪ್ತಮ್ಯಂತದೊಂದಿಗೆ ಸೇರಿ ಅನ್ಯಪದಾರ್ಥವನ್ನು ಹೇಳಿದರೆ ಅದು ವ್ಯಧಿಕರಣಬಹುವ್ರೀಹಿಯು.

ಶಶಿ - ತಲೆಯಲ್ಲಿ ಯಾರಿಗೋ - ಅವನು - ಶಶಿತಲೆಯನು.

೫೧ - ವ್ಯತಿಹಾರಬಹುವ್ರೀಹಿಯೆಂದರೇನು.

ಒಂದೇ ಅರ್ಥವುಳ್ಳ ಒಂದೇ ರೂಪವುಳ್ಳ ಎರಡು ತೃತೀಯಾಂತ ಪದಗಳು ಅದರಿಂದ ಹೊಡೆದಾಡುತ್ತಾ ಮಾಡುವ ಯುದ್ಧವೆಂಬರ್ಥದಲ್ಲಿ ಸೇರುತ್ತದೆ - ಮತ್ತು ಅಂಥಾ ಸಪ್ತಮ್ಯಂತ ಪದಗಳು ಅದರಲ್ಲಿ ಹಿಡಿದು ಮಾಡುವ ಕಾಳಗವೆಂಬರ್ಥದಲ್ಲಿಯೂ ಸೇರುತ್ತದೆ - ಇವು ವ್ಯತಿಹಾರಬಹುವ್ರೀಹಿಯು.

ಕೋಲಿಂದ - ಕೋಲಿಂದ - ಹೊಡೆದು - ಒಬ್ಬರಿಗೊಬ್ಬರಿಗೆ ಮಾಡುವ ಕಾಳಗ ಕೋಲಾಕೋಲಿ ಇತ್ಯಾದಿ.

ಜುಟ್ಟಿನಲ್ಲಿ ಹಿಡಿದು - ಒಬ್ಬರಿಗೊಬ್ಬರಿಗೆ ಮಾಡುವ ಕಾಳಗ ಜುಟ್ಟಾಜುಟ್ಟಿ - ಇತ್ಯಾದಿ.

೫೨ - ಈ ಬಹುವ್ರೀಹಿಗಳಲ್ಲಿ ಪ್ರತ್ಯಯಾಗಮಾದೇಶಗಳೇನು ಬರುತ್ತವೆ.

ಸಮಾನಾಧಿಕರಣವ್ಯಧಿಕರಣಬಹುವ್ರೀಹಿಗಳಲ್ಲಿ ಸಮಾಸಕ್ಕೆ ಅಟ್ ಪ್ರತ್ಯಯ ಬರುತ್ತದೆ - ಹಳಗನ್ನಡದಲ್ಲಿ ವ್ಯಂಜನಾಂತಗಳಾದ ಪದಗಳು ಉತ್ತರಪದವಾದುಳ್ಳ ಬಹುವ್ರೀಹಿಗೆ ಅಪ್ ಪ್ರತ್ಯಯ ಬರುತ್ತದೆ - ಈ ಪ್ರತ್ಯಯಗಳಲ್ಲಿರುವ ಟಕಾರ ಪಕಾರಗಳಿಗೆ ಲೋಪ ಬರುತ್ತದೆ - ಇಲ್ಲಿ ಉಚ್ಚರಿಸಿದ್ದಕ್ಕೆ ಪ್ರಯೋಜನವು ಸ್ತ್ರೀಪ್ರತ್ಯಯದಲ್ಲಿ ತಿಳಿದುಕೊಳ್ಳುವದು.

ಹಾಸಮತಿಯನು - ಕಿಂಸ್ಮಾದುಲನು - ಇತ್ಯಾದಿ.

ಶಶಿತಲೆಯನು - ಎಸಳುಗಣ್ಣನು - ಇತ್ಯಾದಿ.

ಪ್ರಶ್ನೆ.	ಉತ್ತರವು.
೫೩೩ - ಇದಕ್ಕಪವಾದವುಂಟಾ.	ಬಾಗಾದಿಶಬ್ದಗಳನ್ನು - ಇಲ್ಲಶಬ್ದವನ್ನು ಉತ್ತರಪದವಾಗುಳ್ಳ - ಬಹುವ್ರೀಹಿಗೆ ಇ ಪ್ರತ್ಯಯ ಬರುತ್ತದೆ ಇಲ್ಲಶಬ್ದದ ಉಪಧೆಗೆ ಲೋಪಸಹ ಬರುತ್ತದೆ. ಕಡುಬಾಗಿ - ಹಲ್ಲು - ಇಲ್ಲ - ಹಲ್ಲಿಲಿ.
೫೩೪ - ವ್ಯತಿಹಾರಬಹುವ್ರೀಹಿಯಲ್ಲೇನು ಬರುತ್ತದೆ.	ಇಲ್ಲಿ ಇ ಪ್ರತ್ಯಯ ಬರುತ್ತದೆ - ಪೂರ್ವಪದದ ಕಡೆಗೆ ಆಕಾರಾದೇಶವೂ ಬರುತ್ತದೆ. ಕೋಲಾಕೋಲಿ - ಜುಟ್ಟಾಜುಟ್ಟಿ - ಇತ್ಯಾದಿ.
೫೩೫ - ಸಂಖ್ಯಾಸಮಾಸವೆಂದರೇನು.	ಸಂಖ್ಯಾವಾಚಕಗಳು ಸಂದೇಹವಾಗಲಿ - ವಿಕಲ್ಪವಾಗಲಿ ಬಾರಿಯೆಂಬರ್ಥವಾಗಲಿ ಬರುವಾಗ ಸೇರಿದರೆ ಅದು ಸಂಖ್ಯಾಸಮಾಸವು. ನಾಲ್ಕೊ - ಅಯ್ದೊ - ನಾಲ್ಕೈದು. ನಾಲ್ಕಾಗಲಿ - ಐದಾಗಲಿ - ನಾಲ್ಕೇದು. ನಾಲ್ಕುಬಾರಿ - ಐದು - ನಾಲ್ಕೈದು - ಇತ್ಯಾದಿ.
೫೩೬ - ದ್ವಂದ್ವಸಮಾಸವೆಂದರೇನು.	ಏಕಾರ್ಥವಾಚಕವಲ್ಲದೆ ಒಂದು ಪದದಲ್ಲಿ ಸಮಾನವಾಗಿ ಅನ್ವಯಿಸತಕ್ಕ ಸುಬಂತಗಳನೇಕಗಳು ಒಂದಕ್ಕೊಂದಕ್ಕೆ ಸೇರಿದರೆ - ಅದು ದ್ವಂದ್ವವು. ಆನೆಯೂ - ಕುದುರೆಯೂ - ಆನೆಕುದುರೆಗಳು. ಆನೆಯೂ - ಕುದುರೆಯೂ - ಕತ್ತೆಯೂ - ಆನೆಕುದುರೆಕತ್ತೆಗಳು.
೫೩೭ - ದ್ವಂದ್ವಕ್ಕಪವಾದವುಂಟಾ.	ಏಕಶೇಷವು ದ್ವಂದ್ವಾಪವಾದವು.
೫೩೮ - ಏಕಶೇಷವೆಂದರೇನು.	ದ್ವಂದ್ವಮಾಡತಕ್ಕ ಪದಗಳಲ್ಲಿ ಎಲ್ಲಾ ಪದಗಳೂ ಹೋಗಿ ಒಂದು ನಿಂತರೆ ಅದು ಏಕಶೇಷವು.
೫೩೯ - ಏಕಶೇಷವೆಲ್ಲಿ ಬರುತ್ತದೆ.	ಅರ್ಥವನ್ನಾಗಲಿ - ಆನುಪೂರ್ವಿಯನ್ನಾಗಲಿ - ಎರಡನ್ನಾಗಲಿ ಒಂದೇರೀತಿಯಾಗುಳ್ಳ ಪದಗಳಿಗೆ ಏಕಶೇಷ ಬರುತ್ತದೆ.

ಚದುರನೂ - ಜಾಣನೂ - ಚದುರರು - ಅಲ್ಲವೆ - ಜಾಣರು ಇಲ್ಲಿ ಅರ್ಥ ಒಂದು - ಆನುಪೂರ್ವಿ ಬೇರೆ.

ರಾಮನೂ - ರಾಮನೂ - ರಾಮರು - ಇಲ್ಲರ್ಥ ಬೇರೆ - ಕುದುರೆಯೂ - ಕುದುರೆಯೂ - ಕುದುರೆಗಳು - ಇಲ್ಲೆರಡೂ ಒಂದೇ ಆಗಿವೆ.

೬೦ - ಅರ್ಥಾನುಪೂರ್ವಿಗಳೆರಡೂ ಭೇದವಾಗಿರುವಲ್ಲಿಲ್ಲಾದರೂ ಏಕಶೇಷವುಂಟೋ.

ತ್ಯದಾದಿಗಳೊಂದಿಗೆ ಕೆಲವು ಬೇರೆ ಶಬ್ದಗಳು ಸೇರಿದ ಕೆಲವು ಬೇರೆ ಶಬ್ದಗಳು ಕೂಡಿ ತ್ಯದಾದಿಗಳಿಗೇಕಶೇಷ ಬರುತ್ತದೆ - ತ್ಯದಾದಿಗಳಾದ ನಾಮಗಳ ಶಬ್ದವೇಕಶೇಷವಾಗುತ್ತದೆ.

ದೇವದತ್ತನೂ - ಅವನೂ - ಅವರು.
ದೇವದತ್ತನೂ - ಇವನೂ - ಇವರು.
ಅವನೂ - ಇವನೂ - ಇವರು - ಇತ್ಯಾದಿ.

೬೧ - ತ್ಯದಾದಿಗಳಿಗಲ್ಲದೆ ಬೇರೆ ಶಬ್ದಗಳಿಗಲ್ಲದೆ ಏಕಶೇಷವು ತನಾದಿಗಾದರೂ ಉಂಟೋ.

ಯಾವ ಶಬ್ದವಾಗಲಿ ತನಾದಿಗಳೊಂದಿಗೆ ಸೇರಿದ ತನಾದಿಗಳೇ ಉಳಿಯುತ್ತದೆ - ತನಾದಿಗಳಲ್ಲಿ ಸಹ ಕಡೆಯವುಗಳೊಂದಿಗೆ ನಾನು ಸೇರಿದ ನಾನು ಶಬ್ದವೂ - ನಾನು ಇಲ್ಲದ ವೆರಡರಲ್ಲಿ ನೀನೂ ಉಳಿಯುತ್ತದೆ.

ದೇವದತ್ತನೂ - ಅವನೂ - ತಾನೂ - ತಾವು.
ತಿಮ್ಮನೂ - ಅವನೂ - ನೀನು - ನೀವು.
ಬೊಮ್ಮನೂ - ಇವನೂ - ನಾನು - ನಾವು.
ನಾನೂ - ನೀನೂ - ತಾನೂ - ನಾವು.
ನೀನೂ - ತಾನೂ - ನೀವು - ಇತ್ಯಾದಿ.

೬೨ - ವಿಕಲ್ಪವಾಗೇಕಶೇಷವೆಲ್ಲಾದರೂ ಬರುತ್ತದೆಯೋ:

ತಂದೆತಾಯಿ ಶಬ್ದಗಳ ದ್ವಂದ್ವದಲ್ಲಿ ವಿಕಲ್ಪವಾಗಿ ತಂದೆ ಶಬ್ದ ಉಳಿಯುತ್ತದೆ.

ತಾಯಿಯೂ - ತಂದೆಯೂ - ತಂದೆಗಳು - ತಾಯ್ತಂದೆಗಳು - ತಂದೆತಾಯ್ಗಳು - ಇತ್ಯಾದಿ.

೬೩ - ಏಕಶೇಷದಲ್ಲಿಯೂ - ದ್ವಂದ್ವದಲ್ಲಿಯೂ ಯಾವ ವಚನ ಬರುತ್ತದೆ.

ದ್ವಂದ್ವವು ಉಭಯಪದಾರ್ಥ ಪ್ರಧಾನವಾದ್ದರಿಂದ ಅದರಲ್ಲಿ ಬಹುವಚನವೇ ಬರುತ್ತದೆ.

ರಾಮನೂ - ಲಕ್ಷ್ಮಣನೂ - ರಾಮಲಕ್ಷ್ಮಣರು.

ರಾಮನೂ - ರಾಮನೂ - ರಾಮರು - ಇತ್ಯಾದಿ.

೭೪ - ಇದಕ್ಕಪವಾದವುಂಟೋ.

ಮನುಷ್ಯರಲ್ಲದವುಗಳ ದ್ವಂದ್ವಕ್ಕೇಕವಚನವೇ ಬರುತ್ತದೆ.

ಮರವೂ - ಗಿಡವೂ - ಮರಗಿಡ - ಮರಗಿಡಗಳು.

ದನವೂ - ಕರುವೂ - ದನಕರು - ದನಕರುಗಳು - ಇತ್ಯಾದಿ.

೭೫ - ಇನ್ನೆಲ್ಲಾದರೂ ವಚನದ್ವಯವೂ ಬರುವದುಂಟೋ.

ಜಾತಿಯೊಂದಾದ್ದರಿಂದ ಏಕವಚನವೂ - ಜಾತ್ಯಾಶ್ರಯವ್ಯಕ್ತಿಗಳನೇಕವಾದ್ದರಿಂದ ಬರುವ ವಚನವೂ ವಿವಕ್ಷಾಧೀನವಾಗಿ ಜಾತಿಪ್ರವೃತ್ತಿನಿಮಿತ್ತಕ ಶಬ್ದಗಳಲ್ಲಿ ಬರುತ್ತದೆ.

ಗೋಧಿ ಬೆಳೆಯಿತು - ಗೋಧಿಗಳು ಬೆಳೆದವು - ಇತ್ಯಾದಿ.

೭೬ - ಏಕವಚನಕ್ಕೆ ಬಹುವಚವೆಲ್ಲಿ ಬರುತ್ತದೆ.

ನಾನು ಶಬ್ದವು ಒಬ್ಬನ ಹೇಳಿದರೂ ಬಹುವಚನ ವಿಕಲ್ಪವಾಗಿ ಬರುತ್ತದೆ.

ನಾನು ಬರುತ್ತೇನೆ - ನಾವು ಬರುತ್ತೇವೆ - ಇತ್ಯಾದಿ.

೭೭ - ಎಲ್ಲಾ ಶಬ್ದಗಳಿಗೂ ಬಹುವಚನವೆಲ್ಲಾದರೂ ಬರುತ್ತದೆಯೋ.

ಪೂಜೆಯಲ್ಲೂ - ಹಾಸ್ಯದಲ್ಲೂ - ಏಕವಚನಕ್ಕೆ ಬಹುವಚನ ಬರುತ್ತದೆ.

ತಂದೆಗಳು - ಅಣ್ಣಂದಿರು - ತಾತಂದಿರು.

ಅಯ್ಯನವರು ಬರುದಾಡವರು - ಇತ್ಯಾದಿ.

೭೮ - ವಿಶೇಷಣವಿಶೇಷ್ಯಗಳಿಗೆ ವಚನಭೇದವುಂಟೋ,

ಎಲ್ಲ ಶಬ್ದಕ್ಕೆ ಎಲ್ಲಾ ಎಂಬ ರೂಪ ಬಂದಾಗ ಅದರ ವಿಶೇಷ್ಯವೂ - ವಿಧೇಯ - ವಿಶೇಷಣವೂ - ಸಂಖ್ಯಾವಾಚಕಗಳ ವಿಶೇಷ್ಯವೂ - ವಿಕಲ್ಪವಾಗಿ ಏಕವಚನವಾಗುತ್ತದೆ.

ಪ್ರಾಣಿಗಳು - ಅಸ್ಥಿರವು - ಅಸ್ಥಿರಗಳು.

ಜನವೆಲ್ಲಾ - ಜನಗಳೆಲ್ಲಾ - ಎಲ್ಲಾ ಜನವೂ ಬಂತು - ಎಲ್ಲಾ ಜನಗಳೂ ಬಂದವು - ಇಪ್ಪತ್ತು ಕುದುರೆ - ಇಪ್ಪತ್ತು ಕುದುರೆಗಳು - ಇತ್ಯಾದಿ.

೭೯ - ಸಮಾಸಕ್ಕೆ ನಿಷೇಧವೆಲ್ಲಾದರೂ ಉಂಟಾ.

ಸಂಸ್ಕೃತಕ್ಕೂ ಕನ್ನಡಕ್ಕೂ ಸಮಾಸವ ಮಾಡಕೂಡದು ಈ ಸಮಾಸವು ಅರಿಸಮಾಸವೆಂದು ಹೇಳಲ್ಪಡುತ್ತದೆ.

ಅರಸನಪುರುಷನು.

೮೦ - ಇದಕ್ಕಪವಾದವುಂಟೋ.

ಕರ್ಮಧಾರಯದಲ್ಲಿ ಕೃದಂತ - ಗುಣವಚನ - ಅದ್ವಾದಿಗಳು ಪರಿಮಾಣವಾಚಕಗಳು - ಸಂಖ್ಯಾವಾಚಕಗಳು - ಮೊದಲಾದವು ಸಂಸ್ಕೃತವಿಶೇಷ್ಯಗಳೊಂದಿಗೆ ಸಮಾಸವಾಗುತ್ತದೆ - ಇವು ಪೂರ್ವಪದವಾಗಿದ್ದಾಗ ಬರುವದಾಗಿಹೇಳಿದ ಆದೇಶಗಳು ಬರುವದಿಲ್ಲ ಮಧ್ಯಮಪದಲೋಪಿಯಲ್ಲೂ - ಇವುಗಳಿಗೆ ಸಮಾಸ ಉಂಟು.

ಮಾಡುವ ಮನುಷ್ಯನು - ದಾರ್ಢ್ಯಮನುಷ್ಯನು.
ಈಮನುಷ್ಯನು - ಎಲ್ಲಾಮನುಷ್ಯನು - ಎಷ್ಟುಮನುಷ್ಯನು.
ನಾಲ್ಕುಮನುಷ್ಯರು - ಐದುಜನ - ಇತ್ಯಾದಿ.
ಮನೆಯಲ್ಲಿದ್ದ ಮನುಷ್ಯನು - ಮನೇಮನುಷ್ಯನು - ಇತ್ಯಾದಿ.

೮೧ - ತತ್ಪುರುಷದಲ್ಲೆಲ್ಲಾದರೂ ಸಂಸ್ಕೃತಕರ್ಣಾಟಕಗಳಿಗೆ ಸಮಾಸವುಂಟೋ:

ದ್ವಿತೀಯಾಂತವಾದ ಸಂಸ್ಕೃತಪದಗಳು - ಕನ್ನಡಕೃದಂತಣಿಜಂತಗಳೊಂದಿಗೆ ಸಮಾಸವಾಗುತ್ತದೆ.

ಭೋಜನಮಾಡಿದನು - ಇತ್ಯಾದಿ.

೮೨ - ಇನ್ನೂ ಎಲ್ಲಾದರೂ ಇವೆರಡಕ್ಕೂ ಉಂಟೋ.

ಬಿರುದಾವಳಿಯಲ್ಲಿ ಸಂಸ್ಕೃತಕರ್ಣಾಟಕಗಳಿಗೆ ಸಮಾಸವುಂಟು - ತುರಗದಳಾದಿಶಬ್ದಗಳಿಗೂ ಸಮಾಸವುಂಟು;

ಕರಿವೆಂಟೆಗಾರ - ನರಮೊಕದಲ್ಲಣನು.
ತುರಗದಳ - ಪಾದಸಂಕಲೆ - ಇತ್ಯಾದಿ.

೮೩ - ಒಂದು ತದ್ಭವಶಬ್ದಕ್ಕೂ - ಸಂಸ್ಕೃತಶಬ್ದಕ್ಕೂ - ಸಮಾಸವುಂಟಾ.

ಸರ್ವತ್ರ ಸಮಾಸ ಬರುವದಿಲ್ಲವು - ಕೆಲವುಕಡೆಯಲ್ಲಿ ಮಾತ್ರ ಬರುತ್ತದೆ - ಮಂಗಳಪ್ರಸಾಧನಾದಿಶಬ್ದಗಳಲ್ಲುತ್ತರಪದ ತದ್ಭವವಾಗುತ್ತದೆ - ಮಾಣಿಕಭಂಡಾರಾದಿಶಬ್ದಗಳಲ್ಲಿ ಪೂರ್ವಪದ ತದ್ಭವವಾಗುತ್ತದೆ.

ಮಂಗಳ - ಪ್ರಸಾಧನ - ಮಂಗಳವಸದನ - ವಿಜಯ - ಶೇಷೆ - ವಿಜಯಸೇಸೆ - ಪರಮ - ಶ್ರೀ - ಪರಮಸಿರಿ - ಪಾದ - ರಕ್ಷೆ

ಪಾದರಕ್ಷೆ - ಪರ - ಬ್ರಹ್ಮ - ಪರಬೊಮ್ಮ - ಪಾದ - ಶೃಂಖಲಾ ಪಾದಸಂಕಲೆ - ಇತ್ಯಾದಿ.

ಮಾಣಿಕ್ಯ - ಭಂಡಾರ - ಮಾಣಿಕಬಂಡಾರ - ಯಮ - ದಂಡ ಜವದಂಡ - ಸಂಧಿ - ವಾರೆ - ಸಂದುವಾರೆ - ಶನಿ - ವಾರ - ಸಣಿವಾರ ಗ್ರಾಮ - ರಸ - ಗಾವರಸ - ಇತ್ಯಾದಿ.

೨೪ - ಇನ್ನು ಯಾವ ಶಬ್ದಗಳಲ್ಲಾದರೂ ಪೂರ್ವಪದ ಮಾತ್ರ ತದ್ಭವವಾಗುತ್ತದೆಯೊ.

ವ್ಯಂಜನಾದ್ಯುತ್ತರ ಪದಪರವಾದಾಗ - ಏಕ - ದ್ವಿ - ತ್ರಿ ಚತುಃ - ಇವುಗಳಿಗೆ ಕ್ರಮವಾಗಿ - ಎಕ್ಕ - ದು - ತಿ - ಚೌ - ಎಂಬಾ ದೇಶಗಳು ಬರುತ್ತವೆ - ಸಹಶಬ್ದಕ್ಕೆ - ಸಾ - ಎಂತಲೂ - ಮಹತ್ - ಶಬ್ದಕ್ಕೆ - ಮಾ - ಎಂತಲೂ ಬರುತ್ತದೆ.

ಏಕ - ಸರ - ಎಕ್ಕಸರ - ಏಕ - ತಾಳ - ಎಕ್ಕತಾಳ - ದ್ವಿ - ಗುಣ ದುಗುಣ - ತ್ರಿ - ಗುಣ - ತಿಗುಣ - ಚತುಃ - ದಂತ - ಚೌದಂತ - ಸಹ ದೇವ - ಸಾದೇವ - ಸಹ - ವಾಸಿ - ಸಾವಾಸಿ - ಮಹಾ - ದೇವ - ಮಾದೇವ ಇತ್ಯಾದಿ.

೨೫ - ಎರಡು ತದ್ಭವಶಬ್ದಗಳಿಗೆ ಸಮಾಸವುಂಟಾ.

ಎರಡು ತದ್ಭವಶಬ್ದಗಳಿಗೆ ಸಮಾಸವುಂಟು - ಆದರೆ ಉತ್ತರಪದವಾದ - ಆಕಾರ - ಆಗಾರ - ಆವಳಿ - ಶಬ್ದಗಳ ಎರಡನೇಯಕ್ಷರಕ್ಕೆ ಲೋಪಸಹ ಬರುತ್ತದೆ.

ಚಿತ್ರಾಕಾರ - ಚಿತ್ತಾರ - ರೂಪಾಕಾರ - ರೂಪಾರ - ಭಾಂಡಾಗಾರ - ಬಂಡಾರ - ದೇವಾಗಾರ - ದೇವಾರ - ದೀಪಾವಳಿಕಾ - ದೀವಾಳಿಗೆ - ದೀವಳಿಗೆಯೆಂದು ಸಹಾವುಂಟು.

೨೬ - ಇನ್ನು ಸಮಾಸವಿಧಿಯಲ್ಲಿ ನಾದರೂ ಲೋಪಾಗಮಾದೇಶಗಳುಂಟಾ.

ಬಹಳವುಂಟು - ಅವುಗಳು ಹೊಸಗನ್ನಡಕ್ಕೆ ಬಹಳ ಪ್ರಯೋಜನಕರವಲ್ಲವಾದ್ದರಿಂದ ಹಳೆಗನ್ನಡ ಕಾಂಡದಲ್ಲಿ ಬರೆಯಲ್ಪಡುತ್ತದೆ.

೨೭ - ದ್ವಿರ್ವಚನವೆಂದರೇನು.

ಒಂದು ಪದವನ್ನಾಗಲಿ ವಾಕ್ಯವನ್ನಾಗಲಿ ಅನೇಕಸಲ ಹೇಳಿದರೆ ಅದು ದ್ವಿರ್ವಚನವು - ಈ ಮೇರೆಗೆ ಹೇಳಿದ ಶಬ್ದಕ್ಕೆ ಆಮ್ರೇಡಿತವೆಂದು ಸಹಾ ಹೆಸರುಂಟು.

೭೮ - ಅಭ್ಯಸ್ತವಿಧವು.

ದ್ವಿರುಕ್ತವೆಂತಲೂ ಬಹುರುಕ್ತವೆಂತಲೂ ಎರಡು ವಿಧವು - ದ್ವಿರುಕ್ತವೆಂದರೆ ಇಮ್ಮಡಿಸಿ ಹೇಳುವದು - ಬಹುರುಕ್ತವೆಂದರೆ - ಬಹಳ ಸಲ ಹೇಳುವದು.

೭೯ - ದ್ವಿರುಕ್ತವೆಲ್ಲಿ ಬರುತ್ತದೆ.

ಸಾತತ್ಯವೂ - ಸಾಕಲ್ಯವೂ - ಆಭೀಕ್ಷ್ಣ್ಯವೂ - ಆಧಿಕ್ಯವೂ ಸಾಮೀಪ್ಯವೂ - ವೀಪ್ಸೆ - ಆನುಪೂರ್ವಿ - ಅಸೂಯೆ - ಅಸಮ್ಮತಿ ಕೋಪ - ಕುತ್ಸನ - ಭರ್ತ್ಸನ ಅನುಗುಣಗಳೆಂಬೀಯರ್ಥಗಳು ತೋರುವಾಗ ಬರುತ್ತದೆ.

ಸಾತತ್ಯವೆಂದರೆ - ಸಜಾತಿಯವಾದ ಮತ್ತೊಂದು ಕ್ರಿಯೆ ನಡುವೆ ಇಲ್ಲದೆ ಇರುವಿಕೆ - ಅದು ತೋರಲು - ಬಂದನು ಬಂದನು - ಹೋದನು ಹೋದನು - ಇಲ್ಲಿ ಬರುವ ಕ್ರಿಯೆಗೂ - ಹೋಗುವ ಕ್ರಿಯೆಗೂ ನಡುವೆ ವಿಚ್ಛೇದಿಯದರಂಥಾ ಮತ್ತೊಂದು ಕ್ರಿಯೆ ತೋರುವದಿಲ್ಲವು.

ಸಾಕಲ್ಯವೆಂದರೆ - ದ್ರಾಕ್ಷೆ ಕೆಲಸದ್ದಾಳಗಿನ ಬೆಲ್ಲ ಕೆಲಸವೆಲ್ಲಾ ಆಗುವಿಕೆ - ಕಾಯ್ಕು ಕಾಯ್ಕು ಎಂದು ಕಾಯ್ದನು - ಇತ್ಯಾದಿ.

ಆಭೀಕ್ಷ್ಣ್ಯವೆಂದರೆ - ಬಹಳ ವೆಂತಲೂ - ಬಾರಿಬಾರಿಗೆಂತಲೂ - ಅರ್ಥವು.

ಉಂಡುಂಡು ಹೋದನು - ಅಟ್ಟಟ್ಟಿ ಕೆಡಿಸಿದನು - ಇತ್ಯಾದಿ.

ಇಲ್ಲಿ ಬಾರಿಬಾರಿ ಉಂಡನು - ಬಾರಿಬಾರಿಗಟ್ಟಿದನು - ಬಹಳ ಉಂಡನು - ಬಹಳ ಅಟ್ಟಿದನು - ಇತ್ಯಾದಿ.

ಆಧಿಕ್ಯವೆಂದರೆ - ಬಹಳ ವೆಂದರ್ಥವು.

ಅಡ್ಡಬಿದ್ದನಡ್ಡಬಿದ್ದನು - ಇಲ್ಲಿ ಬಹಳ ಅಡ್ಡಬಿದ್ದನೆಂದರ್ಥವು.

೮೦ - ಆಧಿಕ್ಯಾರ್ಥದಲ್ಲೇನಾದರೂ ವಿಶೇಷವುಂಟೊ.

ಆಗ ಮೊದಲು ಶಬ್ದದ ಮೇಗಳ ವಿಭಕ್ತಿಗೆ ವಿಕಲ್ಪವಾಗಿ ಲೋಪ ಬರುತ್ತದೆ - ಆಗ - ನೆ - ಗೆ - ದು - ಅಂತವಾದ ಶಬ್ದಗಳ ದುವಿಗೆ ಲೋಪವೂ ವಿಕಲ್ಪವಾಗಿ ಬರುತ್ತದೆ - ಮತ್ತು ಉದಿ ಶಬ್ದದ ಇಕಾರಕ್ಕೆ ತ ಎಂಬಾದೇಶವೂ ಕಡಿನದುಗಳ ಕಡೆವರ್ಣಕ್ಕೆ ಟ ಎಂ

ಬಾದೇಶವೂ ಬರುತ್ತದೆ - ಮೊದಲು ಶಬ್ದದ ದುವಿಗೆ ಲೋಪವಾಗಲಿ ತ್ರಿಕಕ್ಕೇಟಿ ಎಂಬಾದೇಶವಾಗಲಿ ಬರುತ್ತದೆ - ಈ-ಡು ಅಂತವಾದ ಗುಣವಾಚಕಗಳ ದುವಿಸ್ವಾಲೋಪ ಬರುತ್ತದೆ.

ಮೆಲ್ಲನೆ - ಮೆಲ್ಲನೆ - ಮೆಲ್ಲಮೆಲ್ಲನೆ - ಮೆಲ್ಲಗೆ - ಮೆಲ್ಲಗೆ - ಮೆಲ್ಲಮೆಲ್ಲಗೆ - ಕೆಳಗ - ಕೆಳಗ - ಕೆಳಕೆಳಗ - ಮೇಗೆ - ಮೇಗೆ - ಮೇಮೇಗೆ - ತುತ್ತತುದಿ - ಕಟ್ಟಕಡೆ - ನಟ್ಟನಡು - ಮೊಟ್ಟಮೊದಲು ದೊಡ್ಡದೊಡ್ಡದು - ಹೊಸಹೊಸತು - ಇತ್ಯಾದಿ.

ಸಾಮೀಪ್ಯವೆಂದರೆ ಹತ್ತಿರ - ಕೆಳಗ ಮೇಗ ಶಬ್ದಗಳಿಗೆ ಸಾಮೀಪ್ಯ ತೋರುವಾಗ ದ್ವಿತ್ವ ಬರುತ್ತದೆ - ಆದೇಶದಿಂದಲೂ ಕಾಲದಿಂದಲೂ ಸಹ ಉಂಟು - ಪೂರ್ವಪದದ ದುವಿಗೆ ಲೋಪವು ಬರುತ್ತದೆ.

ಕೆಳಕೆಳಗೆ - ನರಕಬಿಲವು - ಇಲ್ಲಿ ಹತ್ತಿರವೆಂದು ತೋರುತ್ತದೆ ಮೇಮೇಗೆ - ಸ್ವರ್ಗವು - ಇಲ್ಲೂ ಹತ್ತಿರವೆಂದು ತೋರುತ್ತದೆ.

ವೀಪ್ಸೆಯೆಂದರೆ - ಒಂದು ಪದಾರ್ಥಕ್ಕೆ ಅನೇಕ ಪದಾರ್ಥದೊಂದಿಗೆ ಬೇರೆಬೇರೆ ಅನ್ವಯವ ಹೇಳುವಿಕೆ ವೀಪ್ಸೆ - ಊಗಲು ಪೂರ್ವಪದದ ವಿಭಕ್ತಿಗೆ ಲೋಪ ಬರುತ್ತದೆ.

ಮನೆಮನೆಗೆ ಹೋದನು - ಎಲ್ಲಾ ಮನೆಗೂ ಹೋದನೆಂದರ್ಥವು ಇಲ್ಲಿ ಎಲ್ಲಾ ಮನೆ ಪದಾರ್ಥಗಳೊಂದಿಗೂ ಹೋಗು ಧಾತುವಿನ ಅರ್ಥಕ್ಕೆ ಸಂಬಂಧವು ಹೇಳಲ್ಪಟ್ಟಿತು.

ಆನುಪೂರ್ವಿಯೆಂದರೆ - ಕ್ರಮ - ಪ್ರಕೃತ ಸಗುಣ ಕ್ರಿಯೆಗಳ ಹೆಚ್ಚು ಕಡಿಮೆಯನ್ನು ಕ್ರಮವಾಗಿ ಸ್ಥಾನವಾಚಕಕ್ಕೆ ದ್ವಿತ್ವ ಬರುತ್ತದೆ - ಊಗಲೂ ಪೂರ್ವಪದದ ವಿಭಕ್ತಿಗೆ ಲೋಪ ಬರುತ್ತದೆ - ಮೊದಲು ಶಬ್ದದ ದುವಿಗೆ ಸಹಾ ಲೋಪ ಬರುತ್ತದೆ,

ಮೊದಮೊದಲು ಸಣ್ಣವು - ತುದಿತುದಿ ದಪ್ಪವು.

ಪೀಡೆಯೆಂದರೆ - ನೋವು - ಆಗ ಪೂರ್ವಪದ ಸುಬಂತವಾಗಿದ್ದರೆ - ಸುಪ್ಪಿನಲೋಪಬರುತ್ತದೆ - ತಿಙಂತವಾಗಿದ್ದರೆ ಅದರದು ವಿಭಕ್ತಿಲೋಪಬರುತ್ತದೆ.

ಮರಮರವು - ಬಂದಬಂದವು - ಇತ್ಯಾದಿ.

ಅಸೂಯೆಯೆಂದರೆ ಹೊಟ್ಟೇಕಿಚ್ಚು - ಆಗ ಸಂಬೋಧನಪದಕ್ಕೆ ದ್ವಿರುಕ್ತಿ ಬರುತ್ತದೆ - ಆಗಿರದ ಕಡೆಯದಕ್ಕೆ ಪ್ಲುತ ಬರುತ್ತದೆ ಸಮ್ಮತಿಕೋಪಕುತ್ಸನಭರ್ತ್ಸನಗಳಲ್ಲಿಯೂ ಅದೇರೀತಿ ಬರುತ್ತದೆ.

ದೇವದತ್ತದೇವದತ್ತಾ - ದೇವದತ್ತಾದೇವದತ್ತ - ನಿನಗೇ ನಾಗಲ್ಲ.

ಸಮ್ಮತಿಯೆಂದರೆ ಒಪ್ಪಿಕೆ - ಮಗನೆ - ಮಗನೇ - ಮಗನೇ ಮಗನೆ - ನೀನೊಳ್ಳೆದು ಮಾಡಿದೆ.

ಕೋಪವೆಂದರೆ ಮುನಿಸು - ಬಾಣಾಸಿಗಾ - ಬಾಣಾಸಿಗಾ - ಬಾಣಾಸಿಗಾ - ಬಾಣಾಸಿಗಾ - ಇದ್ದೀಯೋ ಸತ್ತೆಯೋ.

ಕುತ್ಸನವೆಂದರೆ ಜರೆಯುವಿಕೆ - ಸರಿಯೇ - ಸರಿಯೇ - ಸರಿಯೇ - ಸರಿಯೆ - ನಿನ್ನ ಹೆಂಗಸುತನವ ಸುಡಬೇಕು.

ಭರ್ತ್ಸನವೆಂದರೆ - ಬೆದರಿಸುವಿಕೆ - ದುರುಳಾ - ದುರುಳಾ ದುರುಳಾ - ದುರುಳಾ - ನಿನ್ನ ಕಾಲ್ಲುವೆ - ಕಡಿಯುವೆ - ಇಲ್ಲಿ ಕೆಲವರು ಬಹಳ ಸಲವೇಳ ಬಹುದೆಂದು ಹೇಳುತ್ತಾರೆ.

ತಜ್ಜಾತೀಯವೆಂದರೆ - ಅದರ ಹಾಂಗಿರುವ ಮಾತ್ರಾದು - ತಜ್ಜಾತೀಯವು ತೋರುವಾಗ ಮುಖ್ಯವಾದ್ದಕ್ಕೆ ದ್ವಿರುಕ್ತಿ ಬರುತ್ತದೆ - ಈ ದ್ವಿರುಕ್ತಿ ಬಂದಾಗ ಉತ್ತರ ಪದದ ಮೊದಲಕ್ಷರ ದೀರ್ಘವಾಗಿದ್ದರೆ ಗೀ ಆದೇಶ ಬರುತ್ತದೆ - ಹ್ರಸ್ವಾಕ್ಷರವಾಗಿದ್ದರೆ - ಗಿ - ಆದೇಶ ಬರುತ್ತದೆ - ಸ್ವಭಾವವಾಗಿ ಗೀತ ಬ್ದಾದಿಯಾದ್ದಕ್ಕೆ ದ್ವಿರುಕ್ತಿ ಸಹಾ ಬರುವದಿಲ್ಲವು.

೧೯೦. ಪ್ರಶ್ನೆ. ಉತ್ತರವು.

೧೧. ದ್ವಿತ್ವವೆಲ್ಲಿ ಬರುತ್ತದೆ.

ಆನೆ - ಕೋಣೆ - ಹಣ್ಣು - ಕಣ್ಣು - ಕೋಟೆ - ಕೀಲಿ - ಇಲ್ಲಿ ದ್ವಿತ್ವ ಬರಲಿಲ್ಲ.

ಒತ್ತಿ ಹೇಳುವಾಗಲೂ ಆಶ್ಚರ್ಯ ಹೇಳುವಾಗಲೂ ಪ್ರಯೋಗಿಸುವಾಗ ಪದಕ್ಕಾಗಲಿ - ವಾಕ್ಯಕ್ಕಾಗಲಿ ದ್ವಿತ್ವ ಬರುತ್ತದೆ.

ನೋಡು ನೋಡು - ಓಡು ಓಡು - ಇತ್ತ ಬಾ - ಇತ್ತ ಬಾ ಇತ್ಯಾದಿ.

೯ನೆಯ ಸಮಾಸ ಪ್ರಕರಣವು ಮುಗಿಯಿತು.

ಪ್ರಶ್ನೆ.	ಉತ್ತರವು.
೧ - ಪ್ರಯೋಗ ಪ್ರಕರಣದಲ್ಲೇನು ಹೇಳಲ್ಪಡುತ್ತದೆ.	ವಿಭಕ್ತಿಗಳ ಅರ್ಥವೂ - ಅವು ಬರುವ ಸ್ಥಳಗಳೂ ಆಖ್ಯಾತದ ಅರ್ಥವೂ ಅದು ಬರುವ ಸ್ಥಳಗಳೂ ವೃತ್ತಿಗಳ ಸ್ವರೂಪವೂ ಅವುಗಳ ಭೇದಗಳೂ ಕೆಲವು ನಿಪಾತಗಳ ಅರ್ಥಗಳೂ ಅವು ಬರುವ ಸ್ಥಳಗಳೂ ಹೇಳಲ್ಪಡುತ್ತವೆ.
೨ - ವಿಭಕ್ತಿಗಳೆಷ್ಟು ವಿಧವು.	ಕಾರಕ ವಿಭಕ್ತಿಗಳೆಂತಲೂ - ಉಪಪದ ವಿಭಕ್ತಿಗಳೆಂತಲೂ ಎರಡು ವಿಧವು.
೩ - ಕಾರಕವೆಂದರೇನು.	ಕ್ರಿಯೆಯನ್ನುಂಟುಮಾಡುವದು - ಕಾರಕವು.
೪ - ಅದೆಷ್ಟು ವಿಧವು.	ಕರ್ತೃ - ಕರ್ಮ - ಕರಣ - ಸಂಪ್ರದಾನ - ಅಪಾದಾನ ಅಧಿಕರಣ - ಎಂದಾರು ವಿಧವು.
೫ - ಉಪಪದ ವಿಭಕ್ತಿಯೆಂದರೇನು.	ಒಂದು ಪದದ ಸಂಬಂಧದಿಂದ ಬರುವ ವಿಭಕ್ತಿಯು - ಉಪಪದ ವಿಭಕ್ತಿಯೆನಲ್ಪಡುತ್ತದೆ.
೬ - ಪ್ರಥಮೆಯಾವಾಗ ಬರುತ್ತದೆ.	ಆಖ್ಯಾತದಿಂದಾದರೂ ಕೃತ್ಪ್ರತ್ಯಯದಿಂದಾದರೂ ಕರ್ತೃವಾಗಲಿ ಕರ್ಮವಾಗಲಿ ಹೇಳಲ್ಪಟ್ಟರೆ - ಆ ಕರ್ತೃ ಕರ್ಮವಾಚಕಗಳಿಗೆ ಪ್ರಥಮೆ ಬರುತ್ತದೆ.
	ಕುಂಬಾರನು ಮಡಕೆಯನ್ನು ಮಾಡಿದನು.
	ಇಲ್ಲಿ ಅನು ಎಂಬಾಖ್ಯಾತವು ಕರ್ತೃವಿನರ್ಥದಲ್ಲಿ ಬಂದಿದ್ದರಿಂದ ಕರ್ತೃವನ್ನು ಹೇಳುವ ಲಿಂಗವಾದ ಕುಂಬಾರ ಶಬ್ದಕ್ಕೆ ಪ್ರಥಮೆ ಬಂತು.
	ಕುಂಬಾರನಿಂದ ಮಡಕೆಯು ಮಾಡಲ್ಪಟ್ಟಿತು.
	ಇಲ್ಲಿ - ಇತು ಎಂಬಾಖ್ಯಾತದಿಂದ ಕರ್ಮವು ಹೇಳಲ್ಪಟ್ಟಿದ್ದರಿಂದ ಕರ್ಮವನ್ನು ಹೇಳುವ ಲಿಂಗವಾದ ಮಡಕೆ ಶಬ್ದಕ್ಕೆ ಪ್ರಥಮೆ ಬಂತು.
೭ - ಕರ್ತೃವೆಂದರೇನು.	ಧಾತುವಿನರ್ಥವಾದ ಮುಖ್ಯವ್ಯಾಪಾರಕ್ಕೆ ಆಶ್ರಯವಾದದ್ದು ಕರ್ತೃವು.

ಪ್ರಶ್ನೆ	ಉತ್ತರವು.
೮ - ಕರ್ಮವೆಂದರೇನು.	ಧಾತುವಿಗೆ ಅರ್ಥವಾಗಿಯೂ - ಅದಕ್ಕರ್ಥವಾದ ವ್ಯಾಪಾರಜನ್ಯವಾಗಿಯೂ ಇರುವ ಫಲಕ್ಕಾಶ್ರಯವಾದದ್ದು ಕರ್ಮವು.
೯ - ಧಾತುವಿಗೆಷ್ಟರ್ಥವು.	ಧಾತುವಿಗೆ ಫಲವೂ ವ್ಯಾಪಾರವೂ ಅರ್ಥವು - ಫಲವೆಂದರೆ ಕರ್ಮದಲ್ಲಿರುವ ಧರ್ಮವು - ವ್ಯಾಪಾರವೆಂದರೆ ಅದನ್ನುಂಟುಮಾಡುವ ಕೆಲಸವು.
೧೦ - ಇದಕ್ಕೊಂದುದಾಹರಣದಲ್ಲಿ ವಿವರಿಸಬೇಕು.	ಕುಂಬಾರನು ಮಡಕೆಯನ್ನು ಮಾಡಿದನು. ಇಲ್ಲಿ ಮಾಡು ಧಾತುವಿಗೆ ಹುಟ್ಟುವಿಕೆಯನ್ನುಂಟುಮಾಡುವ ವ್ಯಾಪಾರವರ್ಥವು - ಇಲ್ಲಿ ಹುಟ್ಟುವಿಕೆ ಮಡಕೆಯಲ್ಲದೆಯಾದ್ದರಿಂದ ಮಡಕೆ ಕರ್ಮವು - ಅದನ್ನುಂಟುಮಾಡುವ ವ್ಯಾಪಾರವು ಮಣ್ಣು ತರುವದು - ನೀರು ತರುವದು - ಕಲಸುವದು - ಮುಂತಾದ್ದು ಅದು ಕರ್ತೃವಾದ ಕುಂಬಾರನಲ್ಲದೆಯಾದ್ದರಿಂದ ಕುಂಬಾರನು ಕರ್ತೃವು - ಅನು ಎಂಬ ಆಖ್ಯಾತದಿಂದ ಕರ್ತೃವು ಹೇಳಲ್ಪಟ್ಟಿರಾದ್ದರಿಂದ ಅದನ್ನು ಹೇಳುವ ಕುಂಬಾರ ಶಬ್ದಕ್ಕೆ ಪ್ರಥಮೆ ಬಂತು - ಆಖ್ಯಾತಾದಿಗಳಿಂದ ಕರ್ತೃವಾಗಲಿ ಕರ್ಮವಾಗಲಿ ಹೇಳಲ್ಪಟ್ಟಾಗ ಪ್ರಥಮೆಗೆ ಲಿಂಗದರ್ಥಮಾತ್ರವೆ ಅರ್ಥವು.
೧೧ - ಇಲ್ಲಿ ಬೋಧಕ್ರಮವು ಹ್ಯಾಂಗೆ.	ಒಂದು ಮಡಕೆಯೆಂಬ ಕರ್ಮದಲ್ಲಿರುವ ಹುಟ್ಟುವಿಕೆಯನ್ನುಂಟುಮಾಡುವ ಒಂದು ಕುಂಬಾರನೆಂಬ ಕರ್ತೃವಿನಲ್ಲಿರುವ ಭೂತಕಾಲದ ಕೆಲಸವು - ಹೀಂಗೆ ಕರ್ಮಾಖ್ಯಾತದಲ್ಲಿಯೂ ಬೋಧವು.
೧೨ - ಮತ್ತೆ ಪ್ರಥಮೆಯೆಲ್ಲಿ ಬರುತ್ತದೆ.	ಅಚ್ ಅದು ಪ್ರತ್ಯಯಗಳಿಂದ ಯಾವ ಕಾರಕ ಹೇಳಲ್ಪಡುತ್ತದೆಯೊ ಆ ಕಾರಕಕ್ಕೂ ಕರ್ತೃವಿಗೂ ಪ್ರಥಮೆ ಬರುತ್ತದೆ: ಕರ್ಮ - ನಾನು ಮಾಡಿದ ಕೆಲಸ - ಅದು ನಾನು ಮಾಡಿದ್ದು. ಕರ - ನಾನು ಕೊಯ್ದ ಕುಡುಗೋಲು - ಆ ಕುಡುಗೋಲು ನಾನು ಕೊಯ್ದದ್ದು. ಸಂಪ್ರ - ನಾನು ಕೊಟ್ಟ ಹಾರುವನು - ಆ ಹಾರುವ ನಾನು ಕೊಟ್ಟವನು. ಅಪಾ - ನಾನು ಹೆದರಿದ ಹುಲಿ - ಆ ಹುಲಿ ನಾನು ಹೆದರಿದ್ದು. ಅಧಿ - ನಾನು ಇದ್ದ ಮನೆ - ಆ ಮನೆ ನಾನಿದ್ದದ್ದು.

೧೩ - ಇನ್ನಾ ಪ್ರಥಮೆಯೆಲ್ಲಾದರೂ ಉಂಟೋ.

ಕಾಲವಾಚಕವಾಗಲಿ ಮಾರ್ಗವಾಚಕವಾಗಲಿ ಅಧಿಕರಣವಾಗಿದ್ದಾಗ್ಯೂ - ಅದಕ್ಕೂ ಅದರಲ್ಲಿ ವೃತ್ತಿಯಾದ ಪದಾರ್ಥಕ್ಕೂ ಪೂರ್ಣವಾದ ಸಂಬಂಧ ತ್ಯಾರಿದ ಶಿಲಿಯೂ ಅಧಿಕರಣಾರ್ಥದಲ್ಲಿ ಪ್ರಥಮೆ ಬರುತ್ತದೆ.

ಒಂದು ತಿಂಗಳು ಓದಿದನು - ಒಂದು ಗಾವುದ ಬೆಟ್ಟವು - ಇಲ್ಲಿ ಪ್ರಥಮೆಗೆ ಅಧಿಕರಣಾರ್ಥವು.

೧೪ - ಸಂಬೋಧನ ಪ್ರಥಮೆಯೆಲ್ಲಿ ಬರುತ್ತದೆ.

ಸಂಬೋಧನ ತೋರುವಾಗ ಬರುತ್ತದೆ.

೧೫ - ಸಂಬೋಧನವೆಂದರೇನು.

ಎದುರಲ್ಲಿರುವವನ ಒಂದು ಕೆಲಸದಲ್ಲಿ ಪ್ರೇರಿಸುವದಕ್ಕೋಸ್ಕರ ವಿಷಯವಾಗಿ ಮಾಡಿಕೊಳ್ಳುವದು ಸಂಬೋಧನ ಅದು ಪ್ರಥಮೆಗರ್ಥವು.

ರಾಮ - ನನ್ನ - ರಕ್ಷಿಸು.

ಇಲ್ಲಿ ರಾಮ ಸಂಬಧಿ ಸಂಬೋಧನಕ್ಕೆ ವಿಷಯವಾದ ನನ್ನ ಪ್ರೇರಣೆಗೆ ವಿಷಯವಾದ ನಿನ್ನಲ್ಲಿರುವ ನನ್ನ ಇಷ್ಟವಸ್ತುಂಟು ಮಾಡುವ ಕೆಲಸವು.

೧೬ - ವಿಧಿಪ್ರತ್ಯಯಾಂತವಿಲ್ಲದಾಗ ಸಂಬೋಧನ ಪ್ರಥಮೆ ಬರುವದಿಲ್ಲವೋ.

ಅಲ್ಲಿಯೂ ಒಂದು ವಿಧಿಪ್ರತ್ಯಯಾಂತವ ಸೇರಿಸಿಕೊಳ್ಳ ಬೇಕು.

ರಾಮ ನೀನು ಯಾವಾಗ ಬರುತ್ತೀಯೆ - ಇಲ್ಲಿ - ಹೇಳು ವೆಂದು ಸೇರಿಸ ಬೇಕು.

ರಾಮ ನೀನಾನು ಹೋಗುತ್ತೇನೆ - ಇಲ್ಲಿ - ಅರಿ - ಎಂದು ಸೇರಿಸ ಬೇಕು.

೧೭ - ದ್ವಿತೀಯೆಯೆಲ್ಲಿ ಬರುತ್ತದೆ.

ಕರ್ಮವು ಆಖ್ಯಾತದಿಂದಾಗಲಿ - ಅಚ್ ಅದು ಪ್ರತ್ಯಯಗಳಿಂದಾಗಲಿ ಹೇಳಲ್ಪಡದಾಗ ಆ ಕರ್ಮವ ಹೇಳುವ ಲಿಂಗಕ್ಕೆ ದ್ವಿತೀಯೆ ಬರುತ್ತದೆ,

ಬ್ರಾಹ್ಮಣನು - ಮರವನ್ನು - ಸಾಕಿದನು.

ಇಲ್ಲಿ ಬೆಳವಿಯನ್ನುಂಟು ಮಾಡುವದು ಸಾಕು ಧಾತುವಿಗರ್ಥ

ವು-ಬೀಳ್ವಿಕೆ ಮರದಲ್ಲದೆಯಾದ್ದರಿಂದ ಮರವು ಕರ್ಮವು. ಮರಶಬ್ದದ ಮೇಗಣ ದ್ವಿತೀಯೆಗೆ ಕರ್ಮತ್ವವರ್ಥವು.

೧೮ - ಆ ಕರ್ಮವೆಷ್ಟು ವಿಧವು.

ನಿರ್ವರ್ತ್ಯವೆಂತಲೂ - ವಿಕಾರ್ಯವೆಂತಲೂ - ಪ್ರಾಪ್ಯವೆಂತಲೂ ವೈಷಯಿಕವೆಂತಲೂ ನಾಲ್ಕು ವಿಧವು.

೧೯ - ನಿರ್ವರ್ತ್ಯವೆಂದರೇನು.

ಕರ್ಮಕ್ಕೆ ವಿಕಾರವಿಲ್ಲದೆ ಪ್ರಕೃತ ಧಾತ್ವರ್ಥ ವ್ಯಾಪಾರದಿಂದ ಕರ್ಮದಲ್ಲಿ ಫಲ ಹುಟ್ಟಿದರೂ - ಹುಟ್ಟಿದ್ದು ಕರ್ಮವಾದರೂ ನಿರ್ವರ್ತ್ಯವು.

ದೇವರನ್ನು ಪೂಜಿಸಿದನು.

ಇಲ್ಲಿ ಪೂಜಿಸು ಧಾತುವಿಗೆ ಪ್ರೀತಿಯನ್ನುಂಟುಮಾಡುವ ವ್ಯಾಪಾರವರ್ಥವು - ಆ ಪ್ರೀತಿ ದೇವರಲ್ಲಿ ಹುಟ್ಟುತ್ತದೆಯಾದ್ದರಿಂದ ಮನೆ ನಿರ್ವರ್ತ್ಯಕರ್ಮವು.

೨೦ - ವಿಕಾರ್ಯವೆಂದರೇನು.

ಪ್ರಕೃತ ಧಾತ್ವರ್ಥ ವ್ಯಾಪಾರದಿಂದ ವಿಕಾರವನ್ನೈದುವದು ವಿಕಾರ್ಯವು.

ಮರವನ್ನು ಕಡಿದನು.

ಇಲ್ಲಿ ಕಡಿ ಧಾತುವಿಗೆ ಹುಟ್ಟುವಿಕೆಯರ್ಥವು - ಎರಡಾಗುವಿಕೆ ಫಲವು - ಅದಕ್ಕಾಶ್ರಯವಾದ್ದರಿಂದ ಇಲ್ಲಿ ಮರವು ವಿಕಾರ್ಯಕರ್ಮವು.

೨೧ - ಪ್ರಾಪ್ಯವೆಂದರೇನು.

ಕೂಡಿಕೆಗೆ ಆಶ್ರಯವಾದದ್ದು ಪ್ರಾಪ್ಯವು.

ದೇವದತ್ತನು ಊರನ್ನೈದಿದನು.

ಇಲ್ಲಿ ಕೂಡಿಕೆಯನ್ನುಂಟುಮಾಡುವ ವ್ಯಾಪಾರವು ಐದು ಧಾತುವಿಗರ್ಥವು - ಕೂಡಿಕೆ ಫಲವು - ಅದೂರಲ್ಲಿದೆಯಾದ್ದರಿಂದ ಊರು ಪ್ರಾಪ್ಯಕರ್ಮವು.

೨೨ - ಕೂಡಿಕೆ ದೇವದತ್ತನಲ್ಲಿಯೂ ಊರಲ್ಲಿಯೂ ಸಹಾ ಇದೆಯಾದ್ದರಿಂದ ದೇವದ

ಪ್ರಕೃತ ಧಾತ್ವರ್ಥವಾದ ಮುಖ್ಯವ್ಯಾಪಾರಕ್ಕಾಶ್ರಯವಲ್ಲದೆ ಫಲಕ್ಕೆ ಮಾತ್ರ ಆಶ್ರಯವಾದದ್ದೇ ಕರ್ಮವು - ಆದ್ದರಿಂದ ಫಲಕ್ಕೂ ವ್ಯಾಪಾರಕ್ಕೂ ಆಶ್ರಯವಾದ ದೇವದತ್ತನು ಕರ್ಮವಾಗದೆ

ಪ್ರಶ್ನೆ	ಉತ್ತರವು
ತ್ತನ್ನೇಕೆ ಕರ್ಮವಾಗಲಿಲ್ಲ.	ಕರ್ತೃವಾದನು - ಫಲಕ್ಕೆ ಮಾತ್ರವಾಶ್ರಯವಾದ ಊರು ಕರ್ಮವಾಯಿತು. ಓಡುವ ಕುದುರೆಯನ್ನೇರಿದನೆಂಬಲ್ಲಿ - ಕುದುರೆಯಲ್ಲಿ ಓಡುಧಾತ್ವರ್ಥವ್ಯಾಪಾರವಿದ್ದರೂ ಪ್ರಕೃತಧಾತ್ವರ್ಥವ್ಯಾಪಾರವಿಲ್ಲವಾದ್ದರಿಂದ ಕುದುರೆಯೇ ಕರ್ಮವು.
೨೦೩ - ವೈಷಯಿಕವೆಂದರೇನು.	ತಿಳಿ ಕಾಣು ನೋಡು ಮೊದಲಾದ ಜ್ಞಾನಾರ್ಥಕಗಳು - ಬಗೆ ಮೊದಲಾದ ಇಷ್ಟಾರ್ಥಕಗಳು - ಉಜ್ಜುಗಿಸು ಮೊದಲಾದ ಯತ್ನಾರ್ಥಕಗಳು ಇವುಗಳ ಕರ್ಮಗಳಿಗೆ ವಿಷಯತ್ವರ್ಥವಾದ್ದರಿಂದ ಆ ಕರ್ಮಗಳು ವೈಷಯಿಕಗಳೆಂದು ಹೇಳಲ್ಪಡುತ್ತವೆ. ದೇವರನ್ನು ತಿಳಿ - ಇಲ್ಲಿ ದೇವರನ್ನು ವಿಷಯವಾಗುಳ್ಳ ತಿಳಿವಿಯೆಂದು ಬೋಧವು. ದೇವರನ್ನು ಕಂಡನು - ಇಲ್ಲಿ ಕಾಣು ಧಾತುವಿಗೆ ಕಣ್ಣೆಂಬ ಇಂದ್ರಿಯದಿಂದ ಹುಟ್ಟುವ ಜ್ಞಾನವರ್ಥವು. ದೇವರನ್ನು ವಿಷಯವಾಗುಳ್ಳ ಕಣ್ಣೆಂಬ ಇಂದ್ರಿಯದಿಂದ ಹುಟ್ಟುವ ಭೂತಕಾಲಿಕವಾದ ಜ್ಞಾನವು. ದೇವರ ಬಗೆದನು - ಕೆಲಸವನುಜ್ಜುಗಿಸಿದನು - ಇತ್ಯಾದಿ.
೨೦೪ - ಕರ್ಮವನ್ನು ಮತ್ತೊಂದು ವಿಧವಾಗಿ ಭಾಗಿಸುವದುಂಟೋ.	ಬಗೆದ ಕರ್ಮವೆಂತಲೂ - ಬಗೆಯದ ಕರ್ಮವೆಂತಲೂ - ಎರಡು ವಿಧವು. ಊರನ್ನೈದುತ್ತಾ ಹುಲ್ಲು ತುಳಿದನು - ಇಲ್ಲಿ ಊರು ಬಗೆದ ಕರ್ಮವು - ಹುಲ್ಲು ಬಗೆಯದ ಕರ್ಮವು.
೨೦೫ - ಒಂದು ಕ್ರಿಯೆಗೆರಡು ಕರ್ಮವಿಲ್ಲಾದರೂ ಉಂಟೋ.	ಕರೆ ಮೊದಲಾದವುಗಳ ಅಪಾದಾನಾದಿಕಾರಕಗಳಿಗೆ ವಿಕಲ್ಪವಾಗಿ ಕರ್ಮಸಂಜ್ಞೆ ಬರುತ್ತದೆ. ಗೊಲ್ಲನು ಹಸುವ ಹಾಲ ಕರೆದನು. ಹಸುವಿನ ದೆಸೆಯಿಂದ ಹಾಲ ಕರೆದನು,

೧೯೬ ಪ್ರಶ್ನೆ. ಉತ್ತರವು.

ಇಲ್ಲಿ ಹಸುವು ಅಪಾದಾನವು - ಅದಿಲ್ಲಿ ಕರ್ಮವಾಯಿತು.

ವಾಮನನು ಬಲಿಯ ಭೂಮಿಯ ಬೇಡಿದನು - ಬಲಿಯ ದೆಸೆಯಿಂದ ಭೂಮಿಯ ಬೇಡಿದನು.

ದೇವದತ್ತನು ಯಜ್ಞದತ್ತನ ಮಾತ ಕೇಳಿದನು - ಯಜ್ಞದತ್ತನ ದೆಸೆಯಿಂದ ಕೇಳಿದನು - ಇತ್ಯಾದಿ.

ಹಸು ಮೊದಲಾದ ಕರ್ಮವು ಫಲಾಶ್ರಯವಾದ ಕರ್ಮವಲ್ಲವಾದ್ದರಿಂದ ಗೌಣಕರ್ಮವೆಂದು ಹೇಳಲ್ಪಡುತ್ತದೆ - ಗೌಣವೆಂದರೆ ಅಪ್ರಧಾನವು.

೨೬ - ಒಂದು ಕ್ರಿಯೆಗೆ ಎರಡು ಕರ್ಮವು ಬಂದ ಕ್ರಮ ಹ್ಯಾಂಗೆ.

ಕರೆಧಾತುವಿಗೆ ಹರಿವಸ್ತುವಿನ ಗಲಿಕೆಯನ್ನುಂಟುಮಾಡುವ ವ್ಯಾಪಾರವನ್ನುಂಟುಮಾಡುವ ವ್ಯಾಪಾರವರ್ಥವು - ಅಗಲಿಕೆಯೊಂದು ಫಲವು - ಅದು ಹಾಲಲ್ಲಿದೆಯಾದ್ದರಿಂದ ಹಾಲೊಂದು ಕರ್ಮವು - ಅಗಲಿಕೆಯನ್ನುಂಟುಮಾಡುವ ವ್ಯಾಪಾರವು ಕೆಚ್ಚಲ ಗಲಿಸುವಿಕೆಯುಂಟಾದ್ದು ಅದು ಹಸುವಿನಲ್ಲಿದೆಯಾದ್ದರಿಂದ ಹಸುವು ಕರ್ಮವು - ಅಗಲಿಕೆ ಪ್ರಧಾನ ಫಲವಾದ್ದರಿಂದ ಹಾಲು ಪ್ರಧಾನ ಕರ್ಮವು - ಅದನ್ನುಂಟುಮಾಡುವ ವ್ಯಾಪಾರ ಗೌಣಫಲವಾದ್ದರಿಂದ ಹಸುವು ಗೌಣಕರ್ಮವು.

ಬೇಡು ಧಾತುವಿಗೆ ತನ್ನೊಡವೆಯ ಕೇಡನ್ನುಂಟುಮಾಡುವ ವ್ಯಾಪಾರವನ್ನುಂಟುಮಾಡುವ ವ್ಯಾಪಾರವರ್ಥವು - ಒಡವೆಗೆ ಕೇಡು ಪ್ರಧಾನ ಫಲವು ಅದು ಭೂಮಿಯಲ್ಲಿದೆಯಾದ್ದರಿಂದ ಭೂಮಿಯು ಪ್ರಧಾನ ಕರ್ಮವು - ಅದನ್ನುಂಟುಮಾಡುವ ವ್ಯಾಪಾರವಾದ ದಾನವು ಗೌಣಫಲವಾದ್ದರಿಂದ ಅದುಳ್ಳ ಬಲಿಯು ಗೌಣಕರ್ಮವು.

ಹೀಂಗೆ ಕೇಳು ಮೊದಲಾದ ಧಾತುಗಳಿಗೂ ಹೇಳಿಕೊಳ್ಳುವದು.

೨೭ - ಕರ್ತೃವೆಲ್ಲಾದರೂ ಕರ್ಮವಾಗುವದುಂಟಾ.

ಅಕರ್ಮಕ ಧಾತುಗಳಿಗೂ - ಓದು ಮೊದಲಾದ ಶಬ್ದಾರ್ಥಕ ಧಾತುಗಳಿಗೂ - ಐದು ಮೊದಲಾದ ಗತ್ಯರ್ಥಕಗಳಿಗೂ ಇಸು ಪ್ರ

ತ್ಯಯಬಂದಾಗ ಪ್ರಯೋಜ್ಯಕರ್ತೃವು ಕರ್ಮವಾಗುತ್ತದೆ - ಮತ್ತು ಅರಿ ಮೊದಲಾದ ಜ್ಞಾನಾರ್ಥಕಕ್ಕೂ ತಿನ್ನು ಮೊದಲಾದ ಭೋಜನಾರ್ಥಕ್ಕೂ ಪೊಡಮಡು ಮೊದಲಾದ ನಮಸ್ಕಾರಾರ್ಥಕ್ಕೂ ಇಸು ಪ್ರತ್ಯಯಬಂದಾಗ ಪ್ರಯೋಜ್ಯಕರ್ತೃವಿಗೆ ವಿಕಲ್ಪವಾಗಿ ಕರ್ಮಸಂಜ್ಞೆ ಬರುತ್ತದೆ.

೨೮ - ಪ್ರಯೋಜ್ಯಕರ್ತೃವೆಂದರೇನು.

ಧಾತುವಿಗೆ ಇಸು ಪ್ರತ್ಯಯ ಮಾಡದಾಗ ಕರ್ತೃವಾಗಿದ್ದದ್ದು ಇಸು ಪ್ರತ್ಯಯಬಂದಾಗ ಪ್ರಯೋಜ್ಯಕರ್ತೃವು - ಇಸು ಪ್ರತ್ಯಯಬಂದಾಗ ಕರ್ತೃವಾಗಿರುವದು ಪ್ರಯೋಜಕಕರ್ತೃವು - ಇದಕ್ಕೆ ಹೇತುಕರ್ತೃವೆಂತಲೂ ಹೆಸರು.

ಅಕರ್ಮಕಗಳಿಗೆ.

ಮಗುವು - ಮಲಗಿತು - ತಾಯಿ ಮಗುವ ಮಲಗಿಸಿದಳು - ಇಲ್ಲಿ ಮಗುವು ಪ್ರಯೋಜ್ಯಕರ್ತೃವು - ತಾಯಿ ಪ್ರಯೋಜಕಕರ್ತೃವು.

ಶಬ್ದಾರ್ಥಕಗಳಿಗೆ.

ಮಾಣವಕನು ವೇದವನ್ನೋದುತ್ತಾನೆ - ಗುರುವು ಮಾಣವಕನ ವೇದವನ್ನೋದಿಸುತ್ತಾನೆ - ಇಲ್ಲಿ ಮಾಣವಕನು ಪ್ರಯೋಜ್ಯಕರ್ತೃವು - ಗುರುವು ಪ್ರಯೋಜಕಕರ್ತೃವು.

ಗತ್ಯರ್ಥಕಗಳಿಗೆ.

ಕೋಣನೂರ ಸೈದಿತು - ಗಾದನು ಕೋಣನನ್ನೂರ ಸೈದಿಸಿದನು - ಐದು - ಪೊಂದು - ಏರು - ಪೋಗು - ಇತ್ಯಾದಿ.

ಜ್ಞಾನಾರ್ಥಕ್ಕೆ.

ಶಿಷ್ಯನು ತತ್ವವ ತಿಳಿದನು - ಶಿಷ್ಯನನ್ನು ತತ್ವವನ್ನು ಗುರು ತಿಳಿಸಿದನು - ಶಿಷ್ಯನಿಂದ ತಿಳಿಸಿದನು - ಇತ್ಯಾದಿ.

ಭೋಜನಾರ್ಥಕ್ಕೆ.

ಹುಡುಗನು ಅನ್ನವನುಂಡನು - ತಾಯಿ ಹುಡುಗನನ್ನನ್ನವನುಣ್ಣಿಸಿದಳು - ಹುಡುಗನಿಂದಾಗಲಿ.

ಸಂಖ್ಯಾ ಪ್ರಶ್ನೆ. ಉತ್ತರವು.

ನಮಸ್ಕಾರಾರ್ಥಕ್ಕೆ.

ಜೈದನು ತಂದೆಯ ಹೊಡಮಟ್ಟನು - ತಾಯಿ ಜೈದನ ತಂದೆಯ ಹೊಡಮಡಿಸಿದಳು.

೨೯ - ಪ್ರಯೋಜ್ಯಕರ್ತೃವು ಕರ್ಮವಾದಾಗ ಅದನ್ನು ಫಲಾಶ್ರಯವೆಂಬುವದುಂಟಾ.

ಇಲ್ಲೂ ಉಂಟು - ಹ್ಯಾಂಗೆಂದರೆ - ಇಸು ಪ್ರತ್ಯಯಾಂತಕ್ಕೆ ಪ್ರಕೃತಿ ಧಾತ್ವರ್ಥ ವ್ಯಾಪಾರವನ್ನುಂಟುಮಾಡುವ ವ್ಯಾಪಾರವರ್ಥವಾದ್ದರಿಂದ ಮೊದಲ ವ್ಯಾಪಾರವು ಫಲವು - ಅದಕ್ಕಾಶ್ರಯವಾದ ಪ್ರಯೋಜ್ಯಕರ್ತೃವು ಕರ್ಮವು - ಇತ್ಯಾದಿ.

೩೦ - ತೃತೀಯೆಯೆಲ್ಲಿ ಬರುತ್ತದೆ.

ಆಖ್ಯಾತದಿಂದಾಗಲಿ - ಅಚ್ - ಅದು ಪ್ರತ್ಯಯಗಳಿಂದಾಗಲಿ - ಕರ್ತೃಕರಣಗಳು ಹೇಳಲ್ಪಡದಾಗ ತೃತೀಯೆ ಬರುತ್ತದೆ.

ಕರ್ತೃವಿಗೆ.

ಕುಂಬಾರನಿಂದ ಮಡಕೆ ಮಾಡಲ್ಪಟ್ಟಿತು - ಇಲ್ಲಿ ಮಾಡು ಧಾತ್ವರ್ಥವಾದ ಹುಟ್ಟುವಿಕೆಯನ್ನುಂಟುಮಾಡುವ ವ್ಯಾಪಾರವರ್ಥವು ಅದಕ್ಕಾಶ್ರಯವಾದ ಕುಂಬಾರ ಶಬ್ದಕ್ಕೆ ತೃತೀಯೆ ಬಂತು

ಇಲ್ಲಿ ಕರ್ಮವು ಹೇಳಲ್ಪಟ್ಟಿತಾದ್ದರಿಂದ ಕರ್ಮಕ್ಕೆ ಪ್ರಥಮೆ ಬಂತು

ಇಲ್ಲಿ ಆಖ್ಯಾತದಿಂದ ಕರ್ತೃವು ಹೇಳಲ್ಪಡಲಿಲ್ಲವಾದ್ದರಿಂದ ಕರ್ತೃವಾಚಕ್ಕೆ ತೃತೀಯೆಯರ್ಥವು - ತೃತೀಯೆಗೆ ಕರ್ತೃತ್ವವರ್ಥವು.

ಪ್ರಯೋಜ್ಯಕರ್ತೃವಿಗೆ.

ಅರ್ಜುನನು ಕರ್ಣನ ಕೊಂದನು ಕೃಷ್ಣನು ಅರ್ಜುನನಿಂದ ಕರ್ಣನ ಕೊಲ್ಲಿಸಿದನು - ಇಲ್ಲಿ ಪ್ರಯೋಜ್ಯಕರ್ತೃವಾದ ಅರ್ಜುನ ಶಬ್ದಕ್ಕೆ ತೃತೀಯೆ ಬಂತು.

ಕರ್ಣನು ಕೃಷ್ಣನಿಂದ - ಅರ್ಜುನನಿಂದ ಕೊಲ್ಲಿಸಲ್ಪಟ್ಟನು

ಇಲ್ಲಿ ಪ್ರಯೋಜಕಕರ್ತೃವಿಗೂ ತೃತೀಯೆ ಬಂತು.

೩೧ - ಕರಣವೆಂದರೇನು.

ಧಾತುವಿನ ಮುಖ್ಯವ್ಯಾಪಾರದಿಂದುಂಟಾಗುವ ಫಲವನ್ನುಂಟುಮಾಡುವ ವ್ಯಾಪಾರವುಳ್ಳದು ಕರಣವು

ರಾಮನು ರಾವಣನ ಬಾಣದಿಂದ ಕೊಂದನು - ಇಲ್ಲಿ ಕೊಲ್ಲು ಧಾತುವಿಗೆ ಪ್ರಾಣ ಬಿಡುವಿಕೆಯನ್ನುಂಟುಮಾಡುವ ವ್ಯಾಪಾರವರ್ಥವು - ಅದರಿಂದುಂಟಾಗುವ ಫಲವು ಪ್ರಾಣಬಿಡುವಿಕೆ - ಅದನ್ನುಂಟುಮಾಡುವ ವ್ಯಾಪಾರವು ಯೆದೆಯ ಸೀಳುವಿಕೆ - ಅದು ಬಾಣದಲ್ಲದೆಯಾದ್ದರಿಂದ ಬಾಣವು ಕರಣವು ಇಲ್ಲಿ ಬಾಣಶಬ್ದದ ಮೇಗಣ ತೃತೀಯೆಗೆ ಕರಣತ್ವವರ್ಥವು.

೩೨ - ಮತ್ತಾ ತೃತೀಯೆ ಯೆಲ್ಲಿ ಬರುತ್ತದೆ.

ಹೇತುವಿನಲ್ಲೂ - ಇತ್ಥಂಭೂತಲಕ್ಷಣದಲ್ಲಿಯೂ ಬರುತ್ತದೆ.

೩೩ - ಹೇತುವೆಂದರೇನು.

ಕಾರ್ಯ ಹುಟ್ಟಲಿಕ್ಕೆ ನಿಯಮವಾಗಿ ಪೂರ್ವದಲ್ಲಿರುವದು ಹೇತುವು.

೩೪ - ಕರಣಕ್ಕೂ ಹೇತುವಿಗೂ ಭೇದವೇನು.

ವ್ಯಾಪಾರವುಳ್ಳದಾಗಿಯೂ ಕ್ರಿಯಾಮಾತ್ರಕ್ಕೆ ಕಾರಣವಾಗಿರುವದು ಕರಣವು - ದ್ರವ್ಯವಾಗಿಯಾಗಲಿ - ವ್ಯಾಪಾರವಿಲ್ಲದ್ದಾಗಿಯಾಗಲಿ - ಕಾರಣವಾದ್ದು ಹೇತುವು - ಆದ್ದರಿಂದ ಕರಣವಲ್ಲದ್ದು ಹೇತುವು - ಕರಣಕ್ಕಿಂತ ಹೇತು ಬೇರೆ ಹೇಳಿದ್ದ ಮತ್ತೂ ಕೆಲವು ವಿಭಕ್ತಿ ಬರಲಿಕ್ಕೂ ಸ್ಕರವಾಗಿ - ಪುಣ್ಯದಿಂದ ದೇವರ ಕಂಡನು - ಇಲ್ಲಿ ಪುಣ್ಯವು ದೇವರ ಕಾಣಲಿಕ್ಕೆ ಕಾರಣವಾಗಿದ್ದರೂ ವ್ಯಾಪಾರವಿಲ್ಲವಾದ್ದರಿಂದ ಹೇತುವು.

ದಾನದಿಂದ ಯಶಸ್ಸು - ಇಲ್ಲಿ ದಾನಶಬ್ದಕ್ಕೆ ವ್ಯಾಪಾರವಿದ್ದರೂ ಯಶಸ್ಸು ಕ್ರಿಯೆಯಲ್ಲವಾದ್ದರಿಂದ ಯಶಸ್ಸಿಗೆ ದಾನ ಹೇತುವು - ಇಲ್ಲಿ ತೃತೀಯೆಗೆ ಹೇತುತ್ವವರ್ಥವು.

೩೫ - ಇತ್ಥಂಭೂತಲಕ್ಷಣವೆಂದರೇನು.

ಒಂದು ರೀತಿಯಾಗಿರುವವನೆಂದು ಯಾವದರ ಜ್ಞಾನದಿಂದ ತಿಳಿಯುತ್ತದೆಯೋ ಅದು ಇತ್ಥಂಭೂತಲಕ್ಷಣವು.

ಜಟೆಯಿಂದ ತಾಪಸನು - ಇಲ್ಲಿ ಜಟಾಜ್ಞಾನದಿಂದ ತಾಪಸನೆಂಬ ಜ್ಞಾನ ಹುಟ್ಟುತ್ತದೆಯಾದ್ದರಿಂದ ಜಟಾಶಬ್ದದ ಮೇಲೆ ತೃತೀಯೆ ಬಂತು - ಈ ತೃತೀಯೆಗೆ ಜ್ಞಾನದಿಂದ ತಿಳಿಯತಕ್ಕದ್ದೆಂದರ್ಥವು - ಜಟೆಯಿಂದ ತಿಳಿಯತಕ್ಕ ತಾಪಸತನವುಳ್ಳವನೆಂದು ಬೋಧವು.

೪೬ - ಇನ್ನಾತೃತೀಯೆಯೆಲ್ಲಿ ಬರುತ್ತದೆ.

ಯಾವಂಗದ ವಿಕಾರದಿಂದ ಅಂಗಿಗೆ ವಿಕಾರ ಹೇಳಲ್ಪಡುತ್ತದೆಯೋ ಆಯಂಗವಾಚಕಕ್ಕೆ ತೃತೀಯೆ ಬರುತ್ತದೆ.

ಕಣ್ಣಿಂದ ಕುರುಡನು - ಇಲ್ಲಿ ಕಣ್ಣಿನ ವಿಕಾರದಿಂದ ಕುರುಡನೆಂದು ಹೇಳಲ್ಪಟ್ಟಿರಾದ್ದರಿಂದ ಕಣ್ಣು ಶಬ್ದದ ಮೇಲೆ ತೃತೀಯೆ ಬಂತು - ಅಂಗಿ ವಿಶೇಷಣವಾದ ಕುರುಡುತನಕ್ಕೂ ಅಂಗಕ್ಕೂ - ಸಂಬಂಧವು ತೃತೀಯಾರ್ಥವು.

ಕಣ್ಣಿನ ಸಂಬಂಧವಾದ ಕುರುಡುತನವುಳ್ಳವನೆಂದು ಬೋಧವು.

೪೭ - ಮತ್ತ್ಯಾವ ಶಬ್ದಗಳಿಗಾದರೂ ತೃತೀಯೆ ಬರುತ್ತದೆಯೋ.

ಸ್ವಭಾವಾದಿಶಬ್ದಗಳ ಮೇಲೆ ಅಭೇದಾದ್ಯರ್ಥಗಳಲ್ಲಿ ತೃತೀಯೆ ಬರುತ್ತದೆ.

ಸ್ವಭಾವದಿಂದ ಚೆಲುವನು - ಇಲ್ಲಿ ಅಭೇದವು ತೃತೀಯಾರ್ಥವು.

೪೮ - ಕರ್ಮಕ್ಕೆ ತೃತೀಯೆಯೆಲ್ಲಾದರೂ ಬರುತ್ತದೆಯೋ.

ಆಡು ಧಾತುವಿನ ಕರ್ಮಕ್ಕೆ ತೃತೀಯೆ ಸಹಾ ಬರುತ್ತದೆ.

ಪಗಡೆಯಿಂದಾಡಿದನು - ಪಗಡೆಯನ್ನಾಡಿದನು.

೪೯ - ಇನ್ನುಯಾವ ವಿಶಿಷ್ಟಾರ್ಥದಲ್ಲಿ ತೃತೀಯೆ ಬರುತ್ತದೆ.

ಪಂಚಮಿಯಾವಯಾವರ್ಥದಲ್ಲಿ ಬರುತ್ತದೆಯೋ ಆಯರ್ಥದಲ್ಲೆಲ್ಲಾ ತೃತೀಯೆಯೂ ಬರುತ್ತದೆ.

ಮರದೆಸೆಯಿಂದೆ ಬಿತ್ತು - ಮರದಿಂದೆ ಬಿತ್ತು - ಊರದೆಸೆಯಿಂದ ಬಂದನು - ಊರಿಂದ ಬಂದನು.

೫೦ - ಚತುರ್ಥಿಯೆಲ್ಲಿ ಬರುತ್ತದೆ.

ಸಂಪ್ರದಾನಾರ್ಥದಲ್ಲಿ ಬರುತ್ತದೆ - ಸಂಪ್ರದಾನವೆಂದರೆ ಕೊಡಲ್ಪಡುವ ವಸ್ತುವಿನಿಂದೈದತಕ್ಕ ಕಾರಕವು ಸಂಪ್ರದಾನವು.

ಹಾರುವನಿಗೆ ಹಸುವ ಕೊಟ್ಟನು - ಇತ್ಯಾದಿ.

ಇಲ್ಲಿ ಕೊಡಲ್ಪಡುವ ವಸ್ತುವು - ಹಸುವು - ಅದರಿಂದೈದತಕ್ಕವನು ಹಾರುವನು ಆದ್ದರಿಂದ ಹಾರುವನು ಸಂಪ್ರದಾನವು - ಅದಕ್ಕೆ ಚತುರ್ಥಿ ಬಂತು - ಕೊಡಲ್ಪಡುವ ವಸ್ತುವಿನೊಂದಿಗೆ ಸಂಪ್ರದಾನಕ್ಕೆ ಉಂಟಾಗುವ ಸಂಬಂಧವು - ಚತುರ್ಥಿಗೆ ಅರ್ಥವು.

೪೧. - ಕೊಡು ಧಾತುವಿಗರ್ಥವೇನು.

ತನ್ನ ಸ್ವತ್ವವು ಕೆಟ್ಟು ಮತ್ತೊಬ್ಬನಿಗೆ ಸ್ವತ್ವವುಂಟುಮಾಡುವ ವ್ಯಾಪಾರವು ಕೊಡು ಧಾತುವಿಗೆ ಅರ್ಥವು.

೪೨. - ದಾನಾರ್ಥಕವಾದ ಕೊಡು ಮೊದಲಾದ ಧಾತುಗಳಿಗೆ ಬೇರೆ ಅರ್ಥ ಬಂದಾಗ ಸಂಪ್ರದಾನ ಸಂಜ್ಞೆ ಬಾರದಾ.

ಈ ಧಾತುವಿಗೆ ಬೇರೆಯರ್ಥ ಬಂದಾಗಲೂ ಅದಕೊಂದಿಗೆ ಸೇರಿದಾಗಲೆಲ್ಲಾ ಸಂಪ್ರದಾನ ಸಂಜ್ಞೆ ಬರುತ್ತದೆ.

ಗುರುವು ಶಿಷ್ಯನಿಗೆ ವಿದ್ಯೆಯ ಕೊಟ್ಟನು - ಇಲ್ಲಿ ಕೊಡು ಧಾತುವಿಗೆ ತಿಳಿಯಿಸುವದರ್ಥವು.

೪೩. - ಇನ್ನ್ಯಾ ಸಂಪ್ರದಾನ ಸಂಜ್ಞೆ ಯಾವದಕ್ಕಾದರೂ ಬರುತ್ತದೆಯೋ.

ಒಂದನ್ನಗಲಿಸುತ್ತಾಂದ ಸಮ್ಮಂಧಿಸುವಿಕೆಯರ್ಥವಾಗುಳ್ಳ ಧಾತುಗಳ ಕರ್ಮದಾಂದಿಗೆ ಸಮ್ಮಂಧಿಸುವದು ಸಂಪ್ರದಾನವು.

ಹುಡುಗರಿಗೆ ನೀರೆರೆದನು - ಮರಕ್ಕೆ ನೀರ ಹಾಯಿದನು - ಕಾದಿಗೆ ದವನ ಬಿಟ್ಟನು - ಇಲ್ಲಿ - ಸಮ್ಮಂಧ ಚತುರ್ಥಿಗೆ ಅರ್ಥವು.

೪೪. - ಮತ್ತ್ಯಾ ಸಂಪ್ರದಾನ ಸಂಜ್ಞೆಯಾತಕ್ಕೆ ಬರುತ್ತದೆ.

ಪ್ರಕೃತ ಧಾತ್ವರ್ಥ ಕ್ರಿಯೆಯಿಂದ ಹುಟ್ಟಿದ ಫಲವು ಯಾರಿಗೆ ಪ್ರಯೋಜನವೋ ಅದು ಸಂಪ್ರದಾನವು.

ವಿದ್ಯೆಯ ಹುಡುಗರಿಗೆ ಹೇಳಿದನು.

ಇಲ್ಲಿ ಹೇಳುವದರ ಫಲ ಹುಡುಗರಿಗಾದ್ದರಿಂದ ಹುಡುಗ ಶಬ್ದಕ್ಕೆ ಚತುರ್ಥಿ ಬಂತು.

೪೫. - ಕರ್ತೃವಿಗೆ ಸಂಪ್ರದಾನ ಸಂಜ್ಞೆಯುಂಟಾ.

ತಿಳಿ ಮೊದಲಾದ ಜ್ಞಾನಾರ್ಥಕಗಳಿಗೂ - ಕಲಿ ಮೊದಲಾದ ಶಬ್ದ ಕರ್ಮಕಗಳಿಗೂ - ಇಸು ಪ್ರತ್ಯಯ ಬಂದಾಗ ಪ್ರಯೋಜ್ಯಕರ್ತೃವಿಗೆ ಸಂಪ್ರದಾನ ಸಂಜ್ಞೆಯೂ ಬರುತ್ತದೆ.

ಜ್ಞಾನಾರ್ಥಕಕ್ಕೆ - ದೇವದತ್ತನು - ತತ್ವವ ತಿಳಿದನು - ದೇವದತ್ತನಿಗೆ ಯಜ್ಞದತ್ತನು ತತ್ವವ ತಿಳಿಸಿದನು - ದೇವದತ್ತನ ತಿಳಿಸಿದಿದನು - ಇತ್ಯಾದಿ -

ಶಬ್ದಕರ್ಮಕಕ್ಕೆ - ಉಪಾಧ್ಯಾಯನು - ವಿದ್ಯೆಯ ಶಿಷ್ಯರಿಗೆ ಕಲಿಸಿದನು - ಶಿಷ್ಯರ ಕಲಿಸಿದನು - ಇಲ್ಲಿ ಶಿಷ್ಯರು ಪ್ರಯೋಜ್ಯಕರ್ತೃಗಳು.

ಪ್ರಶ್ನೆ	ಉತ್ತರವು
೪೬ - ಕರ್ಮಕ್ಕೆ ಸಂಪ್ರದಾನ ಸಂಜ್ಞೆಯುಂಟೋ.	ಹೋಗು ಮೊದಲಾದವುಗಳ ಕರ್ಮಕ್ಕೆ ಸಂಪ್ರದಾನವೆಂಬ ಹೆಸರು ನಿತ್ಯವಾಗಿ ಬರುತ್ತದೆ - ಏರು ಮೊದಲಾದವುಗಳ ಕರ್ಮಕ್ಕೆ ವಿಕಲ್ಪವಾಗಿ ಬರುತ್ತದೆ. ದೇವದತ್ತನೂರಿಗೆ ಹೋದನು - ಇಲ್ಲಿ - ಹೋಗು ಧಾತುವಿಗೆ ಸೇರಿಕೆಯನ್ನುಂಟುಮಾಡುವ ವ್ಯಾಪಾರವರ್ಥವು - ಸೇರಿಕೆಯೆಂಬ ಫಲವುಳ್ಳ ಊರು ಕರ್ಮವು. ಮರಕ್ಕೇರಿದನು - ಮರವೇರಿದನು. ಇಲ್ಲಿ - ಏರು ಧಾತುವಿಗೆ ಮೇಲುಗಡೆಯ ಸೇರಿಕೆಯನ್ನುಂಟುಮಾಡುವ ವ್ಯಾಪಾರವರ್ಥವು - ಇಲ್ಲೂ ಸೇರಿಕೆಯೆಂಬ ಫಲವುಳ್ಳದಾದ್ದರಿಂದ ಮರವು ಕರ್ಮವು.
೪೭ - ಮತ್ತೆಯಲ್ಲಿ ಬರುತ್ತದೆ.	ಶಕ್ತ್ಯಾದ್ಯರ್ಥಗಳುಳ್ಳ ಪದಗಳೊಂದಿಗೆ ಸೇರಿದಾಗಲೂ ಸಂಪ್ರದಾನಸಂಜ್ಞೆ ಬರುತ್ತದೆ. ಅವನೋಡಲಿಕ್ಕೆ ಶಕ್ತನು - ಅರ್ಹನು - ಇತ್ಯಾದಿ.
೪೮ - ಇನ್ನು ಯಾವ ವಿಭಕ್ತ್ಯರ್ಥದಲ್ಲಿ ಬರುತ್ತದೆ.	ಉದ್ದೇಶ್ಯವಿಧೇಯತಾವಸ್ಥೆಗಳಲ್ಲಿ ಷಷ್ಠ್ಯರ್ಥದಲ್ಲಿ ಚತುರ್ಥಿ ವಿಕಲ್ಪವಾಗಿ ಬರುತ್ತದೆ. ಇವನು - ಅವನ ಮಗನು - ಅವನಿಗೆ ಮಗನು - ಇತ್ಯಾದಿ.
೪೯ - ಅಪಾದಾನಕ್ಕೆ ಸಂಪ್ರದಾನಸಂಜ್ಞೆಯುಂಟೋ.	ಭಯಾರ್ಥಕವಾದ ಶಬ್ದಗಳೊಂದಿಗೆ ಸೇರಿದಾಗ ಸಂಪ್ರದಾನಸಂಜ್ಞೆ ಬರುತ್ತದೆ. ಹುಲಿಗೆ ಹೆದರಿದನು - ಹುಲಿಯ ದೆಸೆಯಿಂದ ಹೆದರಿದನು ಹುಲಿಯಿಂದ ಹೆದರಿದನು - ಇತ್ಯಾದಿ.
೫೦ - ಇನ್ನು ಚತುರ್ಥಿಯೆಲ್ಲಿ ಬರುತ್ತದೆ.	ಯಾವ ಕ್ರಿಯೆಗೋಸ್ಕರ ಮತ್ತೊಂದು ಕ್ರಿಯೆ ಮಾಡಲ್ಪಡುತ್ತದೆಯೋ ಆ ಪ್ರಯೋಜನ ಕ್ರಿಯೆಯ ಪ್ರಯೋಗಿಸದಾಗ ಅದರ ಕರ್ಮಕ್ಕೆ ಚತುರ್ಥಿ ಬರುತ್ತದೆ. ಹಣ್ಣು ತರಲಿಕ್ಕೆ ಹೋದನು - ಹಣ್ಣಿಗೆ ಹೋದನು. ಇಲ್ಲಿ ತರು ಧಾತ್ವರ್ಥವಾದ ಕ್ರಿಯೆ ಪ್ರಯೋಜನ ಕ್ರಿಯೆ - ಅ

ದರ ಕರ್ಮವು ಹಣ್ಣು ಆದ್ದರಿಂದ ಅದಕ್ಕೆ ಚತುರ್ಥೀ ಬಂತು.

೫೧ - ಇನ್ನಾವ ಚತುರ್ಥೀ ಯೆಲ್ಲಿ ಬರುತ್ತದೆ.

ತಾದರ್ಥ್ಯದಲ್ಲಿಯೂ - ಶಕುನಾಪಶಕುನಗಳಂತ ಅರಿಯತಕ್ಕದ್ದರಲ್ಲಿಯೂ - ಹರಸಿಕೆ ಬಯ್ಗುಳಗಳ ಉದ್ದೇಶ್ಯಗಳಿಗೂ ದಿಕ್ಕಾಲಮಾರ್ಗವಾಚಕಗಳ ಪೂರ್ವಾವಧಿಗೂ - ಇತರಾರ್ಥವುಳ್ಳ ಪದಗಳ ಪ್ರತಿಯೋಗಿಗೂ - ಬೇಕು ಮೊದಲಾದವುಗಳರ್ಥಕ್ಕಾಶ್ರವಾದ್ದಕ್ಕೂ ಚತುರ್ಥೀ ಬರುತ್ತದೆ.

ಕೇರಿಗೋಸ್ಕರ - ಮರವು - ಕೇರಿಗೆ ಮರವು - ಹಾವಿಗೋಸ್ಕರ - ಮೊಸರು - ಹಾವಿಗೆ ಮೊಸರು - ಮೊಕನಾಶಕ್ಕೆ - ಕಪ್ಪೆಯ ಹಂದಿಕೆ.

ಅವನಿಗೊಳ್ಳೇದಾಗಲಿಯೆಂಬುವದು ಹರಸಿಕೆ - ಕೆಟ್ಟದುಂಟಾಗಲಿಯೆಂಬುವದು ಬಯ್ಗುಳ.

ಸಜ್ಜನರಿಗೆ ಬಾಳು ಬರಲಿ - ದುಷ್ಟರಿಗೆ ಕೇಡು ಬರಲಿ - ಚೆನ್ನಪಟ್ಟಣಕ್ಕೆ ಪಡುವಲು ಕಂಚಿ - ತಿಂಗಳಿಗೆ ಮುಂಚೆ ಬಂದನು ಶ್ರೀರಂಗಪಟ್ಟಣಕ್ಕೆ ಚೆನ್ನಪಟ್ಟಣ - ಮೂವತ್ತು ಗಾವುದ - ಅವನಿಗಿನ್ನವನು ಅನ್ಯನು - ಇತ್ಯಾದಿ.

ನನಗೋಸ್ಕರ - ನನಗಿಂತ - ನನಗೆ ಬೇಕು - ನನಗೆ ಆಗದು - ಇತ್ಯಾದಿ.

೫೨ - ಪಂಚಮಿಯೆಲ್ಲಿ ಬರುತ್ತದೆ.

ಅಪಾದಾನಕ್ಕೆ ಪಂಚಮಿ ಬರುತ್ತದೆ.

೫೩ - ಅಪಾದಾನವೆಂದರೇನು.

ಅಗಲಿಕೆಗಾಶ್ರಯವಾದ ವಸ್ತುಗಳಲ್ಲಿ ಪ್ರಕೃತ ಧಾತ್ವರ್ಥ ವ್ಯಾಪಾರಕ್ಕಾಶ್ರಯವಾಗದ ವಸ್ತುವು ಅಪಾದಾನವು.

ಮರದ ದೆಸೆಯಿಂದ ಹಣ್ಣು ಬಿತ್ತು.

ಇಲ್ಲಿ - ಮರಕ್ಕೂ ಹಣ್ಣಿಗೂ ಉಂಟಾದ ಅಗಲಿಕೆಗೆ ಆಶ್ರಯವಾದ ಎರಡರೊಳಗೆ ಮರವು ಬೀಳು ಧಾತ್ವರ್ಥವಾದ ವ್ಯಾಪಾರಕ್ಕೆ ಆಶ್ರಯವಲ್ಲವಾದ್ದರಿಂದ ಮರವು ಅಪಾದಾನವು.

೫೭೪ - ಮತ್ತು ಅಪಾದಾನ ಸಂಜ್ಞೆ ಯಾತಕ್ಕೆ ಬರುತ್ತದೆ.

ಕಾರಣವಾಚಕಕ್ಕೂ - ವಿದ್ಯೆಯ ಕಲಿಸುವವನಿಗೂ - ಭಯಕ್ಕೆ ಹೇತುವಾದವನಿಗೂ - ಅಪಾದಾನ ಸಂಜ್ಞೆ ಬರುತ್ತದೆ.

ತಂದೆಯ ದೆಸೆಯಿಂದ ಮಗನು ಹುಟ್ಟಿದನು - ಇಲ್ಲಿ ತಂದೆ ಕಾರಣವು - ಉಪಾಧ್ಯಾಯನ ದೆಸೆಯಿಂದ ವಿದ್ಯವನ್ನೋದಿದನು - ಹುಲಿಯ ದೆಸೆಯಿಂದ ಹೆದರಿಕೆ - ಇತ್ಯಾದಿ.

೫೭೫ - ಚತುರ್ಥೀ ಪಂಚಮಿಗಳೆರಡೂ ಎಲ್ಲಾದರೂ ಬರುತ್ತದೆಯೋ.

ಜಾತಿ ಗುಣ ಕ್ರಿಯೆಗಳಿಂದ ಆಧಿಕ್ಯ ನ್ಯೂನ ಭೇದ ಪ್ರತಿಯೋಗಿಗಳಿಗೆ ಪಂಚಮಿ ಚತುರ್ಥಿಗಳೆರಡೂ ಬರುತ್ತದೆ.

ಶೂದ್ರನ ದೆಸೆಯಿಂದ - ಶೂದ್ರನಿಗೆ - ಬ್ರಾಹ್ಮಣನು - ಹಿರಿಯನು - ಇಲ್ಲಿ - ಜಾತಿಯಿಂದ ಆಧಿಕ್ಯವು.

ಕಾಗೆಗೆ - ಕಾಗೆಯ ದೆಸೆಯಿಂದ ಕಪ್ಪು ನೇರಳೆ ಹಣ್ಣು - ಇಲ್ಲಿ ಗುಣದಿಂದ ಆಧಿಕ್ಯವು.

ಚೈತ್ರನ ದೆಸೆಯಿಂದ - ಚೈತ್ರನಿಗೆ ಮೈತ್ರ ನೋಡುವವನು - ಇಲ್ಲಿ ಕ್ರಿಯೆಯಿಂದ ಆಧಿಕ್ಯವು - ಹೀಗೆ ನ್ಯೂನ ಭೇದಗಳಲ್ಲಿಯೂ ನೋಡಿಕೊಳ್ಳುವದು.

೫೭೬ - ಇನ್ನೂ ಪಂಚಮಿ ಯೆಲ್ಲಿ ಬರುತ್ತದೆ.

ಪೂರ್ವಕಾಲ ಕ್ರಿಯಾವಾಚಕವಾದ - ದು ಪ್ರತ್ಯಯಾಂತಕ್ಕೆ ಲೋಪ ಬಂದಾಗದರಧಿಕರಣ ಕರ್ಮಗಳಿಗೆ ಪಂಚಮಿ ಬರುತ್ತದೆ.

ಮರದ ದೆಸೆಯಿಂದ ನೋಡಿದನು - ಇಲ್ಲಿ ಮರವ ಹತ್ತಿ ನೋಡಿದನೆಂದು ಅರ್ಥವಾದ್ದರಿಂದ ಹತ್ತಿ ಶಬ್ದಕ್ಕೆ ಲೋಪವೂ ಅದರ ಕರ್ಮಕ್ಕೆ ಪಂಚಮಿಯೂ ಬಂತು.

ಉಪ್ಪರಿಗೆಯ ದೆಸೆಯಿಂದ ನೋಡಿದನು - ಇಲ್ಲಿ - ಉಪ್ಪರಿಗೆಯಲ್ಲಿ ಕೂತು ನೋಡಿದನು - ಇಲ್ಲಾ ಕೂತು ಶಬ್ದಕ್ಕೆ ಲೋಪವು - ಅದರ ಅಧಿಕರಣವಾದ ಉಪ್ಪರಿಗೆ ಶಬ್ದಕ್ಕೆ ಪಂಚಮಿಯೂ ಬಂತು.

೫೭೭ - ಇನ್ನೂ ಪಂಚಮಿ ಯೆಲ್ಲಿ ಬರುತ್ತದೆ.

ತೃತೀಯೆ ಬರುವ ಕಡೆಯಲ್ಲೆಲ್ಲಾ ಪಂಚಮಿಯೂ ಬರುತ್ತದೆ.

ಮರದ ಕೊನೆಯಿಂದ ಬಿದ್ದನು - ಮರದಿಂದ ಬಿದ್ದನು - ಇತ್ಯಾದಿ.

೬೮ - ಕೆಳಗೆ ಪಂಚಮಿ ಬರುವ ಕಡೆಯಲ್ಲೆಲ್ಲಾ ತೃತೀಯೆ ಬರುತ್ತದೆಯೆಂದು ಹೇಳಲ್ಪಟ್ಟಿರುವಲ್ಲಿ ತೃತೀಯೆಗೆಲ್ಲಾ ಪಂಚಮಿ ಬರುತ್ತದೆಯೆಂದು ಹೇಳಲ್ಪಟ್ಟಿರು ಆದ್ದರಿಂದ ಇದನ್ನು ಒಂದೇ ವಿಭಕ್ತಿಯಾಗಿ ಹೇಳಬಾರದೊ.

ಕೆಲವರು ಪಂಚಮಿಯೇ ಬೇಕಿಲ್ಲ - ತೃತೀಯೆ ಒಂದೇ ಸರಿ - ಅದು ಹ್ಯಾಗೆಂದರೆ - ಪ್ರಕೃತಿಗೂ - ಕೊನೆ ಶಬ್ದಕ್ಕೂ - ಅಭೇದ ಷಷ್ಠೀ ಸಮಾಸವ ಮಾಡಿ ಅದ ಅಲುಕ್ಸಮಾಸದಲ್ಲಿ ಸೇರಿಸಿ - ಅದರ ಮೇಲೆ ತೃತೀಯೆ ಮಾಡಿದರೆ - ಮರದ ಕೊನೆಯಿಂದ - ಎಂದಾಗುತ್ತದೆ - ಹಳಗನ್ನಡದಲ್ಲಿಯೂ - ಅತ್ತ ಶಬ್ದದೊಂದಿಗೆ - ಪ್ರಕೃತಿಗೆ ಅಭೇದ ಷಷ್ಠೀ ತತ್ಪುರುಷ ಸಮಾಸವ ಮಾಡಿ ಅದನ್ನು ಅಲುಕ್ಸಮಾಸದಲ್ಲಿ ಸೇರಿಸಿ ಅದರ ಮೇಲೆ ತೃತೀಯೆ ಮಾಡಿದರೆ - ಮರದತ್ತಣಿಂ ಎಂದಾಗುತ್ತದೆಯಾದ್ದರಿಂದ ಬೇರೆ ಪಂಚಮಿ ಹೇಳ ಬೇಕಿಲ್ಲ - ಹೀಗೆ ಹೇಳಿದರೆ - ಮರದಲ್ಲಿಂದ ಎಂಬ ಪ್ರಯೋಗಗಳು ಯುಕ್ತವಾಗುತ್ತದೆ - ಆದರೆ ಸಂಸ್ಕೃತ ಮೊದಲಾದ ವ್ಯಾಕರಣಗಳಲ್ಲಿ ಪಂಚಮಿಯ ಬೇರೆ ಹೇಳಿರುವದ್ದರಿಂದ ಶಬ್ದಾನುಶಾಸನ ಮೊದಲಾದ ಗ್ರಂಥಗಳಲ್ಲಿ ಹೇಳಿದರು - ಅದರಿಂದ ಇನ್ನೂ ಬೇರೆ ಹೇಳಲ್ಪಟ್ಟಿತು.

೬೯ - ಷಷ್ಠಿಯೆಲ್ಲಿ ಬರುತ್ತದೆ.

ಸಂಬಂಧಾರ್ಥಗಳಲ್ಲಿ ವಿಶೇಷಣಕ್ಕೆ ಬರುತ್ತದೆ.

೭೦ - ಸಂಬಂಧವೆಷ್ಟು ವಿಧವು.

ಭೇದಸಂಬಂಧವೆಂತಲೂ - ಅಭೇದಸಂಬಂಧವೆಂತಲೂ ಎರಡು ವಿಧವು.

೭೧ - ಭೇದಸಂಬಂಧವೆಷ್ಟು ವಿಧವು.

ಅದು ಬಹಳ ವಿಧವಾದ್ದರಿಂದ ಅದನ್ನು ವಿಂಗಡಿಸಿ ಹೇಳಕೂಡದು.

ಅರಸನ ಆಳು - ಅರಸನ ಹೆಂಡತಿ - ನನ್ನ ಕೆಲಸ - ಮರದ ಕೊಂಬು - ಕೆರೆಯ ದಡ - ರಾವಣನ ಊರು - ಇತ್ಯಾದಿ.

೭೨ - ಅಭೇದಸಂಬಂಧವು ಅಪೂರ್ವವಲ್ಲವೇ.

ಸಂಸ್ಕೃತ ಪ್ರಾಕೃತ ದ್ರಾವಿಡಗಳಲ್ಲಿ ಅಭೇದಷಷ್ಠಿ ಅಪೂರ್ವವಾದರೂ ಕನ್ನಡದಲ್ಲಿ ಬಹಳವಾಗಿ ಬರುತ್ತದೆ.

ಹುಣಿಸೆಯ ಮರ - ಮಾವಿನ ಮರ - ಇತ್ಯಾದಿ.

೭೩ - ಇನ್ನಾವ ಷಷ್ಠಿಯೆಲ್ಲಿ ಬರುತ್ತದೆ.

ಅಂತೆ ಮೊದಲಾದ ಅವ್ಯಯಗಳೊಂದಿಗೆ ಸೇರಿದಾಗಲೂ ಷಷ್ಠಿ ಬರುತ್ತದೆ.

ಚಂದ್ರನಂತೆ - ಚಂದ್ರನ ಹಾಂಗೆ - ಇತ್ಯಾದಿ.

ಅಂತೆ - ಹಾಂಗೆ - ಹಾಗೆ - ಸಂಗಡ - ಸಂಗಾತ - ಒಂದಿಗೆ - ಒಡನೆ - ಕೂಡ - ಕೂಡಲಿ - ಬಗ್ಗೆ - ತನಕ - ವರೆಗೆ - ಮಟ್ಟಿಗೆ - ಪರಿಯಂತರ - ಸುತ್ತ - ಸುತ್ತಲು - ತರುವಾಯ - ಬಳಿಕ - ಇತ್ಯಾದಿ.

೬೪ - ಕಾರಕಗಳಿಗೆ ಷಷ್ಠಿ ಬರುವದಿಲ್ಲವೊ.

ಅಚ್ - ಅದು ಪ್ರತ್ಯಯವನ್ನುಳ್ಳ ಭಾವಕೃದಂತದೊಂದಿಗೆ ಸೇರಿದಾಗ ಎಲ್ಲಾ ಕಾರಕಕ್ಕೂ ಷಷ್ಠಿಯೇ ಬರುತ್ತದೆ.

ಆನೆಯ ನಡೆ - ತಂಗಳ ಊಟ - ದೊಣ್ಣೆಯ ಪೆಟ್ಟು - ಹಾವಿನ ಕಾಡಿ - ಹುಲಿಯ ಹೆದರಿಕೆ - ಮನೆಯ ಇರವು - ಇತ್ಯಾದಿ.

೬೫ - ಅನೇಕ ಕಾರಕಗಳು ಸೇರಿದಾಗ ಹ್ಯಾಂಗೆ.

ಅನೇಕ ಕಾರಕಗಳು ಸೇರಿದಲ್ಲಿ ಕರ್ಮಕ್ಕೆ ಮಾತ್ರ ಷಷ್ಠಿ ಬರುತ್ತದೆ - ಕಡಮೆ ಕಾರಕಗಳಿಗೆ ಆಯಾ ವಿಭಕ್ತಿ ಬರುತ್ತದೆ - ಕಡಮೆ ಕಾರಕಗಳು ಮಾತ್ರ ಸೇರಿದಾಗ ಯಾವದಕ್ಕಾದರೂ ಒಂದಕ್ಕೆ ಷಷ್ಠಿ ಬರುತ್ತದೆ.

ರಾಮನಿಂದ ಲಂಕೆಯಲ್ಲಿ ರಾವಣನ ಕೊಲೆಯಾಯಿತು - ಅಯೋಧ್ಯೆಯಲ್ಲಿ ರಾಮನ ಇರವು - ರಾಮನಿಂದ ಅಯೋಧ್ಯೆಯ ಇರವು - ಇತ್ಯಾದಿ.

೬೬ - ಕಾರಕವಲ್ಲದ ಕಡಮೆ ವಿಭಕ್ತಿಗೂ ಷಷ್ಠಿ ಬರುತ್ತದೆಯೊ.

ಉಪಪದವಿಭಕ್ತಿಗಳಿಗೂ ಸಂಬಂಧಮಾತ್ರವಿವಕ್ಷೆಯಲ್ಲಿ ಷಷ್ಠಿ ಬರುತ್ತದೆ - ದೇವರ ನಮಸ್ಕಾರವು ಇತ್ಯಾದಿ.

೬೭ - ಉಪಪದವಿಭಕ್ತಿಯೂ ಕಾರಕವಿಭಕ್ತಿಯೂ ಸೇರಿದರೆ ಹ್ಯಾಂಗೆ.

ಕಾರಕವಿಭಕ್ತಿಯೇ ಹೇಳಬೇಕು - ದೇವರನ್ನು ನಮಸ್ಕಾರ ಮಾಡಿದನು - ಇತ್ಯಾದಿ.

೬೮ - ಸಪ್ತಮಿಯೆಲ್ಲಿ ಬರುತ್ತದೆ.

ಅಧಿಕರಣಾರ್ಥದಲ್ಲಿ ಬರುತ್ತದೆ.

೬೯ - ಅಧಿಕರಣವೆಂದರೇನು.

ಕರ್ತೃವಿನ ಮೂಲವಾಗಾಗಲಿ - ಕರ್ಮದ ಮೂಲವಾಗಾಗಲಿ ಫಲವ್ಯಾಪಾರಾರ್ಥಕವಾದ ಕ್ರಿಯೆಗೆ ಆಧಾರವಾಗಿರುವದು ಅಧಿಕರಣವು.

ದೇವದತ್ತನು ಮನೆಯಲ್ಲಿದ್ದಾನೆ - ಇಲ್ಲಿ ಕರ್ತೃವಿನ ಮೂಲವಾಗಿ ಕ್ರಿಯೆಗೆ ಆಧಾರವು ಮನೆ - ಮಡಿಕೆಯಲ್ಲನ್ನವನಟ್ಟನು - ಇಲ್ಲಿ ಕರ್ಮದ ಮೂಲವಾಗಿ ಫಲಕ್ಕೆ ಆಧಾರವು ಮಡಕೆ ಮನೆಯಲ್ಲಿ ದೇವರ ಪೂಜಿಸಿದನು - ಇಲ್ಲಿ ಪ್ರೀತಿಯನ್ನುಂಟುಮಾಡುವ ವ್ಯಾಪಾರವಾದ ಪೂಜೆಗೆ ಕರ್ತೃ ಮೂಲವಾಗಿ ಮನೆಯಾಧಾರವು - ಇತ್ಯಾದಿ.

೨೦ - ಅಧಿಕರಣವೆಷ್ಟುವಿಧವು.

ಔಪಶ್ಲೇಷಿಕ - ಅಭಿವ್ಯಾಪಕ - ವೈಷಯಿಕವೆಂದು ಮೂರು ವಿಧವು.

೨೧ - ಔಪಶ್ಲೇಷಿಕವೆಂದರೇನು.

ಅಧಿಕರಣದೊಂದು ಕಡೆಮಾತ್ರ ಅಧಿಕರಣವಾಗಿದ್ದರೆ ಅದು ಔಪಶ್ಲೇಷಿಕವು.

ಹಾಸಿಕೆಯಲ್ಲಿ ಮಲಗಿದನು - ಇಲ್ಲಿ - ಹಾಸಿಕೆಯ ಮೇಲುಗಡೆಯಲ್ಲಿ ಮಾತ್ರ ಮಲಗಿದ್ದರಿಂದ ಔಪಶ್ಲೇಷಿಕವು.

೨೨ - ಅಭಿವ್ಯಾಪಕವೆಂದರೇನು.

ಆಧಾರಾಧೇಯಗಳಿಗೆ - ಸರ್ವಾವಯವವ್ಯಾಪ್ತಿಯಿದ್ದರೆ ಅದು ಅಭಿವ್ಯಾಪಕವು.

ಎಳ್ಳಲ್ಲಿ ಎಣ್ಣೆ - ಹಾಲಲ್ಲಿ ಮೊಸರು - ಇಲ್ಲಿ ಎಳ್ಳು ಹಾಲುಗಳ ಅವಯವಗಳಲ್ಲೆಲ್ಲಾ ಎಣ್ಣೆಯೂ ಮೊಸರೂ ವ್ಯಾಪಿಸಿರುವದರಿಂದ ಅಭಿವ್ಯಾಪಕವು - ಇತ್ಯಾದಿ.

೨೩ - ವೈಷಯಿಕವೆಂದರೇನು.

ವಿಷಯತ್ವಸಂಬಂಧದಿಂದ ಜ್ಞಾನೇಛಾಕೃತ್ಯರ್ಥಕ ಧಾತ್ವರ್ಥಗಳ ಆಧಾರವು - ವೈಷಯಿಕವು.

ಮೋಕ್ಷದಲ್ಲಿ ಇಛೆಯದೆ - ಇಲ್ಲಿ ಇಚ್ಛೆಗೆ ವಿಷಯವು ಮೋಕ್ಷವು ಇತ್ಯಾದಿ.

೨೪ - ಇನ್ನ್ಯಾಸಪ್ತಮಿಯೆಲ್ಲಿ ಬರುತ್ತದೆ.

ನಿರ್ಧಾರಣದಲ್ಲಿ ಬರುತ್ತದೆ.

೨೫ - ನಿರ್ಧಾರಣವೆಂದರೇನು.

ಜಾತಿಗುಣಕ್ರಿಯಾಸಂಜ್ಞೆಗಳಿಂದ ಸಮುದಾಯದಿಂದೊಂದನ್ನು ಬೇರೆ ತೆಗೆದು ಹೇಳುವದು.

 ಪ್ರಶ್ನೆ. ಉತ್ತರವು.

ಜಾತಿಗೆ - ಮನುಷ್ಯರಲ್ಲಿ ಯಾವನು ಬರಲಿ - ಪಕ್ಷಿ - ಆಕಾಶಗಳಲ್ಲಿ ಕಾಳಾಕಳು ಬಲ್ಲಿಯದು - ಕ್ರಿಯೆಗೆ - ಹೋಗುವರಲ್ಲಿ ಓಡುವವನು ದೂರ ಹೋದಾನು - ಸಂಜ್ಞೆಗೆ - ಹುಡುಗರಲ್ಲಿ ಚೈತ್ರನು ಘಟ್ಟಿಗನು - ಇತ್ಯಾದಿ.

೨೬ - ಇನ್ನ್ಯಾವ ಕಾರಕಕ್ಕೆ ಸಪ್ತಮಿ ಬರುತ್ತದೆ.

ಕರಣಾಕಾರಕಕ್ಕೆ ಸಪ್ತಮಿ ಬರುತ್ತದೆ.

ಕೋಲಲ್ಲಿ ಬಡಿದನು - ಕೋಲಿಂದ ಬಡಿದನು - ಇತ್ಯಾದಿ.

೨೭ - ಇನ್ನ್ಯಾವ ಪದಗಳಾಂದಿಗೆ ಸೇರಿದಾಗ ಬರುತ್ತದೆ.

ಬಲ್ಲಿದ - ಜಾಣ - ಎಂಬರ್ಥವುಳ್ಳ ಪದಗಳಾಂದಿಗೆ ಸೇರಿದಾಗಲೂ ಸಪ್ತಮಿ ಬರುತ್ತದೆ.

ಕಾಯಲ್ಲಿ ಬಲ್ಲಿಯನು - ಕೆಲಸದಲ್ಲಿ ಜಾಣನು - ಇತ್ಯಾದಿ.

೨೮ - ವರ್ತಮಾನ ಮೊದಲಾದ ಪ್ರತ್ಯಯಗಳು ಆಖ್ಯಾತ ಪ್ರಕರಣದಲ್ಲಿ ಹೇಳಿದ ಕ್ರಮವ ತಪ್ಪಿಸಿ ಹೇಳುವದುಂಟೋ.

ಭಾವ್ಯರ್ಥದಲ್ಲಿ ತ್ವರೆ ತೋರುವಾಗ ವರ್ತಮಾನ ಪ್ರತ್ಯಯವೂ ಅತಿ ತ್ವರೆ ತೋರುವಾಗ ಭೂತ ಪ್ರತ್ಯಯವೂ ಬರುತ್ತದೆ - ಭೂತದಲ್ಲಿನ ಡೆಯದ್ದಕ್ಕೆ ಕಾರಣವ ಹೇಳುವಾಗ ಭಾವಿ ಪ್ರತ್ಯಯ ಬರುತ್ತದೆ.

ನಾಳೆ ಬರುತ್ತೇನೆ ನಡೆ - ಈಗ ಬಂದೆ ನಡೆ - ನಾನು ನಿನ್ನೆಯೇ ಬರುವೆ - ಆದರೊಂದು ಕೆಲಸದಿಂದ ಬರಲಿಲ್ಲ.

೨೯ - ಭವಿಷ್ಯತ್ತು ಯಾವರ್ಥದಲ್ಲಿ ಬರುತ್ತದೆ.

ಶಕ್ತ್ಯರ್ಥದಲ್ಲಿ ಬರುತ್ತದೆ.

ಅವನು ಮಾಡಿಯಾನು - ಇಲ್ಲಿ ಮಾಡಲಾಪನೆಂಬರ್ಥ ತೋರುತ್ತದೆ.

೩೦ - ವಿಧಿ ಯಾವರ್ಥದಲ್ಲಿ ಬರುತ್ತದೆ.

ತನಗುತ್ಕೃಷ್ಟನನ್ನಾಗಲಿ - ನಿಕೃಷ್ಟನನ್ನಾಗಲಿ - ಸಮಾನನನ್ನಾಗಲಿ - ಮಾಡ ಹೇಳುವಿಕೆ - ಇದನ್ನೇ ಪ್ರಾಚೀನ ವ್ಯಾಕರಣದಲ್ಲಿ ಬರುಳ್ಳ ವಿಧವಾಗಿ ಶ್ರೈಧವ ಕಲ್ಪಿಸಿ ಹೇಳಿ ಧಾತೆಆ ವಿವರದಿಂದ ಬರುಳ್ಳ ಪ್ರಯೋಜನವಿಲ್ಲವೆಂದು ಬರೆಯಲಿಲ್ಲವು.

೩೧ - ವಿಧಿ ಯಾವ ಕಾಲದಲ್ಲಿ ಬರುತ್ತದೆ.

ಬುಧರು ದೇವರ ಪೂಜಿಸಲಿ - ಅವ ಬರಲಿ - ಇತ್ಯಾದಿ.

ಬರುವ ಕಾಲದಲ್ಲಿಯೇ ಬರುತ್ತದೆ.

ಪ್ರಶ್ನೆ	ಉತ್ತರವು
೮-೨ - ಈಯಾಖ್ಯಾತಕ್ಕೇನರ್ಥವು.	ಪ್ರೇರಣೆಯೂ - ಕರ್ತೃಕರ್ಮಗಳೂ ಅರ್ಥವು.
೮-೩ - ನಿಷೇಧಕ್ಕೆ ಕಾಲಯಾವದು.	ನಿಷೇಧಕ್ಕೆ ಕಾಲನಿಯಮವಿಲ್ಲವು - ಮೂರು ಕಾಲದಲ್ಲಿಯೂ ಬರುತ್ತದೆ. ನೆನ್ನೆ - ಹೋಗನು - ಈಗ ಹೋಗನು - ನಾಳೆ ಹೋಗನು.
೮-೪ - ಕರ್ಮಾದಿಕಾರಕಗಳು ಕರ್ತೃವಾಗುವದಿಲ್ಲವೋ:	ಎಲ್ಲಾ ಕಾರಕಗಳೂ ಕಾರ್ಯಸೌಕರ್ಯವ ತಿಳಿಸಬೇಕಾದಲ್ಲಿ ಕರ್ತೃವಾಗುತ್ತದೆ - ತಮ್ಮ ತಮ್ಮ ವ್ಯಾಪಾರಗಳಲ್ಲಿ ಅದದು ಮುಖ್ಯವಾದ್ದರಿಂದ ಅದದು ಕರ್ತೃವಾಗುತ್ತದೆ - ಧಾತುವಿಗೆ ಅನೇಕಾರ್ಥವಾದ್ದರಿಂದ ಆ ಅರ್ಥದಲ್ಲಿ ಆಖ್ಯಾತ ಪ್ರತ್ಯಯವು ಬರುತ್ತದೆ.
೮-೫ - ಇತರ ಕಾರಕಗಳು ಕರ್ತೃವಾದ್ದಕ್ಕೆ ಗುರುತೇನು.	ಕರ್ಮವು ಕರ್ತೃವಾದಾಗ ಹೋಗು ಧಾತು ಸೇರಿಸಲ್ಪಡುತ್ತದೆ ಕರಣಾದಿಗಳು ಕರ್ತೃವಾಗುವಾಗ ಬಿಡು ಧಾತು ಸೇರಿಸಲ್ಪಡುತ್ತದೆ - ಮುಖ್ಯಧಾತುವಿಗೆ ಪೂರ್ವಕಾಲದ ದು ಪ್ರತ್ಯಯ ಬರುತ್ತದೆ.

ದೇವದತ್ತನು - ಹಣವ ಕೊಟ್ಟನು - ಇದು ಶುದ್ಧ ಕರ್ತೃವು.

ಹಣವು ಕೊಟ್ಟುಹೋಯಿತು - ಇದು ಕರ್ಮಕರ್ತೃವು.
ನನ್ನ ಕೈ ಕೊಟ್ಟುಬಿಟ್ಟಿತು - ಇದು ಕರಣಕರ್ತೃವು.
ಮನೆ ಕೊಟ್ಟುಬಿಟ್ಟಿತು - ಇದು - ಅಧಿಕರಣಕರ್ತೃವು.

ಇಲ್ಲಿ ಕೊಡು ಧಾತುವಿಗೆ ತನ್ನ ಸ್ವತ್ವವು ಹೋಗಿ ಮತ್ತೊಬ್ಬನಿಗೆ ಸ್ವತ್ವವುಂಟುಮಾಡುವ ವ್ಯಾಪಾರವರ್ಥ - ಆದರೆ ಕರ್ತೃವಾದ ದೇವದತ್ತನ ವ್ಯಾಪಾರವು ನನ್ನದಲ್ಲ ನಿನ್ನದೆಂಬುವದು ಎತ್ತುವದು ನೀಡುವದು ಮೊದಲಾದವು - ಕರ್ಮದ ವ್ಯಾಪಾರವು ಸಂಪ್ರದಾನವ ಸೇರುವಿಕೆ ಮೊದಲಾದವು - ಕರಣವ್ಯಾಪಾರವು ಎತ್ತುವದು ಮೊದಲಾದವು - ಅಧಿಕರಣವ್ಯಾಪಾರವು ಹೋರುವದು ಮುಂತಾದ್ದು - ಅದದರ ವ್ಯಾಪಾರವ ಮುಖ್ಯವಾಗಿ ಹೇಳಬೇಕಾದಾಗ ಅದದು ಕರ್ತೃವಾಗುತ್ತದೆ - ಆಗ ಮತ್ತೊಂದರ ಸ

ಹಾಯವಿಲ್ಲದೆ ಅದನ್ನು ಮಾಡಿದನೆಂದು ಹೇಳುವದೇ ಕಾರ್ಯಸಾಫಲ್ಯವು - ಆದ್ದರಿಂದ ಕರ್ತೃ ಒಬ್ಬರ ಪ್ರೇರಣೆಯಿಲ್ಲದೆ ಕೊಟ್ಟನೆಂಬಲ್ಲಿಯೂ ಬಿಡುಧಾತು ಸೇರಿಸಲ್ಪಡುತ್ತದೆ.

ಅವನು ಕಾಣಿಕೆ ಕೊಟ್ಟುಬಿಟ್ಟನು - ಇತ್ಯಾದಿ.

೬೭ - ಕೊಡು ಕೊಳ್ಳು ಧಾತುಗಳು ಯಾವರ್ಥದಲ್ಲಿ ಸೇರಿಸಲ್ಪಡುತ್ತವೆ.

ಕ್ರಿಯಾಪ್ರಯೋಜನವು ಕರ್ತೃವನ್ನೈದಿದರೆ ಕೊಳ್ಳುಧಾತುವೂ ಮತ್ತೊಬ್ಬರನ್ನೈದಿದರೆ ಕೊಡುಧಾತುವೂ ಸೇರಿಸಲ್ಪಡುತ್ತದೆ - ಅದು ಸ್ಪಷ್ಟವಾಗಿ ಹೇಳಬೇಕಾದಾಗಲೆ ಬರುತ್ತದೆ.

ಆತನು - ತನಗೆ ಪುಸ್ತಕವ ಬರೆದುಕೊಂಡನು.

ಆತನು ಪರರಿಗೆ ಬರೆದುಕೊಟ್ಟನು.

ಇಲ್ಲಿ ಪ್ರಯೋಜನವು ಪುಸ್ತಕದಲ್ಲಿ ಬರದ್ದನ್ನು ಓದುವಿಕೆ ಮೊದಲಾದ್ದು - ಅದು ತನಗಾದಲ್ಲಿ ಕೊಳ್ಳುಧಾತುವೂ ಪರರಿಗಾದರಲ್ಲಿ ಕೊಡುಧಾತುವೂ ಸೇರಿಸಲ್ಪಟ್ಟಿದೆ.

೬೮ - ಆಡುಧಾತುವು ಯಾವರ್ಥದಲ್ಲಿ ಸೇರಿಸಲ್ಪಡುತ್ತದೆ.

ಸಕರ್ಮಕಧಾತುಗಳ ಕರ್ಮಕರ್ತೃಗಳಾಗಿ ಪರಸ್ಪರ ಕರ್ಮಕರ್ತೃತ್ವವ ಹೇಳಬೇಕಾದರೆ ಆಡುಧಾತುವು ಸೇರಿಸಲ್ಪಡುತ್ತದೆ.

ಅವರಿಬ್ಬರೂ ಬಡಿದಾಡುತ್ತಾರೆ - ಬಯ್ದಾಡುತ್ತಾರೆ.

೬೯ - ಪರಸ್ಪರಕರ್ಮಕರ್ತೃತ್ವದ ಹೊರತೆ ಆಡುಧಾತುವು ಸೇರಿಸಲ್ಪಡುವದಿಲ್ಲವೋ.

ಒದೆ ಮೊದಲಾದ ಧಾತುಗಳ ಮೇಲೆ ಕ್ರಿಯಾಸಮಭಿಹಾರ ತೋರುವಾಗ ಆಡುಧಾತುವು ಸೇರಿಸಲ್ಪಡುತ್ತದೆ.

ಕ್ರಿಯಾಸಮಭಿಹಾರವೆಂದರೆ - ಬಾರಿಬಾರಿಗೆ ಮಾಡುವದು ಬಹಳವಾಗಿ ಮಾಡುವದು - ತಿರಿಗಿತಿರಿಗಿ ಒದೆಯುತ್ತಾನೆ - ಒದ್ದಾಡುತ್ತಾನೆ ಇತ್ಯಾದಿ.

ಒದೆ - ಎಳೆ - ಹೊರಳು - ಜ್ವಾಲು - ತೇಲು - ಸುಳಿ - ಮೆಲ್ಲು - ಕುಣಿ - ನೆಗೆ - ಕುಪ್ಪು - ನೆಸೆ - ನೆವರು - ಜಗ್ಗ - ಶ್ರೇಯು - ಸುಂದು - ಓಡು ಇತ್ಯಾದಿ ಪ್ರಯೋಗಗಳು.

ಓಡು ಧಾತುವಿಗೆ ಮಾತ್ರ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆಯೆಂಬುವ ಅರ್ಥದಲ್ಲಿ ಆಡು ಧಾತು ಸೇರಿಸಲ್ಪಡುತ್ತದೆ - ಅಲ್ಲಿಂದಿಲ್ಲಿಗಿಲ್ಲಿಂದಲ್ಲಿಗೆ ಓಡುತ್ತಾನೆ - ಓಡಾಡುತ್ತಾನೆ.

೮೮ - ಹಾಕು ಧಾತುವು ಯಾವ ಅರ್ಥದಲ್ಲಿ ಸೇರಿಸಲ್ಪಡುತ್ತದೆ.

ಧಾತ್ವರ್ಥವು ನಿಶ್ಚಯವಾಗಿ ಮಾಡಿದ್ದಾಗಿ ತೋರಿದರೆ - ಹಾಕು ಧಾತು ಸೇರಿಸಲ್ಪಡುತ್ತದೆ - ಎತ್ತಿಹಾಕಿದನು - ಕಿತ್ತುಹಾಕಿದನು ಇತ್ಯಾದಿ.

೮೯ - ಎಲ್ಲಾ ಧಾತುಗಳೂ ಯೆಲ್ಲಾದಕ್ಕೂ ಸೇರಿಸಲ್ಪಡುವದುಂಟೋ.

ಕ್ರಿಯಾಸಮಭಿಹಾರ ತೋರುವಾಗ - ಯಾವ ಧಾತ್ವರ್ಥ ಹೇಳಲ್ಪಡುತ್ತದೆಯೋ - ಆ ಧಾತುವಾಗಲಿ - ಅಲ್ಲವೆ - ಮಾಡು ಧಾತುವಾಗಲಿ - ಸೇರಿಸಲ್ಪಡುತ್ತದೆ - ಆದರೆ - ಯಾವ ಧಾತುವೊಂದಿಗೆ - ಅವು ಸೇರಿಸಲ್ಪಡುತ್ತವೆಯೋ - ಆ ಧಾತುವಿಗೆ ವಿಧಿಮಧ್ಯಮ ಪುರುಷೈಕವಚನವೂ - ದ್ವಿತ್ವಾರ್ಥವೂ ಬರುತ್ತದೆ - ಮತ್ತು - ಎಂದು ಶಬ್ದ ಸಹ ಸೇರಿಸಲ್ಪಡುತ್ತದೆ.

ಬಹಳವಾಗಲಿ - ಬಾರಿಬಾರಿಗಾಗಲಿ ಬಡಿದನು - ಎಂಬಲ್ಲಿ ಬಡಿಬಡಿ ಎಂದು ಬಡಿದನು - ಬಡಿಬಡಿಯೆಂದು ಮಾಡಿದನು - ಕೊಡುಕೊಡು ಎಂದು ಕೊಟ್ಟನು - ಮಾಡಿದನು - ಇತ್ಯಾದಿ.

೯೦. ನಿಪಾತಗಳು ಯಾವ ಅರ್ಥದಲ್ಲಿ ಬರುತ್ತದೆ.

ನಿಪಾತಗಳಿಗೆ ದ್ಯೋತ್ಯಾರ್ಥ ಹೊರ್ತು ವಾಚ್ಯಾರ್ಥವಿಲ್ಲ - ವಾಚ್ಯಾರ್ಥವೆಂದರೆ ಪದದಿಂದ ಹೇಳಲ್ಪಡುವ ಅರ್ಥವು - ದ್ಯೋತ್ಯಾರ್ಥವೆಂದರೆ ಆ ಪದ ಸೇರಿರುವದ್ದರಿಂದ ತೋರುವ ಅರ್ಥವು.

೯೧ - ಯಾವ ಯಾವ ನಿಪಾತದಿಂದ ಯಾವ ಯಾವ ಅರ್ಥ ತೋರುತ್ತದೆ.

ಆಕಾರ ನಿಪಾತವು - ಪ್ರಶ್ನೆಯಲ್ಲೂ ಆಕ್ಷೇಪದಲ್ಲೂ ಆಶ್ಚರ್ಯದಲ್ಲಿಯೂ - ದುಃಖದಲ್ಲಿಯೂ - ಅಂಗೀಕಾರದಲ್ಲಿಯೂ - ಬರುತ್ತದೆ - ಏಕಾರವು - ಪ್ರಶ್ನೆ - ಸಂದೇಹ - ವ್ಯವಚ್ಛೇದ - ವಿರೋಧ - ಪಾದಪೂರಣ ಮೊದಲಾದರ್ಥಗಳಲ್ಲಿ ಬರುತ್ತದೆ ಓಕಾರವು - ಪ್ರಶ್ನೆ - ಸಂದೇಹ - ಆಧಿಕ್ಯ - ಸಂಬೋಧನ - ದುಃಖ ಸಂತೋಷ - ಮುಂತಾದರ್ಥಗಳಲ್ಲಿ ಬರುತ್ತದೆ - ಉ - ಎಂಬ ನಿಪಾತವು - ಸಮುಚ್ಚಯ - ಅನ್ವಾಚಯ - ಇತರೇತರಯೋಗ - ಸಮಾಹಾ

೨೧೨ ಪ್ರಶ್ನೆ: ಉತ್ತರವು.

ರ - ವ್ಯಾಪ್ತಿ - ಸಂಖ್ಯೆ - ಆಧಿಕ್ಯ - ಮುಂತಾದರ್ಥಗಳಲ್ಲಿ ಬರುತ್ತದೆ.

ಆಕಾರಕ್ಕೆ.

ಪ್ರಶ್ನೆಗೆ - ಅವನಾ - ಸ್ಮರಣೆಗೆ - ಆಅದೆ - ಆಕ್ಷೇಪಕ್ಕೆ ಆ - ಅದಲ್ಲ - ಆಶ್ಚರ್ಯಕ್ಕೆ - ಆ - ಅವ ಬಂದನೆ - ದುಃಖಕ್ಕೆ ಆ - ಅವ ಸತ್ತನೆ - ಅಂಗೀಕಾರಕ್ಕೆ - ಆಇಲ್ಲಿರುಇತ್ಯಾದಿ.

ಏಕಾರಕ್ಕೆ.

ಪ್ರಶ್ನೆಗೆ - ಅವನೇ - ಸಂದೇಹಕ್ಕೆ - ಅವನೇಇವನೇ - ವ್ಯವಚ್ಛೇದಕ್ಕೆ - ಅವನೇ ಬಂದನು - ವಿರೋಧಕ್ಕೆ - ಅವನೇ ಬಂದವನು ಇಲ್ಲಿ - ಅವನಲ್ಲ ಬಂದವನೆಂದು ತೋರುತ್ತದೆ - ಪಾದಪೂರಣವೆಂದರೆ - ಏಕಾರಕ್ಕೆ ಅರ್ಥವಿಲ್ಲ ಇತ್ಯಾದಿ.

ಓಕಾರಕ್ಕೆ.

ಪ್ರಶ್ನೆಗೆ - ಅವನೋ - ಸಂದೇಹಕ್ಕೆ - ಅವನೋ - ಇವನೋ ಬಂದವ - ಆಧಿಕ್ಯಕ್ಕೆ - ಓ - ಅವ ದೊಡ್ಡವ - ಇಲ್ಲಿ ಬಲು ದೊಡ್ಡವನೆಂದು ತೋರುತ್ತದೆ - ಸಂಬೋಧನಕ್ಕೆ - ಓ ರಾಮ - ದುಃಖಕ್ಕೆ - ಓ ಅವ ಸತ್ತನೇ - ಸಂತೋಷಕ್ಕೆ - ಓ - ಅವ ಬಂದನೇ ಇತ್ಯಾದಿ.

ಉಕಾರಕ್ಕೆ.

ಸಮುಚ್ಚಯಕ್ಕೆ - ರಾಮನನ್ನೂ ಲಕ್ಷ್ಮಣನನ್ನೂ ಕರೆ - ಸಮುಚ್ಚಯವೆಂದರೆ ಒಂದು ಪದಾರ್ಥದಲ್ಲೆರಡು ಪದಾರ್ಥವನ್ವಯಿಸುವದು - ಅನ್ವಾಚಯಕ್ಕೆ - ಕೊಳಕ್ಕೆ ಹೋಗು ಬದನೆಯಕಾಯನ್ನೂ ತಾ - ಅನ್ವಾಚಯವೆಂದರೆ ಮುಖ್ಯವಾದ ಕೆಲಸವ ಮಾಡಹೇಳಿ ಆನುಷಂಗಿಕವಾಗಿ ಮತ್ತೊಂದು ಕೆಲಸವ ಹೇಳುವದು ಇಲ್ಲಿ ಕೊಳಕ್ಕೆ ಹೋಗುವದು ಮುಖ್ಯ - ಬದನೆಕಾಯ ತರುವದು ಆನುಷಂಗಿಕವು - ಇತರೇತರಯೋಗ ಸಮಾಹಾರಾರ್ಥಗಳಲ್ಲಿ ದ್ವಂದ್ವ ಬರುತ್ತದೆಯೆಂದು ಸಮಾಸ ಪ್ರಕರಣದಲ್ಲಿ ಹೇಳಲ್ಪಟ್ಟಿರು - ವ್ಯಾಪ್ತಿಗೆ - ಎಲ್ಲರೂ ಬಂದರು - ಸಂಖ್ಯೆಗೆ - ಅದೂ - ಇದೂ ಎರಡು - ಆಧಿಕ್ಯಕ್ಕೆ - ಅರಸೂ ಬಂದಿದ್ದನು - ಇತ್ಯಾದಿ.

೧೦೨ - ವ್ಯವಚ್ಛೇದವೆಷ್ಟು ವಿಧವು.

ಅಯೋಗ ವ್ಯವಚ್ಛೇದವೆಂತಲೂ - ಅನ್ಯಯೋಗ ವ್ಯವಚ್ಛೇದವೆಂತಲೂ - ಅತ್ಯಂತಾಯೋಗ ವ್ಯವಚ್ಛೇದವೆಂತಲೂ - ಮೂರು ವಿಧವು.

೧೦೩ - ಅವು ಹ್ಯಾಂಗೆ ಬಂದರೆ ತೋರುತ್ತವೆ - ಅವುಗಳಿಗರ್ಥವೇನು.

ಏಕಾರವು ವಿಶೇಷ್ಯದೊಂದಿಗೆ ಸೇರಿದರೆ ಅನ್ಯಯೋಗ ವ್ಯವಚ್ಛೇದವು - ಅದು ವಿಶೇಷಣದೊಂದಿಗೆ ಸೇರಿದರೆ ಅಯೋಗ ವ್ಯವಚ್ಛೇದವು - ಅದು ಕ್ರಿಯೆಯೊಂದಿಗೆ ಸೇರಿದರೆ ಅತ್ಯಂತಾಯೋಗ ವ್ಯವಚ್ಛೇದವು - ಕ್ರಿಯೆಯೊಂದಿಗೆ ಸೇರಿದಾಗ ಕ್ರಿಯೆಗೆ ದ್ವಿರ್ವಚನವೂ ಮೊದಲಿನ ಕ್ರಿಯೆಗೆ ಅಲ್ ಪ್ರತ್ಯಯವೂ ಬರುತ್ತದೆ - ಪಾರ್ಥನೇ ಧನುರ್ಧರನೆಂಬಲ್ಲಿ - ಏಕಾರವು ಪಾರ್ಥನೆಂಬ ವಿಶೇಷ್ಯವನ್ನು ಹತ್ತಿರುವದರಿಂದ ಇದು ಅನ್ಯಯೋಗ ವ್ಯವಚ್ಛೇದವು - ಹ್ಯಾಂಗೆಂದರೆ ಪಾರ್ಥಾನ್ಯನಲ್ಲಿ ಅಂಥಾ ಧನುರ್ಧರತ್ವವಿಲ್ಲವೆಂದು ತೋರಿಸುತ್ತದೆ - ಶಂಖ ಬಿಳಿಪೇ - ಇಲ್ಲಿ - ಏಕಾರ ಬಿಳಿಪೆಂಬ ವಿಶೇಷಣದಾದಿಗೆ ಸೇರಿದ್ದರಿಂದ ಅಯೋಗ ವ್ಯವಚ್ಛೇದವು - ಶಂಖದಲ್ಲಿ ಬಿಳಿಪಿನ ಸಂಬಂಧವಿಲ್ಲದೇ ಇರುವದಿಲ್ಲವೆಂದು ತೋರಿಸುತ್ತದೆ.

ಕರೀದಾವರೆ ಸಿಕ್ಕೈಸಿಕ್ಕುತ್ತದೆ - ಇಲ್ಲಿ ಏಕಾರ ಕ್ರಿಯೆಯೊಂದಿಗೆ ಸೇರಿದ್ದರಿಂದ ಅತ್ಯಂತಾಯೋಗ ವ್ಯವಚ್ಛೇದವು - ಕರಿದಾವರೆ ಸಿದ್ಧವಾಗಿ ಸಿಕ್ಕದಿನ ಕೂಡದು - ಸಿಕ್ಕುವದೆಂದು ತೋರಿಸುತ್ತದೆ.

೧೦೪ - ಸಮುಚ್ಚಯವೆಷ್ಟು ವಿಧವು.

ಅನುಕ್ತಸಮುಚ್ಚಯವೆಂತಲೂ ಉಕ್ತಸಮುಚ್ಚಯವೆಂತಲೂ ಎರಡು ವಿಧವು - ರಾಮನೂ ಕೃಷ್ಣನೂ ಬಂದನೆಂಬ ಕಡೆಯಲ್ಲುಕ್ತಸಮುಚ್ಚಯವು - ಕೃಷ್ಣನ ಹೇಳದೆ ರಾಮನೂ ಬಂದನೆಂಬ ಮಾತ್ರ ಹೇಳಿ ಪ್ರಕರಣಾದಿಗಳಿಂದ ಕೃಷ್ಣನೂ ಬಂದದ್ದಾಗಿ ತೋರಿದರೆ ಅನುಕ್ತಸಮುಚ್ಚಯವು.

೧೦೫ - ಅವ್ಯಯಗಳಲ್ಲೂ ಅರ್ಥವಿಶೇಷವುಂಟೋ.

ಅಂತೆಯೆಂಬವ್ಯಯವು ಕ್ರಿಯಾಪಾತೋಷ್ಯತೋರುವಾಗ ಬರುತ್ತದೆ - ಅಲ್ಲವೆಯೆಂಬುವದು - ಕ್ರಿಯಾರ್ಥಸಿದ್ಧವೆಂಬಾಗಲೂ ಯಾರ ಕುರಿತು ಹೋಗುತ್ತಾನೋ ಅವನಿಗೆ ತಿಳಿಯುವದೆಂಬಾಗಲೂ ಬರುತ್ತದೆ - ಇತ್ಯಾದಿ.

ಮಾಡಿದನಂತೆ - ಇಲ್ಲಿ ಮಾಡಿದ್ದನ್ನು ನಾನು ಕಣ್ಣಿಂದ ನೋಡಲಿಲ್ಲವೆಂದು ತೋರುತ್ತದೆ - ಮಾಡಿದನಲ್ಲವೆ - ಇಲ್ಲಿ ಮಾಡಿದ್ದು ನಿನಗೆ ತಿಳಿಯುವದು ಎಂದಾಗಲಿ ಅದು ಪ್ರಸಿದ್ಧವೆಂದಾಗಲಿ ತೋರುತ್ತದೆ.

೯೬ - ಇನ್ನು ನಿಪಾತಗಳೂ ಅವ್ಯಯಗಳೂ ಶಬ್ದಗಳೂ ಕ್ರಿಯೆಗಳೂ ಪ್ರಯೋಗದಲ್ಲಿ ಅರ್ಥ ವಿಶೇಷ ಉಂಟಾ.

ಇವುಗಳಿಗೆ ಅರ್ಥವಿಶೇಷವು ಬಹಳ ಉಂಟು - ಆದರೆ ಅವುಗಳನ್ನಿಲ್ಲಿ ಬರೆದರೆ ಗ್ರಂಥ ವಿಸ್ತಾರವಾಗುತ್ತದೆಯೆಂದು ಬರೆಯಲಿಲ್ಲವು - ನಿಪಾತಾವ್ಯಯ ಶಬ್ದಗಳ ಅರ್ಥವಿಶೇಷವನ್ನು ಶಬ್ದಮಂಜರಿಯಲ್ಲೂ - ಕ್ರಿಯೆಗಳ ಅರ್ಥವಿಶೇಷವನ್ನು ಧಾತುಮಂಜರಿಯಲ್ಲೂ ವಿಸ್ತಾರವಾಗಿ ನೋಡಿಕೊಳ್ಳುವದು.

೯೭ - ಪದಗಳಿಗೆ ಅರ್ಥವೆಷ್ಟು ವಿಧವು.

ಶಕ್ಯವೆಂತಲೂ - ಲಕ್ಷಣೆಯೆಂತಲೂ - ಎರಡು ವಿಧವು.

೯೮ - ಶಕ್ಯವೆಂದರೇನು.

ಶಕ್ತಿಯೆಂಬ ವೃತ್ತಿಯಿಂದ ಪದದಲ್ಲಿರುವ ಅರ್ಥವು.

೯೯ - ಶಕ್ತಿಯೆಂದರೇನು.

ವ್ಯಾಕರಣದಿಂದಲೂ - ನಿಘಂಟುಗಳಿಂದಲೂ - ಉಪಮಾನದಿಂದಲೂ - ಆಪ್ತವಾಕ್ಯದಿಂದಲೂ - ಹಿರಿಯರ ವ್ಯವಹಾರದಿಂದಲೂ ನಿಷ್ಕೃಷ್ಟಾರ್ಥಕ ಪದಗಳ ಸಮೀಪದಲ್ಲಿರುವದರಿಂದಲೂ - ವ್ಯಾಖ್ಯಾನದಿಂದಲೂ - ತಿಳಿಯುವ ಅರ್ಥವು.

೧೦೦ - ಆ ಶಕ್ಯಾರ್ಥವೆಷ್ಟು ವಿಧವು.

ರೂಢವೆಂತಲೂ - ಯೋಗವೆಂತಲೂ - ಯೋಗರೂಢವೆಂತಲೂ - ಮೂರು ವಿಧವಾಗಿರುವದು.

೧೦೧ - ರೂಢವೆಂದರೇನು.

ಅವಯವಾರ್ಥವಿಲ್ಲದೆಯೂ - ಇದ್ದರೂ ಅದಕ್ಕೆ ವಿರೋಧವಾಗಿಯೂ - ನಿಘಂಟು ವ್ಯಾಕರಣ ಮೊದಲಾದವುಗಳಲ್ಲಿ ಪ್ರಸಿದ್ಧವಾದರ್ಥವು ರೂಢವು.

ಮರವು - ಕದವು - ಮೈತ್ರನು - ಚೈತ್ರನು - ಇತ್ಯಾದಿ.

೧೦೨ - ಯೋಗವೆಂದರೇನು.

ವ್ಯಾಕರಣದಲ್ಲಿ ಹೇಳಿದ ಪ್ರಕಾರ ಅವಯವಾರ್ಥದಿಂದ ತಿಳಿಯುವರ್ಥವು.

ಪಾಚಕನು - ಅಂಜುಕುಳಿ - ಮೊದಲಾದವು.

೧೦೩ - ಯೋಗರೂಢವೆಂದರೇನು.

ಅವಯವಾರ್ಥವಿದ್ದರೂ ಸಮುದಾಯದಿಂದ ಒಂದು ಅರ್ಥವನ್ನೇ ರೂಢವಾಗಿ ಹೇಳಿದರೆ ಅದು ಯೋಗರೂಢವು.

ಪಂಕಜವು - ನೀರಜವು - ಇಲ್ಲಿ ನೀರಲ್ಲಿಯೂ - ಕೆಸರಲ್ಲಿಯೂ ನೈದಲೆ - ಕಪ್ಪೆ ಮೊದಲಾದವುಯೆಲ್ಲಾ ಅವಯವಾರ್ಥದಿಂದ ಹೇಳ್ಪಟ್ಟಿರೂ ಸಮುದಾಯವು ತಾವರೆಯಲ್ಲಿ ರೂಢವಾದ್ದರಿಂದ ಇದು ಯೋಗರೂಢವು.

೧೦೪ - ಲಕ್ಷ್ಯವೆಂದರೇನು.

ಲಕ್ಷಣೆಯೆಂಬ ವೃತ್ತಿಯಿಂದ ತೋರುವ ಅರ್ಥವು ಲಕ್ಷ್ಯವು.

೧೦೫ - ಲಕ್ಷಣೆಯೆಂದರೇನು.

ಅರ್ಥಪ್ರಕರಣ ಮೊದಲಾದವುಗಳಿಂದ ಶಕ್ಯಾರ್ಥವ ಹೇಳಕೂಡದೆ ಶಕ್ಯಾರ್ಥಸಂಬಂಧವುಳ್ಳದನ್ನು ಹೇಳಿದರೆ ಅದು ಲಕ್ಷಣೆ.

೧೦೬ - ಲಕ್ಷಣೆಯೆಷ್ಟುವಿಧವು.

ಶುದ್ಧೆಯೆಂತಲೂ - ಗೌಣಿಯೆಂತಲೂ - ಎರಡುವಿಧವು.

೧೦೭ - ಶುದ್ಧೆಯೆಷ್ಟುವಿಧವು.

ಜಹಲ್ಲಕ್ಷಣೆಯೆಂತಲೂ - ಅಜಹಲ್ಲಕ್ಷಣೆಯೆಂತಲೂ - ಜಹದಜಹಲ್ಲಕ್ಷಣೆಯೆಂತಲೂ - ಮೂರುವಿಧವು.

೧೦೮ - ಜಹಲ್ಲಕ್ಷಣೆಯೆಂದರೇನು.

ಎಲ್ಲಿ ಶಕ್ಯಾರ್ಥಕ್ಕೆ ಅನ್ವಯವೇ ಇಲ್ಲವೊ - ಅದು ಜಹಲ್ಲಕ್ಷಣೆ ಶಕ್ಯಾರ್ಥವ ಬಿಟ್ಟು ಅದನ್ನು ಸೇರಿದ ಮತ್ತೊಂದು ವಸ್ತುವ ಹೇಳುವದು.

ಊರು ಮೊರೆಯಿಡುತ್ತದೆ - ಇಲ್ಲಿ ಊರಲ್ಲಿರುವ ಮನುಷ್ಯರು ಮೊರೆಯಿಡುತ್ತಾರೆ - ಇಲ್ಲಿ ಊರ ಬಿಟ್ಟು ಅದರಲ್ಲಿರುವ ಮನುಷ್ಯರ ಹೇಳಿದ್ದರಿಂದ ಜಹಲ್ಲಕ್ಷಣೆ.

೧೦೯ - ಅಜಹಲ್ಲಕ್ಷಣೆಯೆಂದರೇನು.

ವಾಚ್ಯಾರ್ಥವ ಬಿಡದೆ ಅದನ್ನೂ - ಅದರ ಸಂಬಂಧಿಗಳನ್ನೂ ಹೇಳಿದರೆ - ಅದು ಅಜಹಲ್ಲಕ್ಷಣೆ.

ಕೊಡೆಯವರು ಹೋಗುತ್ತಾರೆ - ಇಲ್ಲಿ ಕೊಡೆಯವರೂ ಕೊಡೆಯಿಲ್ಲದವರೂ ಇಬ್ಬರೂ ತೋರುತ್ತಾರೆ - ಇಲ್ಲಿ ಕೊಡೆಯವರ ಬಿಡದೆ ಅವರೊಂದಿಗೆ ಕೂಡಾ ಹೋಗುವರನ್ನು ಸಹ ಹೇಳುತ್ತದೆಯಾದ್ದರಿಂದ ಅಜಹಲ್ಲಕ್ಷಣೆ.

೧೧೦ - ಜಹದಜಹಲ್ಲಕ್ಷಣೆಯೆಂದರೇನು.

ಶಕ್ಯಾರ್ಥದಲ್ಲಿ ವಿಶೇಷಣಾಂಶವ ಬಿಟ್ಟು ವಿಶೇಷ್ಯವನ್ನು ಮಾತ್ರವನ್ನೇ ಹಿಡಿಯುವದು

 ಪ್ರಶ್ನೆ. ಉತ್ತರವು.

ಅದೇ ಇವನು - ಇಲ್ಲಿ ಅದು ಶಬ್ದಕ್ಕೆ ದೂರದೇಶದ ಪರೋಕ್ಷಕಾಲದ ವಸ್ತುವೆಂಬರ್ಥವು - ಇದು ಶಬ್ದಕ್ಕೆ ಸಮೀಪದೇಶದ ವರ್ತಮಾನಕಾಲದ ವಸ್ತುವೆಂಬರ್ಥವು - ಇವೆರಡಕ್ಕೂ ಅಭೇದವು ಕೂಡದಾದ್ದರಿಂದ ವಿಶೇಷ್ಯವಾದ ವಸ್ತುಮಾತ್ರ ವಿಶೇಷಣವ ಬಿಟ್ಟು ತೋರುತ್ತಿಡಿಯಾದ್ದರಿಂದ ಇದು ಜಹದಜಹಲ್ಲಕ್ಷಣೆ.

೧೧೧ - ಗೌಣಿಯೆಂದರೇನು.

ಸಾದೃಶ್ಯದಿಂದ ಉಪಮಾನಪದಕ್ಕೆ ಅದರ ಸದೃಶವೆಂಬದಕ್ಕೂ ಆ ಸಮಾನಧರ್ಮೈಕ್ಯದಿಂದ ಉಪಮಾನೋಪಮೇಯಗಳಿರದನ್ನಾಳಿದಿಯುವದಕ್ಕೂ ಗೌಣೀಯೆಂದು ಹೆಸರು.

ಬೆಂಕಿಯು ಈ ಹಾರ್ವನು - ಇಲ್ಲಿ ಹಾರ್ವನಿಗೂ ಬೆಂಕಿಗೂ ಅಭೇದ ಕೂಡದಾದ್ದರಿಂದ ಬೆಂಕಿಪದಕ್ಕೆ ಬೆಂಕಿಗೆ ಸಮಾನವೆಂದರ್ಥವ ಮಾಡಬೇಕು - ಇದೊಂದು ಗೌಣೀಲಕ್ಷಣೆ.

ಬೆಕ್ಕಿನಿಂದ ಮೊಸರ ಕಾಯಿ - ಇಲ್ಲಿ ಬೆಕ್ಕು ಬಾರದಹಾಂಗೆ ನೋಡಿಕೊಂಡು ಕಾಗೆ ಮೊದಲಾದವು ಬಂದರೆ ನೋಡಿಕೊಂಡು ಇರಹೇಳಿಹೇಳುವವನಿಗೆ ತಾತ್ಪರ್ಯವ ಮಾಡಕೂಡದಾದ್ದರಿಂದ ಇಲ್ಲಿ ಮೊಸರ ಹಾಳ್ಗಲಾಡಿಸುವ ವಸ್ತುವೆಲ್ಲಕ್ಕೂ ಹಾಳ್ಗಲಾಡಿಸುವಿಕೆಯೆಂಬ ಸಮಾನಧರ್ಮವಾದ್ದರಿಂದ ಅದನ್ನ ಹಾಳ್ಗಲಾಡಿಸುವ ಕಾಗೆ ಮೊದಲಾದವೂ - ಬೆಕ್ಕಾಸರ ಅರ್ಥವಾಗುತ್ತದೆ - ಇದೊಂದು ಗೌಣೀಲಕ್ಷಣೆ.

೧೧೨ - ಕನ್ನಡ ವ್ಯಾಕರಣವಿಷಯವಾಗಿ ಇನ್ನು ಹೇಳಬೇಕಾದ ವಿಷಯವುಂಟೋ.

ಬಹಳ ವುಂಟು ಅವುಗಳನ್ನು ಹಳಗನ್ನಡ ವ್ಯಾಕರಣದಲ್ಲಿ ವಿಸ್ತಾರವಾಗಿ ಹೇಳುವದರಿಂದಲ್ಲಿ ನೋಡಿಕೊಳ್ಳುವದು.

ಇಂತು - ೧೧೨ ಪ್ರಯೋಗಪ್ರಕರಣ ಮುಗಿಯಿತು.

ಇಂತು ಹೊಸಗನ್ನಡ ನುಡಿಗನ್ನಡಿಯೆಂಬ ವ್ಯಾಕರಣವು ಮುಗಿಯಿತು ಮಂಗಳ ಮಹಾ - ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

FINIS

HOSAGANNADA NUDI GANNADI:

A

GRAMMAR

OF

ODERN CANARESE LANGUAGE

BY

KRISHNAMACHARYA

OF

SRIRANGAPATTANAM

IN THE COURT OF SUDDER ADAWLUT AT MADRAS.

---

t the *Asylum Press, Mount Road; by* G. Calder *and published by* E. Marsden.

1838.